ಕರ್ನಾಟಕ ನಾಟಕ ಅಕಾಡೆಮಿ

# ದ.ಕನ್ನಡ ಜಿಲ್ಲೆ, ಕಾಸರಗೋಡು ಜಿಲ್ಲೆ

## ಕರಾವಳಿ ಕನ್ನಡ ರಂಗಭೂಮಿ

ಡಾ.ಎಚ್.ಎಂ.ಕುಮಾರಸ್ವಾಮಿ



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಕರಾವಳಿ ಕನ್ನಡ ರಂಗಭೂಮಿ

(ದಕ್ಷಿಣ ಕನ್ನಡ ಮತ್ತು ಕಾಸರಗೋಡು)

ಡಾ॥ ಹೆಚ್.ಎಂ.ಕುಮಾರಸ್ವಾಮಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–02

**KARAVALI KANNADA RANGABHUMI (Dakshina Kannada and Kasaragodu)** Written by: **Dr. H.M. Kumaraswamy,** Published by **B. Manjunatha Aradya,** Registrar, Karnataka Nataka Academy, Kannada Bhavana, J.C. Road, Bengaluru - 560 002. Phone: 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2017 |
| ಪ್ರತಿಗಳು | : | 1000 |
| ಪುಟಗಳು | : | xiv+150 |
| ಬೆಲೆ | : | ರೂ. 60/- |

ಪ್ರಕಾಶಕರು : ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂರವಾಣಿ : ೦೮೦ ೨೨೨೩೭೪೮೪
ಇಮೇಲ್: academy.nataka@gmail.com

ಎಂ.ಎಸ್. ಗುಣಶೀಲನ್
ಎಸ್.ಕೆ. ಕೊನೆಸಾಗರ
ಮುದ್ದಣ್ಣ ಶಿರಹಟ್ಟಿ

ಪ್ರಕಾಶಕರ ಸಮಿತಿ ಸದಸ್ಯರು

ಮುದ್ರಕರು :
ಎಂ.ಎಸ್. ಗ್ರಾಫಿಕ್ಸ್
ಬೆಂಗಳೂರು-೫೬೦೦೭೯.
ದೂ.: ೦೮೦-೨೩೫೮೦೨೭೧

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣ ಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗ ಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ

ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದಕರ್ನಾಟಕ ನಾಟಕಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾರಂಗ ಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗ ಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗ ಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

ಎಲ್.ಬಿ. ಶೇಖ (ಮಾಸ್ತರ)<br>
ಅಧ್ಯಕ್ಷರು<br>
ಕರ್ನಾಟಕ ನಾಟಕ ಅಕಾಡೆಮಿ

# ಕರಾವಳಿ ಕನ್ನಡ ರಂಗಭೂಮಿ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾ ರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ –ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

**ಯಕ್ಷಗಾನದ ನೆಲೆಯಲ್ಲಿ ಬತ್ತದ ರಂಗಸೆಲೆ**

ಯಕ್ಷಗಾನ ಹಾಗೂ ತುಳು ಹಾಸ್ಯ ನಾಟಕಗಳ ನೆಲೆವೀಡಾದ ಕರಾವಳಿ ಕರ್ನಾಟಕ ವೈವಿಧ್ಯಮಯ ರಂಗ ಪ್ರಯೋಗಗಳಿಗೂ ಹೆಸರುವಾಸಿ. ವೃತ್ತಿ ರಂಗಭೂಮಿಗೆ ಹೇಳಿಕೊಳ್ಳುವಂತಹ ನೆಲೆ ಇಲ್ಲ. ಆದರೆ ಕ್ಯಾಂಪ್‌ಗಳಿಗೆ ಕೊರತೆ ಇಲ್ಲ. ಆಧುನಿಕ ಹವ್ಯಾಸಿ ಪ್ರಯೋಗಶೀಲತೆಯನ್ನು ರಂಗಕರ್ಮಿಗಳ ಪರಿಚಯದ ಮೂಲಕ ಈ ಕೃತಿಯಲ್ಲಿ ಲೇಖಕ ಡಾ.ಎಚ್.ಎಂ.ಕುಮಾರಸ್ವಾಮಿ ಅವರು ಕಟ್ಟಿಕೊಟ್ಟಿದ್ದಾರೆ. ರಂಗ ಕಲಾವಿದರ ಕೈಪಿಡಿಯಂತೆ ಉಪಯುಕ್ತ ಗ್ರಂಥ ಇದಾಗಿದೆ.

ಡಾ.ಎಚ್.ಎಂ.ಕುಮಾರಸ್ವಾಮಿ ಹವ್ಯಾಸಿ ರಂಗಭೂಮಿಯ ಹೆಸರಾಂತ ನಟ, ನಾಟಕಕಾರ, ನಿರ್ದೇಶಕರು. ಸುಳ್ಯ ಅಭಿನಯದ ಸ್ಥಾಪಕ ಸದಸ್ಯರಲ್ಲೊಬ್ಬರಾದ ಅವರು, ಕರಾವಳಿಯ ಸಮಸ್ತ ಹವ್ಯಾಸಿ ರಂಗಚಟುವಟಿಕೆಯ ಒಳಹೊರಗನ್ನು ಬಲ್ಲವರು. ಆಧುನಿಕ ಹವ್ಯಾಸಿ ರಂಗ ಚಳವಳಿಯಲ್ಲಿ ತೊಡಗಿಕೊಂಡ ಬಹುತೇಕ ರಂಗಕರ್ಮಿಗಳ ವಿವರಗಳು ಇಲ್ಲಿ ದಾಖಲಾಗಿವೆ.

–ಗುಡಿಹಳ್ಳಿ ನಾಗರಾಜ

# ಲೇಖಕನ ಮಾತು

ಕರ್ನಾಟಕದ ಕರಾವಳಿ ಜಿಲ್ಲೆಗಳು ಇಲ್ಲಿನ ಮಣ್ಣಿನ ಕಲೆಯಾದ 'ಯಕ್ಷಗಾನ'ವನ್ನು ತನ್ನುದ್ದಕ್ಕೂ ಮೈಗೂಡಿಸಿಕೊಂಡು ಪೋಷಿಸಿಕೊಂಡು ಬರುತ್ತಿವೆಯಾದರೂ 'ಕನ್ನಡರಂಗಭೂಮಿ'ಗೆ ಯಾವತ್ತೂ ಅನನ್ಯ ಆಶ್ರಯ ನೀಡಿ ಬೆಳೆಸಿವೆ. ಹಾಗೇನೇ 'ತುಳು ರಂಗಭೂಮಿ'ಯನ್ನೂ ಸಹ ತನ್ನ ತೆಕ್ಕೆಗೆ ಸೇರಿಸಿಕೊಂಡಿವೆ. ಹಾಗಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡು ಜಿಲ್ಲೆಗಳು ಯಕ್ಷಗಾನ ಬಯಲಾಟ, ಕನ್ನಡ ಹಾಗೂ ತುಳು ರಂಗಭೂಮಿಯಲ್ಲಿ ವಿಶಿಷ್ಟತೆಯನ್ನು ಮೆರೆಯುತ್ತ, ತಮ್ಮದೇ ಆದ ಛಾಪನ್ನು ಮೂಡಿಸುತ್ತ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡಿದಿವೆ.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕಾಸರಗೋಡು ರಂಗಭೂಮಿಯನ್ನು ಇಲ್ಲಿ ಪರಿಚಯಿಸುವಾಗ ಬಹುತೇಕ ಕಲಾವಿದರು ಕನ್ನಡ ರಂಗಭೂಮಿ ಜೊತೆಗೆ ಯಕ್ಷಗಾನ ಹಾಗೂ ತುಳು ರಂಗಭೂಮಿಯಲ್ಲಿ ತೊಡಗಿಕೊಂಡಿರುವವರೇ ಆಗಿದ್ದಾರೆ. ಆದುದರಿಂದ ಈ ಮೂರೂ ಕ್ಷೇತ್ರಗಳ ಅವಿನಾಭಾವ ಸಂಬಂಧವನ್ನು ಗುರುತಿಸದೇ ಹೋದಲ್ಲಿ ಸಾಂಸ್ಕೃತಿಕ ಗ್ರಹಿಕೆ ಅರ್ಥಪೂರ್ಣವಾಗಲಾರದು.

ಇನ್ನು ಈ ಜಿಲ್ಲೆಗಳ ತಾಲ್ಲೂಕುವಾರು ಕನ್ನಡ ರಂಗಭೂಮಿ ಪರಿಚಯ ಪ್ರಸ್ತುತಪಡಿಸುವಾಗ ರಂಗಜಂಗಮ ಬಿ.ವಿ.ಕಾರಂತ ಹಾಗೂ ಕಾದಂಬರಿ ದಿಗ್ಗಜ ಶಿವರಾಮ ಕಾರಂತರ ಪ್ರಭಾವ ಹಾಗೂ ಅವರು ರಂಗಭೂಮಿಯ ಕಾಯಕದಲ್ಲಿ ಕರಾವಳಿಯುದ್ದಕ್ಕೂ ಹರಿದಾಡಿದ, ಪ್ರೋತ್ಸಾಹಿಸಿದ ಸಂಗತಿಗಳು ದಾಖಲಾಗುತ್ತವೆ. ಇವರೊಂದಿಗೆ ಈ ಭಾಗದಲ್ಲಿ ಕನ್ನಡ ಸಾಮಾಜಿಕ ನಾಟಕ ಪರಂಪರೆಗೆ ಚಾಲನೆ ನೀಡಿದ ಎಂ.ಎನ್. ಕಾಮತ್ ಹಾಗೂ ರಮಾನಂದ ಚೂರ್ಯ ಮುಂತಾದವರೂ ಮುಖ್ಯರಾಗುತ್ತಾರೆ. ಹಾಗಾಗಿ ಯಕ್ಷಗಾನ ಹಾಗೂ ತುಳು ರಂಗಭೂಮಿಯ ಜೊತೆಗೆ ಈ ಭಾಗದಲ್ಲಿ ಕನ್ನಡ ರಂಗಭೂಮಿ ಢಾಳಾಗಿಯೇ ಬೆಳೆದಿದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು.

ಈ ಹೊತ್ತಗೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲ್ಲೂಕುಗಳ ಹಾಗೂ ಕಾಸರಗೋಡು ಜಿಲ್ಲೆಯ ಕನ್ನಡ ರಂಗಭೂಮಿಯ ಇತಿಹಾಸ ಮತ್ತು ಇಂದಿನ ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ. ಈ ಭಾಗಗಳ ರಂಗಮಾಹಿತಿ ಸಂಗ್ರಹಿಸುವಲ್ಲಿ ಶ್ರೀ ಜಯಪ್ರಕಾಶ ಕುಕ್ಕೇಟಿ, ಶ್ರೀ ಐ.ಕೆ. ಬೊಳುವಾರು, ಶ್ರೀ ಮೌನೇಶ ವಿಶ್ವಕರ್ಮ, ಪ್ರೊ. ಕೆ. ಕೃಷ್ಣಮೂರ್ತಿ, ಶ್ರೀ ಜಗನ್‌ಪವಾರ್ ಹಾಗೂ ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭೋಗ್

ಇವರುಗಳು ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ದುಡಿದಿದ್ದಾರೆ.

ಎಲ್ಲಾ ತಾಲ್ಲೂಕುಗಳ ಕನ್ನಡ ರಂಗಭೂಮಿಗೆ ಸಂಬಂಧಿಸಿದಂತೆ ದೀರ್ಘವಾದ ಲೇಖನಗಳನ್ನು ಸಿದ್ಧಪಡಿಸಿ, ಹಿರಿಯ ಕಿರಿಯ ಕಲಾವಿದರ ಪರಿಚಯ ಸಂಗ್ರಹಿಸುವಲ್ಲಿ ಶ್ರಮಿಸಿದ್ದಾರೆ. ಜೊತೆಗೆ ನನ್ನ ಪರಿಚಯಕ್ಕೆ ಹಾಗೂ ಅನುಭವಕ್ಕೆ ಬಂದ ಕೆಲವು ಮಾಹಿತಿ ಹಾಗೂ ಸಂಗತಿಗಳನ್ನು ಸಹ ಸೇರಿಸಿದ್ದೇನೆ. ಇಷ್ಟಾದರೂ ಕೆಲವು ಕಲಾವಿದರು ಈ 'ಮಾಹಿತಿಕೋಶ' ದಿಂದ ಹೊರಗುಳಿಯಬಹುದು. ಮಾಹಿತಿ ಸಂಗ್ರಹದ ಕೊರತೆಯೋ ಅಥವಾ ಪರಿಚಯ ನೀಡುವಲ್ಲಿ ಕಲಾವಿದರ ಉದಾಸೀನತೆಯೋ ಇದಕ್ಕೆ ಕಾರಣವಾಗಬಹುದು. ಹಾಗಾಗಿ ಈ ಮಾಹಿತಿಕೋಶ ಅಪೂರ್ಣ ಎಂಬ ಅಭಿಪ್ರಾಯವನ್ನು ಸಹಜವಾಗಿಯೇ ನಿರೀಕ್ಷಿಸುತ್ತೇನೆ ಜೊತೆಗೆ ಕೊರತೆಯನ್ನು ಸಂಪಾದಕನ ನೆಲೆಯಲ್ಲಿ ಒಪ್ಪಿಕೊಳ್ಳುತ್ತೇನೆ ಕೂಡ.

ಉಳಿದಂತೆ ರಂಗ ಮಂದಿರಗಳು, ಪ್ರಸಾದನ ಕೇಂದ್ರಗಳು, ರಂಗಸಂಗೀತಗಾರರು, ವೃತ್ತಿ ಕಂಪೆನಿ ಹಾಗೂ ವೃತ್ತಿ ಕಲಾವಿದರ ಮಾಹಿತಿ ಈ 'ಕೊಶ'ದಲ್ಲಿ ತೀರಾ ವಿರಳವಾಗಿಯೇ ಇದೆ. ಕರ್ನಾಟಕದ ಇತರ ಜಿಲ್ಲೆಗಳಿಗಿಂತ ಈ ಕರಾವಳಿ ಭಾಗ ಸಾಂಸ್ಕೃತಿಕವಾಗಿ ಭಿನ್ನವಾಗಿರುವುದೇ ಇದಕ್ಕೆ ಮುಖ್ಯ ಕಾರಣ.

ಕರ್ನಾಟಕದ ಎಲ್ಲ ಜಿಲ್ಲೆಗಳ ಕನ್ನಡ ರಂಗಭೂಮಿ ಬೆಳೆದು ಬಂದ ಬಗೆ ಹಾಗೂ ಸದ್ಯದ ಎಲ್ಲ ರಂಗ ಕಲಾವಿದರ ಪರಿಚಯವನ್ನೊಳಗೊಂಡ ಜಿಲ್ಲಾವಾರು 'ರಂಗಮಾಹಿತಿ ಪುಸ್ತಕ' ವನ್ನು ಪ್ರಕಟಿಸುವ ಯೋಜನೆಯೊಂದನ್ನು ಕರ್ನಾಟಕ ನಾಟಕ ಅಕಾಡೆಮಿ 2010ರಲ್ಲಿ ರೂಪಿಸಿತ್ತು. ಈ ಯೋಜನೆಗೆ ಕರ್ನಾಟಕ ನಾಟಕ ಅಕಾಡೆಮಿಯ ಅಂದಿನ ಅಧ್ಯಕ್ಷರಾಗಿದ್ದ ಡಾ. ಬಿ.ವಿ. ರಾಜಾರಾಂರವರು ಚಾಲನೆ ನೀಡಿದರು. ಆದರೆ ಕಾರಣಾಂತರಗಳಿಂದ ಈ ಯೋಜನೆ ಅಪೂರ್ಣವಾಗಿಯೇ ಉಳಿದಿತ್ತು. ಕಾಲ ಹಾಗೂ ಸಂದರ್ಭದ ಔಚಿತ್ಯದ ದೃಷ್ಟಿಯಿಂದ ಮತ್ತು ಸಂಗ್ರಹಿಸಲಾಗಿರುವ ದಾಖಲೆಗಳು ರಂಗಭೂಮಿಯ ಚಲನಶೀಲನೆ ದೃಷ್ಟಿಯಿಂದಲೂ ಹಳತಾಗಬಹುದೆಂಬ ಉದ್ದೇಶದಿಂದ ಈ ಪುಸ್ತಕದ ಮುದ್ರಣಕ್ಕೆ ನಾನು ಅನ್ಯ ಆಶ್ರಯ ಪಡೆಯಬೇಕಾಯಿತು.
ಈ ವಿಷಯವನ್ನು ಅಂದು ನಾಟಕ ಅಕಾಡೆಮಿ ಗಮನಕ್ಕೆ ತಂದು– ಅಕಾಡೆಮಿಯಿಂದ ಆರ್ಥಿಕ ನೆರವನ್ನು ಪಡೆಯದೆ, ವೈಯಕ್ತಿಕ ನೆಲೆಯಲ್ಲಿ ಪುಸ್ತಕ ಪ್ರಕಟಣೆಗೆ ಮುಂದಾದೆ. ಆ ಪುಸ್ತಕ ಹೊರಬಂದಿತ್ತು.

ಪ್ರಸ್ತುತ ಅಧ್ಯಕ್ಷರಾದ ಶ್ರೀ ಎಲ್.ಬಿ.ಶೇಖ (ಮಾಸ್ತರ) ಅವರ ಅವಧಿಯಲ್ಲಿ ಪ್ರತಿ ಜಿಲ್ಲೆಗೊಂದರಂತೆ ಜಿಲ್ಲಾ ರಂಗಮಾಹಿತಿ ಪುಸ್ತಕವನ್ನು ನಾಟಕ ಅಕಾಡೆಮಿ ವತಿಯಿಂದಲೇ ಪ್ರಕಟಿಸುವ ಯೋಜನೆಯನ್ನು ಮುಂದುವರಿಸಲಾಯಿತು. ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆ ಒಳಗೊಂಡ ಕರಾವಳಿ ಕನ್ನಡ ರಂಗಭೂಮಿ ಮಾಹಿತಿ ಪುಸ್ತಕವನ್ನು ನನ್ನಿಂದ ರಚಿಸಲು ಹಿಂದಿನ ಅವಧಿಯಲ್ಲೇ ಅಕಾಡೆಮಿ ಬದ್ಧವಾಗಿತ್ತು. ನಾನು ಮಾಹಿತಿ ಸಂಗ್ರಹಿಸಿ ಬರೆದಿದ್ದರೂ, ಅಕಾಡೆಮಿ ವತಿಯಿಂದ ಪುಸ್ತಕ ಪ್ರಕಟವಾಗಿರಲಿಲ್ಲ. ಹಾಗಾಗಿ

ನನ್ನನ್ನೇ ಪ್ರಸಕ್ತ ಅಕಾಡೆಮಿ ಕೇಳಿಕೊಂಡು ಪತ್ರ ಬರೆಯಿತು. ಈ ಸಂಬಂಧವಾಗಿ ಈ ಯೋಜನೆಯ ನಿರ್ವಾಹಕ ಸಂಪಾದಕರಾದ ಶ್ರೀ ಗುಡಿಹಳ್ಳಿ ನಾಗರಾಜ ಅವರು ನನ್ನನ್ನು ಸಂಪರ್ಕಿಸಿದಾಗ ನಾನು ಸ್ಪಂದಿಸಿದೆ. ಹಾಗಾಗಿ ಇದೀಗ ನಾಟಕ ಅಕಾಡೆಮಿ ವತಿಯಿಂದ 'ಕರಾವಳಿ ಕನ್ನಡ ರಂಗಭೂಮಿ' ಪುಸ್ತಕ ಪ್ರಕಟವಾಗುತ್ತಿದೆ. ಈ ರಂಗಮಾಹಿತಿಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನನಗೆ ವಹಿಸಿದ್ದ ಅಂದಿನ ಅಧ್ಯಕ್ಷರಾದ ರಾಜಾರಾಂ, ರಿಜಿಸ್ಟ್ರಾರ್ ನರಸಿಂಹಮೂರ್ತಿ ಆರಾಧ್ಯ ಅವರಿಗೆ, ಪ್ರಸಕ್ತ ಅವಧಿಯ ಅಧ್ಯಕ್ಷರಾದ ಶೇಖ ಮಾಸ್ತರ, ರಿಜಿಸ್ಟ್ರಾರ್ ಮಂಜುನಾಥ, ಕಾಸರಗೋಡಿನ ನಾಟಕ ಅಕಾಡೆಮಿ ಸದಸ್ಯ ಉಮೇಶ ಸಾಲಿಯಾನ್ ಹಾಗೂ ಗುಡಿಹಳ್ಳಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

– ಡಾ. ಎಚ್.ಎಂ. ಕುಮಾರಸ್ವಾಮಿ,

# ಕರ್ನಾಟಕ ನಾಟಕ ಅಕಾಡೆಮಿ

## ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ


ಶ್ರೀ ಎಲ್.ಬಿ.ಶೇಖ (ಮಾಸ್ತರ)

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಾಪುರ ಜಿಲ್ಲೆ

ಸದಸ್ಯರು, ಕರ್ನಾಟಕ ನಾಟಕಅಕಾಡೆಮಿ

ಶ್ರೀ ಪಿ.ತಿಪ್ಪೇಸ್ವಾಮಿ, ಚೆಳ್ಳಕೆರೆ

ಶ್ರೀ ರಾಜಪ್ಪ ಕಿರಗಸೂರು, ಮೈಸೂರುಜಿಲ್ಲೆ

ಶ್ರೀ ಎಸ್.ಕೆ.ಕೊನೆಸಾಗರ, ಹುನಗುಂದ

ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು

ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು

ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿಜಿಲ್ಲೆ

ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ

ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪ್ಪನಹಳ್ಳಿ

ಶ್ರೀ ಕೆ.ಜಗುಚಂದ್ರ, ಧಾರವಾಡ

ಶ್ರೀ ಉಮೇಶ ಸಾಲಿಯಾನ್, ಕಾಸರಗೋಡು

ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ ಜಿಲ್ಲೆ

ಶ್ರೀ ವಿ.ಎನ್.ಅಕ್ಕಿ, ರಾಯಚೂರು

ಶ್ರೀ ಬಿ.ಎಂ.ರಾಮಚಂದ್ರ, ಮೈಸೂರು

ಶ್ರೀ ಎನ್.ಕೆ.ರಾಮಕೃಷ್ಣ, ಬೆಂಗಳೂರು

ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸದಸ್ಯರು

ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು

ಡಾ. ಶ್ರೀಪಾದ ಭಟ್, ಉತ್ತರಕನ್ನಡಜಿಲ್ಲೆ

ಶ್ರೀ ಎಲ್.ಎಚ್.ರಂಗನಾಥಪ್ಪ, ತುಮಕೂರುಜಿಲ್ಲೆ

ರಿಜಿಸ್ಟ್ರಾರ್: ಬಿ.ಮಂಜುನಾಥ ಆರಾಧ್ಯ

ಯೋಜನಾ ಸಹಾಯಕರು: ಕೆ.ರೇವಣ್ಣ

ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಪರಿವಿಡಿ

ಅಧ್ಯಕ್ಷರ ನುಡಿ

ಎರಡು ನುಡಿ

ಸಂಪಾಧಕಿಯ ಮಾತು

ಅಕಾಡೆಮಿಗೆ ಆಯ್ಕೆಯಾಗಿರುವ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

1 ಸುಳ್ಯ ತಾಲ್ಲೂಕಿನ ರಂಗಭೂಮಿ : ಕರಾವಳಿ ರಂಗಭೂಮಿಗೆ ಅನನ್ಯ ಕೊಡುಗೆ – ನಮ್ಮ ಕಲಾವಿದರು

2 ಪುತ್ತೂರು ತಾಲ್ಲೂಕು ರಂಗಭೂಮಿ: ಹೊಸತು – ಹಳತು ಪರಂಪರೆಯ ಕೊಂಡಿ

3 ಬೆಳ್ತಂಗಡಿ ತಾಲ್ಲೂಕು ರಂಗಭೂಮಿ: ಕ್ರಿಯಾಶೀಲ ರಂಗ ಚಟುವಟಿಕೆ–ನಮ್ಮ ಕಲಾವಿದರು


4 ಬಂಟ್ವಾಳ ತಾಲ್ಲೂಕು ರಂಗಭೂಮಿ: ಸದ್ದಿಲ್ಲದೆ ಸಾಗಿರುವ ರಂಗ ಚಟುವಟಿಕೆ – ನಮ್ಮ ಕಲಾವಿದರು

5 ಮಂಗಳೂರು ತಾಲ್ಲೂಕು ಕನ್ನಡ ರಂಗಭೂಮಿ: ಸದ್ದಿಲ್ಲದೆ ಗದ್ದುಗೆ ಭದ್ರ – ನಮ್ಮ ಕಲಾವಿದರು

6 ಕಾಸರಗೋಡು ಕನ್ನಡ ರಂಗಭೂಮಿ: ಕಲೆಯ ಕುಲುಮೆಯಲ್ಲಿ ಹೊನ್ನಾಗಿ ಮಿಂಚಿದ ಕಾಸರಗೋಡು ರಂಗಭೂಮಿ – ನಮ್ಮ ಕಲಾವಿದರು

7 ನಾಟಕ ಅಕಾಡೆಮಿಯ ವಿವಿಧ ಪ್ರಶಸ್ತಿಗಳಿಂದ ಪುರಸ್ಕೃತರಾದ ಮಹನೀಯರು

# ದಕ್ಷಿಣ ಕನ್ನಡ ಜಿಲ್ಲೆ



# ಕಾಸರಗೋಡು ಜಿಲ್ಲೆ


KASARGOD
DISTRICT
N
To Mangalore
KARNATAKA
Vorkadi
Paturu
Minja
Majibailu
Bayar
Kuluru
Kayyuru
Adkastala
Bambrana
Kiduru
Perla
Lchlambadi
Yetteduka
Hosangadi
Mogral
Kannuru
Ubrangala
Aduru
Shrivagilu
Alampadi
Yednir
Mallampare
KASARGOD
Kottakal
Panathadi
Kalanadu
Poinachi
Bedadka
Kudumbur
Kallar
Kalichal
Bekal
Pallikere
Iriyal
Male
Chuli
Balal
Nattakkai
Parappa
Manikot
Pulluru
Kundupalli
Ramnagar
Chittarikal
Lakshadweep Sea
Hosdrug
Mekatt
Kunnagel
Podavur
Pantekai
Vellachal
Padne
Kannur
Takkekad
To Pallikare
Yedalakad
NH-17
LEGEND
National Highway
Major Road
District Boundary
State Boundary
Railway
District HQ
Other Town
River
Map not to Scale
Copyright © 2011 www.mapsofindia.com
(Updated on 30th March 2011)

# ಸುಳ್ಯ ತಾಲ್ಲೂಕಿನ ರಂಗಭೂಮಿ

## ಕರಾವಳಿ ರಂಗಭೂಮಿಗೆ ಅನನ್ಯ ಕೊಡುಗೆ

ಸುಳ್ಯ ತಾಲ್ಲೂಕು ಎಂಬುದು ಕರಾವಳಿ ಕರ್ನಾಟಕದ ಒಂದು ಮಲೆನಾಡು ಪ್ರದೇಶ. ಈ ಭಾಗವು ಯಕ್ಷಗಾನದ ರಂಗಸ್ಥಳವೇ ಆಗಿದ್ದು ಕರಾವಳಿಯ ಎಲ್ಲಾ ಜನಪದೀಯ ಕಲಾ ಪ್ರಕಾರಗಳ ಜೊತೆಗೆ ಈ ಭಾಗದ ಕೆಲವು ವಿಶಿಷ್ಟ ಜಾನಪದ ಪ್ರಕಾರಗಳು ಮೇಳವಿಸಿಕೊಂಡು ವಿಶಿಷ್ಟ ಛಾಪನ್ನು ಮೂಡಿಸಿವೆ. ಇಷ್ಟಾಗಿಯೂ ಇಲ್ಲಿ ಕನ್ನಡ ರಂಗಭೂಮಿಯನ್ನು ಆಮದಾದ ಸರಕು ಎನ್ನುವಂತಿಲ್ಲ. ಭೂತಾರಾಧನೆ, ಯಕ್ಷಾರಾಧನೆ, ಜಾನಪದ ಮುಂತಾದ ಎಲ್ಲಾ ಪ್ರಕಾರಗಳ ಜೊತೆಗೆ ನಾಟಕಾಭಿನಯವೂ ಮೇಳವಿಸಿಕೊಂಡು ಬಂದಿರುವುದು – ಬೆಳೆದಿರುವುದು ಸೋಜಿಗದ ಸಂಗತಿಯೇ ಸರಿ.

ಸುಳ್ಯ ತಾಲ್ಲೂಕಿನ ರಂಗಭೂಮಿಗೆ ಸುದೀರ್ಘ ಇತಿಹಾಸವಿದೆ. ಪ್ರಾರಂಭದ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿಯೇ ಕನ್ನಡ ರಂಗಭೂಮಿ ಬೆಳೆದದ್ದು, ವಿಸ್ತಾರಗೊಂಡದ್ದನ್ನು ನಾವು ಕಾಣಬಹುದು. ಬೆಳ್ಳಾರೆ ಚೊಕ್ಕಾಡಿ, ಪಂಜ, ಕಲ್ಮಡ್ಕ, ದೇರಾಜೆ ಮುಂತಾದ ಊರುಗಳು ಆಗ ನಾಟಕಾಸಕ್ತರ ಕೇಂದ್ರಗಳಾಗಿದ್ದವು. ಪೈಲೂರು ಗೋಪಾಲಕೃಷ್ಣಯ್ಯನವರ 'ಕೊಂಬೆಟ್ಟು ನಾಟಕ ಮಂಡಳಿ' ಎಂಬ ತಂಡ ಬಹುವಾಗಿ ಕಂಪೆನಿ ನಾಟಕ ಶೈಲಿಯಲ್ಲಿ ಪೌರಾಣಿಕ ನಾಟಕಗಳು ಹಾಗೂ ಸಂಗೀತ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಆಗಿನ ಕಾಲಕ್ಕೆ ಬೆಳ್ಳಾರೆ ಪೇಟೆ ನಾಟಕ ಪ್ರದರ್ಶನಗಳ ಒಂದು ಪ್ರಮುಖ ಕೇಂದ್ರವಾಗಿತ್ತು ಎಂಬುದು ಗಮನಾರ್ಹ ವಿಷಯ.

ಇದೆಲ್ಲ 1885–90 ರಿಂದ ಮೊದಲ್ಗೊಂಡು ಒಂದೆರಡು ದಶಕಗಳ ಚಟುವಟಿಕೆಗಳು. ಮುಂದೆ ಸುದೀರ್ಘ ಕಾಲವೇ ಎನ್ನಬಹುದು. ತಾಲ್ಲೂಕಿನ ರಂಗಭೂಮಿ ಚಟುವಟಿಕೆ ಸಂಬಂಧಿಸಿದ ಯಾವ ದಾಖಲೆಗಳೂ ದೊರೆಯುವುದಿಲ್ಲ.

1933ರ ನಂತರ ಡಾ. ಶಿವರಾಮ ಕಾರಂತರು ತಮ್ಮ ಮಕ್ಕಳ ಕೂಟ ತಂಡದೊಂದಿಗೆ ಸುಳ್ಯಕ್ಕೆ ಆಗಮಿಸಿ ಕೆಲವು ನಾಟಕಗಳನ್ನು ಪ್ರದರ್ಶಿಸಿದ್ದ ದಾಖಲೆಗಳು ದೊರೆಯುತ್ತವೆ. ಅದರಲ್ಲಿ ಸಾಹಿತಿ ನಿರಂಜನ ಚಿಕ್ಕವರಾಗಿದ್ದಾಗ ಕುಳ್ಕುಂದ ಶಿವರಾಯ ಹೆಸರಿನಲ್ಲಿ 1934ರಿಂದ 1938ರ ತನಕ ಸುಳ್ಯದಲ್ಲಿ ಇದ್ದಷ್ಟು ಸಮಯ ಬಾಲನಟನಾಗಿ ಭಾಗವಹಿಸಿದ್ದರು. ಕಾರಂತರ 'ಡೊಮಿಂಗೋ' ನಾಟಕವನ್ನು ನೋಡಿ ಅದರ ಪ್ರತಿಯನ್ನು ಓದಿ ತನ್ನ

ಅಧ್ಯಾಪಕರ ಸೂಚನೆ ಮೇರೆಗೆ ಒಂದು ಸ್ವಂತ ನಾಟಕವನ್ನು ರಚಿಸಿದ್ದು ಇದೆ. ಅದೇ ಸಮಯದಲ್ಲಿ ಸುಳ್ಯದಲ್ಲಿ 'ಆಫೀಸರ್ಸ್ ಕ್ಲಬ್' ಎಂಬ ಸಂಸ್ಥೆ ಹೊರಗಿನ ತಂಡಗಳನ್ನು ಕರೆಸಿ ಏರ್ಪಡಿಸಿದ್ದ ನಾಟಕ ಪ್ರದರ್ಶನಗಳನ್ನು ನೋಡಿ ಪ್ರಭಾವಿತರಾದದ್ದನ್ನು ನಿರಂಜನ ನೆನಪಿಸಿಕೊಂಡಿದ್ದಾರೆ. ಆ ಹೊತ್ತಿಗೆ ಕಾರಂತರ ಮಕ್ಕಳ ಮೇಳದ ನಾಟಕ ಪ್ರದರ್ಶನಗಳು, ಸಾಹಿತ್ಯ ಕಾರ್ಯಕ್ರಮಗಳು ಪುತ್ತೂರು, ಸುಳ್ಯ ಮುಂತಾದ ಕಡೆಗಳಲ್ಲಿ ಒಂದರ್ಥದಲ್ಲಿ ಸಾಂಸ್ಕೃತಿಕ ಸಂಚಲನವನ್ನೇ ಮೂಡಿಸಿದ್ದವು. ಹೆಚ್ಚು ಕಡಿಮೆ ಇದೇ ಅವಧಿಯಲ್ಲಿ ಬೆಳ್ಳಾರೆಯಲ್ಲಿ, ಕೊಟ್ಟೆಕಾಯಿ ನಾರಾಯಣರಾಯ ಎಂಬವರು 'ಸಮಾಜಾವಲೋಕನ' ಮುಂತಾದ ಸಾಮಾಜಿಕ ನಾಟಕಗಳನ್ನು ಬರೆದು ಈ ಭಾಗದಲ್ಲಿ ಪ್ರದರ್ಶಿಸುವ ಸಾರ್ಥಕ ಕೆಲಸ ಮಾಡಿರುವ ಪುರಾವೆಗಳಿವೆ.

ಕಲ್ಮಡ್ಕ ಮತ್ತು ಪಂಜ ಪರಿಸರದಲ್ಲಿ ಮೊದಲಿನಿಂದಲೂ ಯಕ್ಷಗಾನ ಹಾಗೂ ಕನ್ನಡ ರಂಗಭೂಮಿ ಚಟುವಟಿಕೆಗಳು ನಡೆದುಕೊಂಡು ಬಂದಿವೆ. ಹಿರಿಯ ಸಾಹಿತಿ, ನಾಟಕಕಾರ ಟಿ.ಜಿ ಮುಡೂರುರವರ ಕಾರ್ಯಕ್ಷೇತ್ರವೇ ಈ ಪರಿಸರವಾಗಿತ್ತು. ಅವರು ರಚಿಸಿದ ಅನೇಕ ನಾಟಕಗಳು, ಪ್ರಹಸನಗಳು, ಬಾನುಲಿ ರೂಪಕಗಳು, ಛಂದೋನಾಟಕ ಗೀತಾ ರೂಪಕಗಳು ಅನೇಕ ಕಡೆ ಪ್ರದರ್ಶನ ಕಂಡಿವೆ. ಕಲ್ಮಡ್ಕ 'ಸಂಗಮ ಕಲಾ ಸಂಘ,' 'ಸುರಭಿ ಸಂಸ್ಥೆ' ಗಳು ರಂಗಭೂಮಿಯನ್ನು ಪೋಷಿಸಿ ಬೆಳೆಸಿವೆ.

1940ರ ದಶಕದಲ್ಲಿ ಸುಳ್ಯದಲ್ಲಿ ಬೋರ್ಡ್ ಹೈಸ್ಕೂಲು ಪ್ರಾರಂಭವಾಯಿತು. ಅದರ ಸಹಾಯಾರ್ಥವಾಗಿ ಕೆಲವು ಐತಿಹಾಸಿಕ ನಾಟಕಗಳನ್ನು ಆಗಿನ ರಂಗಾಸಕ್ತರಾದ ಜಿ.ವಿ.ಕೃಷ್ಣ ಮುಂತಾದವರು ಪ್ರದರ್ಶಿಸಿದ್ದಾರೆ. ಕುರುಂಜಿ ವೆಂಕಟ್ರಮಣ ಗೌಡರು ಸಹ ಇದರಲ್ಲಿ ಪಾಲ್ಗೊಂಡಿರುವುದನ್ನು ಸ್ಮರಿಸಿಕೊಂಡಿದ್ದಾರೆ.

'ಪ್ಯಾರ್ ನಾವೂರ್' ನಾಮಾಂಕಿತರಾದ ಪ್ರಭಾಕರನಾವೂರ್ ಈ ಪರಿಸರ ಕಂಡ ಒಬ್ಬ ಬಹುಮುಖಿ ಕಲಾವಿದ. ಇವರು ಯಕ್ಷಗಾನ, ನಾಟಕ, ಸಾಹಿತ್ಯ ರಚನೆ, ಚಿತ್ರಕಲೆ, ಸಿನಿಮಾ ಮುಂತಾದ ಹಲವು ಕ್ಷೇತ್ರಗಳಲ್ಲಿ ದುಡಿದವರು. 1965ರ ಆಸುಪಾಸಿನಲ್ಲಿಯೇ 'ನವಕಲಾ ಪ್ರೊಡಕ್ಷನ್' ಎಂಬ ಸಂಸ್ಥೆಯ ಮುಖಾಂತರ ಹಲವಾರು ಕಾರ್ಯಕ್ರಮಗಳನ್ನು ಮಾಡಿ, ಮುಂದೆ 1980ರಲ್ಲಿ 'ಅಭಿನಯ ಸುಳ್ಯ' ನಾಟಕ ತಂಡದ ಸ್ಥಾಪಕ ಸದಸ್ಯರಾಗಿ 'ಚೋಮ' ನಾಟಕದಲ್ಲಿ ಮನೋಜ್ಞ ಅಭಿನಯ ನೀಡಿದವರು. ಇವರು ಬರೆದಿರುವ ಹಲವು ನಾಟಕಗಳು ಇನ್ನೂ ಮುದ್ರಣ ಕಾಣದಿರುವುದು ಒಂದು ದುರಂತವೇ ಸರಿ.

1970ರ ದಶಕದಲ್ಲಿ ಚೊಕ್ಕಾಡಿ, ಕುಕ್ಕುಜಡ್ಕ ಮುಂತಾದ ಕಡೆಗಳಲ್ಲಿ ಕನ್ನಡ ರಂಗಭೂಮಿಗೆ ಹೊಸ ಅಲೆಯ ಸಂಸ್ಪರ್ಶ ನೀಡಿದವರು ಕವಿ ಚೊಕ್ಕಾಡಿಯವರು. ಬಿ.ವಿ. ಕಾರಂತರ ಮಕ್ಕಳ ರಂಗಭೂಮಿಯಿಂದ ಪ್ರೇರಣೆ ಪಡೆದ ಇವರು ಈ ಪರಿಸರದಲ್ಲಿ ಮೊದಲ ಬಾರಿಗೆ ಹೊಸ ಸಂವೇದನೆಯ ಮಕ್ಕಳ ನಾಟಕ ಪ್ರದರ್ಶನ ಏರ್ಪಡಿಸಿ ಆಧುನಿಕ ರಂಗಭೂಮಿಯನ್ನು ಪರಿಚಯಿಸಿದರು. ಅದೇ ಜಾಡಿನಲ್ಲಿ ಮುಂದೆ ಕೆಲವು

ವರ್ಷಗಳ ಬಳಿಕ ದೊಡ್ಡತೋಟದಲ್ಲಿ ಮೋಹನ್ ಸೋನ, ಬಾಳಿಲದಲ್ಲಿ ಜಿಜ್ಞಾಸು ಕಾಸರಗೋಡು ಮುಂತಾದವರು ಮಕ್ಕಳ ರಂಗಭೂಮಿಗೆ ಹೊಸ ಆಯಾಮ ಒದಗಿಸುತ್ತಾ ವಿಸ್ತರಿಸಿದರು.

1980ರಲ್ಲಿ ಸುಳ್ಯದಲ್ಲಿ 'ಅಭಿನಯ ಸುಳ್ಯ' ಹವ್ಯಾಸಿ ಕಲಾವಿದರ ಬಳಗ ಜನ್ಮ ತಳೆದದ್ದು ಈ ತಾಲ್ಲೂಕಿನ ರಂಗಭೂಮಿ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು ಎಂದೇ ಹೇಳಬಹುದು. ಎಂ. ಬಿ. ಸದಾಶಿವ, ಚೊಕ್ಕಾಡಿಯವರ ಸಂಸರ್ಗದಿಂದ ಬೆಂಗಳೂರಿನ ಖ್ಯಾತ ರಂಗ ನಿರ್ದೇಶಕ ಆರ್.ನಾಗೇಶ್ ಸುಳ್ಯಕ್ಕೆ ಆಗಮಿಸಿ ಸ್ಥಳೀಯ ಆಸಕ್ತರನ್ನು ಕೂಡಿ ಹಾಕಿ 'ಚೋಮ' ನಾಟಕವನ್ನು ತಯಾರಿಸಿ 'ಅಭಿನಯ ಸುಳ್ಯ'ವನ್ನು ಹುಟ್ಟು ಹಾಕಿದರು. ಆ ಸಂದರ್ಭದಲ್ಲಿ ಚೊಕ್ಕಾಡಿ, ಜಿ.ಎಸ್. ಉಬರಡ್ಕ, ಜಿ. ವಿ. ಕೃಷ್ಣ, ಪದ್ಮಯ್ಯ ಮಾಸ್ತರ್, ರಾಮಕ್ಕ ಟೀಚರ್, ರಾಮ ಮಾಸ್ತರ್, ಪ್ಯಾರ್ ನಾವೂರ್ ಮುಂತಾದ ಹತ್ತಾರು ಹಿರಿಯ-ಕಿರಿಯ ಕಲಾವಿದರು ರಂಗಭೂಮಿಯ ವಿವಿಧ ಆಯಾಮಗಳಲ್ಲಿ ತೊಡಗಿಕೊಂಡರು. ಮುಂದಿನ ದಿನಗಳಲ್ಲಿ 'ಅಭಿನಯ ಸುಳ್ಯ' ಕ್ಷಿಪ್ರ ಬೆಳವಣಿಗೆಯನ್ನು ನಿರಂತರವಾಗಿ ನಾಟಕಗಳ ತಯಾರಿ, ಪ್ರದರ್ಶನ, ರಂಗತರಬೇತಿ ಶಿಬಿರ, ವಿಚಾರಸಂಕಿರಣ, ನಾಟಕೋತ್ಸವ ಮುಂತಾದವುಗಳನ್ನು ಏರ್ಪಡಿಸುತ್ತ ತಾಲ್ಲೂಕಿನಾದ್ಯಂತ ಕನ್ನಡ ರಂಗಭೂಮಿ ಬೆಳೆಯಲು ಕಾರಣವಾಯಿತು.

'ಅಭಿನಯ'ದ ವತಿಯಿಂದ 1987, 88, 89ರಲ್ಲಿ ಜಿಲ್ಲಾ ಮಟ್ಟದ ಮಕ್ಕಳ ನಾಟಕೋತ್ಸವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಟ್ಟಮೊದಲ ಬಾರಿಗೆ ಸುಳ್ಯದಲ್ಲಿ ನಡೆದಿದೆ. 1993, 94, 95ರಲ್ಲಿ 'ನಿರಂಜನ-ಮಹಮ್ಮದ್ ಬಾಲ್ಯ ಮೈತ್ರಿ ಪುರಸ್ಕಾರ' ಹೆಸರಿನಲ್ಲಿ 3ವರ್ಷಗಳ ಕಾಲ ಮಕ್ಕಳ ನಾಟಕೋತ್ಸವ ಜರುಗಿದೆ. 2009 ಮತ್ತು 2010ರಲ್ಲಿ ಜಿಲ್ಲಾ ಮಟ್ಟದ ನಾಟಕೋತ್ಸವವನ್ನು ಅಭಿನಯದ ಆಶ್ರಯದಲ್ಲಿ ನಡೆಸಲಾಗಿದೆ. ರಂಗಕರ್ಮಿ ಡಾ.ಹೆಚ್.ಎಂ.ಕುಮಾರಸ್ವಾಮಿಯವರು 'ಅಭಿನಯ' ಸಂಸ್ಥೆಯನ್ನು ನಿರಂತರವಾಗಿ ಮುನ್ನಡೆಸುತ್ತಾ ಬಂದಿದ್ದು, ಅವರು 'ಅಭಿನಯ'ದ ಸಕ್ರಿಯತೆಗೆ ಚಾಲನಾಶಕ್ತಿಯಾಗಿದ್ದಾರೆ. ಸುಳ್ಯ ತಾಲ್ಲೂಕಿನಾದ್ಯಂತ ಕನ್ನಡ ಹವ್ಯಾಸಿ ರಂಗಭೂಮಿ ವಾತಾವರಣ ಮೈದಳೆಯಲು ಇವರು ಮೂಲ ಪ್ರೇರಕರಾಗಿದ್ದಾರೆ. ಸ್ನೇಹ ಶಿಕ್ಷಣ ಸಂಸ್ಥೆ ವತಿಯಿಂದಲೂ ಮಕ್ಕಳ ನಾಟಕಗಳು ಪ್ರದರ್ಶನಗೊಂಡಿವೆ.

ತಾಲ್ಲೂಕಿನಲ್ಲಿ ಕಾಲೇಜು ರಂಗಭೂಮಿ ಕ್ಷೇತ್ರದಲ್ಲಿ ಸುಬ್ರಹ್ಮಣ್ಯದ 'ಕುಸುಮ ಸಾರಂಗ' ಮುಂಚೂಣಿಯಲ್ಲಿದೆ. 'ಅಭಿನಯ'ದ ಮೂಲದ ತುಕಾರಾಂ ಏನೆಕಲ್ಲು 1990ರಿಂದಲೂ ಈ ಕ್ಷೇತ್ರದಲ್ಲಿ ಅವಿರತವಾಗಿ ದುಡಿಯುತ್ತಿದ್ದಾರೆ. ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜು ನಾಟಕ ತಂಡ ಹಲವಾರು ನಾಟಕಗಳನ್ನು ಪ್ರದರ್ಶಿಸಿ ಕೆಲವು ಪ್ರಶಸ್ತಿಗಳನ್ನು ಪಡೆಯುವ ಮೂಲಕ ಕಾಲೇಜು ರಂಗಭೂಮಿಗೆ ತನ್ನ ಕೊಡುಗೆ ನೀಡಿದೆ. ಮನೆಯನ್ನೇ ರಂಗ ಮನೆಯನ್ನಾಗಿಸಿಕೊಂಡು ಜೀವನ್‌ರಾಂ ಸುಳ್ಯ ಮಕ್ಕಳ ಹಾಗೂ ದೊಡ್ಡವರ ನಾಟಕಗಳನ್ನು ರಂಗವೇರಿಸಿ ಸಾಧನೆ ಮಾಡಿದ್ದಾರೆ. ಎಂ. ಎಸ್. ಗೀತಾ, ಎಂ ಎಸ್.

ಜಯಪ್ರಕಾಶ್, ಜಯಪ್ರಕಾಶ್ ಕುಕ್ಕೇಟಿ, ಪ್ರಸನ್ನ ಬಡ್ಡಡ್ಕ, ತೇಜಕುಮಾರ್ ಬಡ್ಡಡ್ಕ, ಎಂ.ಜಿ ಕಜೆ ಜನಾರ್ದನ ಕಣಕ್ಕೂರು ಇವರೆಲ್ಲ ರಂಗಭೂಮಿಯಲ್ಲಿ ಸಕ್ರಿಯವಾಗಿರುವುದರ ಹಿಂದೆ ಅಭಿನಯದ ಪ್ರೇರಣೆ ಇದೆ.

ಸಂಪಾಜೆಯ ಎನ್. ಎಸ್. ದೇವಿಪ್ರಸಾದರು ಸಂಪಾಜೆಯಲ್ಲಿ ಬಯಲು ರಂಗಮಂದಿರವನ್ನು ನಿರ್ಮಿಸಿ ಅಲ್ಲಿ ಅನೇಕ ರಂಗಪ್ರಯೋಗಗಳನ್ನು ಮಾಡಿದ್ದಾರೆ. ಮಂಡೆಕೋಲು ಗಂಗಾಧರ ಮಾಸ್ತರ್ ಒಂದೆರಡು ನಾಟಕಗಳನ್ನು ರಚಿಸಿದ್ದಾರೆ. ಜೀವನ್‌ರಾಂ ಸುಳ್ಯ ನಿರ್ದೇಶನದ 'ಏಡ್ಸ್' ಮತ್ತಿತರ ಸಾಮಾಜಿಕ ಪಿಡುಗುಗಳ ಕುರಿತು ಜನ ಜಾಗೃತಿಯ ಮತ್ತು ಬೀದಿ ನಾಟಕಗಳು, 1990ರಲ್ಲಿ ಸಾಕ್ಷರತಾ ಆಂದೋಲನ ಸಂದರ್ಭದಲ್ಲಿ ಬೀದಿನಾಟಕಗಳು, 1984ರಲ್ಲಿ 'ಪಶ್ಚಿಮಘಟ್ಟ ಉಳಿಸಿ' ಬೀದಿ ನಾಟಕಗಳು ಸುಳ್ಯದಲ್ಲಿ ನೂರಾರು ಪ್ರದರ್ಶನ ಕಂಡಿವೆ. ಯುವಜನ ಮೇಳಗಳಲ್ಲಿ ಪ್ರತಿ ವರ್ಷ ಏಳೆಂಟು ಗ್ರಾಮೀಣ ನಾಟಕ ತಂಡಗಳು ಭಾಗವಹಿಸಿ ಪ್ರದರ್ಶನ ನೀಡಿವೆ. ಸುಳ್ಯದವರಾದ ಶಶಿಧರ, ಅರಂತೋಡಿನಲ್ಲಿ ಕಿಶೋರ್ ಕಿಲ್ಲಾಯ, ವಿಟ್ಲದಲ್ಲಿ ಮೋಹನ್ ಸೋನ, ಮೂರ್ತಿ ದೇರಾಜೆ, ಸುಬ್ಬಪ್ಪ ಕೈಕಂಬ, ಪುತ್ತೂರಿನಲ್ಲಿರುವ ಆರ್. ಕೆ. ಜೋಷಿ ಮಂಗಳೂರಿನಲ್ಲಿರುವ ಗೋಪಾಡ್ಕಾರ್, ಎಂ. ಜಿ. ಕಜೆ ಇಂದಿಗೂ ರಂಗ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ದಿ.ಅಭಿನಯ ಚಂದ್ರು, ದಿ.ವೆಂಕಟ್ ಮೋಂಟಡ್ಕ, ದಿ.ನವೀನ್ ಎಡಮಂಗಲ ಸುಳ್ಯವು ಕಳಕೊಂಡ ಪ್ರತಿಭಾವಂತ ಯುವ ರಂಗಕಲಾವಿದರು. ನೀನಾಸಂ ರಂಗತರಬೇತಿ ಪಡೆದ ಜೀವನ್‌ರಾಂ ಸುಳ್ಯ, ರಾಜೇಶ್ವರಿ ಸುಳ್ಯ, ರೇಣುಕಾ ಪಂಜ, ಸರಸ್ವತಿ ಬೊಳಿಯಮಜಲು, ಕೃಷ್ಣಕುಮಾರ್ ನಾರ್ಣಕಜೆ, ಬಾಸುಮ, ಪದ್ಮಾ ಕೊಡಗು, ಮಹಾಬಲ ಕಲ್ಲಡ್ಕ, ಜಯಶೇಖರ ಮಡಪ್ಪಾಡಿ, ಪ್ರವೀಣ್ ಗುತ್ತಿಗಾರು ಇವರೆಲ್ಲ ಸುಳ್ಯ ತಾಲ್ಲೂಕಿನವರು. ಮೈಸೂರಿನ ರಂಗಾಯಣದಲ್ಲಿ ತರಬೇತಿ ಪಡೆದ ಎಂ. ಎಸ್. ಗೀತಾ ಮೋಂಟಡ್ಕ ರಂಗಾಯಣದ ಖಾಯಂ ಕಲಾವಿದರಾಗಿದ್ದಾರೆ. ಗುತ್ತಿಗಾರಿನ ಕೃಷ್ಣಭಟ್ ರಾಷ್ಟ್ರೀಯ ನಾಟಕ ಶಾಲೆ (ಎನ್.ಎಸ್.ಡಿ)ಯಲ್ಲಿ ತರಬೇತಿ ಪಡೆದವರು.

ಸುಳ್ಯ ತಾಲ್ಲೂಕಿನ ಪೆರುವಾಜೆಯ ಪಿ.ಬಿ ರೈಯವರು 'ನಂದೀಕೇಶ್ವರ ನಾಟಕ ಸಂಘ' ಎಂಬ ಕಂಪನಿ ನಾಟಕ ತಂಡ ರಚಿಸಿಕೊಂಡು ಹಲವಾರು ನಾಟಕವನ್ನು ಪ್ರದರ್ಶಿಸಿದ್ದಾರೆ. ಉಪನ್ಯಾಸಕರಾದ ಡಾ. ಎಚ್. ಎಂ ಕುಮಾರಸ್ವಾಮಿ, ರಂಗಭೂಮಿಗೆ ಸಂಬಂಧಿಸಿ ಪಿ.ಹೆಚ್‌ಡಿ. ಪದವಿ ಪಡೆದಿದ್ದಾರೆ. ಡಿ. ಜವರೇಗೌಡ, ಡಾ. ಪ್ರಭಾಕರ ಶಿಶಿಲ, ಡಾ. ಪೂವಪ್ಪ ಕಣಿಯೂರು, ವಿ. ಪಿ. ಹೊಳ್ಳ, ಸೀತಾರಾಮ ಬುಡ್ಲೆಗುತ್ತು, ಯು.ಸು.ಗೌಡ, ಗಿರಿಧರ ಕ್ಯೊಂಗೋಡಿ ಪಿ.ಎಂ.ರಂಗನಾಥ, ಎಂ. ಎಸ್, ಭಟ್ ಜಾಲ್ಸೂರು, ಸುಬ್ರಾಯ ಕುಕ್ಕುಜಡ್ಕ, ಜಿಜ್ಞಾಸು ಬಾಳಿಲ, ಕೆ.ವಿ. ಶರ್ಮ ಬಾಳಿಲ, ಮಜೀದ್, ನಾಗರಾಜ್ ಮುಳ್ಯ, ಗೀತಾ ಮುಳ್ಯ, ಡಾ. ವೀಣಾ, ಕೆ. ರಾಮಕೃಷ್ಣ, ಜಯಾನಂದ ಕುರುಂಜಿ, ಬಿ. ಎಸ್. ಗಣೇಶ್, ಗಂಗಾಧರ ಕುರುಂಜಿ, ಸುಭಾಶ್ ವಸಂತ ಕುರುಂಜಿ, ಪ್ರಸಾದ್ ಕೆಮ್ಮಿಂಜೆ, ಕಾವ್ಯ ಬಾಸುಮ, ಅಪೂರ್ವ

ಕುಮಾರಸ್ವಾಮಿ, ನಂದಾಕುಮಾರಸ್ವಾಮಿ, ಶಿವರಾಮ ಕಲ್ಮಡ್ಕ(ಪ್ರಸಾದನ), ಶೇಖರ ಮಣಿಯಾಣಿ(ಪ್ರಸಾದನ) ಗಣೇಶ್ ಪಂಜ(ಸಂಗೀತ), ಸುಭಾಶ್ ಪಂಜ, ಮಂಜುನಾಥ್ ಬೀರಮಂಗಲ, ಶಶಿಧರ್ ಗಾಂಧಿನಗರ, ಶ್ರೀಧರ ಮಡಿಯಾರ್, ಯು. ದುಗ್ಗಪ್ಪ ಇವರೆಲ್ಲ ಸುಳ್ಯದ ರಂಗಭೂಮಿಯಲ್ಲಿ ಗುರುತಿಸಿಕೊಂಡ ಕಲಾವಿದರು. ಡಾ. ಚಂದ್ರಶೇಖರ ದಾಮ್ಲೆಯವರು ಏಕಲವ್ಯ, ಪುಸ್ತಕದ ಗೋಡೆ ಮತ್ತು ಜಯಲಕ್ಷ್ಮಿ ದಾಮ್ಲೆಯವರು ಹಸಿರೇ ಉಸಿರು ನಾಟಕಗಳನ್ನು ರಚಿಸುವ ಮೂಲಕ ಗಮನ ಸೆಳೆದಿದ್ದಾರೆ.

ಸುಳ್ಯ ತಾಲ್ಲೂಕಿನ ರಂಗಭೂಮಿ ಕುರಿತಂತೆ ಹೇಳಬೇಕಾದದ್ದು ಇನ್ನೂ ಬಹಳಷ್ಟು ಇದೆ. ಲಭ್ಯ ಮಾಹಿತಿ ಪ್ರಕಾರ ಇಲ್ಲಿ ಪ್ರಮುಖ ಘಟನೆಗಳಷ್ಟನ್ನೇ ದಾಖಲಿಸಲಾಗಿದೆ.

ದ.ಕ. ಜಿಲ್ಲೆಯ ಯಾವುದೇ ತಾಲ್ಲೂಕು ಕೇಂದ್ರ ಕಾಣದಷ್ಟು ಕ್ಷಿಪ್ರ ಬೆಳವಣಿಗೆಯನ್ನು ಸಾಂಸ್ಕೃತಿಕ ವಲಯದಲ್ಲಿ ಸುಳ್ಯ ತಾಲ್ಲೂಕು ಕಂಡಿದೆ. 1980ರ ನಂತರದ ಸಾಂಸ್ಕೃತಿಕ ನಾಗಾಲೋಟದ ಕಾರಣಕ್ಕಾಗಿಯೇ ಆಗಿನ ಅವಿಭಜಿತ ಜಿಲ್ಲೆಯಲ್ಲಿ ಉಡುಪಿ, ಮಂಗಳೂರುಗಳ ಜೊತೆಗೆ ಸುಳ್ಯ ತಾಲ್ಲೂಕು ಕೂಡ ಸಮನಾಗಿ ನಿಲ್ಲುವಂತಾದದ್ದು ಈಗ ಇತಿಹಾಸ. ಇಂದು ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ರಂಗಭೂಮಿ ಚಟುವಟಿಕೆಗಳಿಗೆ ಅಭಿನಯ ಸುಳ್ಯ ಧನಾತ್ಮಕ ಕೊಡುಗೆ ಹಾಗೂ ಪ್ರೇರಣೆ ನೀಡಿದೆ ಎಂಬ ಸಂಗತಿ ನಿಚ್ಚಳವಾಗಿ ಗೋಚರಿಸುತ್ತದೆ.

ಸುಳ್ಯ ತಾಲ್ಲೂಕಿನಲ್ಲಿ ರಂಗಭೂಮಿ ಚಟುವಟಿಕೆಗಳಿಗೆ ವಿಫುಲ ಅವಕಾಶಗಳಿವೆ. ಏಕೆಂದರೆ ರಂಗಭೂಮಿ ಚಟುವಟಿಕೆಗಳಿಗಾಗಿ ಈ ಭೂಮಿ ಹದಗೊಂಡಿದೆ. ಈಗಾಗಲೇ ಇಲ್ಲಿ ಹಲವರು ಹಲವು ಬಗೆಯ ರಂಗ ಕೃಷಿ ಮಾಡಿ ಸಫಲತೆಯ ಬೆಳೆ ತೆಗೆದಿದ್ದಾರೆ. ಆದರೆ ವರ್ತಮಾನದ ಬದುಕು ಕಲಾವಿದರನ್ನು ಒಂದೆಡೆ ಬದುಕಲು ಬಿಡುತ್ತಿಲ್ಲ ಎಂಬುದಕ್ಕೆ ಈ ಮಣ್ಣಿನ ಪ್ರತಿಭಾನ್ವಿತರು ಬದುಕನ್ನರಸಿ ಹೊರ ಹೋಗಿರುವ ನಿದರ್ಶನಗಳೇ ಸಾಕ್ಷಿ. ಅಭಿನಯ ಮೂಲದ ಗೀತಾ ಮೋಂಟಡ್ಕ, ಜೀವನ್‌ರಾಂ ರಾಗಲಿ ಅಭಿನಯ ಸಂಪರ್ಕದ ಮೋಹನ್ ಸೋನ ಎಂ. ಜಿ. ಕಜೆ, ಬಾಸುಮ ಕೊಡಗು, ಗೋಪಾಡ್ಕರ್, ಎ.ಕೆ.ಹಿಮಕರ ಡಾ.ಬಿಳಿಮಲೆ ಮುಂತಾದ ಅನೇಕ ಪ್ರತಿಭಾನ್ವಿತರು ಬದುಕನ್ನರಸುತ್ತಾ ಹೊರಗೆ ಹಂಚಿ ಹೋಗಿರುವುದು ಅನಿವಾರ್ಯವೆಂದಾದರೂ ಈ ತಾಲ್ಲೂಕಿನ ರಂಗಭೂಮಿ ಬೆಳವಣಿಗೆಗೆ ಒಂದರ್ಥದಲ್ಲಿ ನಷ್ಟವೇ ಸರಿ.

ಇಷ್ಟಾದರೂ ಇಲ್ಲಿನ ರಂಗಭೂಮಿ ಇನ್ನೂ ಬರಡಾಗದೇ ಹುಲುಸಾಗಿಯೇ ಇದೆ. ಬೆಳೆಯ ತೆಗೆಯುವ ಧೀರರಿಗೆ ಸವಾಲಾಗಿಯೇ ಇದೆ. ಪ್ರೋತ್ಸಾಹದ ದೃಷ್ಟಿಯಿಂದ ಸ್ಥಳೀಯ ಮುದ್ರಣ, ಮಾಧ್ಯಮಗಳು, ಸಂಘ – ಸಂಸ್ಥೆಗಳು ಹಾಗೂ ಕಲಾಭಿಮಾನಿಗಳು ಇನ್ನೂ ಹೆಚ್ಚಿನ ಗಮನಹರಿಸಿ ಇಂಬು ನೀಡಬೇಕಾಗಿದೆ. ಹಾಗಾದಾಗ ಮಾತ್ರ ಸುಳ್ಯ ತಾಲ್ಲೂಕಿನ ಕನ್ನಡ ರಂಗಭೂಮಿ ನಿತ್ಯ ನೂತನವಾಗಿ ಕಂಗೊಳಿಸಲು ಸಾಧ್ಯವಾಗುತ್ತದೆ ಎಂದು ನಿಸ್ಸಂಕೋಚವಾಗಿ ಹೇಳಬಹುದು.

**ರಂಗತಂಡಗಳು:**

**ಅಭಿನಯ ಸುಳ್ಯ** – 1980ರಲ್ಲಿ ರೂಪುಗೊಂಡ ಅಭಿನಯ ಸುಳ್ಯ ಕನ್ನಡ ಹವ್ಯಾಸಿ ರಂಗಭೂಮಿಗೆ ಅನನ್ಯ ಕೊಡುಗೆ ನೀಡಿದೆ. ಅಭಿನಯ ತಂಡದಿಂದ ರೂಪುಗೊಂಡ ಹಲವಾರು ರಾಜ್ಯದ ವಿವಿಧ ಭಾಗಗಳಲ್ಲಿ ರಂಗ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಕರಾವಳಿ ಭಾಗದ ಹಿರಿಯ ರಂಗತಂಡಗಳ ಸಾಲಿಗೆ ಸೇರುವ ಅಭಿನಯ ಸುಳ್ಯ ಹವ್ಯಾಸಿ ಬಳಗಕ್ಕೆ ಎಚ್.ಎಂ.ಕುಮಾರಸ್ವಾಮಿಯವರು ಚಾಲನಾಶಕ್ತಿಯಾಗಿದ್ದಾರೆ.

**ರಂಗಮನ** – ರಂಗಭೂಮಿ ನಿರ್ದೇಶಕ ಜೀವನ್‌ರಾಂ ಸುಳ್ಯ ತನ್ನ ಮನೆಯನ್ನೇ 'ರಂಗಮನೆ' ಎಂದು ಹೆಸರಿಸಿ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದ್ದಾರೆ. ಕಳೆದ ಕೆಲವು ವರ್ಷಗಳಿಂದ ರಂಗಭೂಮಿ ಚಟುವಟಿಕೆ ನಡೆಸುತ್ತಿರುವ 'ರಂಗಮನೆ'ಗೆ ಜೀವನ್‌ರಾಂ ಸುಳ್ಯ ಇವರ ಸಾರಥ್ಯವಿದೆ.

**ಕುಸುಮಸಾರಂಗ** – ಸುಬ್ರಹ್ಮಣ್ಯದ ಕೆ.ಎಸ್.ಎಸ್ ಪದವಿ ಕಾಲೇಜಿನಲ್ಲಿ ರೂಪುಗೊಂಡಿರುವ 'ಕುಸುಮಾಸಾರಂಗ' ಕಾಲೇಜಿನಲ್ಲಿ ಕಳೆದ 20 ವರ್ಷಗಳಿಂದ ರಂಗತರಬೇತಿ, ನಾಟಕ ಪ್ರದರ್ಶನ ನಡೆಸುತ್ತಿದೆ. ಕಾಲೇಜು ರಂಗಭೂಮಿಗೆ ಗುರುತರ ಕೊಡುಗೆ ನೀಡುತ್ತಿರುವ ಈ ತಂಡಕ್ಕೆ ಶಾರೀರಿಕ ನಿರ್ದೇಶಕ ತುಕಾರಾಂಏನೇಕಲ್ಲು ಚಾಲನಾಶಕ್ತಿಯಾಗಿದ್ದಾರೆ.

ವಿನ್ಯಾಸ ಬಾಳಿಲ : – 1980ರಲ್ಲಿ ಬಾಳಿಲದಲ್ಲಿ 'ವಿನ್ಯಾಸ ಬಾಳಿಲ' ಹೆಸರಿನ ರಂಗ ತಂಡ ಆರಂಭವಾಯಿತು. ಮಕ್ಕಳ ನಾಟಕಗಳಿಗೆ ಹೆಚ್ಚಿನ ಒತ್ತು ನೀಡಿದ ವಿನ್ಯಾಸ ತಂಡವು 'ಆಕಾಶ ಮಾನವ, ಟ್ರೈನ್, ಯಂತ್ರಗಳು, ಆರೋಹಣ, ಅಲಿಬಾಬ ಮತ್ತು 40 ಕಳ್ಳರು, ಸೊಳ್ಳೆಯೂ ತಗಣೆಯೂ, ಎಣ್ಣೆ ಚಿಮಿಣಿ ಎಣ್ಣೆ, ಕೊಡೆಗಳು, ಮಹಾರಾಣಿ, ಇತ್ಯಾದಿ ನಾಟಕಗಳನ್ನು 'ವಿನ್ಯಾಸ' ಪ್ರದರ್ಶಿಸಿದೆ. ಮಕ್ಕಳ ರಂಗಭೂಮಿಗಾಗಿಯೇ ತೊಡಗಿಕೊಂಡ 'ವಿನ್ಯಾಸ 'ಬಾಳಿಲ ಹಲವಾರು ನಟರನ್ನು ಅಣಿಗೊಳಿಸಿದೆ.

**ಪ್ರಸಾಧನ ಕೇಂದ್ರಗಳು:**

**ಸಂಗಮ ಕಲಾ ಸಂಘ** – ಸುಳ್ಯ ತಾಲ್ಲೂಕಿನ ಕಲ್ಮಡ್ಕ ಎಂಬ ಹಳ್ಳಿಯಲ್ಲಿ ಕಳೆದ ಹತ್ತಾರು ವರ್ಷಗಳಿಂದ ಯಕ್ಷಗಾನ ವೇಷಭೂಷಣ ಹಾಗೂ ಮುಖವಾಡಗಳ ಕೇಂದ್ರವಾಗಿರುವ ಸಂಗಮ ಕಲಾ ಸಂಘ ನೀನಾಸಂ ಪದವೀಧರ ಮಹಾಬಲ ಭಟ್‌ರವರ ನೇತೃತ್ವದಲ್ಲಿ ಈಗ ನಾಟಕಗಳ ಪ್ರಸಾಧನ, ಪರಿಕರಗಳನ್ನು ಹೊಂದಿ ಸುತ್ತಮುತ್ತಲ ನಾಟಕ ಚಟುವಟಿಕೆಗಳಿಗೆ ವೇಷಭೂಷಣ ಪರಿಕರ, ಪ್ರಸಾಧನವನ್ನು ಒದಗಿಸುತ್ತಾ ಸಕ್ರಿಯವಾಗಿದೆ.

ಶ್ರೀಗುರು ಆರ್ಟ್ಸ್ – ತಾಲ್ಲೂಕಿನ ಬೆಳ್ಳಾರೆಯಲ್ಲಿ ಸ್ಥಾಪನೆಗೊಂಡಿರುವ 'ಶ್ರೀ ಗುರು ಆರ್ಟ್ಸ್' ಯಕ್ಷಗಾನ ಹಾಗೂ ಕನ್ನಡ ಮತ್ತು ತುಳು ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಿಗೆ ಬೇಕಾಗಿರುವ ಪರದೆ ಪರಿಕರಗಳನ್ನು ಕಳೆದ 12 ವರ್ಷಗಳಿಂದ

ಒದಗಿಸುತ್ತಿದೆ. ವೇಷಭೂಷಣ ತಯಾರಿ ಹಾಗೂ ಪ್ರಸಾಧನ ಕಲೆಯನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡಿರುವ ವಾಸುದೇವ ರೈ ಬೆಳ್ಳಾರೆ ಈ ಸಂಸ್ಥೆಯ ಮಾಲಿಕರು.

**ಮಂಜು ಕಲಾ ಆರ್ಟ್ಸ್ –** ಸುಳ್ಯ ಪಟ್ಟಣದಲ್ಲಿ ಇತ್ತೀಚೆಗೆ ಸ್ಥಾಪನೆಗೊಂಡಿರುವ ಮಂಜು ಕಲಾ ಆರ್ಟ್ಸ್ ವಿವಿಧ ಪ್ರಕಾರದ ಮುಖವಾಡಗಳು, ಪರಿಕರಗಳು ಹಾಗೂ ನಾಟಕದ ಉಡುಗೆ ತೊಡುಗೆಗಳನ್ನು ಹೊಂದಿರುವ ಈ ಸಂಸ್ಥೆಯನ್ನು ಮಂಜುನಾಥ ಬಂಗ್ಲೆಗುಡ್ಡೆ ಮುನ್ನಡೆಸುತ್ತಿದ್ದಾರೆ.

**ರಂಗಮಂದಿರಗಳು :** ಸುಳ್ಯದಲ್ಲಿರುವ ಕೆ.ವಿ.ಜಿ ಪುರಭವನ ಸ್ಥಳೀಯ ಸಂಸ್ಥೆಯ ಆಡಳಿತಕ್ಕೆ ಒಳಪಟ್ಟಿದ್ದು ನಾಟಕ, ಯಕ್ಷಗಾನ ಹಾಗೂ ಇನ್ನಿತರೆ ಎಲ್ಲಾ ಕಾರ್ಯಕ್ರಮಗಳಿಗೆ ರಿಯಾಯಿತಿ ದರದಲ್ಲಿ ದೊರೆಯುತ್ತದೆ.

ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಒಳಾಂಗಣ ನಾಟಕ ಚಟುವಟಿಕೆಗಳಿಗೆ ಪೂರಕವಾಗಿದ್ದು ಶಾಲಾ ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ ರಿಯಾಯಿತಿ ದರದಲ್ಲಿ ನಾಟಕ ಪ್ರದರ್ಶನಗಳಿಗೆ ದೊರೆಯುತ್ತದೆ. ಜೀವನರಾಂರವರ 'ರಂಗಮನೆ' ಅರ್ಧಚಂದ್ರಾಕೃತಿಯಲ್ಲಿದ್ದು ಬಯಲು ರಂಗಮಂದಿರವಾಗಿರುತ್ತದೆ. ಇದು ಖಾಸಗಿ ರಂಗಮಂದಿರವಾಗಿದ್ದು 'ರಂಗಮನೆ' ಕಾರ್ಯಕ್ರಮಗಳೇ ಹೆಚ್ಚಾಗಿ ನಡೆಯುತ್ತದೆ.

ಉಳಿದಂತೆ ತಾಲ್ಲೂಕಿನ ವಿವಿಧ ಊರುಗಳಲ್ಲಿ ಸಣ್ಣ–ಪುಟ್ಟ ಹಲವಾರು ರಂಗಮಂದಿರಗಳಿದ್ದರೂ ಆಧುನಿಕ ನಾಟಕಗಳ ಪ್ರಯೋಗಕ್ಕೆ ಪೂರಕವಾಗಿಲ್ಲ. ಹಾಗಾಗಿ ತಾಲ್ಲೂಕು ಕೇಂದ್ರವಾದ ಸುಳ್ಯದಲ್ಲಿ ಒಂದು ಸುಸಜ್ಜಿತ ರಂಗಮಂದಿರದ ಅವಶ್ಯಕತೆ ಇದೆ.

**ಜಯಪ್ರಕಾಶ್ ಕುಕ್ಕೇಟಿ**
ಕುಕ್ಕೆಟಿ ಮನೆ, ಸುಳ್ಯ ದ.ಕ.

## ನಮ್ಮ ಕಲಾವಿದರು

**ಡಾ. ಎಚ್.ಎಂ.ಕುಮಾರಸ್ವಾಮಿ**
ಸಹಾಯಕ ಪ್ರಾಧ್ಯಾಪಕ, ಹಿಂದಿ ವಿಭಾಗ
ನೆಹರು ಮೆಮೋರಿಯಲ್ ಕಾಲೇಜು,ಸುಳ್ಯ, ದ.ಕ – 574327
*ದೂರವಾಣಿ ಸಂಖ್ಯೆ: 08257–230114, ಮೊ.: 9448445704*

ಶಿಕ್ಷಣ : ಎಂ.ಎ, ಪಿಎಚ್‌ಡಿ ಪದವಿ– ಕನ್ನಡ ಮತ್ತು ಹಿಂದಿ ನಾಟಕಗಳು ಹಾಗೂ ರಂಗಭೂಮಿ ಕುರಿತು ಪಿಹೆಚ್‌ಡಿ ಅಧ್ಯಯನ.

ನಟನೆ : ಬಂಕಾಪುರದ ಬಯಲಾಟ, ಸ್ಪರ್ಶ, ತೆರೆಗಳು, ಕಲ್ಯಾಣ ಸ್ವಾಮಿ , ಮಧುಮಕ್ಕಿ, ಚೋಮ, ಧನಿಯರ ಸತ್ಯನಾರಾಯಣ ಇತ್ಯಾದಿ.

ನಿರ್ದೇಶನ : ಬಂಕಾಪುರದ ಬಯಲಾಟ, ಸ್ಪರ್ಶ, ಮಧುಮಕ್ಕಿ, ನಾಳೆ ಯಾರಿಗೂ ಇಲ್ಲ, ಧನಿಯರ ಸತ್ಯನಾರಾಯಣ, ಮಾಯವಾದ ಸೇತುವೆ, ಅಲೆಮಾರಿಗಳು, ಶಾಂತಿಗ್ರಾಮ, ರೂಪಕಗಳು, ಬೀದಿನಾಟಕಗಳು, ಸಾಕ್ಷರತಾ ನಾಟಕಗಳು, ಆಕಾಶವಾಣಿ ನಾಟಕಗಳು.

ಸಂಸ್ಥೆ : ಅಭಿನಯ ಸುಳ್ಯ, ಹವ್ಯಾಸಿ ಕಲಾವಿದರ ಬಳಗದ ಸ್ಥಾಪಕ ಸದಸ್ಯ.

ರಚನೆ : ಬಂಕಾಪುರದ ಬಯಲಾಟ, ಗ್ರಾಮ ಸೇತುವೆ (2 ನಾಟಕಗಳು), ಬಯಲು (2 ನಾಟಕಗಳು), ವಿಚಿತ್ರೇಶ್ವರನ ಜಾತ್ರೆ (ಆಕಾಶವಾಣಿಯ 4 ರಾಷ್ಟ್ರೀಯ ನಾಟಕಗಳು), ಭಾರತೇಂದು ಅವರ 3 ನಾಟಕಗಳು, ಹೊರೆಕಾಣಿಕೆ (ಮಕ್ಕಳ ನಾಟಕ), ನೀ ನನಗಿದ್ದರೆ ನಾ ನಿನಗೆ (ಮಕ್ಕಳ ನಾಟಕ), ಆಕಾಶವಾಣಿಯ 7 ರಾಷ್ಟ್ರೀಯ ನಾಟಕಗಳ ಅನುವಾದ,

ಇತರೆ : ಹಲವು ನಾಟಕಗಳಿಗೆ ಬೆಳಕು ಸಂಯೋಜನೆ, ಆಕಾಶವಾಣಿ ಮತ್ತು ಕಿರುತೆರೆ ಕಲಾವಿದ. ಅಭಿನಯ ಸುಳ್ಯದ ಆಶ್ರಯದಲ್ಲಿ ಬೇಸಿಗೆಯಲ್ಲಿ ಮಕ್ಕಳಿಗಾಗಿ ರಂಗತರಬೇತಿ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ರಂಗತರಬೇತಿ ಶಿಬಿರ.

ವಿಚಾರ ಸಂಕಿರಣಗಳು : ರಂಗಭೂಮಿಗೆ ಸಂಬಂಧಿಸಿದಂತೆ ಸುಳ್ಯ, ಪುತ್ತೂರು, ಕಾಸರಗೋಡು, ಮಂಜೇಶ್ವರ, ಆಕಾಶವಾಣಿ ಮುಂತಾದ ಕಡೆಗಳಲ್ಲಿ ಪ್ರಬಂಧ ಮಂಡನೆ ಮತ್ತು ಲೇಖನ.

ವಿಮರ್ಶೆ : ವಿವಿಧ ಕಡೆಗಳಲ್ಲಿ ಪ್ರದರ್ಶನಗೊಂಡ ಹಲವಾರು ನಾಟಕ ಪ್ರದರ್ಶನಗಳ ವಿಮರ್ಶೆ. ಉದಯವಾಣಿ, ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಮುಂಗಾರು ಮುಂತಾದ ಪತ್ರಿಕೆಗಳಲ್ಲಿ ಪ್ರಕಟ.

ಪ್ರಶಸ್ತಿ ಪುರಸ್ಕಾರ : 'ಬಯಲು' ನಾಟಕ ಕೃತಿಗೆ ಬೆಂಗಳೂರಿನ ಪತ್ರಕರ್ತರ ವೇದಿಕೆ ಮತ್ತು ರುಕ್ಮಿಣಿ ಬಾಯಿ ಸ್ಮಾರಕ ಟ್ರಸ್ಟ್ ವತಿಯಿಂದ ಪ್ರಶಸ್ತಿ. 'ನಾಳೆ ಯಾರಿಗೂ ಇಲ್ಲ 'ನಾಟಕ ನಿರ್ದೇಶನಕ್ಕಾಗಿ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಪ್ರಶಸ್ತಿ. 'ಅಲೆಮಾರಿಗಳು' ನಾಟಕ ನಿರ್ದೇಶನಕ್ಕಾಗಿ ಮಂಗಳೂರು ವಿ.ವಿ.ಮಟ್ಟದ ಪ್ರಶಸ್ತಿ.

ಸನ್ಮಾನಗಳು : ರಂಗಭೂಮಿ ಸೇವೆಗಾಗಿ 1994ರಲ್ಲಿ ದ.ಕ ಜಿಲ್ಲಾ ಮಟ್ಟದ 7 ನೇ ಸಾಹಿತ್ಯ ಸಮ್ಮೇಳನದಲ್ಲಿ ಯುವಪ್ರತಿಭಾ ಪುರಸ್ಕಾರ, 2002ರಲ್ಲಿ 9 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, 2002 ಸುಳ್ಯ ತಾಲ್ಲೂಕು ಪರಿಸರಾಸಕ್ತರ ಒಕ್ಕೂಟದ ಸನ್ಮಾನ, 2005ರಲ್ಲಿ ಸುಳ್ಯ ಪಯಸ್ವಿನಿ ಜೇಸಿಸ್ ಸಂಸ್ಥೆಯಿಂದ ಸನ್ಮಾನ, 2006 ರಲ್ಲಿ ದ.ಕ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನ, 2009 ರಲ್ಲಿ ಸುಳ್ಯ ತಾಲ್ಲೂಕು ಪತ್ರಕರ್ತರ ವತಿಯಿಂದ ಮತ್ತು ನೆಹರು ಮೆಮೋರಿಯಲ್ ಕಾಲೇಜು ಹಿರಿಯ ವಿದ್ಯಾರ್ಥಿ ಸಂಘದ ವತಿಯಿಂದ ಸನ್ಮಾನ.

**ತುಕಾರಾಂ ಏನೇಕಲು**

ಕೆ.ಎಸ್.ಎಸ್.ಕಾಲೇಜು, *ಸುಬ್ರಹ್ಮಣ್ಯ ಸುಳ್ಯ ತಾಲ್ಲೂಕು*
*ದೂರವಾಣಿ: 9448625403*

**ನಟನೆ** : ಚೋಮ, ತೆರೆಗಳು, ಉತ್ತಮ ಪ್ರಭುತ್ವ, ಲೊಳಲೊಟ್ಟೆ, ಮಾಯವಾದ ಸೇತುವೆ, ಸಿರಿ ಸಂಪಿಗೆ, ಕೆರೆಗೆಹಾರ, ಅಂಧಯುಗ, ನಾಳೆ ಯಾರಿಗೂ ಇಲ್ಲ.

**ನಿರ್ದೇಶನ** : ತ್ರಿಶಂಕು, ಸಾಕ್ರೆಟೀಸ್, ನಾಳೆ ಯಾರಿಗೂ ಇಲ್ಲ ಓಡುವವರು, ಕುಂಟಾ ಕುಂಟಾ ಕುರುವತ್ತಿ, ಅಲ್ಲದೇ ಸುಮಾರು 15ಕ್ಕೂ ಹೆಚ್ಚು ತುಳು ನಾಟಕಗಳು.

**ಸಂಸ್ಥೆ** : 1992ರಿಂದ ಸುಬ್ರಹ್ಮಣ್ಯದ ಕುಸುಮಸಾರಂಗ ರಂಗ ತಂಡದ ವ್ಯವಸ್ಥಾಪಕರಾಗಿದ್ದು 20ಕ್ಕೂ ಹೆಚ್ಚು ನಾಟಕಗಳನ್ನು ಪ್ರದರ್ಶಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇವರು 'ಅಭಿನಯ ಸುಳ್ಯ' ಇದರ ಸ್ಥಾಪಕ ಸದಸ್ಯ.

**ಪ್ರಶಸ್ತಿ ಮತ್ತು ಪುರಸ್ಕಾರ** : 'ಕುಸುಮಸಾರಂಗ' ಹಲವು ನಾಟಕಗಳಿಗೆ ಜಿಲ್ಲಾ ಮತ್ತು ರಾಜ್ಯಮಟ್ಟದ ಪುರಸ್ಕಾರಗಳು. 1910–11ರ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ

**ಡಾ ನಂದಾಕುಮಾರಸ್ವಾಮಿ**

ವಿಳಾಸ : 'ನೇಪಥ್ಯ', ನಂ III, 248, ಸ.ಸ.ಪೂ.
ಕಾಲೇಜು ಬಳಿ, ಸುಳ್ಯ – 574239
*ಫೋನ್ : 08257 –230114, ಮೊ. 9902144453*

**ವಿದ್ಯಾರ್ಹತೆ** : ಎಂ.ಎ, ಎಂ.ಫಿಲ್, ಪಿಎಚ್.ಡಿ.

**ನಟನೆ** : ಮಣ್ಣಿನ ಗೋಡೆ ,ಮುಕ್ತಧಾರ , ವಂಶವೃಕ್ಷ, ಕಾಯಿಲೆಖಯಾಲಿ, ಆನಿ ಬಂತಾನಿ, ರೆಕ್ಕೆ, ದೃಷ್ಟಿ, ಅಂಧಗಾಂಧಾರ ಇತ್ಯಾದಿ

**ನಿರ್ದೇಶನ** : ನಮಗೂ ಉಳಿಸಿಕೊಡಿ, ಗೋವಿನ ಹಾಡು, ಆನಿ ಬಂತಾನಿ, ರೆಕ್ಕೆ , ಆಲೀಬಾಬ ಮತ್ತು 40 ಮಂದಿ ಕಳ್ಳರು, ಶಾಂತಿ ಗ್ರಾಮ, ಹೊಸಕೆರೆ ಹೊನ್ನಮ್ಮ, ಕಿಸಾಗೌತಮಿ, ಏಕಲವ್ಯ, ಇತ್ಯಾದಿ.

| | | |
|---|---|---|
| ರಚನೆ | : | ಗಾಥೆ (2 ನಾಟಕಗಳು), ಅಬ್ಬಾ ಧೂಳೇ, ಗೋವಿನ ಹಾಡು, ಘೋಟೋ ಅವಾಂತರ, ಇತ್ಯಾದಿ |
| ಸಂಸ್ಥೆ | : | ಅಭಿನಯ ಹವ್ಯಾಸಿ ಕಲಾವಿದ ಬಳಗದ ಸದಸ್ಯೆ, ಸಮತ್ತೆಂತೋ ಮೈಸೂರು ನಾಟಕ ತಂಡದ ಸದಸ್ಯೆ. |
| ವಿಮರ್ಶೆ | : | ರಥಮುಸುಲ ನಾಟಕದ ವಿಮರ್ಶಾ ಲೇಖನ, ಟಿ.ಜಿ.ಮುಡೂರರ ನಾಟಕಗಳು ಕುರಿತ ವಿಮರ್ಶಾ ಲೇಖನ ಮತ್ತು ವಿವಿಧ ಗೋಷ್ಠಿ ಹಾಗೂ ವಿಚಾರಸಂಕಿರಣಗಳಿಗೆ ನಾಟಕ ವಿಮರ್ಶಾ ಲೇಖನಗಳು. |
| ಪ್ರಶಸ್ತಿ ಸನ್ಮಾನ | : | 1994ರ 7 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿಭಾ ಪುರಸ್ಕಾರ, ಅತ್ತಿಮಬ್ಬೆ ಪ್ರತಿಷ್ಠಾನ ಬೆಂಗಳೂರು ವತಿಯಿಂದ ಸನ್ಮಾನ, ದ.ಕ ಜಿಲ್ಲಾ ಮಟ್ಟದ 7 ನೇ ಸಾಹಿತ್ಯ ಸಮ್ಮೇಳನದಲ್ಲಿ ಸಮಗ್ರ ಸಾಧನೆಗಾಗಿ ಸನ್ಮಾನ. |

ಅಪೂರ್ವ ಕೆ. ನೂಪುರ
'ನೇಪಥ್ಯ', ನಂ III , 248
ಸ.ಸ.ಪೂ. ಕಾಲೇಜು ಬಳಿ, ಸುಳ್ಯ – 574239
ಫೋನ್ : 08257 –230114, ಮೊ. 9481142621.

| | | |
|---|---|---|
| ನಟನೆ | : | ಢಾಣಾ ಡಂಗುರ, ಅಲ್ಲಾದೀನ್ ಮಾಂತ್ರಿಕ ದೀಪ, ಪಂಜರ ಶಾಲೆ, ನಮಗೂ ಉಳಿಸಿಕೊಡಿ, ಮಣ್ಣಿನ ಗೋಡೆ, ಸಾಂಬಶಿವ ಪ್ರಹಸನ, ಕಿಸಾಗೌತಮಿ, ಏಕಲವ್ಯ ದೃಷ್ಟಿ, ಶ್ರೀಕೃಷ್ಣದೇವರಾಯ, ಮುಕ್ತಧಾರ, ಕಾಯಿಲೆಖಯಾಲಿ, ವಿಗಡ ವಿಕ್ರಮರಾಯ, ಕೇಂದ್ರ ನಾಟಕ ಅಕಾಡೆಮಿಯ ಧ್ವನಿಬೆಳಕು ಕಾರ್ಯಕ್ರಮ –ವಿಜಯನಗರ ವೈಭವ, ಅಂಧಗಾಂಧಾರ. |
| ಇತರೆ | : | ಗೋವಿನ ಹಾಡು, ಪ್ರಹ್ಲಾದ, ಕಯಾದು, ರಕ್ತಾಕ್ಷಿ, ಪ್ರವೀಣ್‌ರಾಯ್, ಒನಕೆ ಓಬವ್ವ ಮುಂತಾದ ಏಕಪಾತ್ರಾಭಿನಯ. |
| ಪ್ರಶಸ್ತಿಗಳು | : | 'ಮಣ್ಣಿನ ಗೋಡೆ' ನಾಟಕದಲ್ಲಿ ಬಾಲನಟಿ ಪ್ರಶಸ್ತಿ, ಧ್ವನಿಬೆಳಕು ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ, 2006ರ ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿಭಾ ಪುರಸ್ಕಾರ, ಏಕಾಭಿನಯ ಪಾತ್ರ ನಿರ್ವಹಣೆಗೆ ಹಲವಾರು ಪ್ರಶಸ್ತಿಗಳು. |

**ಪದ್ಮಾ ಕೊಡಗು**

ವಿಳಾಸ : 'ವನಸುಮ', ಮರ್ದಾಳ, ಚೆಂಬು ಗ್ರಾಮ
ಬಾಲೆಂಬಿ ಅಂಚೆ, ಮಡಿಕೇರಿ ತಾಲ್ಲೂಕು –574234
ಮೊ. : 9900600207, 0820 –2557248

| | | |
|---|---|---|
| ಪ್ರಸ್ತುತ | : | 'ಕ್ರಿಯೇಟಿವ್ ಐಸ್', ಕೆ.ಕೆ. ರೋಡ್, ಅಂಬಾಡಿ, ಕಟಪಾಡಿ, ಉಡುಪಿ – 574105 |
| ವಿದ್ಯಾರ್ಹತೆ | : | ಪದವಿ ಮತ್ತು ನೀನಾಸಂ ಡಿಪ್ಲೋಮ |
| ನಟನೆ | : | ನೀನಾಸಂ ತಿರುಗಾಟದಲ್ಲಿ ಮತ್ತು ಹಲವು ಸಂಘಸಂಸ್ಥೆಗಳ ಆಶ್ರಯದಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯ. |
| ರಂಗಚಟುವಟಿಕೆ | : | ನಾಟಕಗಳ ನಿರ್ದೇಶನ, ರಂಗಪರಿಕರ ತಯಾರಿ, ವೇಷಭೂಷಣ ತಯಾರಿ, ಮುಖವಾಡ ತಯಾರಿ, ಪ್ರಸಾಧನ ಕಲೆ. |
| ರಚನೆ | : | ಮಕ್ಕಳ ನಾಟಕಗಳ ರಚನೆ, ಅಧ್ಯಾಪಕರ ರಂಗ ತರಬೇತಿಗಾಗಿ ಪಠ್ಯನಾಟಕಗಳ ರಚನೆ. |
| ಆಕಾಶವಾಣಿ | : | ಮಡಿಕೇರಿ ಆಕಾಶವಾಣಿ ಕೇಂದ್ರದ ನಾಟಕ ವಿಭಾಗದ ಕಲಾವಿದೆ. |
| ಇತರೆ | : | ಆಕಾಶದೀಪ, ಮಕ್ಕಳ ಟೆಲಿಫಿಲ್ಮ್‌ನ ನಿರ್ದೇಶನ ಮತ್ತು ಹಲವು ಧಾರಾವಾಹಿಗಳಲ್ಲಿ ನಟನೆ. |
| ಪ್ರಸ್ತುತ | : | ಧಾರವಾಡ 'ರಂಗಕಿಶೋರ' ಸಂಸ್ಥೆಯೊಂದಿಗೆ ಸಂಪರ್ಕ. |

**ಬಾಸುಮಾ ಕೊಡಗು**

ಖಾಯಂ ವಿಳಾಸ : 'ವನಸುಮ', ಮರ್ದಾಳ, ಚೆಂಬು ಗ್ರಾಮ
ಬಾಲೆಂಬಿ ಅಂಚೆ, ಮಡಿಕೇರಿ ತಾಲ್ಲೂಕು –574234
ಮೊ. 9448152235, 0820–2557248

| | | |
|---|---|---|
| ಪ್ರಸ್ತುತ | : | 'ಕ್ರಿಯೇಟಿವ್ ಐಸ್', ಕೆ.ಕೆ. ರೋಡ್, ಅಂಬಾಡಿ, ಕಟಪಾಡಿ, ಉಡುಪಿ – 574105 |
| ವಿದ್ಯಾರ್ಹತೆ | : | ಎಂ.ಎ, ಡಿ.ಟಿ.ಎ.(ನೀನಾಸಂ), ಡಿಎಂಸಿ |
| ನಟನೆ | : | ನೀನಾಸಂ, ಸುಮನಸಾ ಕೊಡವೂರು, ಮುಂತಾದ ಹಲವು ಸಂಸ್ಥೆಗಳ ಆಶ್ರಯದಲ್ಲಿ ಹಲವಾರು ನಾಟಕಗಳಲ್ಲಿ ನಟನೆ. |
| ನಿರ್ದೇಶನ | : | ಹುಲಿಯ ನೆರಳು, ದಿಕ್ಕೆಟ್ಟ ದೇವರುಗಳ ಸಭೆ, ಅಸುದ್ದೋ, |

| | | |
|---|---|---|
| | | ಮೃಚ್ಛಕಟಿಕ, ದೇವರಿಗೆ ದಿಕ್ಕು, ಪುನರ್ಜನ್ಮ, ದೊಡ್ಡಪ್ಪ, ಮುಂತಾದ 30ಕ್ಕೂ ಅಧಿಕ ಪೂರ್ಣಾವಧಿ ನಾಟಕಗಳು . |
| ಮಕ್ಕಳ ನಾಟಕಗಳು | : | ಗುಲ್ಪುಟ್ಟಿ ಮುನ್ಪುಟ್ಟಿ, ಬಾಲಯೇಸು, ಧಾಂ ಧೂಂ ಸುಂಟರಗಾಳಿ, ಕೋಗಿಲೆಯ ರಾಜಾ, ಐವರು ರಾಜಕುಮಾರಿಯರು, ಆಟಿಕೆ ಗೊಂಬೆ, ಢಾಣಾ ಡಂಗುರ, ಪುಷ್ಪರಾಣಿ, ಅಜ್ಜಿಕಥೆ, ಮುಂತಾದ 20ಕ್ಕೂ ಮಿಕ್ಕಿ ಮಕ್ಕಳ ನಾಟಕಗಳು. |
| ಸಂಸ್ಥೆ | : | ಸುಮನಸಾ ಕೊಡವೂರು ಉಡುಪಿ (ರಿ). ಇದರ ಸ್ಥಾಪಕ ಸದಸ್ಯ ಹಾಗೂ ಪ್ರಧಾನ ಕಾರ್ಯದರ್ಶಿ, ನಿಸರ್ಗ ರಂಗಮಂಚ ಸಂಪಾಜೆ ಇದರ ಸ್ಥಾಪಕ ಸದಸ್ಯ, ಸಂಗಮ (ರಿ) ಸುಳ್ಯ ಇದರ ಸ್ಥಾಪಕ ಸಂಚಾಲಕ. |
| ಸಿನೆಮಾ | : | ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಗುಲಾಬಿ ಟಾಕೀಸು' ನ ಕಲಾನಿರ್ದೇಶಕ, 'ಗೃಹಭಂಗ' ಧಾರಾವಾಹಿಯ ಸಹ ನಿರ್ದೇಶಕ, 'ಮರಣಬಲೆ' ಟೆಲಿ ಚಿತ್ರ ನಿರ್ದೇಶಕ. |
| ಪ್ರಶಸ್ತಿ, ಸನ್ಮಾನ | : | ನಾಟಕದಲ್ಲಿ ನಟನೆ ಮತ್ತು ನಿರ್ದೇಶನಕ್ಕಾಗಿ ತಾಲೂಕು , ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ 11 ಬಹುಮಾನಗಳು, ಸನ್ಮಾನ. |

**ಜಯಪ್ರಕಾಶ್ ಕುಕ್ಕೇಟಿ**

ಅಂಚೆ ಪೇರಾಲು ಸುಳ್ಯ ದ. ಕ,

ದೂರವಾಣಿ: 08257– 262600, 9449662390 (ಮೊ)

| | | |
|---|---|---|
| ನಟನೆ | : | ಒಂದು ತೊಟ್ಟಿಯ ಸುತ್ತ, ಆರೋಹಣ, ವರ್ತುಲ, ಕಲ್ಯಾಣಸ್ವಾಮಿ (ಬಾನುಲಿ) ಶ್ರೀಕೃಷ್ಣದೇವರಾಯ, ರಣದುಂಧುಬಿ, ಮಾಯವಾದ ಸೇತುವೆ. |
| ರಚನೆ | : | ಒಂದು ತೊಟ್ಟಿಯ ಸುತ್ತ, ಆರೋಹಣ, ವರ್ತುಲ. |
| ಸಂಸ್ಥೆ | : | ಅಭಿನಯ ಸುಳ್ಯದ ಸದಸ್ಯ, ಪದಾಧಿಕಾರಿ. |
| ಇತರೆ | : | 'ಅಲಾದೀನ ಮತ್ತು ಮಾಂತ್ರಿಕ ದೀಪ' ಮಕ್ಕಳ ನಾಟಕಕ್ಕೆ ರಂಗ ನಿರ್ವಹಣೆ. |
| ಪ್ರಶಸ್ತಿ | : | ಯುವಜನ ಮೇಳದ ನಾಟಕ ಸ್ಪರ್ಧೆಯಲ್ಲಿ ಮೈಸೂರು ವಿಭಾಗಮಟ್ಟದಲ್ಲಿ ದ್ವಿತೀಯ ಪ್ರಶಸ್ತಿ. |

**ಕೆ. ಬೆಳ್ಯಪ್ಪ ಕಲ್ಮಡ್ಕ**

ಕೆ.ವಿ.ಜಿ.ಆಯುರ್ವೇದ ಕಾಲೇಜು ಸುಳ್ಯ.

ಪರಿಣತಿ : ಪ್ರಸಾಧನ ತಜ್ಞ, ಉತ್ತಮ ವಿನ್ಯಾಸಕಾರ.
ನಿರ್ದೇಶನ : ಹಲವಾರು ಕಡೆ ಮಕ್ಕಳ ನಾಟಕಗಳ ನಿರ್ದೇಶನ.
ಸಂಸ್ಥೆ : ಸಂಗಮ ಕಲಾಸಂಘ ಕಲ್ಮಡ್ಕದೊಂದಿಗೆ ಸಂಪರ್ಕ.

**ಮಂಜುನಾಥ ಎಂ. ಜಿ**

ಬಂಗ್ಲೆಗುಡ್ಡೆ ಬೀರಮಂಗಲ ಸುಳ್ಯ ದ.ಕ

ರಚನೆ ಮತ್ತು ನಿರ್ದೇಶನ : ಮಾಯಾ ಸೇಬು, ಸಾವಿತ್ರಿ, ಚಾಮಯ್ಯ ಮೇಸ್ತ್ರು
ವೃತ್ತಿ : ಚಿತ್ರಕಲಾ ಶಿಕ್ಷಕ
ಸಂಸ್ಥೆ : ಅಭಿನಯ ಸುಳ್ಯ ಇದರ ಸದಸ್ಯ.
ಇತರೆ : ನೃತ್ಯಕಲಾವಿದ 'ಮಂಜು ಬ್ರದರ್ಸ್' ನೃತ್ಯ ಕಲಾ ತಂಡದ ಸ್ಥಾಪನೆ ಮತ್ತು ನೃತ್ಯ ತರಬೇತಿ.
ಮಂಜು ಕಲಾ ಆರ್ಟ್ಸ್ : ಸುಳ್ಯದ ವಿಶ್ವಕಾಂಪ್ಲೆಕ್ಸ್‌ನಲ್ಲಿ ನಾಟಕಗಳಿಗೆ ಅವಶ್ಯವಿರುವ ವೇಷ ಭೂಷಣ ಉಡುಗೆಗಳನ್ನು ಬಾಡಿಗೆಗೆ ನೀಡುವ ಮಳಿಗೆಯ ಸ್ಥಾಪನೆ.

**ದಯಾನಂದ ಕೇರ್ಪಳ**

ಕೇರ್ಪಳ ಮನೆ, ಸುಳ್ಯ, ದ.ಕನ್ನಡ
ಮೊ: 9448725723, ದೂರವಾಣಿ: 08257 – 231008

ನಟನೆ : ತಿ ಕಲ್ಯಾಣಸ್ವಾಮಿ, ಕೆರೆಗೆ ಹಾರ, ನಾಗಮಂಡಲ, ಮಣ್ಣಿನ ಗೋಡೆ, ಸಾಂಬಶಿವ ಪ್ರಹಸನ, ಪರಿಸರ, ಮನೆ ಮನೆ ನಾಟಕ 50ಕ್ಕೂ ಮಿಕ್ಕಿ ನಾಟಕಗಳಲ್ಲಿ ಅಭಿನಯ.

ಎಂ ಎಸ್. ಜಯಪ್ರಕಾಶ್

ಶ್ರೀರಾಂಪೇಟೆ ಸುಳ್ಯ , ದೂರವಾಣಿ: 9480293464 ,

ವಿಳಾಸ: ಕೆ.ಎಫ್.ಡಿ.ಸಿ ಕಾರ್ಖಾನೆ ಬಿಳಿನೆಲೆ, ಪುತ್ತೂರು ತಾಲ್ಲೂಕು

| | | |
|---|---|---|
| ನಟನೆ | : | ಮಧುಮಕ್ಕಿ, ಬಂಕಾಪುರದ ಬಯಲಾಟ, ಕಲ್ಯಾಣಸ್ವಾಮಿ, ನಾಳೆ ಯಾರಿಗೂ ಇಲ್ಲ, ಸ್ಪರ್ಶ, ಮಾಯವಾದ ಸೇತುವೆ. |
| ನಿರ್ದೇಶನ | : | ರಣದುಂಧುಬಿ, ಗಗನಕುಸುಮ, ನಾಳೆ ಮತ್ತು ನಾನು, ಒಂಟಿ ಧ್ವನಿ, ಬದುಕೊಂದು ಸರಿಗಮ, ಗಂಗಾರಾಮ, ಪತ್ರೆಸಂಗಪ್ಪನ ಕೊಲೆ, ಗಾಂಪರ ಬಳಗ, ಪೆದ್ದಗುಂಡ, ಸಾದಿಸಿದರೆ ಸಬಲ ನುಂಗಬಹುದು, ಅಂಧೇರಿ ನಗರಿ ಚೌಪಟ್ ರಾಜ, ಸಂಗೊಳ್ಳಿರಾಯಣ್ಣ, ಚಂದವಳ್ಳಿ ತೋಟ, ಪುಣ್ಯಕೋಟಿ, ಭಕ್ತ ಕನಕದಾಸ, ಹಕ್ಕಿ ಹಾಡು, ಕಹಳೆ, ಮುಕ್ತದ್ವಾರ, ಕುಹೂ ಕುಹೂ ಕೋಗಿಲೆ, ಎದ್ದಳಾ ರಾಜಕುಮಾರಿ, ಬೆಕ್ಕೇ ಬೆಕ್ಕೇ. |
| ಸಂಸ್ಥೆ | : | 'ಅಭಿನಯ' ಸುಳ್ಯ ಇದರ ಸದಸ್ಯ, ಪದಾಧಿಕಾರಿ. 'ರಂಗ ಧ್ವನಿ' ಬಿಳಿನೆಲೆ ರಂಗತಂಡದ ಸ್ಥಾಪಕಾಧ್ಯಕ್ಷ. |
| ಇತರೆ | : | ಮಕ್ಕಳ ರಂಗತರಬೇತಿ, ನೃತ್ಯ ತರಬೇತಿ, ಡಾರ್ಜಲಿಂಗ್, ಕೋಲ್ಕತ್ತಾ, ಅಮೃತಸರಗಳಲ್ಲಿ ಜರುಗಿದ ರಾಷ್ಟ್ರೀಯ ಶಿಬಿರಗಳಲ್ಲಿ ಭಾಗವಹಿಸುವಿಕೆ. ಸಾಕ್ಷರತಾ ಆಂದೋಲನದ ಬೀದಿ ನಾಟಕಗಳಲ್ಲಿ ಭಾಗವಹಿಸಿ ಅನೇಕ ಪ್ರದರ್ಶನಗಳಲ್ಲಿ ಭಾಗಿ. 30ಕ್ಕೂ ಹೆಚ್ಚು ತುಳುನಾಟಕಗಳಿಗೆ ನಿರ್ದೇಶನ. |

**ವಿ. ಪರಮೇಶ್ವರ ಹೊಳ್ಳ**

ಬೊಳುಬೈಲು, ಸುಳ್ಯ ತಾಲ್ಲೂಕು,
ಹಿರಿಯ ಅಂಚೆಪಾಲಕರು ಸುಳ್ಯ
ದೂರವಾಣಿ: 9482751430, ಜನನ: 04.09.1955

| | | |
|---|---|---|
| ನಟನೆ | : | ಸಾಮ್ರಾಟ್ ಅಶೋಕ್, ಉತ್ತಮ ಪ್ರಭುತ್ವ, ಲೊಳಲೊಟ್ಟೆ, ಮಧುಮಕ್ಕಿ, ಜೂಲಿಯಸ್ ಸೀಸರ್, ನಾಗಮಂಡಲ, ಕಲ್ಯಾಣಸ್ವಾಮಿ. |
| ನಿರ್ದೇಶನ | : | ಅಗ್ನಿದಿವ್ಯ, |
| ಸಂಸ್ಥೆ | : | 'ಅಭಿನಯ' ಸುಳ್ಯ ಇದರ ಸದಸ್ಯ. |
| ಇತರೆ | : | ಉತ್ತಮ ಅಂತಾರಾಷ್ಟ್ರೀಯ ಈಜುಪಟು. ಈಜಿನಲ್ಲಿ ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಹುಟ್ಟೂರು ವಿಟ್ಲದ ಉದಯೋನ್ಮುಖ ಕಲಾವಿದರ ಸಂಘದ ಸ್ಥಾಪಕ ಸದಸ್ಯ. ಅನೇಕ ತುಳು ನಾಟಕಗಳಿಗೆ ನಿರ್ದೇಶನ ಮತ್ತು ಅಭಿನಯ. |
| ಪ್ರಶಸ್ತಿಗಳು | : | ಯುವಜನಮೇಳದಲ್ಲಿ 'ಅಗ್ನಿ' ನಾಟಕಕ್ಕೆ ದ್ವಿತೀಯ ರಾಜ್ಯಪ್ರಶಸ್ತಿ, ಉಡುಪಿ ರಂಗಭೂಮಿ ನಾಟಕ ಸ್ಪರ್ಧೆಯಲ್ಲಿ ಮಧುಮಕ್ಕಿ ಅಭಿನಯನಕ್ಕೆ ಪ್ರಶಸ್ತಿ, ಅಭಿನಯ ಸುಳ್ಯದ ವತಿಯಿಂದ 2011ರಲ್ಲಿ ಸನ್ಮಾನ. |

**ಡಾ। ಬಿ. ಪ್ರಭಾಕರ ಶಿಶಿಲ**

ವಿಳಾಸ: ಕಾವ್ಯ ಕಾಂತಮಂಗಲ, ಅಂಚೆ: ಅಜ್ಜಾವರ
ಸುಳ್ಯ ದ.ಕ 574246 ದೂರವಾಣಿ: 08257 – 230663
ಜಂಗಮವಾಣಿ: 9448725818

| | | |
|---|---|---|
| ಶಿಕ್ಷಣ | : | ಎಂ.ಎ. ಪಿಎಚ್.ಡಿ. |
| ಸಂಸ್ಥೆ | : | ಅಭಿನಯ ಸುಳ್ಯದ ಸಂಸ್ಥಾಪಕ ಸದಸ್ಯ. |
| ನಟನೆ | : | ಮಣ್ಣಿನ ಗೋಡೆ, ಕಲ್ಯಾಣಸ್ವಾಮಿ, ಚೋಮ, ತೆರೆಗಳು, |
| ರಚನೆ | : | ಅಮರಕ್ರಾಂತಿ ವೀರರು. [1837ರ ಸುಳ್ಯ ರೈತ ಬಂಡಾಯದ ಕಥಾನಕ] ಕೆಲವು ಕಥೆಗಳು ನಾಟಕವಾಗಿ ರೂಪಾಂತರಗೊಂಡಿವೆ. |

ರೂಪಕ : ಮತ್ತೆ ಮರಳಿರಿ ಭತ್ತಕೆ. ನಿರ್ದೇಶನ: ಕೆಲವು ತುಳುನಾಟಕಗಳು, ಲಂಕೇಶರ ತೆರೆಗಳು ನಾಟಕಕ್ಕೆ ಯಕ್ಷಗಾನ ಅಳವಡಿಕೆ– ನೃತ್ಯ ನಿರ್ದೇಶನ.

## ಶೈಲಿ ಪ್ರಭಾಕರ್

ವಿಳಾಸ: ಕಾವ್ಯ ಕಾಂತಮಂಗಲ ಅಜ್ಜಾವರ, ಸುಳ್ಯ. ದ.ಕ 574246
ದೂರವಾಣಿ: 08257 230663 , ಜಂಗಮವಾಣಿ: 9449243325

ರಚನೆ : ಟೋಪಿವಾಲ ಮತ್ತು ಇಲಿಗಳು, ಮಾಯಾಕನ್ನಡಿ ಮತ್ತು ಬಿಳಿಯ ಹುಡುಗಿ, ಗಂಟೆಯ ಭಯೋತ್ಪಾದಕ, ಕರಿಮುಖಿ ಅಮೆರಿಕಾಕ್ಕೆ ಹೋದದ್ದು, ರಾಜ ಮತ್ತು ವೃಕ್ಷದೇವತೆ, ನಾವು ಭಾರತೀಯರು.

ಆಂಗ್ಲಭಾಷಾ ನಾಟಕಗಳು : Pied Piper, The Terrible Bell, Karimukha went to America, Twinkle Twinkle Little Star, The King and the Tree Goddess, Golden Hair and Golden Star.

ಪ್ರಕಟವಾದ ನಾಟಕ ಕೃತಿ : ಟೋಪಿವಾಲ ಮತ್ತು ಇಲಿಗಳು (2007)

## ಜೀವನ್‌ರಾಂ ಸುಳ್ಯ

ರಂಗಮನೆ ವಿದ್ಯಾನಗರ, ಹಳೆಗೇಟು ಸುಳ್ಯ ತಾಲ್ಲೂಕು
ದೂರವಾಣಿ : 9448215946

ಶಿಕ್ಷಣ : ನೀನಾಸಂ ಪದವೀಧರ

ನಟನೆ : ಅಗ್ನಿ ಮತ್ತು ಮಳೆ ತಲೆದಂಡ, ಆವೂರು ಈವೂರು, ಹೂ ಹುಡುಗಿ, ಬೂರ್ಜ್ವಾ ಜಂಟಲ್ ಮ್ಯಾನ್, ಬಿರುದೆಂತೆಂಬರ ಗಂಡ, ಅಸುದ್ದೋ (ತುಳು), ಸ್ವಪ್ನವಾಸವದತ್ತ, ಔರಂಗಜೇಬ, ಪ್ರತಿಮಾ ನಾಟಕ, ಸೂರ್ಯಶಿಕಾರಿ, ಕಿರಗೂರಿನ ಗಯ್ಯಾಳಿಗಳು, ಸಂಗ್ಯಾಬಾಳ್ಯ, ವ್ಯಾಝುಕ್, ಯಾರೋ ಅಂದರು, ಅಥೆನ್ಸಿನ ಅರ್ಥವಂತ, ಕೆರೆಗೆಹಾರ, ಟಿಪ್ಪೂ ಇತ್ಯಾದಿ

ನಿರ್ದೇಶನ : ಮೃಚ್ಛಕಟಿಕ, ತಲೆದಂಡ, ಮಹಾಮಾಯಿ, ದೂತವಾಕ್ಯ, ನಾಯಿಮರಿ ನಾಟಕ, ಊರುಭಂಗ, ಅಗ್ನಿ ಮತ್ತು ಮಳೆ, ಅಲಾದೀನ ಮತ್ತು ಮಾಂತ್ರಿಕ ದೀಪ, ಏಕಾದಶಾನನ, ಅಂಧಯುಗ, ಸೂರ್ಯಶಿಕಾರಿ, ಸಾಹೇಬರು ಬರುತ್ತಾರೆ, ಮಕ್ಕಳ ಮಾಯಾಲೋಕ, ಮಧ್ಯಮ ವ್ಯಾಯೋಗ, ಢಾಣಾಡಂಗುರ, ದೂತಘಟೋತ್ಕಚ, ಪುಷ್ಪರಾಣಿ, ಪಂಜರಶಾಲೆ, ಬಿಡುಗಡೆಯ ಕನಸಿನಲ್ಲಿ ಇತ್ಯಾದಿ.

ನೀನಾಸಂ ತಿರುಗಾಟದಲ್ಲಿ 5 ವರ್ಷ ಮುಖ್ಯ ನಟನಾಗಿ ತಂಡದ ಸಂಚಾಲಕನಾಗಿ ದುಡಿದ ಅನುಭವ.

ಸಂಸ್ಥೆ : ಸುಳ್ಯದ ಸಾಂಸ್ಕೃತಿಕ ಕಲಾ ಕೇಂದ್ರ 'ರಂಗಮನೆ'ಯ ಸ್ಥಾಪಕ, ವಿಸ್ಮಯ ಜಾದೂ ತಂಡದ ರಂಗನಿರ್ದೇಶಕ, ಅಭಿನಯ ಸುಳ್ಯ ಇದರ ಸದಸ್ಯ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದಿರೆ ಇದರ ರಂಗ ಶಿಕ್ಷಕ.

ಇತರೆ : ಮನೆಯನ್ನೇ ರಂಗ ಚಟುವಟಿಕೆಗಳ ತಾಣವಾಗಿಸಿ ನಿರಂತರ ಕಾರ್ಯಕ್ರಮಗಳು. ಈ ರಂಗಮನೆಯಲ್ಲಿ ಜಾದು, ನಾಟಕೋತ್ಸವ, ಚಿಣ್ಣರ ಮೇಳ, ಪ್ರಸಾಧನ ಕಾರ್ಯಾಗಾರ, ಸಂಗೀತ ಕಾರ್ಯಕ್ರಮ, ಭರತನಾಟ್ಯ ಪ್ರದರ್ಶನ ಮತ್ತು ತರಬೇತಿ, ಏಕವ್ಯಕ್ತಿ ಪ್ರದರ್ಶನ, ಬೀದಿನಾಟಕ ತರಬೇತಿ, ರಂಗ ತರಬೇತಿ ಶಿಬಿರ ಇತ್ಯಾದಿ. ಕಲಾತ್ಮಕ ವೇದಿಕೆಗಳ ರಚನೆ, ರಂಗವಿನ್ಯಾಸ, ವಸ್ತ್ರ ವಿನ್ಯಾಸ, ರಂಗಗೀತೆ ಗಾಯನ, ಚಿತ್ರಕಲೆ, ಕ್ರಾಫ್ಟ್ , ಯಕ್ಷಸ್ಮರಣಿಕೆಗಳ ತಯಾರಿ, ಪವಾಡ ರಹಸ್ಯ ಬಯಲು ಕಾರ್ಯಕ್ರಮ, ಮಕ್ಕಳ ಮತ್ತು ಕಾಲೇಜು ರಂಗಭೂಮಿಯಲ್ಲಿ ಪರಿಣತಿ.

ಜನಜಾಗೃತಿಗಾಗಿ ರಚಿಸಿ, ನಿರ್ದೇಶಿಸಿ, ಮುಖ್ಯ ಪಾತ್ರದಲ್ಲಿ ಅಭಿನಯಿಸಿದ ಬೀದಿ ನಾಟಕಗಳು, ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯನಾಗಿ ಸೇವೆ, ಜಿಲ್ಲಾ ನಾಟಕೋತ್ಸವ, ಕರಾವಳಿ ಉತ್ಸವ, ಜಾನಪದ ಜಾತ್ರೆ ಮುಂತಾದ ಕಾರ್ಯಕ್ರಮಗಳ ಜಿಲ್ಲಾ ಸಂಚಾಲಕನಾಗಿ ದುಡಿಮೆ.

ಪ್ರಶಸ್ತಿ/ಸನ್ಮಾನ : ರಂಗದಶಾವತಾರಿ, ರಂಗಮಾಂತ್ರಿಕ, ಕಲಾಶ್ರೀ, ಬಾಲಸೇವಾರತ್ನ, ಕರ್ನಾಟಕ ನಾಟಕ ಅಕಾಡೆಮಿ ಸಿ.ಜಿ.ಕೆ. ಪ್ರಶಸ್ತಿ, ಮೂರು ಬಾರಿ ರಾಷ್ಟ್ರೀಯ ರಂಗ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ ಸನ್ಮಾನಗಳು.

**ರೇಣುಕಾ ಪಂಜ**

ನೆಕ್ಕಿಲ ಮನೆ, ಐವತ್ತೊಕ್ಲು ಗ್ರಾಮ ಪಂಜ ಅಂಚೆ, ಸುಳ್ಯ ದ.ಕ
ಸಂಪರ್ಕ ವಿಳಾಸ : ಸುರಕ್ಷ ನಾಗರಿಕ ಸಹಾಯ ಕೇಂದ್ರ
ರೂಂ. ನಂ.17, ಕೆ.ಸಿ. ಜನರಲ್ ಹಾಸ್ಪಿಟಲ್,
ಮಲ್ಲೇಶ್ವರಂ, ಬೆಂಗಳೂರು – 560 003

ಶಿಕ್ಷಣ : ನೀನಾಸಂ ರಂಗಶಿಕ್ಷಣ ಪದವಿ.

ನಟನೆ : ಆಷಾಡದ ಒಂದು ದಿನ, ಕದಡಿದ ನೀರು, ಬಕ, ಕಿರಗೂರಿನ ಗಯ್ಯಾಳಿಗಳು, ಆವೂರು : ಈವೂರು, ಬಿರುದೆಂತೆಂಬರ ಗಂಡ, ಕಾಕನಕೋಟೆ, ಬೆಟ್ಟದ ಅರಸು, ಪ್ರಮೀಳಾರ್ಜುನೀಯಂ, ವಿದಿಶೆಯ ವಿದೂಷಕ, ಕತ್ತಲೆಗೆ ಹತ್ತು ತಲೆ, ಕನಕಾಗಮನ, ಧರ್ಮದುರಂತ, ಮಾಮಾಮೂಷಿ, ಅಗ್ನಿ ಮತ್ತು ಮಳೆ, ಪ್ರತಿಮಾ ನಾಟಕ, ಸಕ್ಕರೆ ಗೊಂಬೆ, ಜುಜುಬಿ ದೇವರ ಜುಗರಿಯಾಟ, ಜೋಕುಮಾರಸ್ವಾಮಿ, ಸಂಸಾರದಲ್ಲಿ ಸನಿದಪ, ಕೆಂಪು ಕಣಗಿಲೆ.

ನಿರ್ದೇಶನ : ಮೂಕನ ಮಕ್ಕಳು, ದೌಡ್ ಗಾಂಧಿ ದೌಡ್, ಎ ಡಾಲ್ಸ್ ಹೌಸ್, ದಿ ಬೈಸಿಕಲ್ ಥೀವ್ಸ್, ಬಹಿಷ್ಕೃತೆ, ಬೊಮ್ಮನಹಳ್ಳಿಯ ಕಿಂದರಿ ಜೋಗಿ. ಕಾಕನಕೋಟೆ, ದೂರದರ್ಶನ ಪ್ರಸ್ತುತಿ.

ಬೀದಿನಾಟಕಗಳು : ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರು ಇದರ ಪ್ರಚಾರ ನಾಟಕಗಳು.

ರಚನೆ : ಪಾಕರಾಜ, ನಮ್ಮ ಹುಡುಗಿ, ಮರ ಮತ್ತು ಬಂಡೆ, ಮೊದಲು ಕೆಲಸ ಮಾಡುವೆ, ಬೆಂಕಿಗೆ ಗಂಟೆ ಕಟ್ಟುವರ್‍ಯಾರು? ನಮ್ಮ ಹನುಮಾನ್, ರಾಣಿ ಚೆನ್ನಮ್ಮ, ಜಾತ್ರೆ

ಇತರೆ : ಸದ್ಯ ಬೆಂಗಳೂರಿನಲ್ಲಿ ತಿಪಟೂರು ಪ್ರೋಥಿಯೋ ನಾಟಕ ತಂಡವನ್ನು ಮುನ್ನಡೆಸಿದ ಅನುಭವ. ವಠಾರ, ನಾಕುತಂತಿ, ಅಮೃತವಾಹಿನಿ ಟಿ.ವಿ ಧಾರಾವಾಹಿಗಳಲ್ಲಿ ಅಭಿನಯ. 2 ಧಾರಾವಾಹಿಗಳಿಗೆ ಸಹ ನಿರ್ದೇಶನ. ರಂಗಭೂಮಿಯ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿ ನೀಡಿದ ಅನುಭವ.

**ಗಿರಿಧರ ಕ್ಯೊಂಗೋಡಿ**
ಜಯನಗರ, ಸುಳ್ಯ ದ.ಕ.
ದೂರವಾಣಿ: 9449289595

| | | |
|---|---|---|
| ನಟನೆ | : | ಅಜ್ಜಿಯ ಆಸ್ತಿ, ಬಂಕಾಪುರದ ಬಯಲಾಟ, ಕಲ್ಯಾಣ ಸ್ವಾಮಿ, ಮಧುಮಕ್ಕಿ, ಚೋಮ, ನಾಳೆ ಯಾರಿಗೂ ಇಲ್ಲ. ಹಲವಾರು ತುಳು ನಾಟಕಗಳಲ್ಲಿ ಹಾಸ್ಯ ಪಾತ್ರಗಳಲ್ಲಿ ನಟನೆ. |
| ಸಂಸ್ಥೆ | : | 'ಅಭಿನಯ' ಸುಳ್ಯ ಇದರ ಸದಸ್ಯ, ಅಧ್ಯಕ್ಷನಾಗಿ ಸೇವೆ. |
| ಪ್ರಶಸ್ತಿಗಳು | : | 2009ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಅಭಿನಯ ಸುಳ್ಯ ನಡೆಸಿದ ಜಿಲ್ಲಾ ನಾಟಕೋತ್ಸವದಲ್ಲಿ ಸನ್ಮಾನ. |

**ಡಾ| ಪೂವಪ್ಪ ಕಣಿಯೂರು**
ಕನ್ನಡ ಪ್ರಾಧ್ಯಾಪಕರು,
ನೆಹರು ಮೆಮೋರಿಯಲ್ ಕಾಲೇಜು ಸುಳ್ಯ
ದೂರವಾಣಿ: 9448984485, 08257-232885

| | | |
|---|---|---|
| ನಟನೆ | : | ಕಲ್ಯಾಣಸ್ವಾಮಿ ಐತಿಹಾಸಿಕ ನಾಟಕ. |
| ರಚನೆ | : | 'ನಮ್ಮೂರ ಬೀದಿ' ವಿದ್ಯಾರ್ಥಿಗಳಿಗಾಗಿ. |
| ಸಂಸ್ಥೆ | : | ಅಭಿನಯ ಸುಳ್ಯ ಇದರ ಸದಸ್ಯ. 2008-2010ರ ಅವಧಿಯಲ್ಲಿ ಅಭಿನಯದ ಅಧ್ಯಕ್ಷ. |
| ಇತರೆ | : | ಸಾಹಿತ್ಯ ಕ್ಷೇತ್ರ ಮತ್ತು ಸಂಶೋಧನೆಯಲ್ಲಿ ಆಸಕ್ತಿ. 1990ರಲ್ಲಿ 'ಅಭಿನಯ'ದ ದಶಮಾನೋತ್ಸವದ ಸ್ಮರಣ ಸಂಚಿಕೆಯ ಸಂಪಾದಕ. |

**ಕಿಶೋರ್ ಕುಮಾರ್ ಕಿರ್ಲಾಯ**

ಕಿರ್ಲಾಯ ಮನೆ, ಅರಂತೋಡು ಗ್ರಾಮ ಮತ್ತು ಅಂಚೆ

ಸುಳ್ಯ ತಾಲ್ಲೂಕು. ದ.ಕ ದೂರವಾಣಿ: 9480265773.

| | | |
|---|---|---|
| ಜನನ | : | 15.04.1967 |
| ನಟನ | : | ಅಲೆಮಾರಿಗಳು, ಕತ್ತಲೆದಾರಿ ದೂರ, ಜೂಲಿಯಸ್ ಸೀಸರ್, ವಿಷಜ್ವಾಲೆ, ಏಡ್ಸ್ ಜಾಗೃತಿ ಮತ್ತು ಸಾಕ್ಷರತಾ ಬೀದಿ ನಾಟಕಗಳಲ್ಲಿ ಅಭಿನಯ, ಸೋಲಿಲ್ಲದವರು, ಗೊಂಬೆಯಾಟ, ದೃಷ್ಟಿ, ಶ್ರೀಕೃಷ್ಣದೇವರಾಯ ಇತ್ಯಾದಿ. |
| ನಿರ್ದೇಶನ | : | ತ್ರಿಬಲ್ ತಾಳಿ, ಪೆದ್ದರಸ, ನಾಯಿಮರಿ, ಅಜ್ಜಿಕತೆ, ಮಿಸ್ ಸೇವಂತಿ, ಮಾರನಾಯಕನ ವೃತ್ತಾಂತ, ಸಾಹೇಬರು ಬರುತ್ತಾರೆ, ಸಾಕ್ಷಿಕಲ್ಲು, ನಾಗನ ಕಥೆ, ಜಯಂಟ್ ಮಾಮ, ನಾಗಮಂಡಲ, ಕೆರೆಗೆಹಾರ ಇತ್ಯಾದಿ. |
| ಸಂಸ್ಥೆ | : | ಅಭಿನಯ ಸುಳ್ಯ ಹಾಗೂ ರಂಗಮನೆ ಸುಳ್ಯ ಇದರ ಸದಸ್ಯ. |
| ಇತರೆ | : | ಚಿಣ್ಣರ ತೇರು, ರಂಗಬೇಸಗೆ, ಇತ್ಯಾದಿ ಮಕ್ಕಳ ರಂಗ ತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ. ನೀನಾಸಂ ಸಂಸ್ಕೃತಿ ಶಿಬಿರ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ನಡೆದ ತರಬೇತಿಯಲ್ಲಿ ಭಾಗವಹಿಸುವಿಕೆ. |
| ಪ್ರಶಸ್ತಿಗಳು | : | ಕತ್ತಲೆ ದಾರಿ ದೂರ ನಾಟಕದ ಅಭಿನಯಕ್ಕೆ ಉತ್ತಮ ನಟ ಪ್ರಶಸ್ತಿ, ಹಾಗೂ ನಿರ್ದೇಶಿಸಿದ ನಾಟಕಗಳಿಗೆ ಪ್ರಶಸ್ತಿಗಳು ಲಭಿಸಿವೆ. |

**ಕೆ. ರಾಮಕೃಷ್ಣ**

ನಿವೃತ್ತ ಗೃಹರಕ್ಷಕದಳ ಅಧಿಕಾರಿ, 'ಅನುಗ್ರಹ' ಸುಳ್ಯ ದ.ಕ
ದೂರವಾಣಿ: 9480064146

ನಟನೆ : ಶ್ರೀಕೃಷ್ಣದೇವರಾಯ, ದೃಷ್ಟಿ ಮತ್ತು ಇಪ್ಪತ್ತು ಕನ್ನಡ ನಾಟಕಗಳಲ್ಲಿ ಪೋಷಕ ಹಾಗೂ ಹಾಸ್ಯ ಪಾತ್ರಗಳಲ್ಲಿ ಅಭಿನಯ.

ಪ್ರಶಸ್ತಿ ಪುರಸ್ಕಾರ : ಮೂರು ನಾಟಕ ಸ್ಪರ್ಧೆಗಳಲ್ಲಿ ಪ್ರಥಮ ಪ್ರಶಸ್ತಿ. ಕಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪುರಸ್ಕಾರ.

ಸಂಸ್ಥೆ : ಅಭಿನಯ ಸುಳ್ಯ ಇದರ ಸದಸ್ಯ ಹಾಗೂ ಪದಾಧಿಕಾರಿ.

ಇತರೆ : ಜಾನಪದ ನೃತ್ಯ ಕೋಲಾಟಗಳಿಗೆ ತರಬೇತಿ, ಯೋಗಪಟು.

**ಗೀತಾ ಮೋಂಟಡ್ಕ, ಸುಳ್ಯ**

ಕಲಾವಿದೆ – ರಂಗಾಯಣ ಮೈಸೂರು
ದೂರವಾಣಿ: 9449062980,

ಸಂಸ್ಥೆ : ಅಭಿನಯ, ಸುಳ್ಯದ ಸ್ಥಾಪಕ ಸದಸ್ಯೆ ಹಾಗೂ 20 ವರ್ಷಗಳಿಂದ ರಂಗಾಯಣದ ಕಲಾವಿದೆ.

ನಟನೆ : ಬಂಕಾಪುರದ ಬಯಲಾಟ, ಶಾಂತಿಗ್ರಾಮ, ಮಧುಮಕ್ಕಿ ಹಾಗೂ ರಂಗಾಯಣದ ಎಲ್ಲಾ ನಾಟಕಗಳಲ್ಲಿ ನಟನೆ.

ನಿರ್ದೇಶನ : ಸಾಕ್ಷರತೆಗಾಗಿ ನಾಟಕಗಳು, ನಾಗಮಂಡಲ, ಶಾಂತಿಗ್ರಾಮ, ಗಾಣ, ಬೆಟ್ಟಕ್ಕೆ ಚಳಿಯಾದರೇನು? ಅಲ್ಲಾವುದ್ದೀನ್‌ನ ಮಾಂತ್ರಿಕ ದೀಪ, ಮಕ್ಕಳಿಗಾಗಿ ಮೊಲದಕೊಂಬು ಇತ್ಯಾದಿ.

ಪ್ರಶಸ್ತಿಗಳು :
- ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಒಟ್ಟು 6 ಬಾರಿ ಪ್ರಶಸ್ತಿ.
- ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದಲ್ಲಿ "ಕೆ.ವಿ.ಜಿ. ಪ್ರತಿಭಾ" ಪುರಸ್ಕಾರ.
- ಅಮೃತಸರದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಕರ್ನಾಟಕದ ಉತ್ತಮ ಕಲಾವಿದೆ ಎಂಬ ಪ್ರಶಸ್ತಿ.
- ಸುಳ್ಯ ತಾಲ್ಲೂಕು ಸಾಹಿತ್ಯ ಸಮ್ಮೇಳನದಲ್ಲಿ ಪ್ರಶಸ್ತಿ.

- ಕರ್ನಾಟಕ ಸರ್ಕಾರದ ರಂಗಾಯಣದ ಮುಖಾಂತರ ಅಮೆರಿಕಾ, ಜರ್ಮನಿ, ಆಸ್ಟ್ರೇಲಿಯಾಗಳಲ್ಲಿ ನಾಟಕ ಪ್ರದರ್ಶನ.
- ಬೆಂಗಳೂರಿನ ಕನ್ನಡ ಪರ ಸಂಘಟನೆಯಿಂದ ಕನ್ನಡ ರಾಜ್ಯೋತ್ಸವ 2008ರ ನವೆಂಬರ್ 9 ರಂದು ಕನ್ನಡ ಕೌಸ್ತುಭ ಎಂಬ ಗೌರವ ಪ್ರಶಸ್ತಿ.
- ದ.ಕ. ಜಿಲ್ಲಾ ನಾಟಕೋತ್ಸವ 2009ರಲ್ಲಿ ಸುಳ್ಯದ ಅಭಿನಯ ತಂಡದಿಂದ ಸನ್ಮಾನ

**ವಿದ್ವಾನ್ ಟಿ.ಜಿ. ಮುಡೂರು**

ಅಂಚೆ ಪಂಜ ಸುಳ್ಯ ತಾಲ್ಲೂಕು – 574232 ದ.ಕ
ದೂರವಾಣಿ: 9449324260. 08257–278338

ರಚನೆ : ನಂದಾದೀಪ, ಮರಳಿ ಮನೆಗೆ, ಇನ್ನೂರಳಿಯ (ಸಾಮಾಜಿಕ ನಾಟಕಗಳು)

ಶಿವಕುಮಾರಿ, ಶ್ರೀಮತಿ, ಕೇರಳಕುಮಾರಿ, ಸಖಿ, ಅಚ್ಚರಿಯ ಅರಳೆಲೆ, ಮಧ್ಯಮಾ (ಪೌರಾಣಿಕ ನಾಟಕಗಳು), ಹುತ್ತದಲ್ಲಿ ಹೂ (ಐತಿಹಾಸಿಕ ತರಂಗ ರೂಪಕ), ದಯೆಯ ದಾಂಗುಡಿ (ಪೌರಾಣಿಕ ಬಾನುಲಿ ರೂಪಕ), ಅಮರ ಕಲ್ಯಾಣಕ್ರಾಂತಿ (ಐತಿಹಾಸಿಕ ಬಾನುಲಿ ರೂಪಕ).

ಮಕುಟೋರು ಭಂಗ,, ಸಾವೊಲಿದ ಸಾವಿತ್ರಿ (ಛಂದೋ ನಾಟಕಗಳು), ಹೊಸಕೆರೆಯ ಹೊನ್ನಮ್ಮ, ಗುರುವನ ಗುಡಿ, ಸೊನ್ನೆಯಿಂದ ಸೊನ್ನೆಗೆ (ಗೀತಾ ರೂಪಕಗಳು), ಒಪ್ಪ ಕುಂಞ (ಹಳಗನ್ನಡ ಪ್ರಹಸನ), ಬೊಳ್ಳಾಕನ ಮುಗ್ತ್ (ಗೌಡಗನ್ನಡ ಪ್ರಹಸನ), ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಐತಿಹಾಸಿಕ ಯಕ್ಷಗಾನ ಪ್ರಸಂಗ), ಶಿವಕುಮಾರಿ (ಕನ್ನಡ), ಜೋಕುಳೆಬುದ್ಧಿ (ತುಳು) ಎಲ್ಲೆಡೆ ಹೆಚ್ಚು ಪ್ರಯೋಗಗೊಂಡ ಕೃತಿಗಳು.

ಇವರು ರಚಿಸಿದ ನಾಟಕಗಳು ನೂರಾರು ಪ್ರದರ್ಶನಗಳನ್ನು ಕಂಡಿವೆ. ಪಂಜ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ 1982ರಲ್ಲಿ ನಿವೃತ್ತರಾಗಿರುವ ಇವರು

ಸುಳ್ಯದ ಖ್ಯಾತ ಸಾಹಿತಿಗಳು. 83ರ ಹರೆಯದಲ್ಲೂ ಅತ್ಯಂತ ಚಟುವಟಿಕೆಯಿಂದ ಇರುವ ಮುಡೂರು ಕವನ ಸಂಕಲನಗಳು, ಕಾದಂಬರಿ, ಕಥಾ ಸಂಕಲನ, ಪ್ರಬಂಧಗಳನ್ನು ರಚಿಸಿರುತ್ತಾರೆ. ಅನೇಕ ಸಾಂಸ್ಕೃತಿಕ ಸಂಘಟನೆಗಳನ್ನು ಹುಟ್ಟುಹಾಕಿದ್ದಾರೆ.

ಸಂಸ್ಥೆ : ಕಲ್ಮಡ್ಕದ ಸಂಗಮ ಕಲಾ ಸಂಘದ ಸ್ಥಾಪಕ ಸದಸ್ಯರಾಗಿ ಅನೇಕ ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರೆ. ತುಳು ಭಾಷೆಯಲ್ಲಿ ಸಹ ಹತ್ತಾರು ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರೆ.

ನಿರ್ದೇಶನ : ಯಮನ ಸೋಲು, ನನ್ನ ಗೋಪಾಲ, ಹಿರಿಯಕ್ಕನ ಚಾಳಿ, ಕೈಲಾಸಂರವರ ಟೊಳ್ಳು ಗಟ್ಟಿ, ಅಲ್ಲದೇ ದಾಶರಥಿ ದೀಕ್ಷಿತ್, ಪರ್ವತವಾಣಿ ಮಂತಾದವರ ನಾಟಕಗಳ ನಿರ್ದೇಶನ.

ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳು : 2005ರಲ್ಲಿ ಬೀದರ್‌ನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಜಿಲ್ಲಾ ಮಟ್ಟದಲ್ಲಿ ರಾಜ್ಯೋತ್ಸವ ಪ್ರಶಸ್ತಿ, ತಾಲ್ಲೂಕು ರಾಜ್ಯೋತ್ಸವ ಪ್ರಶಸ್ತಿ, ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. ಕ.ಸಾ.ಪ ತಾಲ್ಲೂಕು ಮತ್ತು ಜಿಲ್ಲಾ ಸಮ್ಮೇಳನಗಳಲ್ಲಿ ಸಮ್ಮಾನ, ಗುರುದೇವ ಲಲಿತ ಕಲಾಮಂಡಲಿ ಮಂಡ್ಯ ಹಾಗೂ ತಾಲ್ಲೂಕು ವಲಯ ಸಂಘ ಸಂಸ್ಥೆಗಳಲ್ಲಿ ಸಮ್ಮೇಳನಗಳಲ್ಲಿ ಸನ್ಮಾನಗಳು. ಅಮೃತವರ್ಷ ಸನ್ಮಾನ 2004ರಲ್ಲಿ., ಸುವರ್ಣ ಕರ್ನಾಟಕ ಸಂಸ್ಕೃತಿ ದಿಬ್ಬಣದಲ್ಲಿ ಸುಳ್ಯದ ಸನ್ಮಾನ, ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ವಿಶೇಷ ಸಾಧನೆಗಾಗಿ ಸನ್ಮಾನ. ಕನ್ನಡ ಸಾಹಿತ್ಯ ಪರಿಷತ್ತಿನ ಸುಳ್ಯ ತಾಲ್ಲೂಕು ಪ್ರತಿನಿಧಿ. ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಸೇವೆ.

ಎನ್.ರಾಜೇಶ್ವರಿ
ದಕ್ಷಿಣ ಕನ್ನಡ ಜಿಲ್ಲೆ – ಸುಳ್ಯ , ವಿಳಾಸ : ರಂಗಾಯಣ ಧಾರವಾಡ
ದೂರವಾಣಿ : 9739848909

| | | |
|---|---|---|
| ಶಿಕ್ಷಣ | : | ನೀನಾಸಂ ಪದವಿ |
| ನಟನೆ | : | ಜೂಲಿಯಸ್ ಸೀಜರ್, ನಾಗಮಂಡಲ, ದಿವ್ಯದರ್ಶನ, ಪಿ ಸಿ ಪುರಾಣ, ಅಕ್ಕತಂಗಿಯರು ಹಾಗೂ ನೀನಾಸಂನ ಹಲವು ನಾಟಕಗಳು. |
| ರಚನೆ | : | ಬಾ ಬಾ ಚಂದಿರ, ದುರಂತ ಬದುಕು, ಪ್ಯಾಷನ್ ಯುಗ, ಓ ಮಗು ನೀ ನಗು. |
| ನಿರ್ದೇಶನ | : | ಮಧ್ಯಮ ವ್ಯಾಯೋಗ ದೂತವಾಕ್ಯ, ಸಾಂಬಶಿವ ಪ್ರಹಸನ, ಪಂಜರಶಾಲೆ, ಚಿತ್ರಪಟ, ಬಾ ಬಾ ಚಂದಿರ, ಜಟಾಯುಮೋಕ್ಷ ಯಕ್ಷಗಾನ, ಪಂಚವಟಿ ರಾಮಾಯಣ, ಏಕಲವ್ಯ, ಓ ಮಗು ನೀ ನಗು. |
| ಇತರೆ | : | 5 ವರ್ಷದಿಂದ ಸಾಣೆಹಳ್ಳಿ ಶಿವಸಂಚಾರದಲ್ಲಿ 1 ವರ್ಷ ನಟಿಯಾಗಿ ಸೇವೆ. ಅನೇಕ ತುಳುನಾಟಕಗಳಲ್ಲಿ, ಯಕ್ಷಗಾನ ಪ್ರಸಂಗಗಳಲ್ಲಿಯೂ ಅಭಿನಯ. ನೃತ್ಯ ಸಂಯೋಜನೆ, ಸಂಗೀತ, ವಸ್ತ್ರ ವಿನ್ಯಾಸ, ರಂಗ ಸಜ್ಜಿಕೆ, ಪ್ರಸಾಧನಕಾರರಾಗಿ ಕೆಲಸ. ಹೊರದೇಶದ ರಂಗನಿರ್ದೇಶಕರ ನಿರ್ದೇಶನದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 2008ರಲ್ಲಿ ಸ್ವೀಡನ್ನಿನಲ್ಲಿ ನಡೆದ ಏ–ಃಣಾಛಿಜ ಮಕ್ಕಳ ರಂಗಭೂಮಿ ಹಾಗೂ ಯೂಥ್ ರಂಗೋತ್ಸವದಲ್ಲಿ ಹೆಚ್ಚಿನ ಪರಿಣತಿ. |
| ಪ್ರಶಸ್ತಿಗಳು | : | ಅತ್ಯುತ್ತಮ ನಟಿ ಪ್ರಶಸ್ತಿ, ಉತ್ತಮ ಯಕ್ಷಗಾನ ಕಲಾವಿದೆ, ಅತ್ಯುತ್ತಮ ನೃತ್ಯ ಸಂಯೋಜನೆ, ವಸ್ತ್ರಾಲಂಕಾರ, ಉತ್ತಮ ನಿರ್ದೇಶಕಿ ಪ್ರಶಸ್ತಿಗಳು. |
| ಸಂಸ್ಥೆ | : | ನೀನಾಸಂ ಹೆಗ್ಗೋಡು, ಶಿವಸಂಚಾರ ಸಾಣೆಹಳ್ಳಿ, ಬಾಲವಿಕಾಸ ಅಕಾಡೆಮಿ ಧಾರವಾಡ, ನಟನ ಮೈಸೂರು, ಗೊಂಬೆಮನೆ ಧಾರವಾಡ, ಅಭಿನಯ ಸುಳ್ಯ, ಮೈಸೂರು ರಂಗಾಯಣ. |

**ಯು.ಸುಬ್ರಾಯ ಗೌಡ (ಯು.ಸು.ಗೌ ಗುತ್ತಿಗಾರು)**

ಆಂಗ್ಲಭಾಷಾ ಉಪನ್ಯಾಸಕ, ಸ.ಪ.ಪೂ.ಕಾಲೇಜು, ಐವರ್ನಾಡು
ಪದ್ಮಶ್ರೀ, ವಿದ್ಯಾನಗರ, ಸುಳ್ಯ ದ.ಕ

ನಟನೆ : ಜೂಲಿಯಸ್ ಸೀಸರ್, ನಾಗಮಂಡಲ, ಕಲ್ಯಾಣಸ್ವಾಮಿ ಇತ್ಯಾದಿ.

ರಚನೆ : ದೃಶ್ಯ (ರೂಪಕಗಳ ಸಂಗ್ರಹ), ಪ್ರಕೃತಿ, ನಕ್ಕಳಾತಾಯಿ(ರೂಪಕಗಳು), ಪಂಜುರ್ಲಿ (ಜಾನಪದ ಕಥಾ ಆಧಾರಿತ –ಪ್ರಹಸನ), ಕಥೆ ಹೇಳುವವರು(ಮಕ್ಕಳ ಕಿರುನಾಟಕ), ಮೂರ್ಖನ ಸ್ವರ್ಗ, ಮನುಷ್ಯನ ಬೆಲೆ, ಬಿಡಿ ರೂಪಕಗಳು/ ಪ್ರಹಸನಗಳು (ಅಪ್ರಕಟಿತ) 'ಅಭಿನಯ ಸುಳ್ಯ'ದ ವತಿಯಿಂದ ನಡೆದ ನಾಟಕ ಕಾರ್ಯಾಗಾರಗಳಲ್ಲಿ ಭಾಗಿ.

ನಿರ್ದೇಶನ : ಶಾಲಾ ಕಾಲೇಜುಗಳ ಹಂತಗಳ ವಿದ್ಯಾರ್ಥಿಗಳಿಗೆ ನಾಟಕ, ರೂಪಕ ನಿರ್ದೇಶಿಸಿದ್ದಾರೆ.

ಸಂಸ್ಥೆ : 'ಅಭಿನಯ ಸುಳ್ಯ'ದ ಸದಸ್ಯರಾಗಿರುವ ಇವರು 1990 ರಲ್ಲಿ 'ಅಭಿನಯ ಸುಳ್ಯ'ದ ಅಧ್ಯಕ್ಷರಾಗಿ ಸೇವೆ.

ಇತರೆ : ಯಕ್ಷಗಾನ ಹವ್ಯಾಸಿ ತಾಳಮದ್ದಳೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

**ಶ್ರೀ ಮೋಹನ್ ಸೋನ**

ಸೋಣಂಗೇರಿ ಅಂಚೆ, ದ.ಕ ಜಿಲ್ಲೆ,
ದೂರವಾಣಿ : 08257265156

ಶಿಕ್ಷಣ : ಚಿತ್ರಕಲೆ ಪದವಿ. 1975 ರಿಂದ ನಿರಂತರವಾಗಿ ರಂಗಚಟುವಟಿಕೆಯಲ್ಲಿ ಕ್ರಿಯಾಶೀಲರಾಗಿರುವ ಕಲಾವಿದ, ನಾಟಕ ರಚನಾಕಾರ ಮತ್ತು ಸಂಘಟಕ. ಶಿಕ್ಷಣ ಕ್ಷೇತ್ರಕ್ಕೆ ರಂಗಭೂಮಿಯುನ್ನು ದುಡಿಸಿಕೊಳ್ಳುವ ನಿಟ್ಟಿನಲ್ಲಿ ಸಾಧ್ಯಾಸಾಧ್ಯತೆಗಳ ಕುರಿತಾಗಿ ಪ್ರಾತ್ಯಕ್ಷಿಕೆ, ಪ್ರದರ್ಶನ, ಪ್ರಯೋಗಗಳಿಗಾಗಿ ಹಲವಾರು ಶಾಲೆಗಳ ಶಿಕ್ಷಕರೊಂದಿಗೆ ಸಂವಾದ ನಡೆಸಿ, ನಾಡಿನಾದ್ಯಂತ ಚಿರಪರಿಚಿತರಾಗಿದ್ದಾರೆ.

ಮಕ್ಕಳ ಮನೋವಿಜ್ಞಾನದ ಆಯಾಮಗಳನ್ನು ಬಿಂಬಿಸುವ ಚಿತ್ರ ಪ್ರಬಂಧ ಎನ್ನುವ ಅಪೂರ್ವ ರಂಗನಾಟಕ ಮತ್ತು ಮಳೆ ಹಕ್ಕಿ ಎನ್ನುವ ಸಂಸ್ಕೃತಿ – ವಿಜ್ಞಾನ ಮೇಳೈಸಿದ ವಿಶಿಷ್ಟ ಪ್ರಯೋಗವನ್ನು ಮಾಡಿರುತ್ತಾರೆ. 'ನಕ್ಷತ್ರಗಳಾಚೆ' ಮತ್ತು 'ನೀಲನಾಡಿನಲ್ಲಿ' ಎಂಬ ವೈಜ್ಞಾನಿಕ ನಾಟಕ 'ಗೊಂಬೆ ಹೇಳಿದ ಕಥೆ' ಎಂಬ ನವಿರು ಭಾವನೆಗಳ ನಾಟಕ, 'ಮೊಮ್ಮಕ್ಕಳೊಂದಿಗೆ ಸುಗ್ರೀವನೆಂಬ ತಾತ' ಎಂಬ ಇವರ ನಾಟಕಗಳು ಪ್ರಮುಖವಾಗಿದ್ದು, ಉತ್ತಮ ಪ್ರಯೋಗಗಳಾಗಿ ರಂಗದ ಮೇಲೆ ಪ್ರದರ್ಶಿತವಾಗಿದೆ. ಪ್ರಾದೇಶಿಕ ಭಾಷೆಯಾದ ತುಳುವಿನಲ್ಲಿ ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯನ್ನು ತುಳು ಭಾಷೆಯಲ್ಲಿ ರಂಗಭೂಮಿಯ ಮೇಲೆ ತಂದಿದ್ದು ಶ್ರೀ ಮೋಹನ್ ಸೋನರ ವಿಶೇಷ ಸಾಧನೆ.

ಮಕ್ಕಳ ನಾಟಕಗಳೆಡೆಗೆ ಇವರದು ವಿಶೇಷ ಆಸಕ್ತಿ. ಸುಮಾರು 34 ಮಕ್ಕಳ ನಾಟಕಗಳನ್ನು ರಾಜ್ಯದ ಹಲವೆಡೆ ರಂಗದ ಮೇಲೆ ಪ್ರದರ್ಶಿಸಿದ್ದು, ಇವುಗಳಲ್ಲಿ ಹಲವು ನಾಟಕಗಳು ಹತ್ತಾರು ಪ್ರದರ್ಶನಗಳನ್ನು ಕಂಡಿವೆ. ಅಲ್ಲದೆ, ಹಿರಿಯರಿಗಾಗಿ ಹತ್ತು ನಾಟಕಗಳನ್ನು ನಿರ್ದೇಶಿಸಿ, ಜಿಲ್ಲೆಯ ವಿವಿಧ ರಂಗತಂಡಗಳಿಗೆ ವಿನ್ಯಾಸ, ಸಹನಿರ್ದೇಶನ, ಬೆಳಕು ಹಾಗೂ ಸಹಕಾರಗಳನ್ನು ನೀಡಿರುತ್ತಾರೆ. ರಾಜ್ಯದ ಹಲವು ಖ್ಯಾತ ತಂಡಗಳಿಗೆ ರಂಗಸಜ್ಜಿಕೆ ಮಾಡಿರುತ್ತಾರೆ. ರಂಗಭೂಮಿ ಮೂಲಕ ಶಿಕ್ಷಣ ಯೋಜನೆಯಡಿ ಬೆಂಗಳೂರಿನ ರಾಜ್ಯ ಶಿಕ್ಷಣ ತರಬೇತಿ ಸಂಶೋಧನಾ ನಿರ್ದೇಶನಾಲಯ (ಡಿ.ಎಸ್.ಇ.ಆರ್.ಟಿ) ಮತ್ತು ಹಲವು ಹತ್ತು ಶಿಕ್ಷಕ ತರಬೇತಿ ಕೇಂದ್ರಗಳ ಸಹಯೋಗದಲ್ಲಿ ರಾಜ್ಯದೆಲ್ಲೆಡೆ ವಿವಿಧ ಬೋಧನಾ ವಿಷಯಗಳ ನಿರ್ವಹಣಾ ತರಬೇತಿ ಕಮ್ಮಟಗಳನ್ನು ನಡೆಸಿರುತ್ತಾರೆ. ಶಾಲಾ ಮಕ್ಕಳಿಗಾಗಿ ಅನೇಕ ರಂಗಶಿಬಿರಗಳನ್ನು ನಡೆಸಿರುತ್ತಾರೆ. ಬಣ್ಣಗಳ ಮೂಲಕ ಮಕ್ಕಳ ಮನೋವಿಜ್ಞಾನವನ್ನು ಅವಲೋಕಿಸುವ ಹವ್ಯಾಸ ಹೊಂದಿರುತ್ತಾರೆ.

ಪ್ರಶಸ್ತಿ/ ಸನ್ಮಾನ : ಕರ್ನಾಟಕ ನಾಟಕ ಅಕಾಡೆಮಿ 2008 ರ ರಂಗಪ್ರಶಸ್ತಿ ನೀಡಿ ಗೌರವಿಸಿದೆ ಮತ್ತು ಇತರೆ ಹಲವು ಪ್ರಶಸ್ತಿಗಳು.

**ಜನಾರ್ದನ ಕಣಕ್ಕೂರು**

ಶಿಕ್ಷಣ : ಪಿ.ಯು.ಸಿ, ಸಿ.ಡಿ. ಫಾರ್ಮ

ವಿಳಾಸ : ಫಾರ್ಮಸಿಸ್ಟ್, ತಾಲ್ಲೂಕು ಸರ್ಕಾರಿ ಆಸ್ಪತ್ರೆ, ಸುಳ್ಯ, ದ.ಕ

ನಟನೆ : ಉಲ್ಪಾ ಪಲ್ಪ, ಪರಿವರ್ತನೆ, ಒಂಜತ್ತ್ ಒಂಜಿದಿನ, ಅಪ್ಪೆಗೋರಿ, ಅಂಡೆಮಗೆ, ಬಯ್ಯಮಲ್ಲಿಗೆ, ಅಸುದ್ಧೋ, ಡೊಂಬರ ಚೆನ್ನೆ, ಸೂರ್ಯ ಶಿಕಾರಿ, ಮಣ್ಣಿನ ಗೋಡೆ, ದಿವ್ಯ ದರ್ಶನ, ಮೃತ್ಯುಂಜಯ ವಿಜಯ.

ರಚನೆ : ನಿಗೂಢ, ಪರಿವರ್ತನೆ, ಹೆಬ್ಬೆಟ್ಟು, ಅಸುದ್ಧೊ.

ನಿರ್ದೇಶನ : ಪರಿವರ್ತನೆ, ಹೆಬ್ಬೆಟ್ಟು, ದಿವ್ಯದರ್ಶನ, ಮೃತ್ಯುಂಜಯ ವಿಜಯ, ಬೊಳ್ಪುದಾಂತಿ ತುಡರ್, ಡೊಂಬರ ಚೆನ್ನ ಇತ್ಯಾದಿ.

ಸಂಸ್ಥೆ : ಅಭಿನಯ ಸುಳ್ಯ ಹವ್ಯಾಸಿ ಕಲಾವಿದರ ಬಳಗದ ಸದಸ್ಯ ಹಾಗೂ ಅಧ್ಯಕ್ಷನಾಗಿ ಅನುಭವ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿ, ಪರಿವಾರ ರಂಗದ ಸ್ಥಾಪಕ ಸದಸ್ಯ.

ಇತರೆ : ಲೇಖಕ 'ಕಾಲ ಮರೆತ ಕಲಾವಿದ' ಶಿರೋನಾಮೆಯ ಅಂಕಣ ಲೇಖನ, ಯಕ್ಷಗಾನದಲ್ಲಿ ಅರ್ಥಗಾರಿಕೆ ಮತ್ತು ವೇಷ.

ಪ್ರಶಸ್ತಿ ಪುರಸ್ಕಾರ : ಸೂರ್ಯಶಿಕಾರಿ ರಂಗ ಚಾವಡಿ ರಾಜ್ಯ ಪ್ರಶಸ್ತಿ.

**ಆರ್ ಕೆ ಜೋಷಿ**

ವಿಳಾಸ: ಜಟ್ಟಿಪಳ್ಳ, ಸುಳ್ಯ ದ.ಕ

ದೂ: 9481377632

ನಟನೆ : ಜೂಲಿಯಸ್ ಸೀಜರ್, ನಾಳೆ ಯಾರಿಗೂ ಇಲ್ಲ, ನಾಗಮಂಡಲ, ಸಾಂಬಶಿವ ಪ್ರಹಸನ, ಮಣ್ಣಿನ ಗೋಡೆ, ಜೋಕುಮಾರಸ್ವಾಮಿ, ಕತ್ತಲೆ ದಾರಿ ದೂರ, ಬಾದಾಮ್ ರಾಣಿ ಚೌಕಟ್ಟ್ ಗುಲಾಮ್, ಸಾಯೋ ಆಟ, ಜಾತ್ರೆ, ಕನಸಿನವರು ಇತ್ಯಾದಿ.

ನಿರ್ದೇಶನ : ಕನಸಿನವರು, ಜಾತ್ರೆ, ಕತ್ತಲೆದಾರಿ ದೂರ, ಬಿಡುಗಡೆ.

ರಚನೆ : ಬಿಡುಗಡೆ, ಗುಟ್ಟೊಂದ ಹೇಳುತ್ತೇವಾ, ಬಿರುಕು, ನಲವತ್ತೇಳರ ಸ್ವಾತಂತ್ರ್ಯ (ಅಪ್ರಕಟಿತ)

ಸಂಸ್ಥೆ : ಅಭಿನಯ ಸುಳ್ಯ.
ಇತರೆ : ಆಕಾಶವಾಣಿ ಕಲಾವಿದ, ಕವಿ, ಕಥೆಗಾರ.
ಪ್ರಶಸ್ತಿ/ಸನ್ಮಾನ : ಸುಳ್ಯ ಸುದ್ದಿ ಪತ್ರಿಕೆ, ಅಭಿನಯ, ಸುಳ್ಯ, ಹವ್ಯಾಸಿ ಕಲಾವಿದರ ಬಳಗ ಮತ್ತು ಶಿಕ್ಷಣ ಇಲಾಖೆ ವತಿಯಿಂದ ವಿಶ್ವ ರಂಗ ದಿನಾಚರಣೆಯ ಸನ್ಮಾನ, ಉತ್ತಮ ನಟ ಹಾಗೂ ನಿರ್ದೇಶಕ ಪ್ರಶಸ್ತಿ.

**ನಾಗಾರಾಜ ಮುಳ್ಯ**

ವಿಳಾಸ: ಮುಳ್ಯ ಮನೆ, ಅಜ್ಜಾವರ ಅಂಚೆ, ಸುಳ್ಯ ದ.ಕ

ನಟನೆ : ದೃಷ್ಟಿ, ಶ್ರೀಕೃಷ್ಣದೇವರಾಯ, ಏಡ್ಸ್ ಎಚ್ಚರಿಕೆ, ಕೆಲವು ತುಳು ನಾಟಕಗಳು
ನಿರ್ದೇಶನ : ಲಯನೆಸ್ ಸದಸ್ಯೆಯರಿಗೆ ಕಿರು ನಾಟಕಗಳ ನಿರ್ದೇಶನ
ಸಂಸ್ಥೆ : ಅಭಿನಯ ಸುಳ್ಯ, ರಂಗಮನೆ ಸುಳ್ಯ
ಇತರೆ : ಅಮರಕ್ರಾಂತಿ ಉತ್ಸವದಲ್ಲಿ ಹಿನ್ನೆಲೆ ಗಾಯಕ, ಆರೋಗ್ಯ ಇಲಾಖೆಯ 'ಆರೋಗ್ಯ ಅರಿವು' ಆಂದೋಲನದಲ್ಲಿ ಭಾಗಿ.
ಪ್ರಶಸ್ತಿ : ಲಯನೆಸ್ ಸಂಸ್ಥೆಗೆ ನಿರ್ದೇಶಿಸಿದ ನಾಟಕಕ್ಕೆ ಜಿಲ್ಲಾ ಮಟ್ಟದ ಪ್ರಥಮ ಬಹುಮಾನ.

**ಕೃಷ್ಣಕುಮಾರ್ ನಾರ್ಣಕಜೆ**

ವಿಳಾಸ: c/o ಜಿ.ಎಸ್. ಉಬರಡ್ಕ
'ಕಾರ್ತಿಕ' ನಾರ್ಣಕಜೆ. ಸುಳ್ಯ ತಾಲ್ಲೂಕು

ಶಿಕ್ಷಣ : ನೀನಾಸಂ ಪದವೀಧರ
ಉದ್ಯೋಗ : ರಂಗಾಯಣ ಮೈಸೂರಿನಲ್ಲಿ ಕಲಾವಿದ.
ನಟನೆ : ನೀನಾಸಂ ಮತ್ತು ರಂಗಾಯಣ ಬಹುತೇಕ ನಾಟಕಗಳಲ್ಲಿ ನಟನೆ. ತದ್ರೂಪಿ, ಲೋಕ ಶಾಕುಂತಳ, ಮೃಚ್ಛಕಟಿಕ, ಮಿಸ್‌ಸದಾರಮೆ, ಸದಾರಮಾ ನಾಟಕಂ, ಮಲೆಗಳಲ್ಲಿ ಮದುಮಗಳು, ಗಾಂಧಿ v/s ಗಾಂಧಿ, ಮುಂತಾದ ನಾಟಕಗಳಲ್ಲಿ ಪ್ರಮುಖ ಪಾತ್ರಧಾರಿ.

ನಿರ್ದೇಶನ : ಸಂಕ್ರಾಂತಿ, ಗುಲ್ಪುಟ್ಟಿ–ಮುನ್ಪುಟ್ಟಿ, ರಥಮುಸಲ, ಬಂಕಾಪುರದ ಬಯಲಾಟ, ಸಾಯೋ ಆಟ, ಚೋರ ಪುರಾಣ, ನಾಗಮಂಡಲ, ಘಾಸೀರಾಮ್ ಕೊತ್ವಾಲ್ ಇತ್ಯಾದಿ.

ಇತರೆ : ರಂಗಾಯಣದ ರಜಾದಿನಗಳಲ್ಲಿ ಮಕ್ಕಳ ರಂಗತರಬೇತಿ ಶಿಬಿರ ನಿರ್ದೇಶನ, ದೊಡ್ಡವರಿಗಾಗಿ ನಾಟಕ ನಿರ್ದೇಶನ.

ಪ್ರವಾಸ : ರಂಗಾಯಣದ ತಂಡದೊಂದಿಗೆ ಜರ್ಮನಿ, ಅಮೆರಿಕಾ, ಆಸ್ಟ್ರಿಯಾ ಮುಂತಾದ ದೇಶಗಳು ಹಾಗೂ ಭಾರತದಾದ್ಯಂತ ಪ್ರವಾಸ ಮಾಡಿದ ಅನುಭವ.

ಪ್ರಶಸ್ತಿ/ಸನ್ಮಾನ : 2000ನೇ ಇಸವಿಯಲ್ಲಿ ಸುಳ್ಯ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಮತ್ತು ನಟನೆಗೆ ಹಲವು ಪ್ರಶಸ್ತಿಗಳು ಲಭಿಸಿವೆ.

**ಕೆ ಶಶಿಧರ್**

ವಿಳಾಸ : ಗಾಂಧಿನಗರ, ಸುಳ್ಯ

ಶಿಕ್ಷಣ : ಬಿ.ಎ, ಐಟಿಐ

ನಟನೆ : ಅಣ್ಣ ತಂಗಿ, ರಕ್ತ ಕಣ್ಣೀರು, ಬಡವ, ತ್ಯಾಗಿ, ನೆರಳು, ವರದಕ್ಷಿಣೆ, ದಿವ್ಯದರ್ಶನ ಹಾಗೂ ನೂರಕ್ಕೂ ಹೆಚ್ಚು ತುಳು ನಾಟಕಗಳು

ನಿರ್ದೇಶನ : ದಿವ್ಯದರ್ಶನ, ಅಣ್ಣ ತಂಗಿ, ರಕ್ತ ಕಣ್ಣೀರು, ಬಡವ, ತ್ಯಾಗಿ ಹಾಗೂ ಹಲವಾರು ತುಳು ನಾಟಕಗಳು

ಅಭಿರುಚಿ : ನೃತ್ಯ ಕಲಾವಿದ ಮತ್ತು ಸಂಯೋಜನೆ, ಮೇಕಪ್ ಕಲಾವಿದ ಇತ್ಯಾದಿ.

**ಆರ್.ಕೆ.ಭಾಸ್ಕರ (ಜಿಜ್ಞಾಸು ಕಾಸರಗೋಡು)**

ಅಂಚೆ: ಬಾಳಿಲ. ಸುಳ್ಯ ದ.ಕ.574212

ದೂರವಾಣಿ : 9449104784

ನಿರ್ದೇಶನ : ತಿರುಕನ ಕನಸು, ಜಿದ್ದ–ಪೆದ್ದ, 'ಅಕಾಶ ಮಾನವ, ಟ್ರೈನ್, ಯಂತ್ರಗಳು, ಆರೋಹಣ, ಅಲಿಬಾಬ ಮತ್ತು 40 ಕಳ್ಳರು, ಸೊಳ್ಳೆಯೂ ತಗಣೆಯೂ, ಎಣ್ಣೆ ಚಿಮಿಣಿ ಎಣ್ಣೆ, ಕೊಡೆಗಳು,

| | | |
|---|---|---|
| | | ಮಹಾರಾಣಿ, ಇತ್ಯಾದಿ |
| ಸಂಸ್ಥೆ | : | ವಿನ್ಯಾಸ ಬಾಳಿಲ |
| ರಂಗ ಚಟುವಟಿಕೆ | : | ಮಕ್ಕಳ ರಂಗತರಬೇತಿ ಶಿಬಿರಗಳ ನಿರ್ದೇಶನ, ವಿಚಾರಗೋಷ್ಠಿಗಳ ಸಂಯೋಜನೆ, ಮಕ್ಕಳ ನಾಟಕಗಳ ರಚನೆಗೆ ಪ್ರೇರಣೆ. |

**ಕೆ.ವಿ. ಶರ್ಮ, ಬಾಳಿಲ**

ವಿಳಾಸ : 'ವಿಕಾಸ್' ಕೆ.ಎಂ. ಟೆಂಪಲ್ ರಸ್ತೆ, ಬಾಳಿಲ,
ಸುಳ್ಯ ತಾಲ್ಲೂಕು. ದ.ಕ.– 574212
ದೂರವಾಣಿ : 08257–271069 (ಮೊ.9449567467)

| | | |
|---|---|---|
| ನಟನೆ | : | ಚೋಮ, ತೆರೆಗಳು, ಬಂಕಾಪುರದ ಬಯಲಾಟ, ರಥಮುಸಲ, ಕೊಡೆಗಳು, ವೆಡ್ಡಿಂಗ್ ಆ್ಯನಿವರ್ಸರಿ, ಹಯವದನ, ಎಣ್ಣೆ–ಚಿಮಿಣಿ ಎಣ್ಣೆ, ಮಾಧವಿ, ಜಾತ್ರೆ, ನಾಯಿಕಥೆ ಇತ್ಯಾದಿ. |
| ನಿರ್ದೇಶನ | : | ಪೋಟೋಕಿತಾಪತಿ, ಗೋಂದೊಳು, ನಿಸರ್ಗದ ಮಡಿಲು, ಥೈ, ಥಕಥೈ,, ಕಿಂದರಿಜೋಗಿ, ಅಲೀಬಾಬಾ ಮತ್ತು 40 ಕಳ್ಳರು, ರಾಜಾ ಹರಿಶ್ಚಂದ್ರ, ಓವರ್‌ಕೋಟು, ಅರಿವು, ಹೂಮನಸ್ಸು', ನಕ್ಕಳಾ ರಾಜಕುಮಾರಿ, ಮಂಗಗಳ ಉಪವಾಸ, ಅದಿಲಿಚ್ಚನ ಜಿಹಾದಿಯೂ ಇತ್ಯಾದಿ. |
| ಇತರೆ | : | ಚಿಣ್ಣರ ಮೇಳ, ವಿಜ್ಞಾನ ಮೇಳ, ಮಕ್ಕಳ ರಂಗತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ. 'ಪವಾಡ ರಹಸ್ಯ ಬಯಲು' ಹಾಗೂ ಅನೇಕ ಚಾರಣ ಕಾರ್ಯಕ್ರಮಗಳ ಸಂಯೋಜನೆ. ಏಕಪಾತ್ರಾಭಿನಯ ಪ್ರದರ್ಶನ. |

**ಎನ್.ಎಸ್. ದೇವಿಪ್ರಸಾದ್**

ವಿಳಾಸ : ಸಂಪಾಜೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ
ದೂರವಾಣಿ : 9448472244

| | | |
|---|---|---|
| ಶಿಕ್ಷಣ | : | ಬಿ.ಎ, ಡಿಪ್ಲೋಮಾ ಇನ್ ಜರ್ನಲಿಸಂ. |
| ರಚನೆ | : | ಶಿರಾಡಿ ಭೂತ, ಹೆಂಗಿತ್ ಹೆಂಗಾತ್. |

| | | |
|---|---|---|
| ನಿರ್ದೇಶನ | : | 'ಶಿರಾಡಿ ಭೂತ' (ನಾಟಕ) 'ಮೂರು ದಾರಿಗಳು' (ಚಲನಚಿತ್ರ) 'ಅಪಹರಣ' (ಟೆಲಿಚಿತ್ರ). |
| ಇತರೆ | : | ಸಂಪಾಜೆಯ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಿಸರ್ಗ ಬಯಲು ರಂಗಮಂದಿರದ ಸ್ಥಾಪನೆ. ಇಲ್ಲಿ ವಿವಿಧ ರಂಗ ತಂಡಗಳಿಂದ 'ಪುಟ್ಟಿ ಕಾಡಿಗೆ ಹೋದದ್ದು' 'ಜೂಲಿಯಸ್ ಸೀಸರ್', 'ಹನ್ನೊಂದು ಹಂಸಗಳು', 'ಕತ್ತಲೆ ದಾರಿ ದೂರ', 'ಮೂರು ಕಾಸಿನ ಬಿಟ್ಟಿ ಸಂಗೀತ', 'ಚಿಣ್ಣ ಬಣ್ಣ', 'ಚಕ್ರವ್ಯೂಹ', 'ಶಿರಾಡಿಭೂತ' ಇತ್ಯಾದಿ ನಾಟಕ ಪ್ರದರ್ಶನಗಳ ವ್ಯವಸ್ಥೆ. |

## ಮಹಾಬಲ ಕಲ್ಮಡ್ಕ

ಕೆರೆಕ್ಕೋಡಿ ಮನೆ, ಕಲ್ಮಡ್ಕ, ಸುಳ್ಯ ತಾಲ್ಲೂಕು.
ದೂರವಾಣಿ: 9448548534,

| | | |
|---|---|---|
| ಶಿಕ್ಷಣ | : | 1988ರ ನೀನಾಸಂ ಪದವೀಧರ. |
| ನಟನೆ | : | ನೀನಾಸಂ ಪ್ರಯೋಗಿಸಿದ ನಾಟಕಗಳಲ್ಲಿ ಅಭಿನಯ |
| ಸಂಸ್ಥೆ | : | 'ರಂಗಸುರಭಿ': ತನ್ನ ತಂದೆ ಕೆರೆಕ್ಕೋಡಿ ಗಣಪತಿ ಭಟ್‌ರಿಂದ ಯಕ್ಷಗಾನ ಮತ್ತು ನಾಟಕಗಳ ವೇಷಭೂಷಣ ತಯಾರಿ ತರಬೇತಿ ಪಡೆದು ಈ ಸಂಸ್ಥೆಯ ಮೂಲಕ ರಂಗ ಪ್ರದರ್ಶನಗಳಿಗೆ ಬೇಕಾಗುವ ಪರಿಕರ ಉಡುಗೆಗಳನ್ನು ಪೂರೈಸುವ ವ್ಯವಸ್ಥೆ ಇವರಲ್ಲಿದೆ. |


## ಶೀನಾ ನಾಡೋಳಿ

| | | |
|---|---|---|
| ಊರು | : | ನಾಡೋಳಿ ಮನೆ, ಕುಟ್ರುಪಾಡಿ ಗ್ರಾಮ ಮತ್ತು ಅಂಚೆ, ಪುತ್ತೂರು ತಾಲೂಕು |
| ವಾಸ್ತವ್ಯ | : | ಮನೆ ಸಂ. 05. ಹೇರಾಜೆ ಕಾಂಪೌಂಡ್, ಸಂತೆಕಟ್ಟೆ, ಬೆಳ್ತಂಗಡಿ ತಾಲೂಕು.ದ.ಕ.ಜಿಲ್ಲೆ. ಹುಟ್ಟಿದ ದಿನಾಂಕ : 30–10–1971 |
| ವಿದ್ಯಾರ್ಹತೆ | : | ಎಂ.ಎ. (ಆಂಗ್ಲ ಭಾಷೆ) ಮಂಗಳೂರು ವಿಶ್ವವಿದ್ಯಾಲಯ. ಡಿಪ್ಲೋಮ ಪದವೀಧರ (ನೀನಾಸಂ ರಂಗಶಿಕ್ಷಣ ಕೇಂದ್ರ |

| | | |
|---|---|---|
| | | ಹೆಗ್ಗೋಡು) |
| ವೃತ್ತಿ | : | ಉಪನ್ಯಾಸಕರು. ಸರ್ಕಾರಿ ಪದವಿಪೂರ್ವ ಕಾಲೇಜು, ಚಿತ್ತವಾಡಿಗಿ, ಹೊಸಪೇಟೆ. ಬಳ್ಳಾರಿ ಜಿಲ್ಲೆ. |
| ರಂಗ ಚಟುವಟಿಕೆ | : | ನಾಟಕ ನಿರ್ದೇಶನ, ಸಂಗೀತ ನಿರ್ದೇಶನ, ಬೀದಿ ನಾಟಕಗಳು, ರಂಗಭೂಮಿ ಕಲಾವಿದ ಮತ್ತು ರಂಗಸಂಪನ್ಮೂಲ ವ್ಯಕ್ತಿಯಾಗಿ ಅನುಭವ. |
| ನಿರ್ದೇಶನ | : | ಕೆರೆಗೆ ಹಾರ, ಪಂಜರಶಾಲೆ, ಪುಣ್ಯಕೋಟಿ, ಧಾಂ ಧೂಂ ಸುಂಟರಗಾಳಿ, ಅಸುದ್ದೊ, ಸೇವಂತಿ ಪ್ರಸಂಗ, ಸಾಹೇಬರು ಬರುತ್ತಾರೆ, ಮಾಯದ ಕಾಯಿ, ಒಂದು ಸೈನಿಕ ವೃತ್ತಾಂತ..... |
| ನಟನೆ | : | ಸಿರಿಸಂಪಿಗೆ, ಅಂಧರಾತ್ತ, ಪಂಚರಾತ್ರ, ತುಘಲಕ್, ಮರ್ಚೆಂಟ್ ಆಫ್ ವೆನಿಸ್, ಭಗವದಜ್ಜುಕೀಯ, ಅಸುದ್ದೊ, ಅಗ್ನಿ ಮತ್ತು ಮಳೆ, ಮಾಮಾಮುಶಿ ಪ್ರತಿಮಾನಾಟಕ, ಭಾಪನಾಟ (ಪಠ್ಯನಾಟಕ–ಏಕವ್ಯಕ್ತಿ ಪ್ರದರ್ಶನ).... |
| ರಂಗ ಸಂಗೀತ | : | ಪಂಜರಶಾಲೆ, ಸಾಹೇಬರು ಬರುತ್ತಾರೆ, ಸೂರ್ಯಶಿಕಾರಿ, ಮಹಾಮಾಯಿ, ಝುಂ ಝುಂ ಆನೆ ಮತ್ತು ಪುಟ್ಟಿ, ಚೋರ ಚರಣದಾಸ, ಕ್ಷಣಾಢಂಗುರ, ಒಂದು ಸುಣ್ಣದ ವೃತ್ತ.... |
| ಇತರೆ ಚಟುವಟಿಕೆಗಳು | : | ಜಾದೂಗಾರ ಕುದ್ರೋಳಿ ಗಣೇಶ್ ರವರ 'ವಿಸ್ಮಯ ಜಾದೂತಂಡದ ಸಂಗೀತ ನಿರ್ದೇಶಕ ಮತ್ತು ಕಲಾವಿದನಾಗಿ ಅನುಭವ ; ಜೇಸಿಸ್, ಲಯನ್ಸ್ ಸದಸ್ಯನಾಗಿ ಅನುಭವ ; ಕಾಲೇಜು ರಂಗಭೂಮಿ ಕಟ್ಟಿ ಬೆಳೆಸಿದ ಅನುಭವ (ಎಸ್.ಡಿ.ಎಂ. ಕಾಲೇಜು ಉಜಿರೆ); ಹಲವಾರು ರಂಗತರಬೇತಿ ಕಾರ್ಯಾಗಾರಗಳು, ಬೇಸಿಗೆ ಶಿಬಿರಗಳು, ಬಿ.ಎಡ್. ವಿದ್ಯಾರ್ಥಿಗಳಿಗಾಗಿ ಶಿಕ್ಷಣದಲ್ಲಿ ರಂಗಭೂಮಿ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಸತತವಾಗಿ ತೊಡಗಿಸಿಕೊಳ್ಳುವಿಕೆ; ಪದವಿ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ರೂಪಕಗಳ ತರಬೇತಿ ಮತ್ತು ಪ್ರದರ್ಶನ; 'ಬೆರಿಕ್ ಪಾಡ್ಧ ಡೋಲು, ದೀಪನಲಿಕೆ, ಬೋಂಟೆ, ಸಡಂಗರ, ದೂಜಿಕೆಮ್ಮೈರೆ, ಸಾರಮಾನ್ಯ ಸುಗಿಪು' ಇತ್ಯಾದಿ ತುಳು ಸಿ.ಡಿ.ಗಳ ಸಾಹಿತ್ಯಕ್ಕೆ ರಾಗಸಂಯೋಜನೆ, ಗಾಯನ; ಸುದೆತ್ತ ಮಟ್ಟೆಲ್ಡ್ ಕತೆ" ಎಂಬ ತುಳು ಕಥಾ ಸಂಕಲನ ರಚಿಸಿ ಪ್ರಕಟಣೆ. |

ಪ್ರಶಸ್ತಿ/ಪುರಸ್ಕಾರಗಳು : ಅತ್ಯುತ್ತಮ ನಿರ್ದೇಶಕ (2000), ಅತ್ಯುತ್ತಮ ಸಂಗೀತ ನಿರ್ದೇಶಕ(2000) ಉತ್ತಮನಿರ್ದೇಶನ(2008); ಹಲವಾರು ಸಂಘಸಂಸ್ಥೆಗಳಿಂದ ಪ್ರಶಸ್ತಿ/ಪ್ರತಿಭಾ ಪುರಸ್ಕಾರಗಳು.

ಪ್ರಸ್ತುತ : ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ.



'ಅಭಿನಯ' ತಂಡಕ್ಕಾಗಿ ಚಿನ್ನಾ ಕಾಸರಗೋಡು ನಿರ್ದೇಶಿಸಿದ 'ದೃಷ್ಟಿ' ನಾಟಕದ ಒಂದು ದೃಶ್ಯ



ಮೋಹನ್ ಸೋನಾ ನಿರ್ದೇಶನದ 'ಮಧುಮಕ್ಕಿ' ನಾಟಕದ ಒಂದು ದೃಶ್ಯ.




ಸುಳ್ಯ ನಗರದ ಮಧ್ಯದಲ್ಲಿರುವ ಕೆ.ವಿ.ಜಿ ಪುರಭವನ ನಾಟಕ, ಯಕ್ಷಗಾನ ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಇತರೆ ಸಭಾ ಕಾರ್ಯಕ್ರಮಗಳಿಗೆ ದೊರೆಯುತ್ತದೆ. ಸುಳ್ಯದ ಶಿಕ್ಷಣ ಶಿಲ್ಪಿ ಡಾ. ಕುರುಂಜಿ ವೆಂಕಟ್ರಮಣ ಗೌಡರಿಂದ ಸ್ಥಾಪನೆಗೊಂಡ ಈ ಪುರಭವನ ಪ್ರಸ್ತುತ ಸುಳ್ಯ ನಗರಪಂಚಾಯತ್‌ನ ಆಡಳಿತಕ್ಕೆ ಒಳಪಟ್ಟಿದೆ. ವಿಶಾಲವಾದ ವೇದಿಕೆ, ಸುಮಾರು ಒಂದು ಸಾವಿರದಷ್ಟು ಆಸನ ವ್ಯವಸ್ಥೆ ಹೊಂದಿದೆ. ಆದರೆ ಮೂಲಭೂತ ಸೌಕರ್ಯಗಳ ಕೊರತೆಯಿದೆ. ನಗರಪಂಚಾಯತ್ ಆಸಕ್ತಿವಹಿಸಿ ನವೀಕರಣಗೊಳಿಸಿದರೆ ನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮುಖ್ಯ ಕೇಂದ್ರವಾಗುವುದರಲ್ಲಿ ಸಂಶಯವಿಲ್ಲ.



ಸುಳ್ಯದ ಸರಕಾರಿ ಪದವಿಪೂರ್ವ ಕಾಲೇಜಿನ ತೆರೆದ ಒಳಾಂಗಣ ರಂಗಮಂದಿರವಿದು. ಮಳೆಗಾಲವನ್ನು ಹೊರತುಪಡಿಸಿ ಉಳಿದಂತೆ ಹಲವಾರು ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ. 40*20 ಅಡಿ ವಿಸ್ತಾರದ ವೇದಿಕೆ ನಾಟಕ ಚಟುವಟಿಕೆಗೆ ಪೂರಕವಾಗಿದೆ. ಕಾಲೇಜು ಅಭಿವೃದ್ಧಿ ಸಮಿತಿ ಮತ್ತು ಪ್ರಾಂಶುಪಾಲರ ಪೂರ್ವಾನುಮತಿಯೊಂದಿಗೆ ರಿಯಾಯಿತಿ ದರದಲ್ಲಿ ವೇದಿಕೆ ಕಾರ್ಯಕ್ರಮಗಳಿಗೆ ದೊರೆಯುತ್ತದೆ.

# ಸುಳ್ಯ ತಾಲ್ಲೂಕು ರಂಗಕಲಾವಿದರು


ಡಾ. ಎಚ್.ಎಂ.ಕುಮಾರಸ್ವಾಮಿ



ತುಕಾರಾಂ ಏನೇಕಲು



ಡಾ ನಂದಾಕುಮಾರಸ್ವಾಮಿ


ಅಪೂರ್ವ ಕೆ. ನೂಪುರ



ಪದ್ಮಾ ಕೊಡಗು


ಬಾಸುಮಾ ಕೊಡಗು


ಜಯಪ್ರಕಾಶ್ ಕುಕ್ಕೇಟಿ



ದಯಾನಂದ ಕೇರ್ಪಳ



ಎಂ ಎಸ್. ಜಯಪ್ರಕಾಶ್


ವಿ. ಪರಮೇಶ್ವರ ಹೊಳ್ಳ


ಗಿರಿಧರ ಕ್ಯೊಂಗೋಡಿ


ಡಾ। ಪೂವಪ್ಪ ಕಣಿಯೂರು


ಕಿಶೋರ್ ಕುಮಾರ್ ಕಿಲ್ಲಾಯ


ಕೆ. ರಾಮಕೃಷ್ಣ


ಗೀತಾ ಮೋಂಟಡ್ಕ



ವಿದ್ವಾನ್ ಟಿ.ಜಿ. ಮುಡೂರು




ಶ್ರೀ ಮೋಹನ್ ಸೋನ




ಜನಾರ್ದನ ಕಣಕ್ಕೂರು



ಆರ್ ಕೆ ಜೋಷಿ




ನಾಗಾರಾಜ ಮುಳ್ಯ



ಕೆ. ಶಶಿಧರ್



ಕೆ.ವಿ. ಶರ್ಮ, ಬಾಳಿಲ



ಎನ್.ಎಸ್. ದೇವಿಪ್ರಸಾದ್

# ಪುತ್ತೂರು ತಾಲ್ಲೂಕು ರಂಗಭೂಮಿ

## ಹೊಸತು – ಹಳತು ಪರಂಪರೆಯ ಕೊಂಡಿ

ಕರಾವಳಿ ಕನ್ನಡ ರಂಗಭೂಮಿಯನ್ನು ನಾಡಿನಾದ್ಯಂತ ವಿಸ್ತರಿಸುವಲ್ಲಿ ದ.ಕ ಜಿಲ್ಲೆಯ ಪುತ್ತೂರು ತಾಲ್ಲೂಕಿನ ರಂಗಭೂಮಿ ಕಾರ್ಯಕರ್ತರ ಕೊಡುಗೆ ಅನನ್ಯ ಮತ್ತು ಅಪಾರವಾದುದು. ಸುಮಾರು 106 ಕನ್ನಡ ನಾಟಕಗಳನ್ನು ಬರೆದು ಪ್ರಯೋಗಗಳಿಗೆ ಒಡ್ಡಿಕೊಂಡು ನಾಡಿನಾದ್ಯಂತ ಪ್ರದರ್ಶಿಸಿ ಖ್ಯಾತರಾದ ಜ್ಞಾನ ಪೀಠ ಪ್ರಶಸ್ತಿ ವಿಜೇತ ಡಾ। ಶಿವರಾಮ ಕಾರಂತರು ತಮ್ಮ ಪ್ರಯೋಗಗಳನ್ನು ನಡೆಸಿರುವುದು ಪುತ್ತೂರು ತಾಲ್ಲೂಕಿನಲ್ಲಿಯೇ.. ತಮ್ಮ ಮಕ್ಕಳ ಕೂಟ, ಬಾಲವನ, ದಸರಾ ನಾಡ ಹಬ್ಬ ಮುಂತಾದ ಸಾಂಸ್ಕೃತಿಕ ಸಂದರ್ಭಗಳನ್ನು ಕನ್ನಡ ರಂಗಭೂಮಿಯ ಅಭಿವೃದ್ಧಿಗಾಗಿ ಸಮರ್ಥಕವಾಗಿ ಬಳಸಿಕೊಂಡವರು ಡಾ। ಶಿವರಾಮ ಕಾರಂತರು.

ಕರ್ನಾಟಕ ರಂಗಭೂಮಿ ಹಾಗೂ ಭಾರತೀಯ ರಂಗಭೂಮಿಗೆ ಆಧುನಿಕತೆಯ ವಿಶಿಷ್ಟ ಸ್ಪರ್ಶವನ್ನು ನೀಡಿದ ರಂಗಜಂಗಮ ಬಾಬುಕೋಡಿ ವೆಂಕಟರಮಣ ಕಾರಂತರು. ತಮ್ಮ ರಂಗಭೂಮಿಯ ಪ್ರಾಥಮಿಕ ಚಟುವಟಿಕೆಗಳನ್ನು ಆರಂಭಗೊಳಿಸಿರುವುದು ಪುತ್ತೂರು ಪಟ್ಟಣದಿಂದಲೇ... ಅವರು ಗುಬ್ಬಿ ಕಂಪೆನಿಯನ್ನು ಸೇರಿಕೊಳ್ಳುವ ಮುನ್ನ ಪುತ್ತೂರು ಮಹಾಲಿಂಗೇಶ್ವರ ದೇವಳ ವಠಾರದಲ್ಲಿ ನಡೆಸಿದ ರಂಗಪ್ರಯೋಗಗಳು ಹೊಸ ಬಗೆಯದ್ದೇ ಆಗಿದ್ದವು.

ಶಿವರಾಮ ಕಾರಂತರಿಗೆ ಸದಾ ಬೆಂಬಲ ನೀಡಿದ ಸಹಕಾರಿ ನೇತಾರ ಮೊಳಹಳ್ಳಿ ಶಿವರಾಯರು, ಬಿ.ವಿ.ಕಾರಂತರಿಗೆ ನಾಟಕದ ಪಾಠ ಹೇಳಿಕೊಟ್ಟ ಪಿ.ಕೆ. ನಾರಾಯಣ ಮಾಸ್ತು, ನೇಪಥ್ಯದ ಕೆಲಸದಲ್ಲಿ ಏನೆಲ್ಲ ಮಾಡಬಹುದೋ ಅದೆಲ್ಲವನ್ನು ಅಂದೇ ಮಾಡಿ ಮುಗಿಸಿದ ವಿಟ್ಲ ಬಾಬು ಮಾಸ್ತರರು, ಚೆಕಾವ್‌ನ ನಾಟಕಗಳನ್ನು ಆ ಕಾಲದಲ್ಲಿಯೇ ಕನ್ನಡಕ್ಕೆ ಅನುವಾದಿಸಿದ ಪಡುಕೋಣೆ ರಮಾನಂದ ರಾಯರು., ಶಿವರಾಮ ಕಾರಂತರ ನಾಟಕಗಳಲ್ಲಿ ನಟಿಯರಾಗಿ ಖ್ಯಾತರಾದ ಲೀಲಾ ಕಾರಂತ, ಪಡುಕೋಣೆ ಸೀತಾದೇವಿ, ಖ್ಯಾತ ನೃತ್ಯ ಕಲಾವಿದೆ ಚಂದ್ರಭಾಗಾದೇವಿ, ಹಳೆಯ ರಂಗಕೃತಿಗಳನ್ನು ಸಂಶೋಧಿಸಿ ಅವುಗಳನ್ನು ಸಂಪಾದಿಸಿ ನಾಡಿಗೆ ಒದಗಿಸಿದ ಪ್ರೊ। ಲೀಲಾ ಭಟ್ ಮುಂತಾದವರು ಪುತ್ತೂರಿನಲ್ಲಿಯೇ ತಮ್ಮ ರಂಗಭೂಮಿ ಚಟುವಟಿಕೆಗಳನ್ನು ಪ್ರಾರಂಭಿಸಿ ಬಳಿಕ ಸಾಂಸ್ಕೃತಿಕ ಲೋಕದಲ್ಲಿ ಹೆಸರು ಮಾಡಿದವರು ಆಗಿದ್ದಾರೆ.

ಗುಬ್ಬಿ ಕಂಪೆನಿಯೂ ಸೇರಿದಂತೆ ಹಲವು ನಾಟಕ ಕಂಪೆನಿಗಳಲ್ಲಿ ನಟರಾಗಿ, ಹಾಡುಗಾರರಾಗಿ ಹೆಸರು ಮಾಡಿ ಇಂದಿಗೂ ಹಾಡುತ್ತಲಿರುವ ಬೆಂಡರವಾಡಿ ಸುಬ್ರಹ್ಮಣ್ಯ ಶರ್ಮ ಪುತ್ತೂರಿನಲ್ಲಿಯೇ ನೆಲೆಸಿದ್ದಾರೆ.

.ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ವೃತ್ತಿ ನಾಟಕ ಕಂಪೆನಿ 'ಅಂಬಾಪ್ರಸಾದ ನಾಟಕ ಕಂಪೆನಿಯನ್ನು ಆರಂಭಿಸಿ ತಮ್ಮ ಕಲಾ ಜೀವನದ ಬೃಹತ್ ಗ್ರಂಥ 'ಕಲಾರಾಧನೆಯನ್ನು ಪ್ರಕಟಿಸಿದ ಮುಂಡಾಜೆ ರಂಗನಾಥ ಭಟ್ಟರು 1920–30ರ ನಡುವೆ ಪುತ್ತೂರು ಪರಿಸರದಲ್ಲಿ ಕ್ಯಾಂಪು ನಡೆಸಿರುವುದು ತಿಳಿದುಬರುತ್ತದೆ. ಡಾ॥ ಶಿವರಾಮ ಕಾರಂತರು ಈ ಕಂಪೆನಿಯ ಮ್ಯಾನೇಜರ್ ಆಗಿ, ನಾಟಕಕಾರರಾಗಿ ಕೆಲಸ ಮಾಡಿದ್ದರು.

ಇವರೊಂದಿಗೆ ಉಲ್ಲೇಖಿಸಲೇಬೇಕಾದ ಕೆಲವು ಹಿರಿಯ ಹೆಸರುಗಳೆಂದರೆ.... ಜೀವನ್ಮತ, ಲೋಭಿ ಪ್ರಹಸನ, ಮೂರುಕಾಗೆಕಾರಿದರು, ಮುಂತಾದ ಮಕ್ಕಳ ನಾಟಕಗಳನ್ನು ರಚಿಸಿದ ಉಗ್ರಾಣ ಮಂಗೇಶರಾಯರು, ಹಿಡಿಂಬೆ, ಯಜ್ಞಕುಂಡ, ಗುರುದಕ್ಷಿಣೆ, ವಿರಾಮ, ಆಧುನಿಕ ಶಾಕುಂತಲ ಮುಂತಾದ ನಾಟಕಗಳನ್ನು ರಚಿಸಿದ ಕಡೆಂಗೋಡ್ಲು ಶಂಕರಭಟ್ಟರು.....

ಸಂಸ್ಕೃತದ ಎಂಟು ಪ್ರಸಿದ್ಧ ನಾಟಗಳನ್ನು ಕನ್ನಡಕ್ಕೆ ಅನುವಾದಿಸಿದ ಗಣಪತಿ ಮೊಳೆಯಾರರು. ಸಹಕಾರ, ಚಿತ್ರ ಶಿಖಂಡಿ, ಯಮನ ಮೇಲೆ ಸಹಕಾರದ ಬ್ರಹ್ಮಾಸ್ತ್ರ ಮುಂತಾದ ನಾಟಕ ಬರೆದಿರುವ ಬೈಂದೂರು ಆನಂದರಾಯರು...

ನಾಟಕ ಪ್ರಸಾಧನ ಕುರಿತು ವಿಶೇಷ ಅಧ್ಯಯನ ನಡೆಸಿ ದಾಖಲಿಸಿರುವ ಕಡಬ ಅನಂತರಾವ್, ಕಡಬ ಗೋಪಾಲರಾವ್ ಸಹೋದರರು, ಶಿವರಾಮ ಕಾರಂತರೊಂದಿಗೆ ನಟರಾಗಿ ಪಾಲ್ಗೊಂಡ ಮಠದಬೆಟ್ಟು ವೆಂಕಟರಾವ್ ಕಡಬ ಮೊದಲಾದ ಹಿರಿಯರೆಲ್ಲರೂ ಪುತ್ತೂರು ತಾಲ್ಲೂಕಿನವರು ಎನ್ನುವುದು ಸಡಗರದ ವಿಚಾರವಾಗಿದೆ.

1964ರಲ್ಲಿ ಗಿರೀಶ್ ಕಾರ್ನಾಡರ 'ತುಘಲಕ್' ಪ್ರಕಟಗೊಂಡಾಗ ಅದನ್ನು ಮೊಟ್ಟ ಮೊದಲ ಬಾರಿಗೆ ಕನ್ನಡ ರಂಗಭೂಮಿಯಲ್ಲಿ ಪ್ರಯೋಗಗೊಳ್ಳುವ ಹಾಗೆ ಮಾಡಿದವರು ಶ್ರೀ ಪುರಂದರ ಭಟ್ಟರು. 'ತುಘಲಕ್' ಮೊದಲ ಪ್ರದರ್ಶನ ಉಡುಪಿಯಲ್ಲಿ ನಡೆದಿದ್ದರೂ ಪುತ್ತೂರಿನ ವಕೀಲರೇ ಆಗಿರುವ ಪುರಂದರ ಭಟ್ಟರು ಮುಂದೆ 'ದೃಶ್ಯ' ನಾಟಕ ಸಂಸ್ಥೆಯ ಮೂಲಕ ಹಲವು ನಾಟಕಗಳನ್ನು ರಚಿಸಿ, ನಿರ್ದೇಶಿಸಿ ಈಗಲೂ ಸಕ್ರಿಯರಾಗಿದ್ದಾರೆ. ಈಗ ತಾವು ಅಧ್ಯಕ್ಷರಾಗಿರುವ ಪುತ್ತೂರು ಕರ್ನಾಟಕ ಸಂಘದ ಮೂಲಕ ಹಲವು ರಂಗಸಂಬಂಧಿ ಕೃತಿಗಳು ಪ್ರಕಟಗೊಳ್ಳುವುದಕ್ಕೆ ಕಾರಣರಾಗಿದ್ದಾರೆ.

1960 ರಿಂದ 1980ರ ತನಕ ಪುತ್ತೂರಿನ ಹಲವು ಶಾಲಾ, ಕಾಲೇಜುಗಳಲ್ಲಿ, ಯುವಕ ಸಂಘಗಳಲ್ಲಿ ವಾರ್ಷಿಕೋತ್ಸವ ಸಂದರ್ಭದಲ್ಲಿ ಕನ್ನಡ ನಾಟಕ ಪ್ರಯೋಗಗಳು, ಪ್ರದರ್ಶನಗಳು ನಡೆಯುವುದಕ್ಕೆ ಹಲವು ಹವ್ಯಾಸಿ ಕಲಾವಿದರು ಕಾರಣರಾಗುತ್ತಾರೆ.

1968ರಲ್ಲಿ ಆರಂಭಗೊಂಡ 'ಕಲಾರಂಗ' ಸಾಂಸ್ಕೃತಿಕ ಸಂಘಟನೆ ಸಂಗೀತ, ನೃತ್ಯಾದಿ ಕಾರ್ಯಕ್ರಮಗಳನ್ನು ಆಯೋಜನೆಗೆ ಒತ್ತುಕೊಟ್ಟಿದ್ದರು. 'ಗುಬ್ಬಿ ಕಂಪೆನಿ' 'ಸ್ತ್ರೀ ನಾಟಕ ಮಂಡಳಿ' 'ಹಿರಣ್ಯ ಮಿತ್ರಮಂಡಳಿ' ಮುಂತಾದ ಕನ್ನಡದ ಪ್ರಸಿದ್ಧ ನಾಟಕ ಕಂಪೆನಿಗಳು

ಪ್ರದರ್ಶಿಸುತ್ತಿದ್ದ ನಾಟಕಗಳನ್ನು ಪುತ್ತೂರಿನ ಪ್ರೇಕ್ಷಕರೂ ವೀಕ್ಷಿಸುವುದಕ್ಕೆ ಕಾರಣರಾಗಿದ್ದಾರೆ. ಕರ್ನಾಟಕದಾದ್ಯಂತ ಅಧುನಿಕ ರಂಗಭೂಮಿ ಚಟುವಟಿಕೆಗಳು ಎಚ್ಚೆತ್ತುಕೊಳ್ಳುತ್ತಿದ್ದ ಕಾಲದಲ್ಲಿ ಅಂದರೆ 1979 ರಲ್ಲಿ ಪುತ್ತೂರಿನಲ್ಲಿ ಪ್ರಾರಂಭವಾದ 'ಸಮುದಾಯ' ತನ್ನ ನಿರಂತರ ರಂಗಭೂಮಿ ಚಟುವಟಿಕೆಗಳ ಮೂಲಕ  ಜನರ ಗಮನ ಸೆಳೆಯುತ್ತದೆ. ಪುತ್ತೂರು ಸಮುದಾಯ ಪ್ರಯೋಗಿಸಿದ ಹಾರುವ ಹಕ್ಕಿ, ಯಂತ್ರಗಳು, ಬೆಲ್ಚಿ, ಬೇನೆ, ಒಂದು ಪರ್ಮಿಟ್ ಕಥೆ, ಅಲಿಘರ್, ಬಡಪಾಯಿ ಮಾದಪ್ಪ, ಬಾವಿ, ಮಹಾರಾಜ ರಂಗಮಂದಿರ ಮುಂತಾದ ನಾಟಕಗಳು ಪುತ್ತೂರು ಮಾತ್ರವಲ್ಲದೇ ಸುತ್ತಮುತ್ತಲ ಹಲವು ಊರುಗಳಲ್ಲಿಯೂ ಪ್ರದರ್ಶನಗೊಂಡಿದ್ದವು. ಪುತ್ತೂರು ಸಮುದಾಯ ಸಿದ್ಧಪಡಿಸಿದ 'ಬೇನೆ' ನಾಟಕ 100ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದ್ದು 1983 ರಲ್ಲಿ ಭೋಪಾಲದ ಭಾರತ ಭವನದಲ್ಲಿ ಜರುಗಿದ ರಾಷ್ಟ್ರೀಯ ಬೀದಿ ನಾಟಕೋತ್ಸವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿತ್ತು. ಬಿ.ರಾಮಕೃಷ್ಣ, ಎಸ್.ಎಸ್.ಭಟ್, ಮೋಹನ್ ಸೋನ, ಐ.ಕೆ. ಬೊಳುವಾರು, ಫೋನ್‌ಶೀನಪ್ಪ, ರಾಧಾಕೃಷ್ಣ ಮುಂತಾದವರು ಈ ತಂಡದಲ್ಲಿ ಸಕ್ರಿಯರಾಗಿದ್ದರು. 1984ರ ತನಕವೂ ಸಮುದಾಯ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿತ್ತು.

## ದೃಶ್ಯ- ಪುತ್ತೂರು

ಆಧುನಿಕ ರಂಗ ಚಳವಳಿಯಲ್ಲಿ ಕ್ರಿಯಾಶೀಲರಾಗಿ ಗುರುತಿಸಿಕೊಳ್ಳಲು ಪುತ್ತೂರಿನ ರಂಗಾಸಕ್ತರಿಗೆ ಅನುವು ಮಾಡಿಕೊಳ್ಳುವುದಕ್ಕಾಗಿ 1983 ರಲ್ಲಿ ಸ್ಥಾಪಿಸಲ್ಪಟ್ಟ ನಾಟಕ ಸಂಸ್ಥೆ 'ದೃಶ್ಯ' ಪುತ್ತೂರು. ಹಿರಿಯ ವಿದ್ವಾಂಸ ಅಮೃತ ಸೋಮೇಶ್ವರ, ಹರಿನಾರಾಯಣ ಮಾಡಾವು, ಕೆ.ಎನ್.ನಂಬಿಯಾರ್, ಪ್ರಭಾಕರ ನಾಯಕ್ ಮುಂತಾದವರ ಹಿರಿತನದಲ್ಲಿ ಆರಂಭಗೊಂಡ 'ದೃಶ್ಯ-ಪುತ್ತೂರು' ಈ ತನಕ ಜಾತ್ರೆ, ಸಂಕ್ರಾಂತಿ, ನೈಟ್‌ಡ್ಯೂಟಿ, ಪುನರ್ಜನ್ಮ, ಯುಗಧರ್ಮ, ಗರ್ಭಗುಡಿ, ಗೋಂದೋಳು, ಅವರೋಹಣ, ಹೀಗೊಬ್ಬ ಚಾರ್ವಾಕ, ಪರಶುರಾಮ, ಶುದ್ಧ ಶಿಕ್ಷಣ ಮುಂತಾದ ನಾಟಕಗಳನ್ನು ಸಿದ್ಧಪಡಿಸಿ ಪುತ್ತೂರು, ಮಂಗಳೂರು, ಉಡುಪಿ, ಕಡಬ, ಕೊಡಗು, ಮುಂತಾದ ಊರುಗಳಲ್ಲಿ ಪ್ರದರ್ಶಿಸಿದೆ. ರಂಗತರಬೇತಿ, ನಾಟಕ ಕಮ್ಮಟ, ನಾಟಕಗೋಷ್ಠಿಗಳನ್ನು ಆಯೋಜಿಸಿದೆ. ಹೊರ ಊರಿನ ಉತ್ತಮ ಸಂಸ್ಥೆಗಳನ್ನು ಆಹ್ವಾನಿಸಿ ಪ್ರದರ್ಶನಗಳನ್ನು ಏರ್ಪಡಿಸಿದೆ. ಕೆ.ಎನ್. ನಂಬಿಯಾರ್, ಕುದ್ಕಾಡಿ ವಿಶ್ವನಾಥ ರೈ, ಪುರಂದರ ಭಟ್, ಹರಿನಾರಾಯಣ ಮಾಡಾವು, ಬಿ.ಜಯಂತ, ಲೋಕೇಶ್ ಹೆಗ್ಡೆ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ.

ಪುರಂದರ ಭಟ್, ಎಸ್.ಎಸ್.ಭಟ್, ಕುದ್ಕಾಡಿ ವಿಶ್ವನಾಥ ರೈ, ಸಿರಿಲ್ ಮಥಾಯಸ್, ಧ್ರುವರಾಜ ದೇಶಪಾಂಡೆ, ಪ್ರಮೋದ ಶಿಗ್ಗಾಂವ್, ಐಕೆ.ಬೊಳುವಾರು, ಬಿ.ಜಯಂತ ರಂಗ ನಿರ್ದೇಶಕರಾಗಿ ಕೆಲಸ ಮಾಡಿರುತ್ತಾರೆ. ದೃಶ್ಯದ ಮೂಲಕ ನಾಟಕಕಾರರಾಗಿ ದಾಖಲಾದವರು 'ಅವರೋಹಣ' ಬರೆದ ನಾರಾಯಣ ಕಂಗಿಲ, 'ಕುನಾಲ' ರಚಿಸಿದ ವಿಠಲ ಕಬಕ, 'ಯುಗಧರ್ಮ' ಬರೆದ ಕುದ್ಕಾಡಿ ವಿಶ್ವನಾಥ ರೈ, 'ಹೀಗೊಬ್ಬ ಚಾರ್ವಾಕ'

ಕೃತಿಗಾರ ಪುರಂದರ ಭಟ್ ಮೊದಲಾದವರು.

**ಸಂಸಾರ :** ಸಂಘಟನೆಗಾಗಿ ಸಾಮಾಜಿಕ ರಂಗಭೂಮಿ ಎನ್ನುವ ಸಾಮಾಜಿಕ ಕಾಳಜಿಯಿಂದ ಆರಂಭಗೊಂಡ 'ಸಂಸಾರ' ನಾಟಕ ತಂಡ ಪುತ್ತೂರು ತಾಲ್ಲೂಕಿನಾದ್ಯಂತ ಬೀದಿನಾಟಕಗಳ ಮೂಲಕ, ಜನಪದ ಹಾಡುಗಳ ಗಾಯನದ ಮೂಲಕ, ರಂಗಭೂಮಿಯನ್ನು ವಿಸ್ತರಿಸುವ ಕೆಲಸ ಮಾಡುತ್ತಿದೆ. ಸಾಕ್ಷರತಾ ಚಳವಳಿಯ ಭಾಗವಾಗಿಯೂ ವಿವಿಧ ಕಡೆಗಳಲ್ಲಿ ನಾಟಕ ಪ್ರದರ್ಶನವನ್ನು ನೀಡಿದೆ. ಪುಸ್ತಕದ ಅಜ್ಜಿ ಮತ್ತು ಮರರಕ್ಕಸ, ಈಗ ಹೇಳಿ ನೀವು ಏನು ಮಾಡ್ತೀರಿ? ಮಂಗಗಳ ಉಪವಾಸ.. ಇವು ಸಂಸಾರ ಪ್ರದರ್ಶಿಸಿರುವ ಕೆಲವು ನಾಟಕಗಳು. ಶಂಶುದ್ದೀನ್ ಸಂಪ್ಯ, ಮೌನೇಶ ವಿಶ್ವಕರ್ಮ, ಕೃಷ್ಣಪ್ಪ ಬಂಬಿಲ, ಭವಾನಿ ಈ ತಂಡದ ಮುಖ್ಯ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸಿದ್ದಾರೆ. 2003ರಲ್ಲಿ ರಂಗಸಂಸಾರ ಶೀರ್ಷಿಕೆಯ ನಾಟಕೋತ್ಸವವನ್ನು ಆಯೋಜಿಸಿದ್ದಾರೆ.

## ನಿರತನಿರಂತ

ರಂಗಭೂಮಿಯನ್ನು ಜನರ ನಡುವಿನ ಮಾತನಾಡುವ ಭಾಷೆಯನ್ನಾಗಿಸಬೇಕು ಎನ್ನುವ ಉದ್ದೇಶದಿಂದ ಆರಂಭಗೊಂಡ ನಿರತನಿರಂತ ಕಳೆದ 20 ವರ್ಷಗಳಿಂದ ಈ ತನಕ ನಿರಂತರವಾಗಿ ರಂಗ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಸಂಪಾಜೆಯ ರಂಗಸಂಭ್ರಮ, ಸೋಣಂಗೇರಿ ಬಯಲು ಚಿತ್ರಾಲಯ, ರಂಗ ತರಬೇತು ಕಾರ್ಯಾಗಾರ, ಸಾಕ್ಷರತಾ ಆಂದೋಲನ, ವಿಜ್ಞಾನ ಕಲಾಜಾಥಾ, ಮಕ್ಕಳ ನಾಟಕಶಾಲೆ, ಅಟ್ಟಾಮುಟ್ಟಾ ಮಕ್ಕಳ ನಾಟಕೋತ್ಸವ, ಮುಂತಾದ ಹತ್ತು ಹಲವು ಬಗೆಯ ಕಾರ್ಯಕ್ರಮಗಳ ಮೂಲಕ ಕರ್ನಾಟಕ ರಂಗಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದೆ. ಕಳೆದ 10 ವರ್ಷಗಳಿಂದ ಪುತ್ತೂರನ್ನು ಕೇಂದ್ರವಾಗಿರಿಸಿಕೊಂಡು ಮಕ್ಕಳ ರಂಗಭೂಮಿಯ ಚಟುವಟಿಕೆಗಳ ವ್ಯಾಪಕ ವಿಸ್ತಾರಕ್ಕಾಗಿ ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆಯುತ್ತಿದೆ.

ಐಕೆ ಬೊಳುವಾರು, ಮೋಹನ್ ಸೋನ, ಡಾ। ಶ್ರೀಶಕುಮಾರ, ಶಂಶುದ್ದೀನ್ ಸಂಪ್ಯ, ಮೌನೇಶ ವಿಶ್ವಕರ್ಮ, ಮಂಜುಳಾ ಸುಬ್ರಹ್ಮಣ್ಯ, ಕಬೀರ ಮಾನವ, ರಾಧೇಶ, ಮೇಘ, ಸಹಮತ ಮುಂತಾದವರು ನಿರತನಿರಂತದ ಎಲ್ಲ ಚಟುವಟಿಕೆ ಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ನಿರತನಿರಂತ ಮಕ್ಕಳ ರಂಗಭೂಮಿಯ ಇತ್ತೀಚೆಗಿನ ನೆಲೆಗಳ ಕುರಿತಾಗಿ ಎರಡು ಬಾರಿ ರಾಜ್ಯ ಮಟ್ಟದ ರಂಗಸಂಕಿರಣಗಳನ್ನು ಏರ್ಪಡಿಸಿದೆ.

**ನಿರತನಿರಂತ ಸಿದ್ಧಪಡಿಸಿದ ಮುಖ್ಯ ನಾಟಕಗಳು :** ಅಳಿಲು ರಾಮಾಯಣ, ಮಳೆ ಹಕ್ಕಿ, ಬೌ ಬೌ ಟ್ರ್ ಟ್ರ್ ಅದೃಷ್ಟದ ಪಯಣ, ಮಾಯಾ ಕುದುರೆ, ಕುಣಿ ಕುಣಿ ನವಿಲೆ, ನೆರಳಿನ ಕೋಟೆ, ನಟ್ಟಿರುಳಾಟ– ಇನ್ನೊಂದು ಮ್ಯಾಕಬೆತ್ ಇತ್ಯಾದಿ. ನಿರತ ನಿರಂತ ತಂಡವನ್ನು ಕಟ್ಟಿ ಮುನ್ನಡೆಸುತ್ತ ಅದಕ್ಕೊಂದು ಜೀವಂತ ಚಾಲನೆ ಹಾಗೂ ನಿರಂತರತೆಯನ್ನು ನೀಡುವಲ್ಲಿ ಐ.ಕೆ.ಬೊಳುವಾರು ಇವರ ನಿರಂತರ ಶ್ರಮ ಇಲ್ಲಿ

ದಾಖಲಿಸಬೇಕಾದ ಅಂಶ.

### ರಂಗಸ್ಪರ್ಶ

ಪುತ್ತೂರು ತಾಲೂಕಿನ ರಂಗಾಸಕ್ತ ಶಾಲಾ ಶಿಕ್ಷಕರು ಒಟ್ಟು ಸೇರಿ ರೂಪಿಸಿಕೊಂಡಿರುವ ರಂಗತಂಡ "ರಂಗಸ್ಪರ್ಶ" ಶೈಕ್ಷಣಿಕ ಮಹತ್ವದ ಸಂಗತಿಗಳನ್ನು ನಾಟಕಗಳ ಮೂಲಕ ಜನಸಾಮಾನ್ಯರೆಡೆಗೆ ಕೊಂಡೊಯ್ಯುವ ಕೆಲಸವನ್ನು 'ರಂಗಸ್ಪರ್ಶ' ಮಾಡಿದೆ. ಶಿಕ್ಷಕರಿಗಾಗಿ ರಂಗತರಬೇತು ಕಾರ್ಯಾಗಾರ, ಚಿಂತನಗೋಷ್ಠಿಗಳನ್ನು ನಡೆಸುವುದರ ಮೂಲಕ ಈ ತಂಡ ಕ್ರಿಯಾಶೀಲವಾಗಿದೆ.

### ಕರ್ನಾಟಕ ಸಂಘದ ರಂಗ ಕಾಯಕ

ಪುಸ್ತಕ ಪ್ರಕಟಣಾ ಪ್ರಪಂಚದಲ್ಲಿ ಇಡೀ ಕರ್ನಾಟಕವೇ ಬೆರಗಿನಿಂದ ನೋಡುವಂತೆ ಮಾಡಿರುವ ಪುತ್ತೂರು ಕರ್ನಾಟಕ ಸಂಘ ಇದುವರೆಗೆ ಪ್ರಕಟಿಸಿರುವ ಅಮೂಲ್ಯ ಗ್ರಂಥಗಳ ಸಂಖ್ಯೆ ನೂರಕ್ಕೂ ಹೆಚ್ಚು. ಅವುಗಳಲ್ಲಿ ರಂಗಭೂಮಿಯ ಕುರಿತಾಗಿಯೇ ಪ್ರಕಟಗೊಂಡ ಕೃತಿಗಳು ಅಂದರೆ... 20ನೇ ಶತಮಾನದ ಮೊದಲ ವರ್ಷಗಳಲ್ಲಿ ಪ್ರಯೋಗಗೊಂಡು ರಂಗ ಅಧ್ಯಯನ ನಡೆಸುವರೆಲ್ಲ ಗಮನಿಸಲೇ ಬೇಕಾದ ಸಂಗ್ರಾಹ್ಯ ಕೃತಿ – ಪ್ರೊ. ಲೀಲಾಭಟ್ಟರು ಸಂಪಾದಿಸಿದ ಎಂ.ಎನ್. ಕಾಮತ್ ಕೃತಿಗಳು. ಇದರಲ್ಲಿ 27 ನಾಟಕ ಕೃತಿಗಳು ಮತ್ತು ಅಪೂರ್ವವಾದ ರಂಗವಿಶ್ಲೇಷಣಾ ಬರಹಗಳಿವೆ.

ಕನ್ನಡ ರಂಗಭೂಮಿಯ ಪ್ರಾರಂಭಿಕ ದಿನಗಳಲ್ಲಿ ಜನಪ್ರಿಯವಾಗಿದ್ದು "ಸಂಗೀತ ನಾಟಕಗಳು", ಮ್ಯಾಗ್‌ಸೇಸೆ ಪ್ರಶಸ್ತಿ ವಿಜೇತ ಕೆ.ವಿ.ಸುಬ್ಬಣ್ಣನವರ ಕುರಿತಾದ 'ನಮ್ಮ ಸುಬ್ಬಣ್ಣ', ರಂಗ ಜಂಗಮ ಬಿ.ವಿ.ಕಾರಂತರ ಬದುಕಿನ ಸಮಗ್ರ ವಿವರಗಳನ್ನೊಳಗೊಂಡ ಬಹುಮುಖ್ಯ ಲೇಖನಗಳ ಸಂಗ್ರಹ. 'ಬಿ.ವಿ.ಕಾರಂತ', ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರಂಗ ಚಟುವಟಿಕೆಗಳ ಸಂಪೂರ್ಣ ವಿವರಗಳನ್ನು ದಾಖಲಿಸಿರುವ (1975ರತನಕ) ಅತ್ಯಂತ ಅಪರೂಪದ ದಾಖಲಾತಿ ಪ್ರೊ. ಬಿ.ಆರ್.ನಾಗೇಶ್ ಬರೆದಿರುವ 'ಎದ್ದ ಬಿದ್ದ ತೆರೆಗಳು'... ನಾಟಕಕಾರ ಲಂಕೇಶ ಬದುಕಿನ ವಿವರಗಳನ್ನು ನಿರೂಪಿಸುವ ಜಯಪ್ರಕಾಶ ಮಾವಿನಕುಳಿ ಸಂಪಾದಕತ್ವದ 'ಲಂಕೇಶರ ನಾಟಕಗಳು' ವೇಣುಗೋಪಾಲ ಕಾಸರಗೋಡು ಬರೆದಿರುವ '10 ನಾಟಕಗಳು' ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು ಇಷ್ಟಪಡುವ ಎಲ್ಲರೂ ಸಂಗ್ರಹಿಸಿ ಇರಿಸಿಕೊಳ್ಳಲೇಬೇಕಾದ ಅಮೂಲ್ಯ ಗ್ರಂಥಗಳಾಗಿವೆ.

### ಶಾಲಾ ರಂಗಭೂಮಿ

ಪುತ್ತೂರು ತಾಲ್ಲೂಕಿನಲ್ಲಿ ಲಾಗಾಯ್ತಿನಿಂದಲೂ ಶಾಲಾ ರಂಗಭೂಮಿಯ ಕೆಲಸ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಶಿವರಾಮ ಕಾರಂತರು ತಮ್ಮ ಹೆಚ್ಚಿನ ಮಕ್ಕಳ ನಾಟಕಗಳನ್ನು ಪ್ರಯೋಗಿಸಿರುವುದು ಪುತ್ತೂರಿನ ಶಾಲಾ ಮಕ್ಕಳ ಮೂಲಕವೇ.

ಕರ್ನಾಟಕದಲ್ಲಿ ಮಕ್ಕಳ ರಂಗಭೂಮಿಗೆ ಪ್ರತ್ಯೇಕ ಅಸ್ತಿತ್ವ ಕಾಣಿಸಿಕೊಂಡ ಬಳಿಕ ಶಾಲಾ ವಾರ್ಷಿಕೋತ್ಸವಕ್ಕೆ ಮಾತ್ರ ನಾಟಕಗಳನ್ನು ಸಿದ್ಧಪಡಿಸುತ್ತಾ ಬಂದಿದ್ದ ಹಲವು ಶಾಲೆಗಳು ರಂಗಭೂಮಿಯನ್ನು ಶಿಕ್ಷಣದ ಭಾಗವಾಗಿ ಗುರುತಿಸಿಕೊಂಡು ಪ್ರಯೋಗಗಳನ್ನು ನಡೆಸಲು ತೊಡಗಿಸಿಕೊಂಡಿವೆ. ಇವುಗಳಲ್ಲಿ ಮುಖ್ಯವಾಗಿ ಶ್ರೀ ರಾಮಕೃಷ್ಣ ಪ್ರೌಢಶಾಲೆ ಪುತ್ತೂರು. ಇಲ್ಲಿನ ಅಧ್ಯಾಪಕರ ಉತ್ಸಾಹದಿಂದ ಶಾಲೆಯ ಮಕ್ಕಳು ಪ್ರತೀ ವರ್ಷವೂ ಒಂದು ಅಥವಾ ಎರಡು ಹೊಸ ನಾಟಕಗಳನ್ನು ಆಯ್ದುಕೊಂಡು ತಮ್ಮ ಶಾಲೆಯಲ್ಲಿ ಮಾತ್ರವಲ್ಲದೇ ಸುತ್ತಮುತ್ತಲ ಹಲವು ಶಾಲೆಗಳಲ್ಲಿ ಊರುಗಳಲ್ಲಿ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದಾರೆ. ಇವರು ಪ್ರಯೋಗಿಸಿದ ಕೆಲವು ನಾಟಕಗಳು ಕರ್ನಾಟಕದ ಹಲವು ಜಿಲ್ಲಾ ನಾಟಕೋತ್ಸವಗಳಲ್ಲಿ ಮಾತ್ರವಲ್ಲದೆ ಪಾಂಡಿಚೇರಿ, ತಿರುಚಿನಾಪಳ್ಳಿ, ನವದೆಹಲಿ ಮುಂತಾದ ಸ್ಥಳಗಳಲ್ಲಿಯೂ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ, ಮೋಹನ್ ಸೋನ, ಐ.ಕೆ.ಬೊಳುವಾರು, ಮೌನೇಶ ವಿಶ್ವಕರ್ಮ, ಈ ಶಾಲಾ ವಿದ್ಯಾರ್ಥಿಗಳಿಗೆ ನಾಟಕ ನಿರ್ದೇಶನದಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀಧರ ರೈ, ರೂಪಕಲಾ ರೈ, ಸುನಿತಾ, ವಸಂತಿ, ಮುಂತಾದ ಅಧ್ಯಾಪಕರು ಮಾರ್ಗದರ್ಶಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಅಂತೆಯೇ ಇತ್ತೀಚಿಗಿನ ಕೆಲವು ವರುಷಗಳಿಂದ ಇಂದ್ರಪ್ರಸ್ಥ ಶಾಲೆ ಉಪ್ಪಿನಂಗಡಿ, ವಿವೇಕಾನಂದ ಶಾಲೆ ಪುತ್ತೂರು, ಸುದಾನ ಶಾಲೆ ನೆಹರುನಗರ, ಮೊರಾರ್ಜಿ ವಸತಿ ಶಾಲೆ ದರ್ಬೆ ಕಕ್ಕೂರು, ಕೃಷ್ಣ ನಗರ, ಸಜಂಕಾಡಿ ಸವಣೂರುಗಳಲ್ಲಿರುವ ಸರಕಾರಿ ಹಿ.ಪ್ರಾ.ಶಾಲೆಯ ನಾಟಕ ತಂಡಗಳೂ ಸಕ್ರಿಯವಾಗಿ ನಾಟಕ ಚಟುವಟಿಕೆಗಳನ್ನು ನಡೆಸುತ್ತಿವೆ. ಯಾವುದೇ ತಂಡ ಒಂದು ನಾಟಕವನ್ನು ಸಿದ್ಧಪಡಿಸಿ ಎರಡಕ್ಕಿಂತಲೂ ಹೆಚ್ಚು ಪ್ರಯೋಗಗಳನ್ನು ನೀಡಿರುವ ತಂಡಗಳನ್ನು ಇಲ್ಲಿ ಸಕ್ರಿಯ ಶಾಲಾ ಮಕ್ಕಳ ತಂಡಗಳು ಎಂದು ಗುರುತಿಸಿ ದಾಖಲಿಸುತ್ತಿದ್ದೇನೆ. ಈ ನಿಟ್ಟಿನಲ್ಲಿ ಮಕ್ಕಳ ರಂಗಭೂಮಿಯಲ್ಲಿ ಒಳ್ಳೆಯ ನಿರ್ದೇಶಕರು ಎಂದು ಗುರುತಿಸಿಕೊಂಡಿರುವ ಮೂರ್ತಿ ದೇರಾಜೆ, ಮೌನೇಶ ವಿಶ್ವಕರ್ಮ, ರಮೇಶ ಉಳಯ, ಪ್ರಶಾಂತ ಅನಂತಾಡಿ, ದಿನೇಶ ಮಾಚಾರ್, ಶಿವಗೌರಿ ಕಲ್ಲಡ್ಕ ಮುಂತಾದವರ ಪರಿಶ್ರಮ ಉಲ್ಲೇಖನೀಯ.

## ಕಾಲೇಜು ರಂಗಭೂಮಿ

ಪುತ್ತೂರಿನಲ್ಲಿರುವ ವಿವೇಕಾನಂದ ಕಾಲೇಜು, ಕಾಲೇಜು ರಂಗಭೂಮಿಯ ಕೆಲಸಗಳನ್ನು ಬಹಳ ವರ್ಷಗಳಿಂದಲೂ ನಡೆಸುತ್ತಾ ಬಂದಿದೆ. ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಪ್ರೊ. ಅಮೃತ ಸೋಮೇಶ್ವರ, ಡಾ। ಶ್ರೀಶಕುಮಾರ ಎಂ.ಕೆ. ವಿದ್ಯಾರ್ಥಿಯಾಗಿದ್ದ ನಿರಂಜನ ಕೃಷ್ಣ, ನೀನಾಸಂ ಪದವೀಧರ ಸಿ.ಟಿ.ಬ್ರಹ್ಮಾಚಾರ್ ಇಲ್ಲಿನ ರಂಗಪ್ರಯೋಗಗಳು ಉಳಿದ ಊರುಗಳಲ್ಲಿಯೂ ಪ್ರಯೋಗಗೊಳ್ಳುವುದಕ್ಕೆ ಕಾರಣರಾಗಿದ್ದಾರೆ. ಗೋಂದೋಳು, ಬಕ, ಹುಲಿಯ ನೆರಳು, ಕೆರೆಗೆ ಹಾರ, ಬಿಟ್ಟಿ

ಪಯಣವ ಬಿಡದೆ ಮುಂತಾದವು ಇಲ್ಲಿನ ಪ್ರಮುಖ ಪ್ರಯೋಗಗಳು.

### ಬೀದಿನಾಟಕ ಜಾಥಾಗಳು

1979 ಮತ್ತು 1981ರಲ್ಲಿ ಸಮುದಾಯ ಸಾಂಸ್ಕೃತಿಕ ಜಾಥಾ ಪುತ್ತೂರಿಗೆ ಬಂದಾಗ ಸಾಂಸ್ಕೃತಿಕ ಬದಲಾವಣೆಯ ಬಗ್ಗೆ ತೆರೆದುಕೊಂಡ ಪುತ್ತೂರಿನ ಕಲಾವಿದರು ಮುಂದೆ ನಿರಂತರವಾಗಿ ಬೇರೆ ಬೇರೆ ಸಾಂಸ್ಕೃತಿಕ ಜಾಥಾಗಳನ್ನು ಮುನ್ನಡೆಸಿದ್ದಾರೆ. ಸಾಕ್ಷರತಾ ಕಲಾಜಾಥಾ, ಸಂಸಾರ ಅರಿವಿನ ಜಾಥಾ, ಬಹುವಚನಂ, ಜಲಸಂರಕ್ಷಣಾ ಜಾಥಾ, ನಿರತ ನಿರಂತ, ಜನ ವಿಜ್ಞಾನ ಜಾಥಾ, ಸ್ಕೌಟ್ ಸಂಸ್ಥೆಯ ಸೈಕಲ್ ಜಾಥಾ ಮುಂತಾದ ಸಂದರ್ಭಗಳಲ್ಲಿ ಹಲವು ನಾಟಕಗಳು ಸಿದ್ಧಗೊಂಡು ನೂರಾರು ಸ್ಥಳಗಳಲ್ಲಿ ಸಂಚಾರಿ ಪ್ರದರ್ಶನಗಳನ್ನು ನೀಡಿವೆ.

### ವಿಚಾರಸಂಕಿರಣಗಳು

ನಿರತ ನಿರಂತ ಮಕ್ಕಳ ರಂಗಭೂಮಿಯ ಗೊತ್ತುಗುರಿಗಳಿಗೆ ಸಂಬಂಧಿಸಿದಂತೆ ಎರಡು ಬಾರಿ ರಾಜ್ಯಮಟ್ಟದ ವಿಚಾರಸಂಕಿರಣ ನಡೆಸಿದೆ. ಕರ್ನಾಟಕ ಸಂಘ ಬಿ.ವಿ.ಕಾರಂತ ಅಭಿನಂದನೆಯ ನೆಪದಲ್ಲಿ ವಿಶಿಷ್ಟ ರಂಗಸಂಕಿರಣವನ್ನು ಏರ್ಪಡಿಸಿದೆ. 'ದೃಶ್ಯ' ತನ್ನ ಆರಂಭದ ದಿನಗಳಲ್ಲಿ ಜಿಲ್ಲಾ ಮಟ್ಟದ ವಿಚಾರಗೋಷ್ಠಿಯೊಂದನ್ನು ಹಮ್ಮಿಕೊಂಡಿತ್ತು.

### ನಾಟಕೋತ್ಸವ

ಕಳೆದ 9 ವರುಷಗಳಿಂದ ನಿರತನಿರಂತ ಅಟ್ಟಾ-ಮುಟ್ಟಾ ಮಕ್ಕಳ ನಾಟಕೋತ್ಸವ ಹೆಸರಿನಲ್ಲಿ ಪ್ರತೀ ವರ್ಷವೂ ನಾಟಕೋತ್ಸವ ನಡೆಸುತ್ತಾ ಬಂದಿದೆ. ಊರ ಪರವೂರಿನ ಹಲವು ನಾಟಕ ತಂಡಗಳು ಈ ನಾಟಕೋತ್ಸವದಲ್ಲಿ ಭಾಗಿಯಾಗಿವೆ. ರಂಗಪುರವಣಿಗಳ ಪ್ರಕಟಣೆ, ವಿಚಾರಸಂಕಿರಣಗಳ ಆಯೋಜನೆ, ಸಾಂಸ್ಕೃತಿಕ ಕಾರ್ಯಾಗಾರಗಳ ಏರ್ಪಾಟು ಈ ನಾಟಕೋತ್ಸವದ ಹೆಗ್ಗಳಿಕೆ.

### ರಂಗ ತರಬೇತು ಶಿಬಿರ

ಈಗ ಪುತ್ತೂರಿನಲ್ಲೇ ನೆಲೆಸಿರುವ ತುಮರಿಯ ಹಾ.ಮ. ರಾಘವೇಂದ್ರ ಪ್ರತಿ ವರ್ಷವೂ ನೀನಾಸಂ ನಾಟಕಗಳನ್ನು ಪುತ್ತೂರಿನಲ್ಲಿ ಸಂಘಟಿಸುತ್ತಿರುವುದಲ್ಲದೆ ತಮ್ಮ 'ಕಾಡು' ಸಾಂಸ್ಕೃತಿಕ ಸಂಸ್ಥೆಯ ಮೂಲಕ ಮಕ್ಕಳಿಗಾಗಿ ರಂಗ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾರೆ. ಆ ಮುನಿ, ನನ್ನ ಗೋಪಾಲ, ಮುದುಕ ಸೆಟ್ಟಿಯ ಮೂವರು ಮಕ್ಕಳು ಮುಂತಾದ ನಾಟಕಗಳು ಈ ಶಿಬಿರದ ಮೂಲಕ ನಿರ್ಮಾಣವಾಗಿವೆ.

**ಪರವೂರಿನ ರಂಗತಂಡಗಳು ಪುತ್ತೂರಿನಲ್ಲಿ ಪ್ರದರ್ಶನ**

ಪುತ್ತೂರಿನ ಪ್ರೇಕ್ಷಕರಿಗೆ ಬೇರೆ ಊರುಗಳಲ್ಲಿ ಸಿದ್ಧಗೊಂಡಿರುವ ಅತ್ಯುತ್ತಮ ರಂಗ ಪ್ರಯೋಗಗಳು ವೀಕ್ಷಣೆಗೆ ಲಭ್ಯವಾಗಲು ನಾಡಿನ ಹಲವು ರಂಗತಂಡಗಳು ಕಾರಣವಾಗಿವೆ.

ಗುಬ್ಬಿ ಕಂಪೆನಿ, ಅಂಬಾ ಪ್ರಸಾದ ನಾಟಕ ಮಂಡಳಿ, ಹಿರಣ್ಣಯ್ಯ ಮಿತ್ರ ಮಂಡಳಿ, ಸ್ತ್ರೀ ನಾಟಕ ಮಂಡಳಿ, ತಮ್ಮ ನಾಟಕಗಳನ್ನು ಪುತ್ತೂರಿನಲ್ಲಿ ಪ್ರದರ್ಶಿಸಿವೆ.

ರಂಗಾಯಣ ಮೈಸೂರು – ಸರಸಮ್ಮನ ಸಮಾಧಿ, ಗೋವಿನ ಹಾಡು, ಬೇಳೆ ಕಾಳು ಪ್ರಸಂಗ.

ನೀನಾಸಂ ಹೆಗ್ಗೋಡು –ತಿರುಗಾಟ, ಮರುತಿರುಗಾಟದ ನಾಟಕಗಳು.

ಕಿನ್ನರ ಮೇಳ ತುಮರಿ – ಮಕ್ಕಳ ನಾಟಕಗಳು.

ಬಣ್ಣ ಬಣ್ಣ – ಮಕ್ಕಳ ನಾಟಕಗಳು.

ಸೃಷ್ಟಿ– ಕೊಡವರಂಗ – ಸಂಚಾರಿ ನಾಟಕಗಳು.

ರಂಗ ಚೇತನ ತಿರುವನಂತಪುರ –ಅಗ್ನಿ.

ರಂಗಭೂಮಿ ಉಡುಪಿ– ಸಂಕ್ರಾಂತಿ.

ಸಂಬಂಧ ಬೆಂಗಳೂರು– ಅನಾಹತನಾದ, ಚೂರಿಕಟ್ಟೆ, ಧರ್ಮದುರಂತ.

ಬಹುರೂಪಿ ಕುಂದಾಪುರ – ಜನತೆಯ ಶತ್ರು.

ಕುಸುಮಸಾರಂಗ – ಮಹಾಮಾಯಿ, ಮಲ್ಲವ್ವನ ಮನೆ ಹೋಟ್ಲು.

ಜೋಸೆಫ್ ಓಂಕಾರ – ಮುಲ್ಲುಡಿ ಹುಲಿ.

ಅಭಿನಯ ಸುಳ್ಯ – ನಾಳೆ ಯಾರಿಗೂ ಇಲ್ಲ, ಕಲ್ಯಾಣಸ್ವಾಮಿ.

ಉದ್ಯಾವರ ನಾಗೇಶ ಕುಮಾರ– ಮುದುಕ ಸೆಟ್ಟಿಯ ಮೂವರು ಮಕ್ಕಳು.

ಸೋಣಂಗೇರಿ ಬಯಲು ಚಿತ್ರಾಲಯ – ಮಳೆ ಹಕ್ಕಿ.

ರಂಗಪ್ರಪಂಚ ಬೆಂಗಳೂರು – ಈಡಿಪಸ್, ರೆಕ್ಕೆ ಕಟ್ಟುವಿರಾ.

ರಂಗಚಿನ್ನಾರಿ ಕಾಸರಗೋಡು– ತಧಿಗಿಣ ತೋಂ, ಮಂಥರೆ.

ಅಪೂರ್ವ ಕಲಾವಿದರು – ನಾಯಿಬಾಲ–ಲಾರಿನಾಟಕ.

ಕೆ.ಟಿ.ಶ್ರೀಧರ – ಬಚ್ಚಾಲಿ ಹುಡುಗರು.

ಮೈಸೂರು – ಹಾವು ಏಣಿ.

ಕಾನಸ ಹೆಗ್ಗೋಡು – ಚಿತ್ರಾ ಮದರ್ ಕರೇಜ್. ಇತ್ಯಾದಿ.

**ಪ್ರಸಾಧನ ಕೇಂದ್ರಗಳು :** ವಿಘ್ನೇಶ್ ವಿಶ್ವಕರ್ಮ, ಇವರು ಮೇಕಪ್ ಕಲಾವಿದರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.


**ರಂಗಮಂದಿರಗಳು:** ಪುತ್ತೂರು ತಾಲ್ಲೂಕಿನಲ್ಲಿ ನಾಟಕ ಪ್ರದರ್ಶನಗಳಿಗೆ ಬೇಕಾದ ಸುಸಜ್ಜಿತ ರಂಗಮಂದಿರಗಳಿಲ್ಲ. ಪುತ್ತೂರು ನಗರದಲ್ಲಿರುವ 'ಪುರಭವನ' ಒಂದು ಸುಸಜ್ಜಿತ 'ರಂಗಮಂದಿರ'ವಾಗುವ ಸಾಧ್ಯತೆ ಹೊಂದಿದ್ದರೂ ಆಡಳಿತದ ಉದಾಸೀನತೆಯಿಂದ ಹಾಗೆಯೇ ನಿಂತಿದೆ. ಪುತ್ತೂರಿನ ಭಾವನಾ ಕಲಾ ಆರ್ಟ್ಸ್


ಬೊಳುವಾರು ಪ್ರಸಾಧನ ಕೇಂದ್ರವಾಗಿದ್ದು ಇಲ್ಲಿ ಕನ್ನಡ ಹಾಗೂ ತುಳು ಪ್ರಸಾಧನಗಳು ದೊರೆಯುತ್ತವೆ.



ಶ್ರೀ ಐ.ಕೆ.ಬೊಳುವಾರು

ಶ್ರೀ ಐ.ಕೆ.ಬೊಳುವಾರು<br>ನಿರತನಿರಂತ ಮಕ್ಕಳ ನಾಟಕಶಾಲೆ,<br>ಪುತ್ತೂರು.





ನಿರತನಿರಂತ ತಂಡದ 'ನಟ್ಟಿರುಳಾಟ – ಇನ್ನೊಂದು ಮ್ಯಾಕ್‌ಬೆತ್' ನಾಟಕದ ದೃಶ್ಯಗಳು




ಪುತ್ತೂರು ಪುರಸಭಾ ಆಡಳಿತಕ್ಕೆ ಒಳಪಟ್ಟಿರುವ ಪುರಭವನದ ಪಾರ್ಶ್ವನೋಟ. ಸುಮಾರು 600 ಮಂದಿ ಪ್ರೇಕ್ಷಕರಿಗೆ ಸ್ಥಳಾವಕಾಶ ಇರುವ ಈ ಪುರಭವನ ನಾಟಕ ಹಾಗೂ ಇನ್ನಿತರೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾದ ವೇದಿಕೆಯನ್ನು ಹೊಂದಿದೆ. "ನಿರತನಿರಂತ"ದ ಮಕ್ಕಳ "ಅಟ್ಟಾ ಮುಟ್ಟಾ" ನಾಟಕೋತ್ಸವ ಹಾಗೂ ಸಂದರ್ಭಕ್ಕನುಗುಣ ವಾಗಿ ಕನ್ನಡ ಹಾಗೂ ತುಳು ನಾಟಕಗಳ ಪ್ರದರ್ಶನಗಳು ನಡೆಯುತ್ತವೆ. ಕೆಲ ಸಮಯದ ಹಿಂದೆ ನವೀಕರಣಗೊಂಡಿದ್ದರೂ ಇನ್ನೂ ಕೆಲವು ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯಿದೆ ಎಂಬುದು ಕಲಾಭಿಮಾನಿಗಳ ಅಭಿಪ್ರಾಯ.

## ಬೆಳ್ತಂಗಡಿ ತಾಲ್ಲೂಕು ರಂಗಭೂಮಿ

### ಕ್ರಿಯಾಶೀಲ ರಂಗ ಚಟುವಟಿಕೆ

ಶತಮಾನಗಳ ಹಿಂದೆ ಬೆಳ್ತಂಗಡಿ ತಾಲ್ಲೂಕಿನ ಬಹುಭಾಗ ಜೈನ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಅಂದಿನ ಕಾಲದಲ್ಲಿ ಜೈನ ಅರಸರು ಸಾಹಿತ್ಯ, ಸಾಂಸ್ಕೃತಿಕ, ಕಲೆಗೆ ಪ್ರೋತ್ಸಾಹ ನೀಡುತ್ತಿದ್ದರು ಎಂಬುದು ಅಸ್ಪಷ್ಟವಾಗಿ ತಿಳಿದುಬರುತ್ತದೆ. ಸ್ಪಷ್ಟವಾಗಿ ವಿವಿಧ ಕಲೆಗಳಿಗೆ ರಾಜಾಶ್ರಯದಂತಹ ಪ್ರೋತ್ಸಾಹ ದೊರಕಿದ್ದು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ. ಇಲ್ಲಿನ ಧರ್ಮಾಧಿಕಾರಿಗಳಾಗಿದ್ದ ದಿ। ಮಂಜಯ್ಯ ಹೆಗ್ಗಡೆಯವರು ಸ್ವತಃ ಶ್ರೇಷ್ಠ ಚಿತ್ರ ಕಲಾವಿದರು. ಮಾತ್ರವಲ್ಲದೆ ವಿವಿಧ ಕಲಾ ಪ್ರಕಾರಗಳನ್ನು ಪ್ರಾಂಜಲ ಮನಸ್ಸಿನಿಂದಲೂ, ಉದಾರ ಹಸ್ತದಿಂದಲೂ ಪ್ರೋತ್ಸಾಹಿಸುತ್ತಿದ್ದರು. ನಾಟಕಗಳನ್ನು ಆಡಲು ಯೋಗ್ಯ ರಂಗಮಂದಿರಗಳ ಕೊರತೆಯಿದ್ದ ಆ ಕಾಲದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ 'ವಸಂತಮಹಲು' ಹಾಗೂ ಉಜಿರೆಯ ಶ್ರೀ ಸಿದ್ಧವನ ಗುರುಕುಲದಲ್ಲಿ ಒಂದು ರಂಗಮಂದಿರವನ್ನು ನಿರ್ಮಾಣ ಮಾಡಿ 'ರಂಗ ಕಲಾವಿದರಿಗೆ ರಂಗ ಚಟುವಟಿಕೆಗಳ ಪ್ರದರ್ಶನಕ್ಕೆ ಸೂಕ್ತ ವ್ಯವಸ್ಥೆ ಮಾಡಿದ್ದರು. ತದನಂತರ ಸ್ಥಳೀಯ ಹವ್ಯಾಸಿ ಕಲಾವಿದರನ್ನು ಸೇರಿಸಿಕೊಂಡು ಸ್ವತಃ ಮಂಜಯ್ಯ ಹೆಗ್ಗಡೆಯವರು ದಿಗ್ದರ್ಶಿಸಿ 'ಮೃತ್ಯುಂಜಯ' ಎಂಬ ನಾಟಕವನ್ನು ಆಡಿಸಿದ್ದಾಗಿ ತಿಳಿದುಬರುತ್ತದೆ. ಡಾ ಸೋಮಸುಂದರ ರಾವ್, ಕೃಷ್ಣಸ್ವಾಮಿ ನಾಯ್ಡು, ಎಸ್.ಎಂ ಬಾಬುರಾವ್ ಮೊದಲಾದವರು ಆ ಕಾಲದಲ್ಲಿ ಕ್ಷೇತ್ರದ ಖ್ಯಾತ ಕಲಾವಿದರು. ಆಗಾಗ್ಗೆ ಶ್ರೀ ಕ್ಷೇತ್ರಕ್ಕೆ ಹೊರಗಿನ ನಾಟಕ ಕಂಪೆನಿಗಳು ಭೇಟಿ ಕೊಟ್ಟು ತಮ್ಮ ಕಲಾಪ್ರದರ್ಶನವನ್ನು ನೀಡುತ್ತಿದ್ದವು. ಈ ಪರಂಪರೆ ಶ್ರೀ ಕ್ಷೇತ್ರದಲ್ಲಿ ಇಂದೂ ನಡೆದುಕೊಂಡು ಬರುತ್ತಿದೆ. 'ನಿರೂಪಮಾ', 'ನಿಶಾ ಮಹಿಮೆ', 'ಬೀದಿ ನಾಟಕ' ಮೊದಲಾದವು ಆ ಕಾಲದಲ್ಲಿ ಪ್ರದರ್ಶಿತವಾದ ಮುಖ್ಯ ನಾಟಕಗಳು.

ಬೆಳ್ತಂಗಡಿ, ಮುಂಡಾಜೆ, ಮಡಂತ್ಯಾರು, ವೇಣೂರು ಮೊದಲಾದೆಡೆಗಳಲ್ಲೂ ಹವ್ಯಾಸಿ ಕಲಾವಿದರಿದ್ದರು. ಮುಂಚಿತವಾಗಿ ಊರಿನಲ್ಲಿ ಸಂಚರಿಸಿ ಸ್ವಲ್ಪ ಧನ ಸಂಗ್ರಹ ಮಾಡಿಕೊಂಡು ನಾಟಕ ಪ್ರದರ್ಶನ ನೀಡುವ ಕ್ರಮವೂ ಹಿಂದಿನ ಕಾಲದಲ್ಲಿತ್ತು. ಪ್ರಸಿದ್ಧ ವೈದ್ಯರೂ, ಸಾಮಾಜಿಕ ಸೇವಾಸಕ್ತರೂ ಆಗಿದ್ದ ಡಾ॥ ನಾರಾಯಣ ರಾಯರು ಬೆಳ್ತಂಗಡಿಯಲ್ಲಿ ಆಸಕ್ತ ಕಲಾವಿದರನ್ನು ಸೇರಿಸಿಕೊಂಡು 'ಬಡತನದ ಭೂತ', 'ಸಂಸಾರ ನೌಕೆ', ದೇವದಾಸಿ, 'ಬೆಂಕಿಯಬಲೆ' ಮೊದಲಾದ ನಾಟಕಗಳನ್ನು ಯಶಸ್ವಿಯಾಗಿ

ಪ್ರದರ್ಶಿಸಿ ಜನರಿಗೆ ಮನೋರಂಜನೆಯನ್ನು ಒದಗಿಸಿದ್ದಲ್ಲದೆ ಬೆಳ್ತಂಗಡಿಯ ಪ್ರೌಢಶಾಲೆಗೆ ನಿಧಿ ಸಂಗ್ರಹಿಸಿದ್ದರು. ಇದರ ಜೊತೆಗೆ ಸ್ತ್ರೀಯರಿಂದಲೇ ನಾಟಕವಾಡಿಸುವ ಒಂದು ಹೊಸ ಪ್ರಯೋಗಕ್ಕೆ ಡಾ। ನಾರಾಯಣ ರಾಯರು ಕೈ ಹಾಕಿ ಮಹಿಳೆಯರಿಂದ 'ಜಾತಕ ಫಲ' ಹಾಗೂ 'ಪಂಗನಾಮ' ಎಂಬ ಎರಡು ನಾಟಕಗಳನ್ನು ಪ್ರದರ್ಶಿಸಿ ಪ್ರಸಿದ್ಧಿ ಪಡೆದಿದ್ದರು.

ಡಾ। ನಾರಾಯಣ ರಾಯರ ಜೊತೆಗೆ ಸಾಂತಪ್ಪ ಸಾಲಿಯಾನ್, ರಾಮದಾಸ ಬಾಳಿಗಾ, ಹರಿದಾಸ ಶಂಕರ ನಾರಾಯಣ ರಾವ್, ನಾರಾಯಣ ಪೈ, ಸುಂದರ, ವಸಂತರಾವ್, ಶ್ರೀಮತಿಯರಾದ ಪ್ರಭಾವತಿ, ವೀರಮ್ಮ, ಸುಜಾತಾ, ರಾಧಮ್ಮ ಮೊದಲಾದವರು ಸಹಕಲಾವಿದರಾಗಿದ್ದರು. ಡಾಕ್ಟರರ ಈ ತಂಡ 1956ರಲ್ಲಿ ದ.ಕ ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿತ್ತು. ಹಾಗೆಯೇ ಡಾ। ರಾಯರು 1964 ರಲ್ಲಿ ಬೆಳ್ತಂಗಡಿ ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆಯೊಂದನ್ನು ಆಯೋಜಿಸಿದ್ದರು. ಅದರಲ್ಲಿ ಧರ್ಮಸ್ಥಳ, ಬೆಳ್ತಂಗಡಿ, ಮಡಂತ್ಯಾರು, ಮುಂಡಾಜೆ ಮೊದಲಾದ ಕಡೆಗಳ ನಾಟಕ ತಂಡಗಳು ಭಾಗವಹಿಸಿದ್ದವು. 1919ರಷ್ಟು ಹಿಂದೆಯೇ ಮಡಂತ್ಯಾರ್‌ನಲ್ಲಿ ನಾಟಕ ಕಲೆಗೆ ಸಾಕಷ್ಟು ಪ್ರೋತ್ಸಾಹವಿತ್ತು. ಆ ಕಾಲದಲ್ಲಿ 'ಜ್ಯೋತಿ ಕಲಾವೃಂದ' ಎಂಬ ನಾಟಕ ಸಂಸ್ಥೆ ಹುಟ್ಟಿಕೊಂಡು ಅದರ ಆಶ್ರಯದಲ್ಲಿ 'ಚಂದ್ರಹಾಸ', 'ರಾಮಾಯಣ', 'ಅಣ್ಣ ತಮ್ಮ', 'ಟಿಪ್ಪು ಸುಲ್ತಾನ್' ಮೊದಲಾದ ನಾಟಕಗಳು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿದ್ದವು. 'ಅಣ್ಣ ತಮ್ಮ' ಮತ್ತು 'ಅಲೆಗ್ಸಾಂಡರ್' ನಾಟಕಗಳು ತಾಲ್ಲೂಕು ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುದಾಗಿ ಉಲ್ಲೇಖವಿದೆ. ಎಂ.ಕೃಷ್ಣಪ್ಪ ಮಾಸ್ಟರ್, ಯುವರಾಜ ಪಡಿವಾಳ, ಜೆ.ಎಂ ರೋಡ್ರಿಗಸ್, ಕೆ.ವಿ, ಮುಚ್ಚಿನ್ನಾಯ ಮೊದಲಾದವರು ಇಲ್ಲಿನ ಖ್ಯಾತ ಕಲಾವಿದರು.

1950 – 60 ರ ಮಧ್ಯದಲ್ಲಿ ಮುಂಡಾಜೆಯಲ್ಲಿ ಅಭಿನಯ ವಿಭೂಷಣ, ನಾಟ್ಯಕಲಾ ವಿಶಾರದ ಎಂ. ರಂಗನಾಥ ಭಟ್ ತಾಮ್ಹನಕರ್‌ನ ನೇತೃತ್ವದಲ್ಲಿ 'ರಾಯರ ಸೊಸೆ', 'ದಾರಿದ್ರ್ಯದ ಉರುಳಲ್ಲಿ', 'ಪ್ರಾರಬ್ಧ' ಮೊದಲಾದ ನಾಟಕಗಳು ಪ್ರದರ್ಶನಗೊಂಡು ಜನಮೆಚ್ಚುಗೆ ಗಳಿಸಿದ್ದವು. ಶ್ರೀ ರಂಗನಾಥ ಭಟ್ ತಾಮ್ಹನ್‌ಕರರ 'ಅಂಬಾ ಪ್ರಸಾದಿತ ನಾಟಕ ಮಂಡಳಿ' ರಾಜ್ಯಮಟ್ಟದಲ್ಲಿ ಗುಬ್ಬಿವೀರಣ್ಣ, ಹಿರಣ್ಣಯ್ಯ ಮಿತ್ರಮಂಡಳಿಯಷ್ಟೆ ಪ್ರಸಿದ್ಧಿ ಪಡೆದಿತ್ತು. ಕರ್ನಾಟಕದಾದ್ಯಂತ ಲಕ್ಷಾಂತರ ಮಂದಿಗೆ ನೂರಾರು ನಾಟಕಗಳನ್ನು ಆಡಿ ತೋರಿಸಿ ನವರಸಗಳನ್ನು ಜನರಿಗೆ ಉಣಬಡಿಸಿದ ಖ್ಯಾತಿ ಶ್ರೀ ಭಟ್ಟರಿಗೆ ಸಲ್ಲುತ್ತದೆ. ಕೇವಲ ಪೌರಾಣಿಕ, ಐತಿಹಾಸಿಕ ನಾಟಕಗಳನ್ನಷ್ಟೇ ಆಡಲಾಗುತ್ತಿದ್ದ ಆ ಕಾಲದಲ್ಲಿ ಸಾಮಾಜಿಕ ನಾಟಕಗಳನ್ನು ಆಡಿ ತೋರಿಸಿ ಶ್ರೀ ಭಟ್ಟರು ನಾಟಕ ಕ್ಷೇತ್ರದಲ್ಲಿ ಒಂದು ಹೊಸ ಕ್ರಾಂತಿಯನ್ನು ಎಬ್ಬಿಸಿದರು.

ದಿವಂಗತ ರಂಗನಾಥ ಧಾರ್ಮಿಕರರು ಸ್ಥಾಪಿಸಿದ 'ಅಂಬಾ ಪ್ರಸಾದಿತ ನಾಟಕ ಮಂಡಳಿಯಲ್ಲಿ ಡಾ॥ ಶಿವರಾಮ ಕಾರಂತರು ಮೆನೇಜರ್ ಆಗಿದ್ದರು. ಹಾಗೆಯೇ

ಮಲ್ಲಾಡಿಹಳ್ಳಿಯ ದಿವಂಗತ ಸ್ವಾಮೀಜಿಗಳು ಅವರ ಪೂರ್ವಾಶ್ರಮದಲ್ಲಿ ಅದರ ನಟರಾಗಿದ್ದರು. ಇದಲ್ಲದೆ ಚಲನಚಿತ್ರ ನಟಿ ಪಂಡರಿಬಾಯಿ, ಸಂಗೀತ ನಿರ್ದೇಶಕ ಹಾಗೂ ಗಾಯಕ ಪಿ. ಕಾಳಿಂಗರಾವ್ ಅದರಲ್ಲಿ ಕಲಾವಿದರಾಗಿದ್ದರು ಎಂಬುದು ಶ್ರೀ ಶಿರಾಡಿಪಾಲರ ಆತ್ಮಚರಿತ್ರೆ 'ಕಲಾರಾಧನೆ'ಯಿಂದ ತಿಳಿದುಬರುತ್ತದೆ.

1955ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಟೈಪ್ ಬಾಬುರಾವ್ ಮತ್ತು ಡಾ। ಶ್ಯಾಮ್ ಸುಂದರ್ ರಾವ್ ಇವರ ಎರಡು ನಾಟಕ ತಂಡಗಳು ಕ್ರಿಯಾಶೀಲವಾಗಿದ್ದವು. ಮುಂಡಾಜೆಯ ಶ್ರೀ ರಂಗನಾಥ ತಾಮ್ಹನ್‌ಕರ್ ಇವರನ್ನು ಯಾವಾಗಲೂ ಕರೆಸಿಕೊಳ್ಳುತ್ತಿದ್ದರು. ಈ ಸಮಯದಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದ ಕೃಷ್ಣರಾವ್ ವೇಣೂರು, ರಂಗಗೀತೆಗಳನ್ನು ಹಾಡುತ್ತಿದ್ದ ಆನಂದರಾವ್, ಕೊಳಲು ಹಾಗೂ ಹಾರ್ಮೋನಿಯಂ ನುಡಿಸುತ್ತಿದ್ದ ಅನಂತ ರಾಮ್‌ಭಟ್ ಹಾಗೆಯೇ ಪಂಡರಿಬಾಯಿ, ಶಿವರಾಮಕಾರಂತರು, ಮೋಹನ ಕಾಮತ್, ಬಾಬುರಾವ್ ಬಾಲಕೃಷ್ಣ ಅರ್ಬುಡಿತ್ತಾಯ, ಡಾ ಸೋಮಶೇಖರ್, ಡ್ರಾಯಿಂಗ್ ಮಾಸ್ಟರ್ ಶ್ರೀನಿವಾಸ ರಾವ್ ಮೊದಲಾದವರು ನಾಟಕರಂಗದ ಖ್ಯಾತ ನಾಯಕರಾಗಿದ್ದರು. ಶ್ರೀ ಜಿನೇಂದ್ರ ಕೊಕ್ರಾಡಿ, ಮಾಳಿಗೆ ಮನೆ ನಾರಾಯಣ ಭಟ್ಟರ, ಶ್ರೀ ರಘುನಾಥ ರೈ, ಎನ್.ನಾಭಿರಾಜ ಪೂವಣಿ, ಮೊದಲಾದವರು ರಂಗಕಲೆಯ ವಿವಿಧ ಪ್ರಕಾರಗಳಲ್ಲಿ ನಿರ್ದೇಶನ, ರಚನೆ ಇತ್ಯಾದಿ ತೊಡಗಿಸಿಕೊಂಡಿದ್ದರು.

1980 ರ ದಶಕದಲ್ಲಿ ಶ್ರೀ. ಧ.ಮ. ಕಾಲೇಜಿನ ಟಿ. ಕೃಷ್ಣಮೂರ್ತಿ, ರೇಷ್ಮೆ ಇಲಾಖೆಯ ಎಸ್.ಜಿ. ಭಟ್, ರುಡ್‌ಸೆಟ್ ಸಂಸ್ಥೆಯ ಎನ್. ಮಂಜುನಾಥ ಭಟ್ ಹಾಗೂ ಬೆಳ್ತಂಗಡಿಯ ರಾಧಾಕೃಷ್ಣ ಶೆಟ್ಟಿ ಸೇರಿ 'ಸಮೂಹ' ಎಂಬ ರಂಗಾಸಕ್ತರ ಸಂಘಟನೆ ಹುಟ್ಟು ಹಾಕಿ ಕರ್ನಾಟಕದ ಖ್ಯಾತಿಯ 'ನೀನಾಸಂ' ನಾಟಕ ತಂಡವನ್ನು ಕರೆಸಿ ಪ್ರತಿ ವರ್ಷವೂ 1991ರಲ್ಲಿ ಪೂಜ್ಯ ಡಾ। ವೀರೇಂದ್ರ ಹೆಗ್ಗಡೆಯವರ ಅಮೃತ ಹಸ್ತದಿಂದ ಶ್ರೀಮತಿ ಹೇಮಾವತಿ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲೇ ಪ್ರಪ್ರಥಮ ಬಾರಿಗೆ ತಾಲ್ಲೂಕು ಮಟ್ಟದ ಸಾಂಸ್ಕೃತಿಕ ಸಂಘಟನೆಯ ವಿಧ್ಯುಕ್ತ ಉದ್ಘಾಟನೆಯಾಗಿ ಅಲ್ಲಿಂದ ಇಲ್ಲಿಯವರೆಗೂ ಈ ಸಂಸ್ಥೆಯು ಹಲವಾರು ಖ್ಯಾತ ನಾಟಕ, ಯಕ್ಷಗಾನ, ನೃತ್ಯ, ಸಂಗೀತ ತಂಡಗಳನ್ನು ಕರೆಸಿ ಪ್ರದರ್ಶನಗಳನ್ನು ಆಯೋಜಿಸುತ್ತಾ ಬಂದಿದೆ. ಮೈಸೂರಿನ ರಂಗಾಯಣ, ಹೆಗ್ಗೂಡಿನ ನೀನಾಸಂ, ತುಮರಿಯ ಕಿನ್ನರ ಮೇಳ, ಬೆಂಗಳೂರಿನ ಹಿರಣ್ಣಯ್ಯ ಮಿತ್ರಮಂಡಳಿ, ಮೊದಲಾದ ನಾಟಕ ತಂಡಗಳನ್ನು ಶಂಬು ಹೆಗ್ಡೆ, ಚಿಟ್ಟಾಣಿ, ಗೋಡೆ, ಕೊಂಡದಕುಳಿ, ಭಾಸ್ಕರ ಜೋಶಿ, ಶಿರಳಗಿ ಮೊದಲಾದವರು ಯಕ್ಷಗಾನದ ತಂಡಗಳನ್ನು ತರಿಸಿ ಯಕ್ಷಗಾನ ಪ್ರದರ್ಶನ ಸಂಘಟಿಸಿ ರಂಗಕಲಾಸಕ್ತರನ್ನು ಹುಟ್ಟು ಹಾಕಿದ, ಈ ಸಂಘಟನೆಯ ಸದಸ್ಯರಾದ, ಶ್ರೀ ಟಿ. ಕೃಷ್ಣಮೂರ್ತಿ, ಎಸ್.ಜಿ. ಭಟ್, ಜಿನೇಂದ್ರ ಕೊಕ್ರಾಡಿ, ಶ್ರೀಮತಿ ಜಯಮಾಲಾ, ಶ್ರೀಮತಿ ಯಮುನಾಮೂರ್ತಿ, ಶ್ರೀ ಸವಿತಾ ಕೊಕ್ರಾಡಿ ಮೊದಲಾದವರು ಹಲವಾರು ನಾಟಕಗಳಲ್ಲಿ ಪಾತ್ರ ವಹಿಸಿರುತ್ತಾರೆ.

**ಕಾಲೇಜು ನಾಟಕ ರಂಗ :** ತಾಲ್ಲೂಕಿನ ಪ್ರಪ್ರಥಮ ಪ್ರಥಮ ದರ್ಜೆ ಕಾಲೇಜು ಆದ

ಶ್ರೀ. ಧ.ಮ.ಕಾಲೇಜು 1967ರಿಂದಲೂ ಹಲವಾರು ರಂಗ ಚಟುವಟಿಕೆಗಳನ್ನು ಆಯೋಜಿಸುತ್ತಾ ಬಂದಿದೆ. ಕಾಲೇಜಿನ ವಾರ್ಷಿಕೋತ್ಸವದ ಸಮಯದಲ್ಲಿ ಇಲ್ಲಿನ ವಿದ್ಯಾರ್ಥಿಗಳಾಗಿದ್ದ ಮಾಜಿ ಸಚಿವ ಗಂಗಾಧರ ಗೌಡ, ಈಗಿನ ಎಂ.ಎಲ್.ಎ. ವಸಂತ ಬಂಗೇರ, ಡಾ. ಕೆ. ಮಹಾಬಲ ಭಟ್, ಟಿ. ಕೃಷ್ಣಮೂರ್ತಿ, ಅರುಣಕುಮಾರ್ ಶೆಟ್ಟಿ, ವಸುಪಾಲಯ್ಯ ಮೊದಲಾದವರು ಸ್ಥಳೀಯ ಪ್ರಾಧ್ಯಾಪಕರಾಗಿದ್ದ ಪ್ರೊ, ವೆಂಕಪ್ಪ, ಪ್ರೊ, ಎಸ್.ಡಿ. ಶೆಟ್ಟಿ, ಪ್ರೋ. ಎನ್.ಜಿ. ಪಟವರ್ಧನ, ಅಧ್ಯಾಪಕರಾಗಿದ್ದ ಶ್ರೀ ದೇವಪ್ಪ ಗೌಡ, ನಾರಾಯಣ ಭಟ್ ಎಂ. ಮೊದಲಾದವರ ನಿರ್ದೇಶನದಲ್ಲಿ ಪಾತ್ರ ಮಾಡುತ್ತಿದ್ದರು.

1985ರ ನಂತರ ಕಾಲೇಜಿನ ನಾಟಕ ರಂಗಕ್ಕೆ ಹೊಸ ತಿರುವು ಬಂತು. 1986 ರಲ್ಲಿ ಸಾಗರದ ನೀನಾಸಂ ಪದವೀಧರ ಶ್ರೀ ಸಿ.ಟಿ.ಬ್ರಹ್ಮಾಚಾರ್ ಇವರ ನಿರ್ದೇಶನದಲ್ಲಿ ಎಮ್.ಎಸ್.ಕೆ ಪ್ರಭುರವರ 'ಬಕ' ಎಂಬ ನಾಟಕವನ್ನು ರಂಗ ತರಬೇತಿ ಶಿಬಿರದಲ್ಲಿ ಸಿದ್ಧಗೊಳಿಸಿ ಪ್ರದರ್ಶಿಸಲಾಯಿತು. ಜನಮೆಚ್ಚುಗೆ ಗಳಿಸಿದ ಈ ನಾಟಕದ ಮರು ಪ್ರದರ್ಶನವು ಧರ್ಮಸ್ಥಳದಲ್ಲೂ ನಡೆಯಿತು. ಕಾಲೇಜಿನ ಪ್ರಾಧ್ಯಾಪಕರಾದ ಟಿ. ಕೃಷ್ಣಮೂರ್ತಿ, ನಿರಂಜನ ವಾನಳ್ಳಿ, ನಾಗಭೂಷಣ, ಸಂಪತ್ ಕುಮಾರ್, ಶಂಕರನಾರಾಯಣ ಪ್ರಸಾದ ಮಾತ್ರವಲ್ಲದೆ, ಎಸ್.ಜಿ ಭಟ್, ಮಧುಕರ ಬೆಳಾಲು, ಲಕ್ಷ್ಮಣ ಗೌಡ ,ಮಮತಾ ಎಸ್, ಕೆ.ಜೆ.ಕೊಕ್ರಾಡಿ, ಶ್ರೀಮತಿ ಸಬಿತಾ ಹಾಗೂ ಹಲವಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದು ಬೆಳ್ತಂಗಡಿ ತಾಲ್ಲೂಕಿನ ಹಾಗೂ ಕಾಲೇಜಿನ ರಂಗ ಚಟುವಟಿಕೆಗಳಿಗೆ ಪುನಃಶ್ಚೇತನ ಕೊಟ್ಟಿತು ಎಂದರೂ ತಪ್ಪಾಗಲಾರದು.

ತದನಂತರ ಟಿ. ಕೃಷ್ಣಮೂರ್ತಿಯುವರು ವಿದ್ವಾನ್ ನಾರಾಯಣ ಆಚಾರ್ ಸಹಿತ ಕಿನ್ನರ ಮೇಳದ ಧರ್ಮೇಂದ್ರ, ಸುಳ್ಯದ ಜೀವನರಾಂ, ಬಾಸುಮ ಕೊಡಗು, ಮಹಾಬಲ ಕಲ್ಮಡ್ಕ, ಉಪ್ಪಿನಂಗಡಿಯ ಉದಯ ಕಶ್ಯಪ್, ಪುತ್ತೂರಿನ ಐ.ಕೆ ಬೊಳುವಾರ್, ಸಿ.ಟಿ. ಬ್ರಹ್ಮಚಾರ್ ಶಿವಮೊಗ್ಗದ ಕದರ ಮಂಡಲಗಿ, ಸಾಸ್ವೆ ಹಳ್ಳಿ ಸತೀಶ್, ವೈ.ಡಿ. ಬಾದಾಮಿ, ಗುರುರಾಜ ಮಾರ್ಪಳ್ಳಿ ಮೊದಲಾದವರನ್ನು ಕಾಲೇಜಿನ ಹಾಗೂ ಸಮೂಹದ ಸಹಕಾರದೊಂದಿಗೆ ಕರೆಸಿ ಮೃಚ್ಛಕಟಿಕ, ಸಂಭಾವಿತರು, ಇತಿಹಾಸ ಚಕ್ರ, ಚೋರಚರಣದಾಸ, ಸಾಯೋ ಆಟ, ಅಜ್ಜಿಕಥೆ, ನಕ್ಕಳಾ ರಾಜಕುಮಾರಿ, ಕುರುಡರು, ಮೃತ್ಯು, ಉದ್ಭವ, ಅಷ್ಟಾವಂಕ, ಸಾಹೇಬರು ಬರುತ್ತಾರೆ, ಪ್ರಾಣಿ ಪ್ರಪಂಚ, ಪಂಚತಂತ್ರ, ಢಾಣಾ ಡಂಗುರ, ಚೂಡಾಮಣಿ ಮೊದಲಾದ ರಂಗಪ್ರಯೋಗಗಳನ್ನು ಸಮೂಹ ಸದಸ್ಯರ, ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹಕಾರದಿಂದ ಮಾಡಿಸಿದ್ದರು.

ಇತ್ತೀಚಿನ ವರ್ಷಗಳಲ್ಲಿ ಕಾಲೇಜಿಗೆ ನೀನಾಸಂ ಪದವೀಧರ ಶೀನಾ ನಾಡೋಳಿ ಪ್ರಾಧ್ಯಾಪಕರಾಗಿ ಸೇರಿದ ಮೇಲೆ, ಪಂಜರ ಶಾಲೆ, ಲೋಕ ಶಾಕುಂತಲಾ ಎಂಬ ನಾಟಕಗಳು ವಿದ್ಯಾರ್ಥಿಗಳಿಂದ ಸಿದ್ಧಗೊಳಿಸಿದರು. 2008ರಂದು ಇನ್ನೊಬ್ಬ ನೀನಾಸಂ ಪದವೀಧರ ನವೀನ ಎಡಮಂಗಲ ಕಾಲೇಜಿಗೆ ರಂಗ ಶಿಕ್ಷಕರಾಗಿ ಸೇರಿ ಕಾಲೇಜಿನ ರಂಗ ಅಧ್ಯಯನ ಕೇಂದ್ರಕ್ಕೆ ಹೊಸ ರೂಪವನ್ನು ನೀಡಿ, ಸರ್ಟಿಫಿಕೇಟ್ ಕೋರ್ಸ್‌ನ್ನು

ಪ್ರಾರಂಭಿಸಿದ್ದರು. ಅವರ ನಿರ್ದೇಶನದಲ್ಲಿ 'ಮದುವೆ ಹೆಣ್ಣು' ಹಾಗೂ 'ಶಸ್ತ್ರವ್ಯೂಹಗಳು' ಎಂಬ ಎರಡು ನಾಟಕಗಳು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಾಟಕ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸಿವೆ. ಇದಲ್ಲದೆ ಅವರ 'ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಎಂಬ ಶೇಕ್ಸ್‌ಪಿಯರ್ ನಾಟಕ ಪ್ರದರ್ಶನವೂ ಅತ್ಯಂತ ಮನೋಜ್ಞವಾಗಿ ಮೂಡಿಬಂತು. ಈ ನಾಟಕದ ಪ್ರದರ್ಶನ ದಿನವೇ ರಸ್ತೆ ಅಪಘಾತದಲ್ಲಿ ಆದ ಅವರ ಅಪಮೃತ್ಯು ಕಾಲೇಜಿನ ರಂಗಮಂಚದ ಕಾಲನ್ನೇ ತುಂಡರಿಸಿದಂತಾಗಿದೆ. ಶ್ರೀ ನವೀನ ಎಡಮಂಗಲ ಸ್ವತಃ ನಟರಾಗಿದ್ದು, ವಿಶ್ವ ತುಳು ಸಮ್ಮೇಳನ ಸಮಯದಲ್ಲಿ ಗಾಂಧಿ ಹಾಗೂ ವಿವಿಧ ಪಾತ್ರಗಳನ್ನು ಮಾಡಿ ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಇಲ್ಲಿ ವಾಸ್ತವ್ಯವಿದ್ದ ಕೇವಲ ಒಂದು ವರ್ಷದ ಅವಧಿಯಲ್ಲಿ ದಿ. ನವೀನ ಎಡಮಂಗಲ ಶ್ರೀ ಸಿದ್ಧವನ ಗುರುಕುಲದಲ್ಲಿ 'ನರಸಯ್ಯನ ಶನಿಪಾತ್ರ, ರತ್ನ ಮಾನಸದಲ್ಲಿ ಸಿದ್ಧಗೊಳಿಸಿದ ರೂಪಕ ಪ್ರಾಥಮಿಕ ಶಾಲಾ ಮಕ್ಕಳಿಗೆ ನಿರ್ದೇಶಿಸಿದ 'ಹೊರೆಕಾಣಿಕೆ' ಕಾಲೇಜು ವಿದ್ಯಾರ್ಥಿಗಳಿಗೆ ನಿರ್ದೇಶಿಸಿದ 'ಊರುಕೇರಿ' ಮೊದಲಾದವುಗಳು ಅವರ ಹೆಸರಿನಲ್ಲಿ ಅಜರಾಮರಗೊಳಿಸಿವೆ.

ಪ್ರಸ್ತುತ ಕಾಲೇಜಿನ ರಂಗ ಅಧ್ಯಯನ ಕೇಂದ್ರದಲ್ಲಿ ನೀನಾಸಂ ಪದವೀಧರೆ ಶ್ರೀಮತಿ ಗೀತಾ ಮುಳ್ಯ ಹಾಗೂ ಬೆಂಗಳೂರಿನ ಆದರ್ಶ ಫಿಲಂಸ್‌ನ ಪದವೀಧರ ಭಗೀರಥ ರಂಗ ಚಟುವಟಿಕೆಗಳ ಜವಾಬ್ದಾರಿಯನ್ನು ವಹಿಸಿಕೊಂಡು ಮುನ್ನಡೆಸುತ್ತಾ ವಿದ್ಯಾರ್ಥಿಗಳಲ್ಲಿ ರಂಗ ಚಟುವಟಿಕೆಗಳ ಬಗ್ಗೆ ಆಸಕ್ತಿ ಮೂಡಿಸುತ್ತಿದ್ದಾರೆ.

ಪ್ರಸ್ತುತ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಒಂದು ವರ್ಷದ ನಾಟಕದ ಸರ್ಟಿಫಿಕೇಟ್ ಕೋರ್ಸು ನಡೆಯುತ್ತಿದೆ. ಇಲ್ಲಿನ ವಿದ್ಯಾರ್ಥಿಗಳು ಪ್ರತಿನಿತ್ಯ ಹಾಗೂ ರಜಾ ಅವಧಿಯಲ್ಲಿ ವಿಶೇಷವಾಗಿ ಅಧ್ಯಯನದಲ್ಲಿ ತೊಡಗುತ್ತಿದ್ದಾರೆ. ಕೋಲಾಟ, ಕಳರಿಪ್ಪಯಟ್, ಯಕ್ಷಗಾನ, ಹಾಡು, ಕುಣಿತದ ಜೊತೆಗೆ ನಾಟ್ಯಶಾಸ್ತ್ರದ ಅಭಿನಯ ಪದ್ಧತಿ, ಪಾಶ್ಚಿಮಾತ್ಯ ಶೈಲಿಯ ಅಭಿನಯ ಪದ್ಧತಿಗಳ ಬಗ್ಗೆ ತಾಲೀಮು ನಡೆಯುತ್ತಿದೆ.

ಪ್ರಸ್ತುತ ತಾಲ್ಲೂಕಿನ ಉಳಿದ ಶಾಲಾ ಕಾಲೇಜುಗಳಲ್ಲಿಯೂ ರಂಗಾಸಕ್ತಿ ಕುದುರಿದ್ದು, ಅವುಗಳೂ ನಿಧಾನವಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿವೆ. ಪ್ರತೀ ವರ್ಷದ ವಾರ್ಷಿಕೋತ್ಸವದ ಸಂದರ್ಭ ಹಲವಾರು ಕನ್ನಡ ನಾಟಕಗಳು ಇವರಿಂದ ಪ್ರದರ್ಶಿಸಲ್ಪಡುತ್ತಿವೆ.

## ಯುವಕ – ಯುವತಿ ಮಂಡಲಗಳು ಹಾಗೂ ರಂಗಭೂಮಿ

ತಾಲ್ಲೂಕಿನ ಹಲವಾರು ಯುವತಿ – ಯುವಕ ಮಂಡಲಗಳು ಕನ್ನಡ ರಂಗಭೂಮಿಗೆ ತಮ್ಮದೇ ಆದ ಸೇವೆಯನ್ನು ಹಿಂದಿನಿಂದಲೂ ಸಲ್ಲಿಸುತ್ತಾ ಬಂದಿದೆ. ತಾಲ್ಲೂಕು ಜಿಲ್ಲಾ ಮಟ್ಟದ ಯುವಜನ ಮೇಳಗಳಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸಿ ಬಹುಮಾನ ಗಿಟ್ಟಿಸಿಕೊಂಡಿವೆ. ಅಂತೆಯೇ ಪ್ರತಿವರ್ಷ ತಮ್ಮ ಸಂಘದ ವಾರ್ಷಿಕೋತ್ಸವದ ಸಂದರ್ಭ ಹಲವಾರು ಐತಿಹಾಸಿಕ, ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ

ಜನಮೆಚ್ಚುಗೆ ಗಳಿಸಿವೆ. ಉತ್ಸಾಹಿ ಯುವಕ ಮಂಡಲ, ಲ್ಯಾಲ,' ಉಮಾಮಹೇಶ್ವರ ಯುವಕ ಮಂಡಲ, 'ಬಳಂಜ', 'ಯಂಗ್ ಚಾಲೆಂಜರ್ಸ್ ಮುಂಡಾಜೆ', ಕಾಮನ್ ವೆಲ್ತ್ ಪ್ರಶಸ್ತಿ ವಿಜೇತ 'ಕನ್ಯಾಕುಮಾರಿ ಯುವತಿ ಮಂಡಲ, ಧರ್ಮಸ್ಥಳ ಮೊದಲಾದವು ಕನ್ನಡ ರಂಗಭೂಮಿಗೆ ವಿಶಿಷ್ಟ ಕೊಡುಗೆಯನ್ನು ನೀಡಿವೆ.

ಬೆಳ್ತಂಗಡಿಯ ಜ್ಯೂನಿಯರ್ ಛೇಂಬರ್ ಹಲವಾರು ವರ್ಷಗಳ ಕಾಲ ಜೇಸೀ ಸಪ್ತಾಹದ ಸಂದರ್ಭ ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆ ಏರ್ಪಡಿಸುತ್ತಿತ್ತು. ಇದರಲ್ಲಿ ಹಲವಾರು ಯುವ ಸಂಘಟನೆ, ಶಾಲಾ ಕಾಲೇಜು ನಾಟಕ ಸಂಘಟನೆಗಳು ಭಾಗಿಯಾಗುತ್ತಿದ್ದವು.

### ನಾಟಕಗಳ ರಚನೆ, ಪ್ರಕಟಣೆ

ತಾಲ್ಲೂಕಿನಾದ್ಯಂತ ಅಂದು – ಇಂದು ಹಲವಾರು ನಾಟಕ ರಚನಾಕಾರರಿದ್ದಾರೆ. ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಶ್ರೀ ಶಿವರಾಮ ಶಿಶಿಲ, ಕೆ.ಟಿ.ಗಟ್ಟಿ, ಶ್ರೀ ನಾ. ವುಜಿರೆ(ನಾಗರಾಜ ಪೂವಣಿ ಉಜಿರೆ), ಶ್ರೀ ಕೆ.ಜಿ.ಕೊಕ್ರಾಡಿ(ಜಿನೇಂದ್ರ ಕೊಕ್ರಾಡಿ), ಶ್ರೀ ದೇವಪ್ಪ ಮಾಸ್ಟರ್(ನಿವೃತ್ತ ಶಿಕ್ಷಕರು) ಹಾಗೂ ಶ್ರೀ. ಟಿ.ಕೃಷ್ಣಮೂರ್ತಿ(ಪ್ರಾಧ್ಯಾಪಕ) ಹಲವು ನಾಟಕಗಳನ್ನು ರಚಿಸಿ ಅವುಗಳನ್ನು ಪ್ರದರ್ಶಿಸಿದ್ದಾರೆ.

### ರಂಗಪರಿಕರ – ಪ್ರಸಾಧನ ಬೆಳಕು

ತಾಲ್ಲೂಕಿನಲ್ಲಿ ಹಲವು ವರ್ಷಗಳ ಹಿಂದೆ ರಂಗಪರಿಕರ ಒದಗಿಸುವ, ಪ್ರಸಾಧನ ಹಾಗೂ ಬೆಳಕು ವ್ಯವಸ್ಥೆ ಮಾಡುವ ಸಂಸ್ಥೆಗಳಿರಲಿಲ್ಲ. ಉಡುಪಿಯಿಂದ ಶ್ರೀ ಬುಡಾನ್ ಸಾಹೇಬರು ರಂಗಪರಿಕರಗಳ ಸಹಿತ ಬಂದು ಮೇಕಪ್ ಮಾಡುತ್ತಿದ್ದರು.

ತದನಂತರ 1968ರಲ್ಲಿ ಬೆಳ್ತಂಗಡಿಯಲ್ಲಿ 'ಶೆಟ್ಟಿ ಆರ್ಟ್ಸ್' ಎಂಬ ಸಂಸ್ಥೆ ಹುಟ್ಟಿಕೊಂಡು ತಾಲ್ಲೂಕಿನಾದ್ಯಂತ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಿಗೆ ಬೇಕಾದ ಸಂಪೂರ್ಣ ವ್ಯವಸ್ಥೆಯನ್ನು ಮಾಡಿಕೊಟ್ಟಿತು. ಶ್ರೀ ಮುಂಡಪ್ಪ ಶೆಟ್ಟಿಯವರಿಂದ ಪ್ರಾರಂಭವಾದ ಈ ಸಂಸ್ಥೆ ಇಂದು ಅವರ ಮಗ ಬಿ.ಗಿರಿಧರ ಶೆಟ್ಟಿಯವರಿಂದ ನಡೆಸಲ್ಪಡುತ್ತಿದೆ. ಶೆಟ್ಟಿ ಆರ್ಟ್ಸ್ ನಾಟಕಗಳಿಗೆ ಬೇಕಾದ ಪರದೆ, ಮೇಕಪ್, ಡ್ರೆಸ್ ಹೊಂದಿದ್ದಲ್ಲದೆ ಗೊಂಬೆ ಪ್ರದರ್ಶನವನ್ನೂ ಮಾಡುತ್ತಿದ್ದು, ಈಗ ಅಂತರ್‌ರಾಜ್ಯಮಟ್ಟದಲ್ಲಿ ಕೀಲುಕುದುರೆ, ಗಜಗಾತ್ರದ ಯಕ್ಷಗಾನ ಶೈಲಿಯ ಗೊಂಬೆಗಳು, ಕರಗ ನೃತ್ಯ, ಹಂಸ ನೃತ್ಯ, ನವಿಲು ನೃತ್ಯ, ಹಾಲಕ್ಕಿ ಕುಣಿತ, ವಿಕಟಗೊಂಬೆಗಳು ಪ್ರದರ್ಶನಕ್ಕಾಗಿ ಹೋಗುತ್ತಿವೆ. ಕೇರಳ , ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲೂ ಶೆಟ್ಟಿ ಆರ್ಟ್ಸ್‌ನವರ ಗೊಂಬೆ ಪ್ರದರ್ಶನ, ಕುಣಿತ ಹೆಸರು ಪಡೆದಿದೆ.

ಶ್ರೀ ಗಿರಿಧರ ರಂಗಪರಿಕರಗಳನ್ನೂ ಪೂರೈಸುತ್ತಿರುವುದು ಮಾತ್ರವಲ್ಲದೆ ರಂಗಕಲಾವಿದರು ಕೂಡ. ಅವರು 'ಡಾ. ಪ್ರಕಾಶ್', 'ಭಾಗ್ಯಲಕ್ಷ್ಮೀ' ಎಂಬಿತ್ಯಾದಿ ಕನ್ನಡ

ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ.

'ಹೊಳ್ಳ ಆರ್ಟ್ಸ್ ಉಜಿರೆ' ಎಂಬ ಮತ್ತೊಂದು ಸಂಸ್ಥೆ 2004 ರಿಂದ ಶ್ರೀ ಗಿರೀಶ ಹೊಳ್ಳರ ಮುಂದಾಳತ್ವದಲ್ಲಿ ಹುಟ್ಟಿಕೊಂಡಿದೆ. ಈ ಸಂಸ್ಥೆಯಿಂದ ಪ್ರಸ್ತುತ ನಾಟಕ, ಯಕ್ಷಗಾನ, ರೂಪಕ ಇತ್ಯಾದಿಗಳು. ಮೇಕಪ್, ವೇಷಭೂಷಣ, ರಂಗಪರಿಕರ, ಪರದೆ ಇತ್ಯಾದಿಗಳಲ್ಲದೆ ವಿಶೇಷ ಸಮಾರಂಭಗಳಿಗೆ, ಮೆರವಣಿಗೆಗಳಿಗೆ ಬೇಕಾಗುವ ಕೀಲುಕುದುರೆ, ಕರಗ ನೃತ್ಯಗಳು, ಬೇತಾಳ ಗೊಂಬೆಗಳು, ಕುಳ್ಳ ಗೊಂಬೆಗಳು, ಬಣ್ಣಬಣ್ಣದ ಕೊಡೆಗಳು, ಯಕ್ಷಗಾನದ ಗೊಂಬೆಗಳು ಇತ್ಯಾದಿಗಳು ರಂಗಾಸಕ್ತರಿಗೆ ಲಭ್ಯವಾಗುತ್ತಿದೆ.

ಈ ವರ್ಷ ರಂಗಾಸಕ್ತರ ಬೇಡಿಕೆ ಹೆಚ್ಚಾದ್ದರಿಂದ ಉಜಿರೆಯಲ್ಲಿ 'ಶ್ರೀ ಮಾತಾ ಆರ್ಟ್ಸ್' ಎಂಬ ಮತ್ತೊಂದು ರಂಗಪರಿಕರಗಳ್ನು ಒದಗಿಸುವ ಸಂಸ್ಥೆ ಉಜಿರೆಯಲ್ಲಿ ಶ್ರೀ ಗುರು ಪ್ರಸಾದ್‌ರ ನೇತೃತ್ವದಲ್ಲಿ ಹುಟ್ಟಿಕೊಂಡಿದೆ. ಇದರಿಂದಲೂ ರಂಗಚಟುವಟಿಕೆಗಳಿಗೆ ಬೇಕಾದ ವೇಷಭೂಷಣವಲ್ಲದೆ ಯಕ್ಷಗಾನ, ಭರತನಾಟ್ಯ, ಜನಪದ ನೃತ್ಯ, ಛದ್ಮವೇಷ, ಟ್ಯಾಬ್ಲೋಗಳಿಗೆ ಬೇಕಾಗುವ ರಂಗ ಪರಿಕರಗಳು ಲಭ್ಯವಿದೆ. ಕಲಾಪ್ರದರ್ಶನಗಳಿಗಾಗಿ ಬೇಕಾಗುವ ಕೊಡೆ, ಬೊಂಬೆಗಳಲ್ಲದೆ, ಯಕ್ಷಗಾನ ಶೈಲಿಯ ಸ್ಮರಣಿಕೆಗಳನ್ನು ಸಿದ್ಧಗೊಳಿಸಿಕೊಡುತ್ತಿದ್ದಾರೆ ಕಲಾರಾಧಕ ಗುರುಪ್ರಸಾದ್.

### ಬೆಳಕು ಹಾಗೂ ಧ್ವನಿ

ಮೊದಲಿಗೆ ಬೆಳಕು ಮತ್ತು ಧ್ವನಿವರ್ಧಕಕ್ಕೆ ವಿಶೇಷ ವ್ಯವಸ್ಥೆಗಳು ಬೆಳ್ತಂಗಡಿ ತಾಲ್ಲೂಕಿನಲ್ಲಿರಲಿಲ್ಲ. ಇಲ್ಲಿಗೆ ಉಡುಪಿ – ಮಂಗಳೂರಿನಿಂದ ಬಾಡಿಗೆ ತರಿಸಿಕೊಳ್ಳಬೇಕಾಗಿತ್ತು. ಆದರೆ ಈಗ ಸಂಜೀವಿನಿ ಲೈಟ್ಸ್ ಮತ್ತು ಸೌಂಡ್ಸ್, ಧರ್ಮಶಾಸ್ತ್ರ, ಅಕ್ಷಯ ಸೌಂಡ್ಸ್, ಆಶಾ ಸೌಂಡ್ಸ್, ಪಪ್ಪು ಸೌಂಡ್ಸ್ ಇವೇ ಮೊದಲಾದ ಹಲವಾರು ಸಂಸ್ಥೆಗಳು ಪಾರ್ ಲೈಟು, ಡಿಮ್ಮರ್, ಅತ್ಯುತ್ತಮ ಮೈಕ್‌ಗಳನ್ನು ಹೊಂದಿದೆ. ಸ್ಪಾಟ್‌ಲೈಟುಗಳ ಕೊರತೆ ಮಾತ್ರ ಇನ್ನೂ ತಾಲ್ಲೂಕಿನಲ್ಲಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲೂ ಸಾಕಷ್ಟು ಧ್ವನಿ ಮತ್ತು ಬೆಳಕನ್ನು ಒದಗಿಸುವ ವ್ಯವಸ್ಥೆ ಇದೆ.

**ರಂಗಪೋಷಕರು :** ಡಾ.ಡಿ.ವೀರೇಂದ್ರ ಹೆಗ್ಗಡೆಯವರು, ಶ್ರೀಮತಿ ಹೇಮಾವತಿ ಹೆಗ್ಗಡೆ, ಹರ್ಷೇಂದ್ರ ಕುಮಾರ್, ರಮಾನಂದ ಸಾಲಿಯಾನ್, ವಿಜಯರಾಘವ, ಪಡ್ವೆಟ್ನಾಯ, ದಿ। ಜಿ.ಎನ್.ಭಿಡೆ, ದಿ। ಆರ್.ಎನ್.ಭಿಡೆ, ದಿ। ಪದ್ಮರಾಜ ಶೆಟ್ಟಿ, ಲೋಕೇಶ್ ಶೆಟ್ಟಿ, ದೇವೀಪ್ರಸಾದ್ ಮೊದಲಾದವರು ಬೆಳ್ತಂಗಡಿ ತಾಲ್ಲೂಕಿನ ರಂಗ ಚಟುವಟಿಕೆಗೆ ಸದಾ ಪ್ರೋತ್ಸಾಹ ನೀಡಿರುತ್ತಾರೆ.

**ರಂಗ ಮಂದಿರಗಳು :** ಉಜಿರೆಯಲ್ಲಿರುವ ಎಸ್.ಡಿ.ಎಂ. ಪ್ರೌಢಶಾಲೆ ರಂಗಮಂದಿರ ನಾಟಕ ಪ್ರದರ್ಶನಗಳಿಗೆ ಸೂಕ್ತ ವ್ಯವಸ್ಥೆಯನ್ನು ಹೊಂದಿದ್ದು ಇಲ್ಲಿ ನಾಟಕ ಪ್ರದರ್ಶನಗಳು ಆಗಾಗ ನಡೆಯುತ್ತಿರುತ್ತವೆ. ಉಳಿದಂತೆ ವಸಂತಮಹಲ್ ಹಾಗೂ ತಾಲ್ಲೂಕಿನ ಇತರ ಕಡೆಗಳಲ್ಲಿ ಕನ್ನಡ ಹಾಗೂ ತುಳು ನಾಟಕ ಪ್ರದರ್ಶನಗಳು ನಡೆಯುತ್ತಿರುತ್ತವೆ. ನಾಟಕ

ಪ್ರದರ್ಶನಕ್ಕಾಗಿಯೇ ಮೀಸಲಾದ ಸುಸಜ್ಜಿತ ರಂಗಮಂದಿರ ಈ ತಾಲ್ಲೂಕಿನಲ್ಲಿ ಇಲ್ಲ.

**ಪ್ರೊ. ಟಿ.ಕೃಷ್ಣಮೂರ್ತಿ**
ಪ್ರಾಧ್ಯಾಪಕರು
ಶ್ರೀ ಧ. ಮ. ಕಾಲೇಜು,
ಉಜಿರೆ ದ.ಕ

## ನಮ್ಮ ಕಲಾವಿದರು

### ದೇವಪ್ಪ ಗೌಡ

ನಿವೃತ್ತ ಅಧ್ಯಾಪಕರು,
ಉಜಿರೆ, ಬೆಳ್ತಂಗಡಿ ದ.ಕ

| | | |
|---|---|---|
| ನಟನೆ | : | ಭಕ್ತ ಮಾರ್ಕಂಡೇಯ, ಋಣಾನುಬಂಧ, ಸೂರ್ಯಕಾಂತ, ಉರುಳುಸುತ್ತು. |
| ರಚನೆ | : | 40 ಕ್ಕೂ ಮಿಕ್ಕಿ ನಾಟಕಗಳ ರಚನೆ. |
| ಸಂಘಟನ | : | ಶಾಲಾ ಮಕ್ಕಳ ತಂಡ, ಅಧ್ಯಾಪಕರ ರಂಗ ತಂಡಗಳನ್ನು ಕಟ್ಟಿ ಬೆಳೆಸಿ, ಹಲವಾರು ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಹಾಗೂ ಸಂಸ್ಥೆಗಳಿಗೆ ನಾಟಕ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ. |
| ಇತರೆ | : | ಹಲವಾರು ನಾಟಕಗಳಿಗೆ ಪ್ರಸಾಧನ ಹಾಗೂ ರಂಗಪರಿಕರಗಳನ್ನು ತಯಾರಿಸಿ ಒದಗಿಸಿದ್ದಾರೆ. ಹಾಗೂ ಅವುಗಳ ತಯಾರಿಯ ಬಗ್ಗೆ ಮಾರ್ಗದರ್ಶನ. ಹಿರಿಯ ರಂಗ ಕಲಾವಿದರಾದ ಮೋಹನ್ ಶೆಣೈ, ಮುರುಡಿತ್ತಾಯ, ಚಂದ್ರಕಾಂತ ಕಾಮತ್, ರಘುನಂದನ ಶೆಣೈ, ಮುತ್ತಪ್ಪ ಶೆಟ್ಟಿ ಕುಂಟಿನಿ ಮುಂತಾದವರೊಡನೆ ಒಡನಾಟ. ಪ್ರಸ್ತುತ ಉಜಿರೆಯ ವಿದ್ಯಾನಗರದಲ್ಲಿ ವಿಶ್ರಾಂತ ಜೀವನ. |

### ಎಂ. ನಾರಾಯಣ ಭಟ್

ಮಾಳಿಗೆ ಮನೆ, ಬೆಳ್ತಂಗಡಿ ದ.ಕ

| | | |
|---|---|---|
| ನಟನೆ | : | ತಮ್ಮ ವೃತ್ತಿ ಜೀವನದಲ್ಲಿ ಹಲವಾರು ನಾಟಕ ತಂಡಗಳಲ್ಲಿ, ವಿವಿಧ ನಾಟಕಗಳಲ್ಲಿ ಪಾತ್ರ ನಿರ್ವಹಣೆ, 'ಭಕ್ತ ಪ್ರಹ್ಲಾದ' ನಾಟಕದ ಕಯಾದು ಪಾತ್ರ ಸರ್ವಶ್ರೇಷ್ಠ ನಿರ್ವಹಣೆ. |

| | | |
|---|---|---|
| ನಿರ್ದೇಶನ | : | ಅಧ್ಯಾಪಕರಾಗಿದ್ದಾಗ ಶಾಲೆಯ ಮಕ್ಕಳ ತಂಡಗಳಿಗೆ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳ ನಿರ್ದೇಶನ. ಪ್ರೌಢಶಾಲೆ ಹಾಗೂ ಕಾಲೇಜು ತಂಡಗಳಿಗೆ 'ಬಕ', ಯಯಾತಿ ಮುಂತಾದ ನಾಟಕಗಳ ನಿರ್ದೇಶನ. |
| ತರಬೇತಿ | : | ಅಧ್ಯಾಪನಾ ಅವಧಿಯಲ್ಲಿ ಬೆಂಗಳೂರಿನಲ್ಲಿ ರಂಗಕಲೆ ಬಗ್ಗೆ ವಿಶೇಷ ತರಬೇತಿ ಮತ್ತು ಅಧ್ಯಯನ. ಪ್ರಸ್ತುತ ವಿಶ್ರಾಂತ ಜೀವನ. |

**ಕೆ. ಜಿನೇಂದ್ರ ಹೆಗ್ಡೆ (ಕೆ.ಜೆ.ಕೊಕ್ರಾಡಿ)** ______________________

ದೈಹಿಕ ಶಿಕ್ಷಣ ಶಿಕ್ಷಕರು, ಶ್ರೀ. ಧ.ಮ.ಪ್ರೌಢಶಾಲೆ
ಉಜಿರೆ ಬೆಳ್ತಂಗಡಿ ದ.ಕ

| | | |
|---|---|---|
| ನಟನೆ | : | ತಾನು ರಚಿಸಿ ನಿರ್ದೇಶಿಸಿದ ಎಲ್ಲಾ ನಾಟಕಗಳಲ್ಲಿ ಪ್ರಮುಖ ಪಾತ್ರಧಾರಿಯಾಗಿ ಅಭಿನಯ. |
| ರಚನೆ | : | ತ್ಯಾಗ ವೀರ, ಶ್ರೀಕೃಷ್ಣ ದೇವರಾಯ, ಜ್ಞಾನ ಜ್ಯೋತಿ, ಧರ್ಮದೀಕ್ಷೆ, ಪುಣ್ಯಭೂಮಿ, ಚಾಲುಕ್ಯ ರತ್ನ, ನಾಟ್ಯರಾಣಿ, ರಾಕ್ಷಸರು ಇತ್ಯಾದಿ. ಇದಲ್ಲದೆ ಸುಮಾರು 12 ಕ್ಕೂ ಹೆಚ್ಚು ತುಳು ನಾಟಕಗಳ ರಚನೆ. |
| ಪ್ರಶಸ್ತಿ, ಬಹುಮಾನ | : | ರಾಕ್ಷಸರು ನಾಟಕಕ್ಕೆ ರಾಜ್ಯಮಟ್ಟದಲ್ಲಿ ಬಹುಮಾನ, ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ ನಟನೆಗೆ ಪ್ರಶಸ್ತಿ, ಬಹುತೇಕ ತುಳು ನಾಟಕಗಳ ಪ್ರದರ್ಶನಕ್ಕೆ ಜಿಲ್ಲಾ ಮಟ್ಟದಲ್ಲಿ ಹಲವಾರು ಪ್ರಶಸ್ತಿ ಬಹುಮಾನಗಳು ಲಭಿಸಿವೆ. ಇದಲ್ಲದೆ ಇವರ ಅನೇಕ ಕಿರುಕಥೆಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. |

**ಪ್ರೊ॥ ನಾ. ವುಜಿರೆ** ______________________

ವಿದ್ಯಾನಗರ, ಉಜಿರೆ
ಬೆಳ್ತಂಗಡಿ ದ.ಕ

| | | |
|---|---|---|
| ನಟನೆ | : | ಅನೇಕ ಸಂಸ್ಕೃತ, ಹಿಂದಿ, ಕನ್ನಡ ಹಾಗೂ ತುಳು ನಾಟಕಗಳಲ್ಲಿ ಅಭಿನಯ. |
| ನಿರ್ದೇಶನ | : | ವಿದ್ಯಾರ್ಥಿಗಳಿಗಾಗಿ ಹಿಂದಿ ನಾಟಕಗಳ ನಿರ್ದೇಶನ. |
| ರಚನೆ | : | ಎಚ್ಚೆತ್ತೆನು, ಕಹಳೆಯ ಲಿಲಾವು. |

ಹಿಂದಿಯ ಅನುವಾದಿತ ನಾಟಕಗಳು : ಬಿಡುಗಡೆ, ಭಗವಾನ್ ಮಹಾವೀರ, ಸಿರಾಜುದ್ದೌಲಾ, ನರಕದ ನಾಯಿ, ಮುಕ್ತಿ ಕಥಾ ಪ್ರಸಂಗ.
ಇವರು ಉಜಿರೆಯ ಶ್ರೀ ಧ.ಮ.ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಇದೀಗ ವಿಶ್ರಾಂತ ಜೀವನ.

**ರತ್ನಾಕರ್ ಆಚಾರ್ಯ**

ಧರ್ಮಸ್ಥಳ
ಬೆಳ್ತಂಗಡಿ ದ.ಕ

ಇವರು ಶ್ರೀ ಕ್ಷೇತ್ರ ಧರ್ಮಸ್ಥಳದ ನಿವೃತ್ತ ಪಾರುಪತ್ಯಗಾರರು. ಇವರು ಹಲವಾರು ನಾಟಕಗಳಿಗೆ ನಿರ್ದೇಶನ ಹಾಗೂ ಸಂಗೀತವನ್ನು ನೀಡಿರುತ್ತಾರೆ.

ನಟನೆ : ಲಂಕಾ ದಹನ, ಕೃಷ್ಣಲೀಲೆ ಮತ್ತಿತರರ ಪೌರಾಣಿಕ ನಾಟಕಗಳು.

**ಜಯರಾಮ್ ಕೆ.**

ಕಲಾಕುಂಚ ಆರ್ಟ್ಸ್
ಮುಂಡಾಜೆ, ಬೆಳ್ತಂಗಡಿ ದ.ಕ

ರಚನೆ : ಸ್ವಾತಂತ್ರ್ಯ, ವಧು ಮತ್ತು ಕೆಸರಿನ ಕಮಲ, ಸಮಾಜ ಮುಂತಾದ ಕನ್ನಡ ನಾಟಕಗಳು. ಅನೇಕ ತುಳುನಾಟಕಗಳ ರಚನೆ ಹಾಗೂ ನಿರ್ದೇಶನ.

ಸಂಸ್ಥೆ : ಇವರು ತಮ್ಮ 'ಕಲಾಕುಂಚ ನಾಟಕ ತಂಡ' ಈ ತಂಡದ ಮೂಲಕ ನಟನೆ, ಪ್ರಸಾಧನ, ನಿರ್ದೇಶನ ಮತ್ತು ರಂಗ ತರಬೇತಿಯನ್ನು ನೀಡುತ್ತಿದ್ದಾರೆ. ಅನೇಕ ಶಾಲಾ ಕಾಲೇಜು ಮತ್ತು ರಂಗತಂಡಗಳಿಗೆ ತರಬೇತಿ ಮತ್ತು ನಿರ್ದೇಶನವನ್ನು ನೀಡಿದ್ದಾರೆ. ಇವರ ಕಲಾತಂಡದಲ್ಲಿ 35ಕ್ಕೂ ಹೆಚ್ಚು ಸದಸ್ಯರಿದ್ದು, ಜಿಲ್ಲೆಯಾದ್ಯಂತ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಪ್ರಶಸ್ತಿ, ಬಹುಮಾನ : ಏಕ ಪಾತ್ರಾಭಿನಯದಲ್ಲಿ ರಾಜ್ಯಪ್ರಶಸ್ತಿ, ತಾಲ್ಲೂಕಿನ ಅತ್ಯುತ್ತಮ ಯುವಕ ಕಲಾವಿದ ಪ್ರಶಸ್ತಿ ಪಡೆದ ಇವರಿಗೆ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ, ಲಾವಣಿ ಹಾಡುಗಾರಿಕೆಯಲ್ಲಿ ಸಹಾ ಜಿಲ್ಲಾ ಮಟ್ಟದ ಪ್ರಶಸ್ತಿ.

ಪರಿಣತಿ : ಸ್ತ್ರೀ ಹಾಗೂ ಹಾಸ್ಯ ಪಾತ್ರಗಳಲ್ಲಿ ಇವರದು ವಿಶೇಷ ಸಾಧನೆ.

**ಮಧುಕರ್ ರಾವ್, ಕಕ್ಕಿಂಜೆ**

ಚಾರ್ಮಾಡಿ, ಬೆಳ್ತಂಗಡಿ ದ.ಕ

ಪ್ರಸ್ತುತ ಸಹಕಾರಿ ಸಂಸ್ಥೆಯೊಂದರಲ್ಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಇವರು ಹಲವು ನಾಟಕಗಳನ್ನು ರಚಿಸಿ, ನಿರ್ದೇಶಿಸಿ ಸ್ವತಃ ಅಭಿನಯಿಸಿದ್ದಾರೆ. ಪಂಚಶ್ರೀ ನಾಟಕ ತಂಡವನ್ನು ನಡೆಸುತ್ತಿರುವ ಇವರು ಆ ಮೂಲಕ ಪ್ರತೀ ವರ್ಷ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ. ರಂಗಪರಿಕರ ಮತ್ತು ಪ್ರಸಾಧನದಲ್ಲಿಯೂ ಪರಿಣತಿ ಹೊಂದಿದ್ದಾರೆ.

**ಟಿ.ಕೃಷ್ಣಮೂರ್ತಿ**

ಪ್ರಾಧ್ಯಾಪಕರು,
ಶ್ರೀ ಧ.ಮ.ಕಾಲೇಜು ಉಜಿರೆ, ಬೆಳ್ತಂಗಡಿ, ದ.ಕ

| | | |
|---|---|---|
| ನಟನೆ | : | ಬಕ, ಸಾಯೋ ಆಟ, ಪಂಚಭೂತ, ಹುಡುಕಾಟ, ಸಂಭಾವಿತರು, ಚೋರಚರಣದಾಸ, ಅಷ್ಟಾವಂಕ, ಚೂಡಾಮಣಿ, ಸಾಹೇಬರು ಬರುತ್ತಾರೆ. |
| ರಚನೆ | : | ಕಸಪುರಾಣ, ಪರಿವರ್ತನೆ, ಯಮನ ಸೋಲು ಕಿರುನಾಟಕಗಳು. |
| ಸಂಸ್ಥೆ | : | 'ಸಮೂಹ' ಉಜಿರೆ ಎಂಬ ಸಂಘಟನೆಯನ್ನು ಸ್ಥಾಪಿಸಿ 500 ಕ್ಕೂ ಹೆಚ್ಚು ಸದಸ್ಯರ ಮೂಲಕ ರಂಗಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಪ್ರಸ್ತುತ ಈ ಸಂಸ್ಥೆಯ ಕಾರ್ಯದರ್ಶಿಯಾಗಿದ್ದು ಪ್ರತಿ ವರ್ಷ ಹಲವಾರು ತಂಡಗಳನ್ನು ಕರೆಸಿ ನಾಟಕ, ಯಕ್ಷಗಾನ, ಭರತನಾಟ್ಯ ಇತ್ಯಾದಿ ಕಾರ್ಯಕ್ರಮಗಳ ನಿರ್ವಹಣೆ. |
| ಇತರೆ | : | ಯಕ್ಷಗಾನ ಕಲಾವಿದ, ಏಕಪಾತ್ರಾಭಿನಯ ಪಟು. |

**ಶಿವರಾಮ ಶಿಶಿಲ**

ರಾಜ್ಯಪ್ರಶಸ್ತಿ ವಿಜೇತ ಶಿಕ್ಷಕರು,
ಬೆಳ್ತಂಗಡಿ ದ.ಕ

| | | |
|---|---|---|
| ರಚನೆ/ನಿರ್ದೇಶನ | : | ಕೋಟಿ ಚೆನ್ನಯ್ಯ, ಭಕ್ತಕುಚೇಲ, ಇಲಿಮನೆ ಭೂತ, ಹಿಮಾನಿ, ಪುರಂದರದಾಸ, ಅಲಿಬಾಬ, ಶ್ರೀ ಕೃಷ್ಣದೇವರಾಯ. ಸಂಗೊಳ್ಳಿ ರಾಯಣ್ಣ ಮತ್ತು ಇತರ ನಾಟಕಗಳು, ಶ್ರೀ ರಾಮಭಕ್ತೆ ಶಬರಿ, ಶಿವಯೋಗಿ ಸಿದ್ಧರಾಮ, ಕ್ರಾಂತಿಪುರುಷ |

ಬಸವಣ್ಣ, ಮರ್ಮಭೇದಿ, ಪ್ರತೀಕಾರ, ವರಾನ್ವೇಷಣೆ, ಉಪವಾಸ ವ್ರತ ಮುಂತಾದ ಕಿರುನಾಟಕಗಳು. ತಾನು ನಿರ್ದೇಶಿಸಿದ ನಾಟಕಗಳಲ್ಲಿ ಸ್ವತಃ ಅಭಿನಯಿಸಿ ರುತ್ತಾರೆ. ಶಾಲಾ ಮಕ್ಕಳಿಗೆ ಮತ್ತು ಸಂಘಟನೆಗಳಿಗೆ ಅನೇಕ ನಾಟಕಗಳ ನಿರ್ದೇಶನ.

**ಗಿರೀಶ್ ಹೊಳ್ಳ**
ಹೊಳ್ಳ ಆರ್ಟ್ಸ್
ಬೆಳ್ತಂಗಡಿ ದ.ಕ

ಇವರು ಹೊಳ್ಳ ಆರ್ಟ್ಸ್ ಸಂಸ್ಥೆಯ ಮೂಲಕ ರಂಗಪರಿಕರಗಳನ್ನು ಒದಗಿಸುತ್ತಾರೆ. ಜತೆಗೆ ಅನೇಕ ನಾಟಕಗಳಲ್ಲಿ ನಟನೆ.

**ಭಗೀರಥ ನಾಯಕ್ ಕುಮುಟಾ**

ವಿಳಾಸ : ಎಸ್.ಡಿ.ಎಮ್. ಕಾಲೇಜು, ರಂಗ ತರಬೇತಿ ಕೇಂದ್ರ ಸಂಗೀತ ನಿರ್ದೇಶಕರು ಉಜಿರೆ, ಬೆಳ್ತಂಗಡಿ ತಾಲ್ಲೂಕು.

ಶಿಕ್ಷಣ : ನೀನಾಸಂ ಪದವೀಧರ (ಡಿಪ್ಲೋಮಾ ಇನ್ ಫಿಲಂ ಆಟೋಗ್ರಾಫಿ).

ನಟನೆ : ನೀನಾಸಂ ತಿರುಗಾಟದ ನಾಟಕಗಳಲ್ಲಿ ಅಭಿನಯ, ಸಾಣೇಹಳ್ಳಿ ಶಿವಸಂಚಾರದಲ್ಲಿ ನಟಗಾಯಕ, ಮರಣವೇ ಮಹಾನವಮಿ, ನಂದ ಭೂಪತಿ, ಮಂತ್ರಶಕ್ತಿ, ನಿಸರ್ಗವತಿ, ಚೋರಚರಣದಾಸ, ಮನ್ಮಥ ವಿಜಯ ಇನ್ನೂ ಹಲವಾರು ನಾಟಕಗಳಲ್ಲಿ ಅಭಿನಯ.

ಪ್ರಶಸ್ತಿ : ವೀರಭದ್ರ ನಾಟಕದ ಅಭಿನಯಕ್ಕೆ ರಾಜ್ಯಮಟ್ಟದ ಪ್ರಶಸ್ತಿ.

ಪರಿಣತಿ : ರಂಗ ಸಂಗೀತಗಾರ, ಹಲವಾರು ನಾಟಕಗಳಲ್ಲಿ ರಂಗತರಬೇತಿ ಶಿಬಿರಗಳಲ್ಲಿ ಗಾಯನ. ಕೆಲವು ಕಿರುಚಿತ್ರ, ಧ್ವನಿಸುರುಳಿಗಳಲ್ಲಿ ಗಾಯನ. ಹಲವಾರು ರಂಗತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿ.

ನಿರ್ದೇಶನ : ಜನಾಧಿಕಾರ, ಜನಾಂದೋಲನ, ಜಲಸಂಸ್ಕೃತಿ ಕಲಾಜಾಥಾದಲ್ಲಿ ನಟನೆ, ಸಂಗೀತದೊಂದಿಗೆ ಕಾರ್ಯಕ್ರಮಗಳ ನಿರ್ದೇಶಕ.

**ಕೆ.ಟಿ. ಗಟ್ಟಿ**

ವಿಳಾಸ : ವನಶ್ರೀ, ಉಜಿರೆ, ದ.ಕ

ಕೆ.ಟಿ. ಗಟ್ಟಿಯವರು ಕನ್ನಡದ ಹಿರಿಯ ಸಾಹಿತಿ. ನಾಟಕಕಾರರಾಗಿ, ಕತೆಗಾರರಾಗಿ, ಅಂಕಣಕಾರರಾಗಿ ಪ್ರಸಿದ್ಧರು.

ರಚನೆ : ಕೆಂಪು ಕಾಗೆ, ಕುರುಡರು, ಬೊಂಬೆಯಾಟ, ಮಾಯಾಮೃಗ, ಓಂ ತಾರಾ ತೂರಿಸ್ವಾಹಾ, ನಗರ ಪರ್ವ, ನಾಟ್ಕ ಮುಂತಾದ ಹಲವು ನಾಟಕಗಳು.

ಇತರೆ : ಆಕಾಶವಾಣಿಯಲ್ಲಿ ಇವರ ಹಲವು ನಾಟಕಗಳು ಪ್ರಸಾರವಾಗಿವೆ.

ಪ್ರಶಸ್ತಿ : 'ಬೊಂಬೆಯಾಟ' ನಾಟಕಕ್ಕೆ ಸಮತೆಂತೋ ಅಖಿಲ ಭಾರತ ನಾಟಕದ ಸ್ಪರ್ಧೆಯ ಪ್ರಥಮ ಬಹುಮಾನ. ಇವರ 'ಮೂರು ನಾಟಕಗಳು' ಕೃತಿಗೆ ಚದುರಂಗ ಪ್ರಶಸ್ತಿ, ಹಾಗೂ ಇತರೆ ಹಲವು ಪ್ರಶಸ್ತಿಗಳು ಸಂದಿವೆ.

**ಗೀತಾ ಮುಳ್ಯ**

ವಿಳಾಸ: ಶಿಕ್ಷಕಿ,
ಎಸ್‌ಡಿಎಂ ಕಾಲೇಜು ರಂಗ ತರಬೇತಿ ಕೇಂದ್ರ ಉಜಿರೆ,

ಶಿಕ್ಷಣ : ನೀನಾಸಂ ಪದವಿ

ನಟನೆ : ನೀನಾಸಂ ತಿರುಗಾಟದ ಬಹುತೇಕ ನಾಟಕಗಳು ಹಾಗೂ ನಕ್ಕಳ ರಾಜಕುಮಾರಿ, ಪುಷ್ಪರಾಣಿ(ಬಾಲನಟಿ), ಸ್ಮಶಾನ ಕುರುಕ್ಷೇತ್ರ, ಸಂಸಾರದಲ್ಲಿ ಸನಿದಪ, ಚೋರ ಚರಣದಾಸ, ಮರ್ಚೆಂಟ್ ಆಫ್ ವೆನಿಸ್, ಬಿರುಕು, ಮಹಾಮಾಯಿ ಇತ್ಯಾದಿ ನಾಟಗಳಲ್ಲಿ ಮುಖ್ಯ ಪಾತ್ರಧಾರಿ.

ರಚನೆ : ಕನ್ನಡದ ಕಡುಗಲಿಗಳು, ಸುನಾಮಿ, ನವಿಲಗರಿ, ರಾಣಿ ಚೆನ್ನಮ್ಮ.

ಇತರೆ : ಜನಾಂದೋಲನ ಕಲಾಜಾತಾ ಹಾಗೂ ಜಲ ಸಂಸ್ಕೃತಿ ಕಲಾಜಾತಾಗಳಲ್ಲಿ ಕಲಾವಿದೆ ಮತ್ತು ಕೆಲವು ಕಿರುಚಿತ್ರಗಳ ಸಹ ನಿರ್ದೇಶಕಿ.

ಪರಿಣತಿ : ರಂಗಭೂಮಿ ಗಾಯಕಿ, ಯಕ್ಷಗಾನದ ಪಾತ್ರಧಾರಿ.


ಪ್ರಶಸ್ತಿ/ಸನ್ಮಾನ : ಪೀಠಾರೋಹಣಾ ನಾಟಕ ನಿರ್ದೇಶನಕ್ಕೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಬಹುಮಾನ ಹಾಗೂ ಇತರೆ ವೈಯಕ್ತಿಕ ಪ್ರಶಸ್ತಿಗಳು.



'ಸಮೂಹ' ಉಜಿರೆ ತಂಡದ 'ಬಕ' ನಾಟಕದ ದೃಶ್ಯ



"ನಿಷ್ಕ್ರಾಂತ ಊರ್ವಶಿ" ಪೌರಾಣಿಕ ನಾಟಕದ ಒಂದು ದೃಶ್ಯ




ಉದಯ ಕಶ್ಯಪ್ ನಿರ್ದೇಶನದ "ಅಜ್ಜಿಕಥೆ" ನಾಟಕದ ದೃಶ್ಯ




## ವಸಂತಮಹಲ್

ಧರ್ಮಸ್ಥಳದಲ್ಲಿರುವ ವಸಂತಮಹಲ್ ಸುದೀರ್ಘ ಇತಿಹಾಸ ಹೊಂದಿದೆ. ಸುಮಾರು ನಾನೂರರಷ್ಟು ಆಸನಗಳ ವ್ಯವಸ್ಥೆ, ಧ್ವನಿವರ್ಧಕ ಹಾಗೂ ವಿವಿಧ ಬಗೆಯ ನಾಟಕಗಳು ಮತ್ತು ಕಾರ್ಯಕ್ರಮಗಳಿಗೆ ಪೂರಕವಾದ ಪರದೆ ಮುಂತಾದ ವ್ಯವಸ್ಥೆಯನ್ನು ಹೊಂದಿದ್ದು, ನವೀಕೃತಗೊಂಡಿದೆ. ಧರ್ಮಸ್ಥಳದ ಧರ್ಮಾಧಿಕಾರಿಯವರ ಪೂರ್ವಾನುಮತಿ ಮೇರೆಗೆ ಇಲ್ಲಿ ನಿರಂತರವಾಗಿ ವಿವಿಧ ಸಾಂಸ್ಕೃತಿಕ ಹಾಗೂ ಇನ್ನಿತರೆ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

# ಬೆಳ್ತಂಗಡಿ ತಾಲ್ಲೂಕು ರಂಗಭೂಮಿ ಕಲಾವಿದರು




ಪ್ರೊ. ಟಿ.ಕೃಷ್ಣಮೂರ್ತಿ




ದೇವಪ್ಪ ಗೌಡ



ಎಂ. ನಾರಾಯಣ ಭಟ್



ಪ್ರೊ। ನಾ. ವುಜಿರೆ



ರತ್ನಾಕರ್ ಆಚಾರ್ಯ



ಜಯರಾಮ್ ಕೆ.

## ಬಂಟ್ವಾಳ ತಾಲ್ಲೂಕು ರಂಗಭೂಮಿ

### ಸದ್ದಿಲ್ಲದೆ ಸಾಗಿರುವ ರಂಗ ಚಟುವಟಿಕೆ

ಕನ್ನಡ ರಂಗಭೂಮಿಯ ಕ್ರಿಯಾಶೀಲತೆ ಹಾಗೂ ಗುರುತಿಸುವಿಕೆಗೆ ಬಂಟ್ವಾಳ ತಾಲ್ಲೂಕಿನ ಕೊಡುಗೆ ಅಪಾರವಾದದ್ದು. ರಂಗಭೂಮಿಯಲ್ಲಿ ಕಳೆದ ಹಲವು ದಶಕಗಳಿಂದ ತೊಡಗಿಸಿಕೊಂಡು ಬಂಟ್ವಾಳ ತಾಲ್ಲೂಕಿನಲ್ಲಿ ರಂಗಭೂಮಿಯನ್ನು ಜೀವಂತವಾಗಿರಿಸುವ ಪ್ರಕ್ರಿಯೆಯಲ್ಲಿ ಹಲವಾರು ಮಂದಿ ತೊಡಗಿಸಿಕೊಂಡಿದ್ದಾರೆ.

ಕರಾವಳಿ ಪ್ರದೇಶದ ಒಂದು ಭಾಗವಾದ ಬಂಟ್ವಾಳದಲ್ಲಿ ಹೆಚ್ಚು ರೂಢಿಯಲ್ಲಿರುವ ಭಾಷೆ ತುಳು. ಹಾಗೆಂದು ಕನ್ನಡ ತೀರಾ ಕಡೆಗಣಿಸಲ್ಪಟ್ಟಿದೆ ಎಂದಲ್ಲ. ಏನಿದ್ದರೂ ತುಳುವಿಗೇ ಹೆಚ್ಚು ಪ್ರಾಶಸ್ತ್ಯ. ಹಾಗಾಗಿ ಇಲ್ಲಿ ಕನ್ನಡ ನಾಟಕಗಳಿಗಿಂತ ತುಳು ನಾಟಕಗಳಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ರಂಗಭೂಮಿ ಇತಿಹಾಸದ ಕಡೆಗೆ ಅವಲೋಕಿಸಿ ನೋಡಿದರೆ ಬಹಳ ದೀರ್ಘವಾದ ಇತಿಹಾಸವೇನೂ ಗೋಚರಿಸುವುದಿಲ್ಲ. ಲಿಖಿತ ದಾಖಲೆಗಳು, ಲೇಖಕರ ಬರೆಹಗಳ ಆಧಾರದ ಮೇಲೆ ಹೇಳುವುದಾದರೆ 1902ರಲ್ಲಿ ಅಪ್ಪು ಇಂದ್ರ ಎಂಬುವರ ನಾಟಕ ಕಂಪೆನಿ ವಿಟ್ಲಕ್ಕೆ ಬಂದಿದ್ದಾಗ ಶ್ರೀ ಬಿಡಾರ ಕೃಷ್ಣಪ್ಪರ ಶಿಷ್ಯ ಮಂಜುನಾಥಯ್ಯ, ಶ್ರೀನಿವಾಸರಾಯರು, ರಂಗರಾಯರು(ಸಿನಿಮಾ ನಟಿ ಪಂಡರಿಬಾಯಿರವರ ತಂದೆ), ಮುಂಡಾಜೆ ರಂಗನಾಥ ಭಟ್ಟರು ಮೊದಲಾದವರು ನಾಟಕದಲ್ಲಿ ಅಭಿನಯಿಸುತ್ತಿದ್ದ ಉಲ್ಲೇಖಗಳಿವೆ. 1920ರ ಆಸುಪಾಸಿನಲ್ಲಿ ಬಂಟ್ವಾಳ ನಾರಾಯಣ ಕಾಮತ್‌ರು ನಾಟಕಗಳಲ್ಲಿ ಅಭಿನಯಿಸಿದ್ದು, ವಿಟ್ಲದ ರಾಮಯ್ಯ ಶಾನುಭೋಗರು ನಾಟಕಕ್ಕೆ ಪೂರಕ ಪರದೆಗಳ ಕಲಾಕೃತಿ ನಿರ್ಮಿಸಿಕೊಟ್ಟ ಉದಾಹರಣೆಗಳು ಇವೆ.

1928 ರಿಂದ 1936ರವರೆಗೆ ಬಂಟ್ವಾಳ ನಾರಾಯಣ ಕಮ್ತಿಯವರ ನಾಟಕ ಕಂಪೆನಿಯು, ಶ್ರೀ ವೆಂಕಟರಮಣ ಕೃಪಾಪೋಷಿತ ನಾಟಕ ಮಂಡಳಿ, ಶ್ರೀ ವೆಂಕಟರಮಣ ಸ್ವಾಮಿ ಥಿಯೇಟ್ರಿಕಲ್ಸ್, ಶ್ರೀ ವೆಂಕಟರಮಣ ಸ್ವಾಮಿ ಪ್ರಸಾದಿತ ನಾಟಕ ಸಭಾ ಎಂಬ ಹೆಸರಿನಲ್ಲಿ ದ.ಕ ಜಿಲ್ಲೆಯಾದ್ಯಂತ ಸಂಚರಿಸಿದ ಬಗ್ಗೆ ದಾಖಲೆಗಳು ಇವೆ.

ನಂತರದ ಅವಧಿಯಲ್ಲಿ ತಾಲ್ಲೂಕಿನ ಮಂಚಿಯವರಾದ ಬಾಬುಕೋಡಿ ವೆಂಕಟರಮಣ ಕಾರಂತ(ಬಿ.ವಿ ಕಾರಂತ)ರು ಬಂಟ್ವಾಳ ಬಿಟ್ಟು ಹೋಗಿ ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ನಡೆಸಿದ ರಂಗಚಟುವಟಿಕೆಗಳಿಂದ ಕರಾವಳಿಯ

ರಂಗಭೂಮಿಗೆ ಅಂತಾರಾಷ್ಟ್ರೀಯ ಮನ್ನಣೆ ಸಿಗುವಂತಾಯಿತು. ಜಿಲ್ಲೆಯ ರಂಗಭೂಮಿಯ ಪುನಶ್ಚೇತನಕ್ಕೆ ಶಿವರಾಮ ಕಾರಂತರು ಹಾಗೂ ಬಿ.ವಿ.ಕಾರಂತರು ಅಪಾರವಾಗಿ ದುಡಿದಿದ್ದಾರೆ. ಹಾಗೂ ಕಳೆದ ಕೆಲವು ವರ್ಷಗಳಿಂದ ಬಿ.ವಿ.ಕಾರಂತರ ಹುಟ್ಟೂರಾದ ಮಂಚಿಯಲ್ಲಿ ರಂಗಭೂಮಿಯ ಕಾರ್ಯಚಟುವಟಿಕೆಗಳು ಸಕ್ರಿಯಗೊಂಡಿವೆ.

ತಾಲ್ಲೂಕಿನ ದೃಷ್ಟಿಯಲ್ಲಿ ಅವಲೋಕಿಸಿದರೆ ಬಂಟ್ವಾಳ ತಾಲ್ಲೂಕಿನಲ್ಲಿ ವಿಟ್ಲ ರಂಗಭೂಮಿಗೆ ಮಹತ್ತರವಾದ ಕೊಡುಗೆ ಕೊಟ್ಟಿದೆ. 50–60ರ ದಶಕದಲ್ಲಿ ವಿಟ್ಲ ಬಾಬು ಮಾಸ್ತರ್ ಎಂಬುವರು ತಮ್ಮ ಬಹುಮುಖಿ ಕಲಾವಂತಿಕೆಯಿಂದ ರಂಗಭೂಮಿ ಚಟುವಟಿಕೆಗಳಿಗೆ ವಿಟ್ಲದಲ್ಲಿ ಚಾಲನೆ ನೀಡಿದವರು. ಚಿತ್ರ ಕಲಾವಿದರಾಗಿದ್ದ ಇವರು ನಾಟಕಗಳಲ್ಲಿ ಬಳಸುತ್ತಿದ್ದ ಕೆಲವಾರು ಜಾದೂ ತಂತ್ರಗಳು ಇವರಿಗೆ ಮತ್ತಷ್ಟು ಹೆಸರು ತಂದು ಕೊಟ್ಟಿತ್ತು. ಮಂಗಳೂರಿನಲ್ಲಿ ಇವರ ಕರ್ನಾಟಕ ಯಕ್ಷಗಾನ ನಾಟಕ ಮಂಡಳಿ ಬಹುವರ್ಷಗಳ ಕಾಲ ಜನಮನ ರಂಜಿಸಿತ್ತು ಎಂಬುದನ್ನು ದಾಖಲೆಗಳು ನಿರೂಪಿಸುತ್ತವೆ. ಅಲ್ಲದೆ ಆಗ ಶಾಲಾ ಶಿಕ್ಷಕರಾಗಿದ್ದ ವಿಟ್ಲ ಸುಬ್ಬಣ್ಣ ಮಾಸ್ತ್ರ 60ರ ದಶಕದಲ್ಲಿ ಪ್ರಯೋಗಿಸಿದ ಕೆಲವು ರಂಗಪ್ರಯೋಗಗಳ ಬಗ್ಗೆ ಇಲ್ಲಿ ಉಲ್ಲೇಖಿಸಲೇಬೇಕು.

ವಿಟ್ಲದ ರಂಗಭೂಮಿ ಕಾರ್ಯಗಳ ಬಗ್ಗೆ ಹಿರಿಯ ವಿಮರ್ಶಕ ವಿ.ಗ.ನಾಯಕರು "ಕಣಜ" ಎಂಬ ಕೃತಿಯಲ್ಲಿ ರಂಗಭೂಮಿಗೆ ವಿಟ್ಲ ಸೀಮೆಯ ಕೊಡುಗೆ ಎಂದು ವ್ಯಾಖ್ಯಾನಿಸಿ ಒಂದು ದೀರ್ಘ ಲೇಖನವನ್ನೇ ಬರೆದಿದ್ದಾರೆ. 80ರ ದಶಕದಲ್ಲಿ ವಿಟ್ಲದಲ್ಲಿ ರಂಗಭೂಮಿಯನ್ನು ಹೆಚ್ಚು ಕ್ರಿಯಾಶೀಲವಾಗಿ ಉತ್ತೇಜಿಸಿದವರು ವಿಟ್ಲ ಸಿಪಿಸಿ ಆರ್.ಐ ನಲ್ಲಿ ಉದ್ಯೋಗದಲ್ಲಿರುವ ಕಲಾವಿದ ಮೋಹನ್ ಸೋನಾ. ಇವರು ಆ ವರುಷಗಳಲ್ಲಿ ವಿಟ್ಲ ಸುತ್ತಮುತ್ತಲಿನ ಶಾಲೆಗಳಲ್ಲಿ ಆಡಿಸಿದ ಗುಬ್ಬಿ ಗೂಡು, ಅಳಿಲುರಾಮಾಯಣ, ಕಾಬೂಲಿವಾಲ, ತಿರುಕನ ಕನಸು ಮೊದಲಾದ ನಾಟಕಗಳು ಕನ್ನಡ ರಂಗಭೂಮಿಯ ಕ್ರಿಯಾಶೀಲತೆಗೆ ಕಾರಣವಾಗಿವೆ.

ನಂತರದ ದಿನಗಳಲ್ಲಿ ವಿಟ್ಲವನ್ನು ಕೇಂದ್ರವಾಗಿರಿಸಿಕೊಂಡು ಮೋಹನ್ ಸೋನಾ, ಮೂರ್ತಿ ದೇರಾಜೆ, ಭಾರವಿ, ಶಂಕರಪ್ರಸಾದ್, ಸುರೇಶ್ ಹಂದಾಡಿ, ಶ್ಯಾಂ ಪ್ರಸಾದ್ ಮೊದಲಾದವರು ಹಾಗೂ ವಿಟ್ಲ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಅನಂತಕೃಷ್ಣ ಹೆಬ್ಬಾರ್‌ರ ಮಾರ್ಗದರ್ಶನದಲ್ಲಿ ಕಟ್ಟಿಕೊಂಡ "ರಂಗಾಸಕ್ತರು ವಿಟ್ಲ" ತಂಡ ವಿಟ್ಲದಲ್ಲಿ ಕೆಲವು ವರ್ಷಗಳ ಕಾಲ ಪರಿಣಾಮಕಾರಿ ರಂಗಪ್ರಯೋಗಗಳನ್ನು ನಡೆಸಿದರು. ನಾಟಕ ಪ್ರದರ್ಶನ, ರಂಗತರಬೇತಿ ಶಿಬಿರ, ರಂಗಸಂಗೀತ ಹೀಗೆ ಹತ್ತು ಹಲವು ಕನ್ನಡ ನಾಟಕಗಳ ಪ್ರಯೋಗಗಳಿಗೆ ತುಳುನಾಟಕಗಳಲ್ಲಿ ಸಕ್ರಿಯರಾದ ಹಿರಿಯ ಕಲಾವಿದರೂ ತೊಡಗಿಕೊಂಡರು. ಅದೇ ಸಮಯದಲ್ಲಿ ವಿಟ್ಲದಲ್ಲಿ ಉದ್ಯೋಗದಲ್ಲಿದ್ದ ಐ.ಕೆ ಬೊಳುವಾರು ರವರೂ ಕೂಡ ರಂಗನಿರ್ದೇಶಕರ ಬಳಗದೊಂದಿಗೆ ಸೇರಿಕೊಂಡರು. ಮುಂದೆ 1990ರ ಹೊತ್ತಿಗೆ "ರಂಗಾಸಕ್ತರು ವಿಟ್ಲ" ಜೊತೆ ಜೊತೆಗೆ "ನಿರತನಿರಂತ" ವಿಟ್ಲದಲ್ಲಿ ರೂಪುಗೊಂಡು ಎರಡೂ ತಂಡಗಳು ಜಿಲ್ಲೆಯಾದ್ಯಂತ ಹಾಗೂ ಹೊರಗೆ

ರಂಗಪ್ರಯೋಗಗಳನ್ನು ನೀಡಿವೆ. ಸಾಕ್ಷರತಾ ಆಂದೋಲನ ವರ್ಷಗಳಲ್ಲಿ ನಿರತನಿರಂತ, ಕಾವೂರ್ದ ಕರಿಯಣ್ಣ, ಕೆರೆಗೆ ಹಾರ, ಬೆಟ್ಟದಾಚೆ ಮೊದಲಾದ ನಾಟಕಗಳನ್ನು ಪ್ರದರ್ಶಿಸಿದೆ. ಈ ಸಮಯದಲ್ಲಿ ಕಾಸರಗೋಡು ಚಿನ್ನಾ, ಮೋಹನ ಸೋನಾ, ಮೂರ್ತಿ ದೇರಾಜೆ, ಐ.ಕೆ ಬೊಳುವಾರು, ಸುರೇಶ್ ಹಂದಾಡಿ, ಬಾಲಕೃಷ್ಣ ವಿಟ್ಲ, ಮಂಜು ವಿಟ್ಲ, ಕೆ.ಟಿ.ಶ್ರೀಧರ್, ಶಂಕರ್ ಪ್ರಸಾದ್ ಮೊದಲಾದವರು ನಿರ್ದೇಶಕರಾಗಿ ಗುರುತಿಸಿಕೊಂಡಿದ್ದು ಹಲವು ಪ್ರತಿಭೆಗಳನ್ನು ರಂಗಭೂಮಿಗೆ ಪರಿಚಯಿಸಿದ್ದಾರೆ.

ಆದರೆ ಇಲ್ಲಿ ಉಲ್ಲೇಖಿಸಲೇಬೇಕಾದ ಬಹಳ ಮುಖ್ಯವಾದ ವಿಚಾರವೊಂದಿದೆ. ಮೇಲೆ ಹೇಳಿದ ವಿಟ್ಲದ ಹೊಸಬಗೆಯ ನಾಟಕಗಳಿಗಿಂತಲೂ ಮೊದಲೇ ವಿಟ್ಲದಲ್ಲಿ "ಉದಯೋನ್ಮುಖ ಕಲಾವಿದರು" ಎಂಬ ಹೆಸರಿನಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಆಡುತ್ತಿದ್ದ ತಂಡವೊಂದಿತ್ತು. ಇವರು ತುಳು ಹಾಗೂ ಕನ್ನಡ ಭಾಷೆಯ ವಿವಿಧ ನಾಟಕಗಳನ್ನು ಹಿರಿಯ ಕಲಾವಿದ ಮಂಜು ವಿಟ್ಲರವರ ನಿರ್ದೇಶನದಲ್ಲಿ ಅಭಿನಯಿಸುತ್ತಿದ್ದರು. ಅನುಭವಿ ಕಲಾವಿದರು ಈ ತಂಡದಲ್ಲಿದ್ದರೂ ತಾವು ಉದಯೋನ್ಮುಖ ಕಲಾವಿದರು ಎಂದು ಕರೆಸಿಕೊಳ್ಳುತ್ತಿದ್ದ ಇವರು ಮುಂದೆ ಮೋಹನ ಸೋನಾ, ಮೂರ್ತಿ ದೇರಾಜೆಯವರ ಹೊಸ ಬಗೆಯ ನಾಟಕಗಳಿಗೂ ಹೊಂದಿಕೊಂಡು ವಿಟ್ಲದ ರಂಗಭೂಮಿ ಚಟುವಟಿಕೆಗಳಿಗೆ ಮತ್ತಷ್ಟು ಮೆರುಗು ತಂದರು. ಇದೇ ಕಾಲಾವಧಿಯಲ್ಲಿ ಹಿರಿಯ ಸಾಹಿತಿ, ಯಕ್ಷಗಾನ ಅರ್ಥದಾರಿ, ಪಾತ್ರಧಾರಿ ದೇರಾಜೆ ಸೀತಾರಾಮಯ್ಯರವರೂ ಕೂಡ ರಂಗಭೂಮಿಯ ಕ್ರಿಯಾಶೀಲತೆಗೆ ಶ್ರಮಿಸಿದ್ದನ್ನು ಇಲ್ಲಿ ಉಲ್ಲೇಖಿಸಲೇಬೇಕು. ದೇರಾಜೆಯವರು ಕೆಲವು ನಾಟಕಗಳನ್ನು ಬರೆದಿದ್ದು ಅವರ 'ಧರ್ಮದಾಸಿ' ಎಂಬ ನಾಟಕ ಪ್ರಕಟವಾಗಿದೆ. ನೀರ್ಪಾಜೆ ಭೀಮಾ ಭಟ್ಟರ ಮಾಳವಿಕಾಗ್ನಿ ಮಿತ್ರ, ಊರ್ವಶಿ, ಮಣ್ಣಿನಬಂಡಿ, ಮಾಲತಿಮಾಧವ, ಅಂಶುಮಾಲಿ ಕನ್ಯಾನ ಅವರ ಆನೆ ಮತ್ತು ಏನೋ, ತಲೆಬುರುಡೆ, ಪಕಳಕುಂಜ ಶ್ಯಾಮ ಭಟ್ಟರ 'ಆರು ಹಿತವರು ನಿನಗೆ', ತಲೆಂಗಳ ರಾಮಕೃಷ್ಣ ಭಟ್ಟರ ಭಕ್ತಧ್ರುವ, ಕಣ್ಣಿದ್ದು ಕುರುಡರು, ನರ್ಕಳ ಮಾರಪ್ಪ ಶೆಟ್ಟಿಯವರ 'ಕೂಸಕ್ಕನ ಮದುವೆ', ವಡಾರೋ ಮಹಾಬಲೇಶ್ವರಭಟ್ಟರ 'ನಂಬ್ರಂದ ಜಂಬ್ರಕ್ಕೆ', ವಿ.ಮ. ಭಟ್ಟ ಅಡ್ಯನಡ್ಕರ 'ಶಕುಂತಲ', ನಾಟಕಗಳು ಹಾಗೂ ಇತ್ತೀಚೆಗೆ ಮೂರ್ತಿದೇರಾಜೆಯವರ 'ಕಪ್ಪು ಕಾಗೆಯ ಹಾಡು', 'ಗುಡುಗುಡುಗುಮ್ಮಟ ದೇವರು'(ಸಮನ್ವಯ ಪ್ರಕಾಶನ ವಿಟ್ಲ) ಮುಂತಾದವು ಗಮನ ಸೆಳೆಯುವ ನಾಟಕಗಳಾಗಿವೆ.

ಆಗ ತಂಡದಲ್ಲಿ ಮಂಜು ವಿಟ್ಲ, ವಿ.ಮನೋಹರ್, ಘೋನ್ ಶೀನಪ್ಪ, ಪ್ರೇಮಾನಂದ, ವಿ.ಪರಮೇಶ್ವರ ಹೊಳ್ಳ, ಯಶು ವಿಟ್ಲ, ಕರುಣಾಕರ, ರವಿಜೋಶಿ, ರವೀಶ, ಮನೋಜ್, ಶ್ರೀಧರ, ಸತೀಶ್, ಗಂಗಾಧರ ಪೈ, ರವಿದಾಸ್ ಆಳ್ವ, ಮಂಗೇಶ್ ಭಟ್ ವಿಟ್ಲ, ಎರುಂಬು ಶಂಕರ ಭಟ್ಟರು ಮೊದಲಾದವರು ಸೇರಿಕೊಂಡು ಸುಮಾರು 30 ವರ್ಷಗಳ ಕಾಲ ರಂಗಭೂಮಿ ಸೇವೆ ಮಾಡಿದ್ದಾರೆ.

ಅಡ್ಯನಡ್ಕದ ಬಗ್ಗೆ ಹೇಳುವುದಾದರೆ ಅಲ್ಲಿ ಪೆರ್ದೋಡಿ ಸದಾಶಿವ ಭಟ್, ಸಿ.ನಾರಾಯಣ

ಜೋಶಿ, ಶೇಷಪ್ಪ ಆಚಾರಿ, ಸಾಯ ರಾಮಭಟ್, ಕನ್ಯಾನದ ಅಂಗ್ರಿ ಶಂಕರ್ ಬಾಯಾರು, ಸುಬ್ಬಣ್ಣ ಭಟ್, ಶಾಮ ಭಟ್, ರಾಮಕೃಷ್ಣ ಭಟ್, ದಿನಕರ್ ಭಟ್ ಮೊದಲಾದವರು ಆಗ ಅಭಿನಯದಲ್ಲಿ ಹೆಸರು ಮಾಡಿದ್ದರು. ಕನ್ಯಾನ ಸಮೀಪದ ಬಾಯಾರು ಎಂಬಲ್ಲಿನ 'ಹೆದ್ದಾರಿ ಶಾಲಾ ಮಿತ್ರ ಮಂಡಳಿ' ಎಂಬ ತಂಡ ಬಾಯಾರು ಸುಬ್ರಹ್ಮಣ್ಯ ಭಟ್, ಶಾಮ ಭಟ್, ರಾಮಕೃಷ್ಣ ಭಟ್ ಸಹೋದರರ ನೇತೃತ್ವದಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಿತು. ಖ್ಯಾತ ಸಾಹಿತಿ 'ಎಳೆಯರ ಗೆಳೆಯ' ಮುಳಿಯ ಶಂಕರಭಟ್ಟರವರು ನಾಟಕ ನಟ, ಏಕಪಾತ್ರಭಿನಯದಲ್ಲಿ ಪ್ರಸಿದ್ಧರಾಗಿದ್ದರು ಎನ್ನುವುದು ಕೂಡ ಹಳೆತಲೆಮಾರಿನವರ ಮಾಹಿತಿ.

## ರಂಗತಂಡಗಳು

ಇತ್ತೀಚೆಗಿನ ವರ್ಷಗಳಲ್ಲಿ ಬಂಟ್ವಾಳ ತಾಲ್ಲೂಕಿನಲ್ಲಿ ಕನ್ನಡ ನಾಟಕಗಳ ಕ್ರಿಯಾಶೀಲತೆ ಶಾಲಾ ಕಾಲೇಜುಗಳಿಗಷ್ಟೇ ಸೀಮಿತವಾಗಿದೆ ಎಂಬ ಮಟ್ಟಕ್ಕೆ ಕುಸಿದಿದೆ. ಹಾಗೆಂದು ಬಂಟ್ವಾಳದಲ್ಲಿ ಕನ್ನಡ ರಂಗಭೂಮಿ ಕ್ಷೀಣಿಸುತ್ತಿದೆ ಎಂದರ್ಥವಲ್ಲ. ಬಂಟ್ವಾಳ ತಾಲ್ಲೂಕಿನಲ್ಲಿ ಆಗಿ ಹೋದ ರಂಗತಂಡಗಳ ಜೊತೆಗೆ ಹೋಲಿಕೆ ಮಾಡುವುದಾದರೆ ಅದೇ ಅರ್ಥ ಕೊಟ್ಟಂತಾಗುತ್ತದೆ. ಏನೇ ಇರಲಿ, ಕಳೆದ ಕೆಲವು ವರ್ಷಗಳಿಂದ ಬಂಟ್ವಾಳ ತನ್ನದೇ ಆದ ಮಹತ್ವವನ್ನು ಕಾಯ್ದಿರಿಸಿಕೊಂಡಿದೆ. ಬಂಟ್ವಾಳದಲ್ಲಿ ಕಾರ್ಯಾಚರಿಸುತ್ತಿರುವ ಹಲವು ರಂಗಾಸಕ್ತಿಯ ತಂಡಗಳು ಇದಕ್ಕೆ ಕಾರಣವಾಗಿವೆ.

## "ಸಮಸಾಂಪ್ರತಿ" (ಸಮನ್ವಯ ಸಾಂಸ್ಕೃತಿಕ ಪ್ರತಿಷ್ಠಾನ)

ವಿಟ್ಲದಲ್ಲಿ ಹೊಸಬಗೆಯ ನಾಟಕಗಳ ಮೂಲಕ ರಂಗಭೂಮಿ ಕಾರ್ಯಗಳನ್ನು ಹೆಚ್ಚು ಉತ್ತೇಜಿಸಿದವರಲ್ಲಿ ಮೂರ್ತಿ ದೇರಾಜೆ ಪ್ರಮುಖರು. ಇವರ ಸಾರಥ್ಯದ "ಸಮಸಾಂಪ್ರತಿ(ಸಮನ್ವಯ ಸಾಂಸ್ಕೃತಿಕ ಪ್ರತಿಷ್ಠಾನ)ಯು ಕಳೆದ 25 ವರ್ಷಗಳಿಂದ ನಾಟಕ ಪ್ರದರ್ಶನ, ನಾಟಕ ನಿರ್ದೇಶನ, ರಂಗ ಸಂಗೀತವನ್ನು ನಡೆಸಿಕೊಂಡು ಬರುತ್ತಿದೆ. ವಿಶೇಷವಾಗಿ ಮಕ್ಕಳ ರಂಗಭೂಮಿಯಲ್ಲಿ ಶಂಕರಪ್ರಸಾದ್ ಕುಂಚಿನಡ್ಕ, ಭಾರವಿ ದೇರಾಜೆ, ಪಾಣಿನಿ ದೇರಾಜೆ, ಶ್ಯಾಂ ಪ್ರಸಾದ್, ಮೈಥಿಲಿ ತೇಜಸ್ವಿ, ಸುಮತಿ ದೇರಾಜೆ, ತೇಜಸ್ವಿ ಸುಧೀರ್ ಬಾಳೆಮಣಿ, ಉದಯ ವಿಟ್ಲ, ಶ್ಯಾಂ ಕುಶಲ ಶೆಟ್ಟಿ ಮೊದಲಾದವರು ಸಮಸಾಂಪ್ರತಿಯನ್ನು ಮುನ್ನಡೆಸಿ ನಿರಂತರ ರಂಗಭೂಮಿ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹಲವಾರು ರಂಗಕೃತಿಗಳನ್ನೂ ಹೊರತಂದಿರುವ ಈ ತಂಡ ನೂರಕ್ಕೂ ಅಧಿಕ ನಾಟಕಗಳನ್ನು ನಿರ್ದೇಶಿಸಿದೆ ಮತ್ತು ಹಲವಾರು ನಾಟಕಗಳನ್ನು ರಂಗವೇರಿಸಿದೆ ಹಾಗೂ ರಂಗಸಂಗೀತ ಮತ್ತು ಬೆಳಕಿನ ವಿನ್ಯಾಸದಲ್ಲಿ ಪರಿಣತಿ ಪಡೆದಿದೆ. ಒಟ್ಟಿನಲ್ಲಿ ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿರುವ ಈ "ಸಮಸಾಂಪ್ರತಿ" ತಂಡ ಕನ್ನಡ ರಂಗಭೂಮಿಗೆ ತನ್ನ ಅನನ್ಯ ಕೊಡುಗೆ ನೀಡುತ್ತಿದೆ.

## ತರಕಿಟ ಕಲಾ ಕಮ್ಮಟ

ತಾಲ್ಲೂಕಿನ ಬ್ರಹ್ಮರಕೂಟ್ಲು ಪರಿಸರದಲ್ಲಿ ಸಕ್ರಿಯವಾಗಿರುವ ಸಾಂಸ್ಕೃತಿಕ ತಂಡವಿದು. ಜಿಲ್ಲೆಯಲ್ಲಿ ಮಕ್ಕಳ ಬೇಸಿಗೆ ಶಿಬಿರಗಳಿಗೆ ನಾಂದಿ ಹಾಡಿದ ಉಮಾಶಂಕರ್ ಪೆರಿಯೋಡಿ ಈ ತಂಡಕ್ಕೆ ನಿರಂತರ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಸಾಮಾಜಿಕವಾಗಿ ಕ್ರಿಯಾಶೀಲವಾಗಿರುವ ವಾಣಿ ಪೆರಿಯೋಡಿ ಹಾಗೂ ಉದಯಕುಮಾರ್ ಜ್ಯೋತಿಗುಡ್ಡೆ ನೇತೃತ್ವದ ಈ ತಂಡ ಕಳೆದ ಹಲವು ವರ್ಷಗಳಿಂದ ಬ್ರಹ್ಮರ ಕೂಟ್ಲು ಅನ್ನು ಕೇಂದ್ರವಾಗಿರಿಸಿಕೊಂಡು ರಾಜ್ಯದಾದ್ಯಂತ ಹಲವು ಮಕ್ಕಳ ರಂಗಚಟುವಟಿಕೆಗಳನ್ನು ನಡೆಸುತ್ತಿದೆ. ತಿಂಗಳ ಇರುಳು ಕಾರ್ಯಕ್ರಮದ ಮೂಲಕ ಹಲವಾರು ನಾಟಕಗಳನ್ನು ಬ್ರಹ್ಮರ ಕೂಟ್ಲುವಿಗೆ ಪರಿಚಯಿಸಿರುವ ಈ ತಂಡದಲ್ಲಿ 20 ಕ್ಕೂ ಅಧಿಕ ಮಂದಿ ತೊಡಗಿಸಿಕೊಂಡಿದ್ದಾರೆ. ವಿವಿಧ ಜನಜಾಗೃತಿ ಬೀದಿ ನಾಟಕಗಳನ್ನು ಪ್ರಯೋಗಿಸಿರುವ ಈ ತಂಡ ಬಂಟ್ವಾಳದ ಸಾಂಸ್ಕೃತಿಕತನವನ್ನು ಗಟ್ಟಿಗೊಳಿಸಿದೆ.

ತುಳು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶಾಂತಾರಾಂ ಕಲ್ಲಡ್ಕ, ಮಂಜುವಿಟ್ಲ, ರಮಾ ಬಿ.ಸಿರೋಡು, ಗೋಪಾಲಅಂಚನ್, ಎಚ್ಕೆ ನಯನಾಡು, ಮೋಹನದಾಸ ಕೊಟ್ಟಾರಿ, ಚೇತನ್ ರೈ ಮಾಣಿ, ಬಿ.ಆರ್.ಕುಲಾಲ್, ರತ್ನದೇವ್ ಪುಂಜಾಲಕಟ್ಟೆ, ತಿಮ್ಮಪ್ಪ ಕುಲಾಲ್, ಗಿರಿಯಪ್ಪ ಬದ್ಯಾರ್, ಬಿ.ಆರ್.ಕಬಕ, ಪುರಂದರ ನಾಗನವಳಚ್ಚಿಲ್, ಕೊರಗಪ್ಪ ಶಿಂಗಾರ ಕೋಡಿ, ದಾಮೋದರ ಕುರ್ಯಾಳ, ರಾಜ್‌ಪಾಲ್ ಕಲ್ಲಡ್ಕ, ಶಿವಗಿರಿ ಕಲ್ಲಡ್ಕ, ಸುರೇಶ್ ಕುಲಾಲ್, ಚಂದ್ರಶೇಖರ್ ಸಿದ್ದಕಟ್ಟೆ, ಸುರೇಶ್ ಮಾಸ್ತ್ರು ಮೊದಲಾದವರು ಪರೋಕ್ಷವಾಗಿ ಕನ್ನಡ ರಂಗಭೂಮಿಯ ಕ್ರಿಯಾಶೀಲತೆಗೆ ಕಾರಣರಾಗಿದ್ದಾರೆ.

ಉಳಿದಂತೆ ತಾಲ್ಲೂಕಿನ ಹಲವು ಶಾಲಾ ಕಾಲೇಜುಗಳಲ್ಲಿ ಸಕ್ರಿಯವಾಗಿರುವ ರಂಗತಂಡಗಳು ತನ್ನದೇ ವಲಯದಲ್ಲಿ ನಾಟಕಗಳನ್ನು ಸಿದ್ಧಪಡಿಸಿ ಪ್ರಯೋಗಿಸುತ್ತಿವೆ. ಯಾದರೂ ರಂಗಭೂಮಿಯ ಕ್ರಿಯಾಶೀಲತೆಗೆ ಕಾರಣವಾಗುತ್ತಿವೆ. ಬಂಟ್ವಾಳ ಎಸ್.ವಿ.ಎಸ್. ಕಾಲೇಜಿನಲ್ಲಿ ಪ್ರಾಂಶುಪಾಲರಾದ ಡಾ.ಸೀತಾರಾಮಯ್ಯರ ಮಾರ್ಗದರ್ಶನದಲ್ಲಿ ಡ್ರಾಮಾಟಿಕ್ ಕ್ಲಬ್ಬನ್ನು ಮುನ್ನಡೆಸುತ್ತಿರುವ ಪ್ರೊ.ತುಕಾರಾಮ್ ಪೂಜಾರಿಯವರು ಕಾಲೇಜಿನಲ್ಲಿ ರಂಗಾಸಕ್ತಿಯ ವಿದ್ಯಾರ್ಥಿವಲಯವನ್ನು ಹುಟ್ಟುಹಾಕಿದ್ದಾರೆ. ಈ ಬಾರಿ ಕುಣಿಕುಣಿ ನವಿಲೇ ಎಂಬ ನಾಟಕದ ಮೂಲಕ ತಿರುಗಾಟವನ್ನೂ ನಡೆಸಿರುವ ಈ ತಂಡ ಇತರ ಕಾಲೇಜುಗಳಿಗೆ ಮಾದರಿಯಾಗಿ ಮುನ್ನಡೆಯುತ್ತಿದೆ. ವಿಟ್ಲ ಸರ್ಕಾರಿ ಕಾಲೇಜಿನ ಸುಬ್ಬಪ್ಪ ಕೈಕಂಬ, ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಬಾಲಕೃಷ್ಣ ಶೆಟ್ಟಿ, ಚೆನ್ನಪ್ಪ ಜಾಲ್ಸೂರು, ಉದಯವಿಟ್ಲ, ಶಾರದಾ, ವಿನಾಯಕ, ಪರಮೇಶ್ವರ ಹೆಗಡೆ, ಜಯಾನಂದ ಪೆರಾಜೆ, ಸುರೇಶ್ ಶೆಟ್ಟಿ, ಶೇಷಪ್ಪ ಮಾಸ್ತರ್, ನಾರಾಯಣ, ಚೇತನಾ ಮೊದಲಾದವರು ರಂಗಚಟುವಟಿಕೆಗಳು ನಿರಂತರವಾಗಿ ನಡೆಯುವುದಕ್ಕೆ ಕಾರಣವಾಗುವುದರ ಮೂಲಕ ಇತರರಿಗೆ

ಪ್ರೇರಣೆಯಾಗುತ್ತಿದ್ದಾರೆ.

ನಾಟಕಗಳ ಯಶಸ್ಸಿನಲ್ಲಿ ತೆರೆಮರೆಯಲ್ಲಿ ಕಾರ್ಯನಿರ್ವಹಿಸುವ ಹಲವು ಮಂದಿ ಸುದ್ದಿಯಾಗದೇ, ಪ್ರಚಾರ ಬಯಸದೇ ತಮ್ಮ ಪಾಡಿಗೆ ತಾವು ಇದ್ದು ಬಿಡುತ್ತಾರೆ. ಅಂತೆಯೇ ಬಂಟ್ವಾಳ ತಾಲ್ಲೂಕಿನಲ್ಲಿ ರಂಗಭೂಮಿಯ ಜೀವಂತಿಕೆಗೆ ಮೇಲೆ ಹೇಳಿದವರಷ್ಟೇ ಕಾರಣರಲ್ಲ. ತೆರೆಮರೆಯಲ್ಲಿದ್ದುಕೊಂಡು ನಿಷ್ಠೆಯಿಂದ ತಮ್ಮ ಕಾರ್ಯನಿರ್ವಹಿಸುತ್ತಿರುವ ಎಷ್ಟೋ ಮಂದಿ ಇರಬಹುದು, ಇದ್ದಾರೆ ಕೂಡ. ಈ ಬರಹ ಸಿದ್ಧಪಡಿಸುವಾಗ ಕಾಲಮಿತಿಯ ದೃಷ್ಟಿಯಿಂದ ಎಲ್ಲಾ ಕಲಾವಿದರ ಪರಿಚಯ ಅಲಭ್ಯವಾದರೂ ಬಂಟ್ವಾಳ ತಾಲ್ಲೂಕಿನ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಎಲ್ಲಾ ಹಿರಿಯ ಕಿರಿಯ ಕಲಾವಿದರ ಕೊಡುಗೆ ಅನನ್ಯವಾದದ್ದು

## ಬಂಟ್ವಾಳ ತಾಲ್ಲೂಕಿನ ಪ್ರಸಾಧನ ಕೇಂದ್ರಗಳು

ಬಂಟ್ವಾಳ ತಾಲ್ಲೂಕಿನಲ್ಲಿ ಹಲವಾರು ಪ್ರಸಾಧನ ಕೇಂದ್ರಗಳಿದ್ದು ಕನ್ನಡ, ತುಳು, ನಾಟಕ ಪ್ರದರ್ಶನ ಹಾಗೂ ಇನ್ನಿತರೆ ಕಾರ್ಯಕ್ರಮಗಳಿಗೆ ಬಾಡಿಗೆ ರೂಪದಲ್ಲಿ ಒದಗಿಸುತ್ತವೆ. ಅವುಗಳಲ್ಲಿ ಆರ್ ಕೆ ಆರ್ಟ್ಸ್, ವಿಟ್ಲ, ರಾಜೇಶ್ ವಿಟ್ಲ ಮತ್ತು ಕೃಷ್ಣಯ್ಯ ಬಲ್ಲಾಳ್, ಶಾಂತಾರಾಂ ಕಲ್ಲಡ್ಕ, ತುಳು ಅಪ್ಪೆ ಜೋಕ್ಲು ಕಲಾ ಬಳಗ, ಕಲ್ಲಡ್ಕ, ಭಾಸ್ಕರ್ ಆಚಾರ್ಯ ಕಳಿಗೆ, ಪೊಲ್ಯು ಆರ್ಟ್ಸ್ ಪಚ್ಚಿನಡ್ಕ, ಸುರೇಶ್ ಮಾಸ್ಟರ್ ಸಜಿಪಮುನ್ನೂರು, ರಮೇಶ್ ಕೆ ಶಿಲ್ಪಾ ಆರ್ಟ್ಸ್ ಕಲ್ಲಡ್ಕ, ಗಿರಿಧರ್ ಹೊಳ್ಳ, ಹೊಳ್ಳ ಆರ್ಟ್ಸ್, ಬಿ.ಸಿ ರೋಡು, ರಾಘವದಾಸ ಭಾರತಿ ಆರ್ಟ್ಸ್, ಮುಡಿಪು ಮುಂತಾದವು ಮುಂಚೂಣಿಯಲ್ಲಿವೆ. ಒಂದು ತಾಲ್ಲೂಕಿನ ವ್ಯಾಪ್ತಿಯಲ್ಲಿ ಇಷ್ಟೊಂದು ಪ್ರಸಾಧನ ಕೇಂದ್ರಗಳಿರುವುದು ಒಂದು ವಿಶೇಷವೇ ಸರಿ.

## ತಾಲ್ಲೂಕಿನ ರಂಗಮಂದಿರದ ವ್ಯವಸ್ಥೆ

ಬಂಟ್ವಾಳ ತಾಲ್ಲೂಕಿನಲ್ಲಿ ವ್ಯವಸ್ಥಿತವಾದ ರಂಗಮಂದಿರಗಳೇ ಇಲ್ಲ. ತಾಲ್ಲೂಕಿನ ಕೇಂದ್ರ ಭಾಗವಾದ ಬಿ.ಸಿ.ರೋಡಿನಲ್ಲಿ ವ್ಯವಸ್ಥಿತ ರಂಗಮಂದಿರದ ನಿರ್ಮಾಣಕ್ಕಾಗಿ ಬಿ.ಸಿ.ರೋಡಿನ ರಂಗಾಸಕ್ತರು ಒಲವು ತೋರುತ್ತಿದ್ದಾರೆಯಾದರೂ, ಸ್ಥಳೀಯಾಡಳಿತ ಹಾಗೂ ಜನಪ್ರತಿನಿಧಿಗಳು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತಿಲ್ಲ. ಸರ್ಕಾರಿ ಶಾಲೆಗಳಲ್ಲಿ ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ ಹಾಗೂ ಊರವರ ನೆರವಿನಿಂದ ರಂಗಮಂದಿರದ ಹೆಸರಿನಲ್ಲಿ ವೇದಿಕೆಗಳ ನಿರ್ಮಾಣವಾಗಿದೆ. ಆದರೆ ಅವುಗಳ್ಯಾವುದೂ ನಾಟಕಗಳ ಪ್ರದರ್ಶನಕ್ಕೆ ಪೂರಕವಾಗಿಲ್ಲ. ಆದರೂ ಸೀಮಿತ ಹಣಕಾಸು ವ್ಯವಸ್ಥೆ, ಸ್ಥಳಾವಕಾಶದಲ್ಲಿ ಈ ವೇದಿಕೆಗಳು ನಿರ್ಮಾಣಗೊಂಡಿದ್ದು ಸ್ವಲ್ಪ ಮಟ್ಟಿನಲ್ಲಿ ತಾಲ್ಲೂಕಿನ ರಂಗಭೂಮಿ ಚಟುವಟಿಕೆಗಳ ಜೀವಂತಿಕೆಗೆ ಈ ವೇದಿಕೆಗಳು ಕಾರಣವಾಗುತ್ತಿವೆ.

ಇನ್ನು ಕಾಲೇಜುಗಳಲ್ಲಿ ಕೂಡ ರಂಗವೇದಿಕೆಗಳು ಇದ್ದು, ಕಾಲೇಜು ಮಟ್ಟದ

ಕಾರ್ಯಕ್ರಮಗಳಿಗೆ ಮಾತ್ರ ಬಳಕೆಯಾಗುತ್ತಿವೆ. ಸದ್ಯದ ಮಟ್ಟಿಗೆ ಬಿ.ಸಿ.ರೋಡಿನಲ್ಲಿರುವ ಸಂಚಯಗಿರಿ ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ಆವರಣದಲ್ಲಿರುವ ರಂಗವೇದಿಕೆ, ವಿಟ್ಲ ಸರ್ಕಾರಿ ಕಾಲೇಜಿನ ಬಯಲು ರಂಗವೇದಿಕೆ, ಮೊಡಂಕಾಪು ದೀಪಿಕಾ ಪ್ರೌಢಶಾಲೆಯ ಬೆಳ್ಳಿಬೆಳಕು ರಂಗವೇದಿಕೆ, ಬಂಟ್ವಾಳ ಪುರಸಭೆಯ ಆಡಳಿತಕ್ಕೆ ರಂಗಮಂದಿರಗಳಲ್ಲಿ ತಕ್ಕ ಮಟ್ಟಿಗೆ ರಂಗ ಚಟುವಟಿಕೆಗಳು ನಡೆಯುತ್ತಿವೆ. ಈಗ ಈ ಪುರಸಭೆ ರಂಗಮಂದಿರವೂ (ರಂಗ ಮಂದಿರದ ಚಿತ್ರವಿದೆ) ಪಾಳು ಬೀಳುವ ಸ್ಥಿತಿಯಲ್ಲಿದೆ.



**ಮೌನೇಶ್ ವಿಶ್ವಕರ್ಮ**
ಬಂಟ್ವಾಳ ದ. ಕ

## ನಮ್ಮ ಕಲಾವಿದರು

**ಮೂರ್ತಿ ದೇರಾಜೆ**

ವಿಳಾಸ: ಆರಾಧನಾ ವಿಟ್ಲ, ದ.ಕ
ದೂ: 9448239519

| | | |
|---|---|---|
| ನಟನೆ | : | ಚೋರಚರಣದಾಸ, ನಮ್ಮ ನಾಟ್ಯಾಭಿನಯ ಪ್ರಸಂಗ, ಹುಣ್ಣಿಮೆ, ಅಜ್ಜ ಬಂದಾ, ಪೂರ್ವ ರಂಗದ ಕೊನೆಗೆ. |
| ನಿರ್ದೇಶನ | : | ನಮ್ಮ ನಾಟ್ಯಾಭಿನಯ ಪ್ರಸಂಗ, ರಾಮಧಾನ್ಯ ಚರಿತೆ, ನನ್ನ ಗೋಪಾಲ, ಪುಣ್ಯಕೋಟಿ, ಒಂದು ಉಪವಾಸದ ಕಥೆ, ಬಕಾಸುರ ಬೆಟ್ಟ, ಕಪ್ಪು ಕಾಗೆಯ ಹಾಡು, ಗುಡುಗುಡು ಗುಮ್ಮಟ ದೇವರು, ನಕ್ಷತ್ರಗಳಾಚೆ, ಬೌಬೌ ಟ್ರಿಸ್ಟ್, ಒಂದು ಹುಲಿಯ ಕಥೆ, ಸೋಮಾರಿಕಟ್ಟೆ, ಅಕ್ಷಯ ಪಾತ್ರೆ, ಸಿಂಗಸಿಂಗಿ ಸಂಸಾರ, ಕಾಡು ಬೆಳೆಸಿ ನಾಡು ಉಳಿಸಿ, ತಿಂಗಳು ಬೆಳಕು ಇತ್ಯಾದಿ. |
| ಸಂಸ್ಥೆ | : | 'ಸಮಸಾಂಪ್ರತಿ' (ಸಮನ್ವಯ ಸಾಂಸ್ಕೃತಿಕ ಪ್ರತಿಷ್ಠಾನ ವಿಟ್ಲ) |
| ವಿಶೇಷ ಪರಿಣತಿ | : | ಹಿರಿಯ ರಂಗ ಸಂಗೀತ ವಿನ್ಯಾಸಗಾರ. ತಾನು ನಿರ್ದೇಶಿಸಿದ ಹಾಗೂ ಇತರರ ನಿರ್ದೇಶನದ ಹಲವಾರು ನಾಟಕಗಳಿಗೆ ರಂಗ ಸಂಗೀತ. ಸಂಗೀತ ಬಣ್ಣ ಮತ್ತು ಮಕ್ಕಳ ಮನಸ್ಸು (ಮೋಹನ್ ಸೋನಾ ಜೊತೆಗೆ) ಒಂದು ವಿಶಿಷ್ಟ ಪ್ರಯೋಗ. |
| ಪ್ರಕಟಿತ ನಾಟಕಗಳು | : | ಕಪ್ಪು ಕಾಗೆಯ ಹಾಡು, ಗುಡುಗುಡು ಗುಮ್ಮಟ ದೇವರು |

**ಪಾಣಿನಿ ದೇರಾಜೆ: (ಸಮಸಾಂಪ್ರತಿ)**

ಶಿಕ್ಷಣ : ಎಲೆಕ್ಟ್ರಾನಿಕ್ಸ್ ಡಿಪ್ಲೊಮ
ನಟನೆ : ಆ ಮನಿ, ಚೋಮನ ದುಡಿ, ಆನೆ ಬಂತೊಂದಾನೆ, ನಕ್ಷತ್ರಗಳಾಚೆ, ಪುಟ್ಟಿ ಕಾಡಿಗೆ ಹೋದದ್ದು, ಕಪ್ಪು ಕಾಗೆಯ ಹಾಡು, ಅಕ್ಷಯ ಪಾತ್ರೆ, ಚೋರ ಚರಣದಾಸ, ಬೊಂಬೆ ಹೇಳಿದ ಕತೆ, ನೀಲ ನಾಡಿನೊಳಗೆ ಇತ್ಯಾದಿ.
ಪರಿಣತಿ : ರಂಗಸಂಗೀತ, ಗಿಲಿಗಿಲಿ ಮ್ಯಾಜಿಕ್ ತಂಡದ ಸದಸ್ಯ.

**ಶಂಕರ್‌ಪ್ರಸಾದ್ ಕುಂಚಿನಡ್ಕ (ಸಮಸಾಂಪ್ರತಿ)**

ನಟನೆ : ಪೋಲೀಸರಿದ್ದಾರೆ ಎಚ್ಚರಿಕೆ, ನಮ್ಮ ನಾಟ್ಯಾಭಿನಯ ಪ್ರಸಂಗ, ಬಕಾಸುರ ಬೆಟ್ಟ, ಗೊಂಬೆ ಹೇಳಿದ ಕಥೆ, ಭೂತಯ್ಯನ ಗುಡ್ಡ,
ನಿರ್ದೇಶನ : ಪುಣ್ಯಕೋಟಿ, ಪೂರ್ವರಂಗದ ಕೊನೆಗೆ, ರಾಮಣ್ಣನ ಕಥೆ, ಅಕ್ಷಯ ಪಾತ್ರೆ, ಬೌಬೌ ಟ್ರ್ರ್ಟ್ರ್,
ಪರಿಣತಿ : ರಂಗಗಾಯನ ಮತ್ತು ರಂಗಸಜ್ಜಿಕೆ.

**ಭಾರವಿ ದೇರಾಜೆ (ಸಮಸಾಂಪ್ರತಿ)**

ಶಿಕ್ಷಣ : ಎಮ್.ಎಸ್.ಡಬ್ಲ್ಯೂ ಪದವಿ
ಪರಿಣತಿ : ರಂಗಸಂಗೀತ ಮತ್ತು ರಂಗ ಬೆಳಕಿನ ವಿನ್ಯಾಸ, ಚೋರಚರಣದಾಸ, ಓಡುವವರು, ಬಂಕಾಪುರದ ಬಯಲಾಟ, ಸಾಯೋಆಟ, ಸಾಹೇಬರು ಬರುತ್ತಾರೆ ಮುಂತಾದ ನಾಟಕಗಳಿಗೆ ಸಂಗೀತ. ಶಾಸ್ತ್ರೀಯ ಗಾಯನ, ಸುಗಮಸಂಗೀತ ಮತ್ತು ಗಿಲಿ ಮ್ಯಾಜಿಕ್ ತಂಡಕ್ಕೆ ಸಂಗೀತ ನೀಡಿಕೆ. ರಾಮಧಾನ್ಯ ಚರಿತೆ, ನನ್ನ ಗೋಪಾಲ, ನ್ಯೂ ಟೋಪಿವಾಲ ಮುಂತಾದ ನಾಟಕಗಳಿಗೆ ಬೆಳಕಿನ ವಿನ್ಯಾಸ.


**ಎನ್.ಎಸ್. ರೈ (ಬಾಬಣ್ಣ)**

ವಿಳಾಸ: ಮಲಾರಬೀಡು ಮನೆ, ಕುಳಾಲು ಅಂಚೆ
ಸಾಲೆತ್ತೂರು ಗ್ರಾಮ, ಬಂಟ್ವಾಳ ತಾಲ್ಲೂಕು ದ.ಕ
ದೂ: 08255– 266337, ಮೊ: 9449105584


| | | |
|---|---|---|
| ನಟನೆ | : | 500ಕ್ಕೂ ಹೆಚ್ಚು ಕನ್ನಡ ಹಾಗೂ ತುಳು ನಾಟಕಗಳಲ್ಲಿ ಹಲವಾರು ಪಾತ್ರಗಳ ನಿರ್ವಹಣೆ. |
| ಪರಿಣತಿ | : | ನಿರ್ದೇಶನ, ಪ್ರಸಾಧನ, ಬೆಳಕುಸಂಯೋಜನೆ, ರಂಗ ವ್ಯವಸ್ಥೆ– ಹೀಗೆ ರಂಗದ ಎಲ್ಲಾ ವಿಭಾಗಗಳಲ್ಲೂ ಕಾರ್ಯನಿರ್ವಹಣೆ. |
| ಸಂಪರ್ಕ | : | ಬಿ.ವಿ ಕಾರಂತ, ಸದಾನಂದ ಸುವರ್ಣ, ಸಿಜಿಕೆ, ಅಮೃತಸೋಮೇಶ್ವರ, ಸುರೇಶ್ ಆನಗಳ್ಳಿ, ಎಂ. ಸಿ. ರಾಮು, ಮೋಹನ್‌ಚಂದ್ರ, ಕೆ.ಎನ್ ಟೇಲರ್, ಕೆ. ಬಿ ಭಂಡಾರಿ ಬಿ ರಾಮ ಕೆರೋಡಿಯನ್, ಯು ಎಂ ಮ್ಯೊದಿನಬ್ಬ,, ನಾರಾಯಣ ಶೆಟ್ಟಿ, ರಾಜಶೇಖರ ರಾವ್, ಕಾಸರಗೋಡು ಚಿನ್ನಾ ಸೇರಿದಂತೆ ಹಲವು ನಿರ್ದೇಶಕರ ಜೊತೆ ಕಾರ್ಯನಿರ್ವಹಿಸಿದ ಅನುಭವ. |
| ಚಲನಚಿತ್ರ | : | ಮೂರು ತುಳು ಚಲನಚಿತ್ರಗಳಲ್ಲಿ ಅಭಿನಯ. |
| ಪ್ರಶಸ್ತಿ | : | ಹಲವಾರು ನಾಟಕ ಪ್ರದರ್ಶನಗಳಲ್ಲಿ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ. |



ಬಂಟ್ವಾಳದ ಎಸ್‌ವಿಎಸ್ ಕಾಲೇಜಿನ ಡ್ರಾಮಟಿಕ್ ಕ್ಲಬ್‌ನ "ಕುಣಿಕುಣಿನವಿಲೆ" ನಾಟಕದ ದೃಶ್ಯ



ಮೂರ್ತಿ ದೇರಾಜೆ ನಿರ್ದೇಶನ ಹಾಗೂ ವಿನ್ಯಾಸದ
"ಹುಣ್ಣಿಮೆ ಅಜ್ಜ ಬಂದಾ" ಮಕ್ಕಳ ನಾಟಕದ ದೃಶ್ಯ





ಮೂರ್ತಿ ದೇರಾಜೆ ಮತ್ತು ಶಂಕರ್ ಪ್ರಸಾದ್ ವಿನ್ಯಾಸದ ಗೋವಿನಹಾಡು ಮಕ್ಕಳ ನಾಟಕದ ದೃಶ್ಯ




ಬಂಟ್ವಾಳ ತಾಲ್ಲೂಕಿನ ಅಳಿಕೆಯ ಶ್ರೀಸತ್ಯಸಾಯಿ ವಿದ್ಯಾಸಂಸ್ಥೆಯ ಆವರಣದಲ್ಲಿ ಈ ಬಯಲು ರಂಗಮಂದಿರವಿದೆ. 30*30 ಉದ್ದ ಅಗಲದ ವೇದಿಕೆ ನಾಟಕ ಕಾರ್ಯಕ್ರಮಗಳಿಗೆ ಪೂರಕವಾಗಿದೆ. ಸಂಸ್ಥೆಯ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಈ ವೇದಿಕೆಯಲ್ಲಿ ನಡೆಯುತ್ತವೆ. ಸಂಸ್ಥೆಯ ಅನುಮತಿ ಮೇರೆಗೆ ಸಾರ್ವಜನಿಕರು ಸಹಾ ಕಾರ್ಯಕ್ರಮಗಳನ್ನು ನೀಡಬಹುದು.



(ಬಿ.ಸಿ.ರೋಡು ಪಟ್ಟಣದಲ್ಲಿರುವ ಈ ರಂಗಮಂದಿರದ ವಿವರಗಳು ಲೇಖನದಲ್ಲಿವೆ.)



ಮೂರ್ತಿ ದೇರಾಜೆ

## ಮಂಗಳೂರು ತಾಲ್ಲೂಕು ಕನ್ನಡ ರಂಗಭೂಮಿ

### ಸದ್ದಿಲ್ಲದೆ ಗದುಗೆ ಭದ್ರ

ಕರ್ನಾಟಕದ ರಂಗ ಚಟುವಟಿಕೆಗಳು ಕರಾವಳಿಯಲ್ಲಿ ಹರಡಿಕೊಂಡಿದ್ದ ಅವಧಿಯಲ್ಲಿ ಶ್ರೀಮಂತಿಕೆಯ ಗಂಡು ಕಲೆಯ ಯಕ್ಷಗಾನ ಮಾತ್ರ ಪೂರ್ಣ ಪ್ರಮಾಣದಲ್ಲಿ ಈ ಭಾಗದಲ್ಲಿ ರಾರಾಜಿಸುತ್ತಿತ್ತು. ಇದರ ಮಧ್ಯೆ ಪುರಾಣ ಕಥೆಯಾಧಾರಿತ ಕನ್ನಡ ನಾಟಕಗಳು ಎಲ್ಲೆಡೆ ಪ್ರದರ್ಶನಗೊಳ್ಳುತ್ತಿದ್ದುದೇ ವಿಶೇಷ. ಅದರಲ್ಲೂ ಮಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ದಿ| ಕೀಕಾನ ರಾಮಚಂದ್ರರಾಯರು, ದಿ| ಬಾಲಗೋಪಾಲ್, ದಿ| ಕೃಷ್ಣಗೋಪಾಲ್, ದಿ| ಗೋಪಿನಾಥ್ ಭಟ್ ಗುಲ್ವಾಡಿ ಮುಂತಾದವರು ರಂಗಸಮಾಜದಲ್ಲಿ ಗುರುತಿಸಿಕೊಳ್ಳುವಾಗ ದಿ| ಎಂ.ಎನ್. ಕಾಮತ್, ದಿ| ಶಿವರಾಮ ಕಾರಂತರಂತೆ ರಮಾನಂದ ಚೂರ್ಯರವರು ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಲು ಮುಂದಾಗಿದ್ದರು.

ಮಂಗಳೂರಿನ ಬೋಳೂರು ಗ್ರಾಮೀಣ ಪರಿಸರದ ಕೆಲವು ಯುವಕರ ಉತ್ಸಾಹದಿಂದ ರೂಪುಗೊಂಡ ಒಂದು ನಾಟಕ ತಂಡ ಮುಂದೆ 1936ರಲ್ಲಿ "ಕರ್ನಾಟಕ ನಾಟಕ ಸಭಾ ಬೋಳೂರು" ಎಂದು ಹೆಸರು ಪಡೆದು ಮುನ್ನಡೆದು ಈ ಹೊತ್ತಿಗೆ ಅಮೃತ ಮಹೋತ್ಸವವನ್ನು ಆಚರಿಸಿಕೊಂಡಿದೆ. ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ಸಂದರ್ಭಕ್ಕನುಸಾರವಾಗಿ ಪ್ರದರ್ಶಿಸಿರುವ ಈ ನಾಟಕ ಸಭಾವನ್ನು ಹಿರಿಯರಾದ ಬಿ.ನಾಗೇಶ್ ರಾವ್, ಬಿ.ಸುಮಂತ್ ಕುಮಾರ್, ಪಿ.ಆರ್.ಬೋಳೂರು, ಮುಂತಾದವರು ಈಗಲೂ ಮುನ್ನಡೆಸುತ್ತಿದ್ದಾರೆ. ಅತ್ಯಂತ ಹಿರಿಯ ಸಂಸ್ಥೆಯಾದ "ಕರ್ನಾಟಕ ನಾಟಕ ಸಭಾ ಬೋಳೂರು" ಕನ್ನಡ ರಂಗಭೂಮಿಗೆ ಕರಾವಳಿ ಭಾಗದಿಂದ ತನ್ನ ಅನನ್ಯ ಕೊಡುಗೆ ನೀಡಿದೆ.

ಆದರೆ 60ರ ದಶಕದಲ್ಲಿ ಬಿ.ವಿ.ಕಾರಂತರು ಕರಾವಳಿ ಪ್ರದೇಶದ ಹಲವೆಡೆ ರಂಗ ಕಾರ್ಯವನ್ನು ಪ್ರಚಾರಪಡಿಸಲು ಆರಂಭಿಸಿದರು. ಅವರು ನಡೆಸಿಕೊಡುತ್ತಿದ್ದ ರಂಗತರಬೇತಿ ಶಿಬಿರಗಳ ಮೂಲಕ ಸಾಕಷ್ಟು ಜನ ರಂಗಭೂಮಿಯನ್ನು ಗೌರವದಿಂದ ನೋಡುವುದರ ಜೊತೆಗೆ ತಾವೂ ತೊಡಗಿಕೊಳ್ಳುವಂತಾಯಿತು. ಹೀಗೆ 70ರ ದಶಕದಲ್ಲಿ ಮಂಗಳೂರಿನಲ್ಲಿ ಕನ್ನಡ ರಂಗಭೂಮಿ ಹೊಸ ಚೈತನ್ಯ ಪಡೆದುಕೊಂಡು ರಂಗತಂಡಗಳು ಹುಟ್ಟಿಕೊಳ್ಳಲು ಕಾರಣವಾಯಿತು. 1976ರಲ್ಲಿ ರಾಜ್ಯದ ಪ್ರಸಿದ್ಧ ನಿರ್ದೇಶಕ ಎನಿಸಿಕೊಂಡ ಪ್ರಸನ್ನರವರು 'ಸಮುದಾಯ' ತಂಡಕ್ಕೆ ನಾಟಕ ಸಿದ್ಧಪಡಿಸುವ ಮೂಲಕ ರಂಗ ಕಾರ್ಯಕ್ಕೆ ಹೆಚ್ಚಿನ

ಬಲವನ್ನು ತಂದುಕೊಟ್ಟರು. ಅದೇ ಸ್ಫೂರ್ತಿಯಲ್ಲಿ ಮಂಗಳೂರಿನ ಸಮಾನ ಮನಸ್ಕರಿಂದ 'ಭೂಮಿಕಾ' ತಂಡ 1979ರಲ್ಲಿ ಹುಟ್ಟಿಕೊಂಡರೆ ಕೆ.ಶ್ರೀಧರ ಅವರ ನೇತೃತ್ವದಲ್ಲಿ 'ಅಭಿವ್ಯಕ್ತ' ರಂಗತಂಡ 1980ರಲ್ಲಿ ಕಾರ್ಯವನ್ನು ಆರಂಭಿಸಿತು. 1982ರಲ್ಲಿ ಎಂ.ಸಿ.ರಾಮು, ಮೋಹನ್‌ಚಂದ್ರ ನೇತೃತ್ವದಲ್ಲಿ 'ಆಯನ' ತಂಡ ಸ್ಥಾಪನೆಗೊಂಡು ಯಶಸ್ವಿ ನಾಟಕಗಳನ್ನು ನೀಡಲು ಮುಂದಾಯಿತು. ಬಳಿಕ ಸುರತ್ಕಲ್‌ನ 'ಕಾಳಜಿ' ಮಂಗಳೂರಿನ 'ಸಂಕೇತ್' ಹಾಗೂ ದಶಕದಿಂದೀಚೆಗೆ ಹುಟ್ಟಿಕೊಂಡ 'ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ'ದ ಮೂಲಕ ಮಂಗಳೂರಿನ ರಂಗಭೂಮಿಯ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇದೆ.

ಆರಂಭದಲ್ಲಿ ಸಮುದಾಯ ತಂಡ 'ಮಾರೀಚನ ಬಂಧುಗಳು' ಮಂಗಳೂರಿನಾದ್ಯಂತ ಪ್ರದರ್ಶಿಸಿತು. ಅದೇ ಅವಧಿಯಲ್ಲಿ ಎಂ.ಸಿ.ರಾಮು, ಮೋಹನ್‌ಚಂದ್ರರವರ ಮುಂದಾಳತ್ವದಲ್ಲಿ ರಾಜ್ಯ ಮಟ್ಟದ ಬೀದಿ ನಾಟಕ ಸಮಾವೇಶವು ಮಂಗಳೂರಿನಲ್ಲಿ ನಡೆದಿತ್ತು. 'ಭೂಮಿಕಾ' ತಂಡವು ಸಾಯೋ ಆಟ, ಕೊಡೆಗಳು, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಹುಡುಕಾಟ, ಓಡುವವರು, ತುಘಲಕ್, ಅಂಜಿ, ಬೇರಿಲ್ಲದವರು, ಆಷಾಢದ ಒಂದು ದಿನ, ನಾಟಕವನ್ನು ರಂಗಕ್ಕೆ ಅರ್ಪಿಸಿದರು. ಅಭಿವ್ಯಕ್ತ ತಂಡವು ರಣಹದ್ದುಗಳು, ಕೊಂಬಿನವರು, ಬೇಲಿ ಮತ್ತು ಹೊಲ, ಪೊಲೀಸರಿದ್ದಾರೆ ಎಚ್ಚರಿಕೆ, ಸಾಕ್ಷಾತ್ಕಾರ, ಮಾಲಿ ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಬಳಿಕ ಎಂ.ಸಿ.ರಾಮು, ಮೋಹನ ಚಂದ್ರರವರು 'ಆಯನ' ತಂಡದ ಮೂಲಕ 'ಜೂಲಿಯಸ್ ಸೀಜರ್'ಗಳನ್ನು ವಿಶೇಷವಾದ ರಂಗತಂತ್ರಗಳನ್ನು ಬಳಸಿಕೊಂಡು ಪ್ರಯೋಗಿಸಿದರು. ಆನಂತರ ಜಗನ್ ಪವಾರ್ ಮುಂದಾಳುತ್ವದ 'ಸಂಕೇತ್' ತಂಡ ನಾಗಮಂಡಲ, ಒಂದು ಲೋಕ ಕಥೆ, ಉರುಳು, ವ್ಯಾನ್ ಗೋ, ಅಚಲ, ಧರಣಿಮಂಡಲ ಮಧ್ಯದೊಳಗೆ, ಅಶ್ವಪರ್ವ, ನಿರ್ವಾಣ, ಅವನು ಇವನು ಮತ್ತು ನಾವು, ಜನದಾಸ ನಾಟಕಗಳನ್ನು ರಂಗವೇರಿಸುವುದರ ಜೊತೆಗೆ ಮಂಗಳೂರು ತಾಲ್ಲೂಕಿನಾದ್ಯಂತ ಸಾಮಾಜಿಕ ಉದ್ದೇಶಗಳ ಬೀದಿನಾಟಕಗಳನ್ನು ಪ್ರದರ್ಶಿಸಿತು. ಸದಾನಂದ ಸುವರ್ಣರವರ ನೇತೃತ್ವದಲ್ಲಿ ನಡೆದ ಈ ರಾಜ್ಯಮಟ್ಟದ ಬೀದಿನಾಟಕ ಸಮ್ಮೇಳನವು ನೂರಾರು ಕಲಾವಿದರು ಮತ್ತು ನಿರ್ದೇಶಕರು ಭಾಗವಹಿಸುವುದರೊಂದಿಗೆ ಸಾರ್ಥಕ್ಯ ಪಡೆದುಕೊಂಡಿತು. ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಮೂಲಕ ಕೋರ್ಟ್ ಮಾರ್ಷಲ್, ಮಳೆ ನಿಲ್ಲುವವರೆಗೆ ನಾಟಕಗಳನ್ನು ಪ್ರಸ್ತುತಪಡಿಸಿದ್ದಾರೆ.

ಈಗಾಗಲೇ ಮಂಗಳೂರಿನಲ್ಲಿ ಕನ್ನಡ ರಂಗಭೂಮಿಗೆ ಸಂಬಂಧಿಸಿದಂತೆ ಪ್ರಖ್ಯಾತ ನಿರ್ದೇಶಕರುಗಳಾದ ಪ್ರಸನ್ನ, ಸದಾನಂದ, ಸುವರ್ಣ, ಸುರೇಶ್‌ಆನಗಳ್ಳಿ, ದಿ| ಬಿ.ಆರ್. ನಾಗೇಶ್, ದಿ| ಸಿ.ಜಿ.ಕೆ, ಸುರೇಂದ್ರನಾಥ್, ಕೃಷ್ಣಮೂರ್ತಿಕವತ್ತಾರು, ಮೋಹನಚಂದ್ರ, ಎಂ.ಸಿ. ರಾಮು, ಮೋಹನ ಸೋನ, ಕೃಷ್ಣ ಭಟ್, ಕಾಸರಗೋಡು ಚಿನ್ನಾ, ಜೀವನ್ ರಾಂ ಸುಳ್ಯ, ಮುಂತಾದವರ ಅನೇಕ ನಾಟಕಗಳನ್ನು ನಿರ್ದೇಶಿಸಿ ರಂಗಕಾರ್ಯ ನಿರಂತರತೆಗೆ ಪ್ರೇರಕರಾಗಿದ್ದಾರೆ.

ಮಂಗಳೂರಿನ ಪ್ರಕಾಶ.ಎ.ಎನ್., ಐವನ್ ಡಿ'ಸಿಲ್ವಾ, ಮ್ಯಾಕ್ಸಿಂ ರಾಡ್ರಿಗಸ್, ಕೆ.ಕೆ. ಪೇಜಾವರ್, ವೇಣುಮಿತ್ರ ಜತೆಗೆ ಮೈಮ್‌ರಾಮ್‌ದಾಸ್, ನವೀನ್ ಪಿಲಾರ್, ವಿದ್ದುಉಚ್ಚಿಲ್ ಮತ್ತು ಶಶಿರಾಜ್ ಕಾವೂರುರವರು ನಾಟಕ ರಚನೆ ಜೊತೆಗೆ ನಿರ್ದೇಶನದ ಕಡೆಗೂ ಒಲವು ಮೂಡಿಸಿಕೊಂಡವರು.

ಕಾಲೇಜು ರಂಗಭೂಮಿ ಚಟುವಟಿಕೆಯನ್ನು ಗಮನಿಸಿದರೆ ರಂಗ ತರಬೇತಿಯ ಮೂಲಕ ಕಲಾವಿದರನ್ನು ತಯಾರಿಗೊಳಿಸುವ ಕಾರ್ಯಕ್ಕೆ ಬೆರಳೆಣಿಕೆಯ ಕಾಲೇಜುಗಳು ಮುಂದಾಗಿವೆ. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಡಾ॥ ನಾ.ದಾಮೋದರ ಶೆಟ್ಟಿಯವರು ಕಾಲೇಜಿನ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿ ಮಾರೀಚನ ಬಂಧುಗಳು, ಭತ್ತದ ಕಾಳುಗಳು, ಕುಂಟಾ ಕುಂಟಾಕುರವತ್ತೀ, ಸಾಯೋ ಆಟ ಮುಂತಾದ ನಾಟಕವನ್ನು ಪ್ರದರ್ಶಿಸಿದ್ದಾರೆ. 80ರ ದಶಕದಲ್ಲಿ ಸುರತ್ಕಲ್‌ನ ಕೆ.ಆರ್.ಇಂಜಿನೀಯರಿಂಗ್ ಕಾಲೇಜು ಸಹ ನಾಟಕ ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ರಂಗಾಸಕ್ತರನ್ನು ಸೆಳೆಯುವಲ್ಲಿ ಮುಂದಾಯಿತು. ಇಷ್ಟು ಬಿಟ್ಟರೆ, ಹೇಳಿ ಕೊಳ್ಳುವಂತಹ ಸಾಧನೆಗಳು ದಾಖಲಾಗಿಲ್ಲ. ನಂತರ ಎಸ್.ಡಿ.ಎಂ.ಕಾಲೇಜು, ಕೆನರಾ ಕಾಲೇಜು, ವಿಜಯಾ ಕಾಲೇಜುಗಳಲ್ಲಿ ನಾಟಕ ಪ್ರದರ್ಶನಗಳು ನಡೆದದ್ದು ಅಲ್ಲಿನ ವಾತಾವರಣಕ್ಕೆ ಪೂರಕವಾಗಿದೆ.

ಮಕ್ಕಳ ನಾಟಕಕ್ಕೆ ಸಂಬಂಧಿಸಿದಂತೆ ಎಂ.ಸಿ.ರಾಮು ನೇತೃತ್ವದ ಆಯನ ಮಕ್ಕಳ ಅಕಾಡೆಮಿ ಸಾಕಷ್ಟು ರಂಗ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ರಂಗಾಸಕ್ತಿ ಮೂಡಿಸಿದೆ. ಅಲ್ಲದೆ ಹಲವಾರು ಮಕ್ಕಳ ನಾಟಕಗಳು ಪ್ರದರ್ಶಿಸಿವೆ. ಸ್ವರೂಪ ಅಧ್ಯಯನ ಸಂಸ್ಥೆಯ ಮೂಲಕ ಗೋಪಾಡ್ಕಾರ್‌ರವರು ಮಕ್ಕಳಲ್ಲಿನ ಸೂಕ್ತ ಪ್ರತಿಭೆಯನ್ನು ಹೊರಗೆಡುವುದರ ಜೊತೆಗೆ ಮಕ್ಕಳ ನಾಟಕ ಮತ್ತು ರಂಗ ಚಟುವಟಿಕೆಯನ್ನು ಹಮ್ಮಿಕೊಂಡರು. ರಾಗತರಂಗ, ಪ್ರಸಾದ್ ಅಧ್ಯಯನ ಕೇಂದ್ರ ಮತ್ತು ಇನ್ನಿತರ ಹತ್ತು ಹಲವು ಶಾಲಾ ಕಾಲೇಜುಗಳಲ್ಲಿ ರಂಗ ಶಿಬಿರಗಳು ನಡೆಯುತ್ತಿದ್ದು ಸಾಕಷ್ಟು ಮಕ್ಕಳ ನಾಟಕಗಳು ಸಿದ್ಧವಾಗುತ್ತಿವೆ. ಕೆ.ಕೆ.ಪೇಜಾವರ್, ಕೆ.ವಿ. ರಮಣ್, ಜಗನ್ ಪವಾರ್, ವೇಣು ಮಿತ್ರ ಮುಂತಾದರವರು ಮಕ್ಕಳ ನಾಟಕಗಳನ್ನು ನಿರ್ದೇಶಿಸುವ ಮೂಲಕ ಮಕ್ಕಳ ನಾಟಕ ರಂಗಕ್ಕೆ ಹೊಸ ಮೆರುಗನ್ನು ನೀಡುತ್ತಿದ್ದಾರೆ.

ಮಂಗಳೂರಿನ ಉದ್ಯೋಗ ಸಂಸ್ಥೆಗಳು ತಮ್ಮದೇ ಆದ ನೆಲೆಯ ಹಲವಾರು ಸಂಸ್ಥೆಗಳನ್ನು ಹುಟ್ಟುಹಾಕಿದ್ದು, ಪ್ರತೀ ವರ್ಷ ಸ್ಪರ್ಧಾನಾಟಕಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿರುವುದು ವಿಶೇಷ. 'ನೀನಾಸಂ, ಶಿವಸಂಚಾರ, ತುಮುರೀ ನಾಟಕ ತಂಡಗಳು ಮಂಗಳೂರಿನಲ್ಲಿ ನಾಟಕಗಳನ್ನು ಪ್ರದರ್ಶಿಸುತಿದ್ದು, ಹೊಸ ಪ್ರೇಕ್ಷಕರನ್ನು ಸೆಳೆಯುವುದರ ಜೊತೆಗೆ ನಾಟಕ ರಂಗದತ್ತ ಗಮನ ನೀಡುವಂತೆ ಪ್ರೇರಣೆ ನೀಡುತ್ತಿದೆ. ಲಾರಿ ನಾಟಕ, ವಠಾರ ನಾಟಕ, ಬೀದಿನಾಟಕಗಳ ಮೂಲಕ ರಂಗಭೂಮಿ ಕಾರ್ಯದಲ್ಲಿ ಹೊಸ ಹುರುಪು ಕಾಣಿಸಿಕೊಂಡಿವೆ.

ಹಿಂದೆ ಸುರತ್ಕಲ್‌ನ ಕೆ.ಆರ್.ಇ.ಸಿ. ಮತ್ತು ಅಭಿವ್ಯಕ್ತ ತಂಡವು ಕರ್ನಾಟಕ ನಾಟಕ

ಅಕಾಡೆಮಿ ಸಹಯೋಗದೊಂದಿಗೆ ನಾಟಕ ಸ್ಪರ್ಧೆಯನ್ನು ನಡೆಸಿದ್ದು ಬಿಟ್ಟರೆ ಇತ್ತೀಚೆಗಷ್ಟೇ ಕಾಲೇಜು ಮಟ್ಟದಲ್ಲಿ ನಾಟಕ ಸ್ಪರ್ಧಾ ಕಾರ್ಯಕ್ರಮಗಳು ನಡೆಯುತ್ತಿವೆ. ಶಾಲೆಗಳಲ್ಲೂ ನಾಟಕ ಸ್ಪರ್ಧೆ ನಡೆಯುತ್ತಿದ್ದು ತಾಲ್ಲೂಕಿನ ಶಾಲಾ ಶಿಕ್ಷಕರು ರಂಗಭೂಮಿಯತ್ತ ಒಲವು ಮೂಡಿಸಿಕೊಳ್ಳುತ್ತಿದ್ದಾರೆ.

ವಾಲ್ಟರ್ ಡಿ ಸೋಜಾ, ಸುರೇಶ್ ಶೆಟ್ಟಿಯಂತಹ ರಂಗ ಪ್ರತಿಭಾವಂತರು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡರೆ  ಮೈಮ್‌ರಮೇಶ್, ಗೀತಾ ಸುರತ್ಕಲ್, ಪ್ರಮೀಳಾ ಬೇಂಗ್ರೆ ಮುಂತಾದವರು ರಂಗಾಯಣವನ್ನು ಸೇರಿ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ. ನಿರ್ದೇಶಕರೆನಿಸಿಕೊಂಡಿರುವವರು. ಇಂತಹ ಪ್ರಬುದ್ಧ ರಂಗಕರ್ಮಿಗಳನ್ನು ಹೊಂದಿದ್ದರೂ ಮಂಗಳೂರಿನಲ್ಲಿ ಉತ್ತಮ ನಾಟಕಗಳ ಕೊರತೆಯಿದೆ ಮತ್ತು ಹೆಚ್ಚೆಚ್ಚು ನಾಟಕಗಳು ಪ್ರದರ್ಶನವಾಗಿತ್ತಿಲ್ಲ ಎಂಬ ಕೂಗು ಕೇಳಿ ಬರುತ್ತದೆ. ಸಾಂಘಿಕತೆ ಮತ್ತು ಸಮಾನ ಮನಸ್ಕರ ಕೊರತೆ ಅಲ್ಲದೆ ವಾತಾವರಣ, ಮನೋಬಲ, ಆರ್ಥಿಕ ಬಲವನ್ನು ಗಣನೆಗೆ ತೆಗೆದುಕೊಂಡಾಗ ವ್ಯತ್ಯಾಸ ಕಂಡುಬಂದಿರುವುದು ನಿಜ. ಕಾಲಕ್ಕೆ ತಕ್ಕಂತೆ ಬದಲಾವಣೆ ಸಹಜವಾದರೂ ಅಂತಹ ತೀರಾ ಭಿನ್ನವಾದ ವಾತಾವರಣದಲ್ಲೂ ಈಗ ಇಲ್ಲಿರುವ ಒಂದೆರಡು ಜೀವಂತ ನಾಟಕ ತಂಡಗಳು ನಿರಂತರವಾಗಿ ಸದ್ದು ಮಾಡದೇ ಕಾರ್ಯಶೀಲವಾಗಿರುವುದಂತೂ ಸತ್ಯ. ಹಳೆಯದನ್ನು ಉಳಿಸಿಕೊಂಡು, ಹೊಸತನವನ್ನು ಕಂಡುಕೊಳ್ಳುವ ಮೂಲಕ ಭವಿಷ್ಯವನ್ನು ಕಾಣುವ ರಂಗಕರ್ಮಿಗಳು ನಿರಂತರವಾಗಿ ರಂಗಕಾರ್ಯದಲ್ಲಿ ತೊಡಗಿಕೊಳ್ಳಲಿ ಎಂಬುದೇ ನಮ್ಮೆಲ್ಲರ ಆಶಯ

## ರಂಗತಂಡಗಳು

**"ಭೂಮಿಕಾ"** 1979ರಲ್ಲಿ ಸ್ಥಾಪನೆ. ಏರ್ಯ ಲಕ್ಷ್ಮೀ ನಾರಾಯಣ ಆಳ್ವ, ಯು.ನಾರಾಯಣ ಶರ್ಮಾ, ನಾ.ದಾಮೋದರ ಶೆಟ್ಟಿ, ಮುಂತಾದ ಹಿರಿಯ ರಂಗಕರ್ಮಿಗಳ ನಾಯಕತ್ವದಲ್ಲಿ ಮುನ್ನಡೆದ ಭೂಮಿಕಾ ತಂಡ ಸಾಯೋ ಆಟ, ಅಲ್ಲಾದ ಸತ್ತು ಹೋದ, ಕೊಡೆಗಳು, ಭತ್ತದ ಕಾಳುಗಳು, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಗೋಡೆ ಬೇಕೇ ಗೋಡೆ. ಬೆಳ್ಳಿ ಬಯಲು, ಹುಡುಕಾಟ, ಓಡುವವರು, ಏನ ಬೇಡಲಿ ನಿನ್ನ ಬಳಿಗೆ ಬಂದು, ತುಘಲಕ್, ಗುಲಾಮನ ಸ್ವಾತಂತ್ರ್ಯ ಯಾತ್ರೆ, ಬಾಡಿಗೆಮನೆ, ಅಪೂರ್ಣರು, ಅಂಜಿ, ಮಾಡುಸಿಕ್ಕದಲ್ಲ, ಬಂಗಾರಾಮ ಮುಂತಾದ ನಾಟಕಗಳನ್ನು ರಂಗದ ಮೇಲೆ ತಂದಿದೆ. 1981 ಮತ್ತು 1983 ರಲ್ಲಿ ಕೆ.ವಿ.ಸುಬ್ಬಣ್ಣರವರ ಉಪಸ್ಥಿತಿಯಲ್ಲಿ ಹವ್ಯಾಸಿ ರಂಗಭೂಮಿ ವಿಚಾರಗೋಷ್ಠಿ ಮತ್ತು ಪೂರ್ಣ ಪ್ರಮಾಣದ ರಂಗತರಬೇತಿ ಶಿಬಿರಗಳನ್ನು ನಡೆಸಿದೆ.

ಲಕ್ಷ್ಮಣ ಕುಮಾರ್ ಮಲ್ಲೂರು, ದಿ. ಕೆ.ಶ್ರೀನಿವಾಸ ಭಟ್, ಪಾ.ನ.ಮಯ್ಯ, ಕೃಷ್ಣಮೂರ್ತಿ, ರಾಧಾಕೃಷ್ಣ, ಜಿ.ಎನ್.ಭಟ್, ಮಾಧವ ಆಚಾರ್ಯ, ಶ್ರೀಕಲಾ ಉಡುಪ, ಮಹಾಲಿಂಗ, ಮನೋರಮಾ ಭಟ್, ವರದರಾಜ್, ರಾಜಶೇಖರ್, ಸುಧಾಕರರಾವ್ ಪೇಜಾವರ ಮುಂತಾದವರು ನಟರಾಗಿ, ಸದಸ್ಯರಾಗಿ ಸಕ್ರಿಯವಾಗಿ 'ಭೂಮಿಕಾ'ದಲ್ಲಿ

ತೊಡಗಿಕೊಂಡಿದ್ದಾರೆ.

**"ಅಭಿವ್ಯಕ್ತ" ಮಂಗಳೂರು** 1980ರ ದಶಕದಲ್ಲಿ ದಿ. ಕೆ. ಶ್ರೀಧರ್ ಅವರ ನೇತೃತ್ವದಲ್ಲಿ ಪ್ರಾರಂಭಗೊಂಡ ಅಭಿವ್ಯಕ್ತ ಆ ದಿನಗಳಲ್ಲಿ ದ. ಕ. ಜಿಲ್ಲೆಯ ರಂಗಭೂಮಿ ಕ್ಷೇತ್ರದಲ್ಲಿ ಲಗುಬಗೆಯ ಕಾರ್ಯ ನಿರ್ವಹಿಸಿತು. ಲೂಸಿ ಪಿರೇರ, ರಾಜಶೇಖರ ರಾವ್ ಮುಂತಾದವರ ಸಾರಥ್ಯದಲ್ಲಿ ಮುನ್ನಡೆದ ಈ ತಂಡ ಹಲವಾರು ನಾಟಕಗಳನ್ನು ಪ್ರದರ್ಶಿಸುವುದರ ಜೊತೆಗೆ ರಂಗಪರಿಕರಗಳು ಹಾಗೂ ಬೆಳಕಿನ ವ್ಯವಸ್ಥೆಯನ್ನು ಹೊಂದಿತು. "ಕರಾವಳಿ ಹವ್ಯಾಸಿ ಕಲಾವಿದರ ಒಕ್ಕೂಟ"ದೊಂದಿಗೆ ಮಂ.ವಿ.ವಿ ವ್ಯಾಪ್ತಿಯ ಕಾಲೇಜು ನಾಟಕೋತ್ಸವವನ್ನು ಏರ್ಪಡಿಸಿದ ಹಿರಿಮೆ 'ಅಭಿವ್ಯಕ್ತ'ಕ್ಕೆ ಇದೆ.

**"ಸಂಕೇತ್" ಮಂಗಳೂರು** 1982 ರಲ್ಲಿ ಜಗನ್‌ಪವಾರ್ ನೇತೃತ್ವದಲ್ಲಿ ಸ್ಥಾಪನೆಗೊಂಡ ಈ ಹವ್ಯಾಸಿ ನಾಟಕ ತಂಡ ಸತೀಶ್ ಜೋಗಿ, ನರೇಂದ್ರ, ರಾಮಚಂದ್ರರ್ ಬೈಕಂಪಾಡಿ, ಸುಧಾನಂದ, ಸಂಪತ್ ಕುಮಾರ್ ಮುಂತಾದ ಹಿರಿಯ ಕಿರಿಯ ಸದಸ್ಯರನ್ನೊಳಗೊಂಡು ಮುನ್ನಡೆಯುತ್ತಿದೆ. ಕಾರ್ಗತ್ತಲಬೆಳ್ಳಕ್ಕಿ, ನಿರ್ವಾಣ, ಶಿವಪಾರ್ವತಿ, ವೈಶಾಲಿ, ಒಂದು ಲೋಕ ಕಥೆ, ಅಶ್ವಪರ್ವ, ಧರಣಿ ಮಂಡಲ ಮಧ್ಯದೊಳಗೆ, ವ್ಯಾನ್ ಗೋ, ಅಚಲ, ಟಿಪ್ಪುಸುಲ್ತಾನ್, ದುರಂತ ಕರ್ಣ, ಜನದಾಸ, ರಾಜಾ ವಿಷ್ಣುವರ್ಧನ, ಅವನು ಇವನು ಮತ್ತು ನಾವು, ಉರುಳು ಮುಂತಾದ ನಾಟಕಗಳು ಹಾಗೂ ಹಲವಾರು ಬೀದಿನಾಟಕಗಳನ್ನು ಪ್ರದರ್ಶಿಸಿದೆ. ಜಗನ್‌ಪವಾರ್ ಮತ್ತು ಸದಾನಂದಸುವರ್ಣ ಅವರು ನಾಟಕ ರಚನೆ ಮತ್ತು ನಿರ್ದೇಶಕರಾಗಿ ರಾಜ್ಯದ ಹಲವು ಯೋಜನೆಗಳ ಜಾಗೃತಿ ಜಾಥಾದಲ್ಲಿ ಭಾಗಿಯಾಗಿದ್ದಾರೆ. ಪ್ರಸಾಧನ ತರಬೇತಿ ಶಿಬಿರ ಮಕ್ಕಳ ವಿಕಸನಾ ಶಿಬಿರವನ್ನು ಹಲವಾರು ಸ್ಥಳಗಳಲ್ಲಿ ನಡೆಸಿದ ಅನುಭವವಿದೆ.

**"ಆಯನ" ಮಂಗಳೂರು** 'ಆಯನ' 1982ರಲ್ಲಿ ಜನ್ಮ ತಳೆಯಿತು. ಮೋಹನಚಂದ್ರ, ಎಂ ಸಿ ರಾಮು ಮುಂತಾದವರ ನೇತೃತ್ವದಲ್ಲಿ ಮುನ್ನಡೆದ ಈ ತಂಡ 'ಕತ್ತಲೆ ದಾರಿ ದೂರ', 'ಹಳ್ಳಿ ಹುಡುಗಿ', 'ಆಪತ್ತಿನ ಕಥೆಗಳು', 'ಕುರಿ', 'ಬಸ್ತಿ'. 'ಜೂಲಿಯಸ್ ಸೀಜರ್', ಮುಂತಾದ ಹಲವಾರು ನಾಟಕಗಳನ್ನು ಪ್ರದರ್ಶಿಸಿದೆ. ರಂಗತರಬೇತಿ ಶಿಬಿರ, ವಿಚಾರಗೋಷ್ಠಿಗಳನ್ನು ನಡೆಸಿರುವ ಈ ತಂಡ ಕರಾವಳಿ ಹವ್ಯಾಸಿ ರಂಗಭೂಮಿಗೆ ಗಟ್ಟಿ ನೆಲೆ ಒದಗಿಸಿದೆ.

## ಪ್ರಸಾಧನ ಕೇಂದ್ರಗಳು

**ಲಲಿತ ಕಲಾ ಆರ್ಟ್ಸ್ ಮಂಗಳೂರು –** ವಿಳಾಸ: ಲಲಿತ ಕಲಾ ಆರ್ಟ್ಸ್, 'ಹೊನ್ನಗಿರಿ', ಎಸ್ ಡಿ ಎಂ ಲಾ ಕಾಲೇಜು ಹಿಂಬದಿ, ಎಂ ಜಿ ರಸ್ತೆ ಮಂಗಳೂರು. 60ರ ದಶಕದಲ್ಲಿ ಪ್ರಾರಂಭಗೊಂಡ ಈ ಸಂಸ್ಥೆಯ ಸ್ಥಾಪಕರು. ದಿ. ಹೊನ್ನಯ್ಯ ಹಾಗೂ ಎಸ್ ಶೆಟ್ಟಿಗಾರ್.

ನೃತ್ಯ, ನಾಟಕ, ಯಕ್ಷಗಾನ, ಮುಂತಾದ ಕಾರ್ಯಕ್ರಮಗಳಿಗೆ ಬೇಕಾದ ದೃಶ್ಯ ಪರದೆಗಳು, ವೇಷಭೂಷಣ ಮುಂತಾದ ಪರಿಕರಗಳನ್ನು ಈ ಸಂಸ್ಥೆ ಒದಗಿಸುತ್ತಿದೆ.

## ಪ್ರಸಾಧನ ಕಲಾವಿದ

**ಬಾಬುರಾಯ ಆಚಾರ್ಯ** – ವಿಳಾಸ: 'ಆಚಾರ್ಯ ನಿವಾಸ', ರೈಲ್ವೆ ಮೇಲ್ಸೇತುವೆ ಕೆಳರಸ್ತೆ, ಭಟ್ನ ನಗರ, ತೊಕ್ಕೊಟು, ಮಂಗಳೂರು. ಪ್ರಸಾಧನ ಕಲಾವಿದರಾದ ಬಾಬುರಾಯ ಆಚಾರ್ಯ ಅವರು ಈ ಕಲೆಯಲ್ಲಿ ಪರಿಣತರು. ವೈಯಕ್ತಿಕವಾಗಿ ಈಗಲೂ ನಾಟಕಗಳಲ್ಲಿ ಪ್ರಸಾಧನ ಕಲಾವಿದರಾಗಿ ಭಾಗವಹಿಸುತ್ತಾರೆ. 72ರ ಹರೆಯದ ಇವರು ಹಲವಾರು ಸನ್ಮಾನಗಳಿಗೆ ಭಾಜನರಾಗಿದ್ದಾರೆ.

## ರಂಗಮಂದಿರಗಳು

**ಪುರಭವನ :** 50ರ ದಶಕದಲ್ಲಿ ಮಂಗಳೂರಿನ ಹೃದಯ ಭಾಗದಲ್ಲಿ ಸ್ಥಾಪನೆಗೊಂಡ ಪುರಭವನ ಯಕ್ಷಗಾನ, ನಾಟಕ ನೃತ್ಯ ಮುಂತಾದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರವಾಗಿದೆ.

ನಗರಪಾಲಿಕೆ ಆಳ್ವಿಕೆಗೆ ಒಳಪಟ್ಟಿರುವ ಪುರಭವನ ಇತ್ತೀಚೆಗೆ ನವೀಕರಣಗೊಂಡಿದ್ದು ನಾಟಕ, ಯಕ್ಷಗಾನ, ಮುಂತಾದ ಕಾರ್ಯಕ್ರಮಗಳಿಗೆ ರಿಯಾಯಿತಿ ದರದ ಬಾಡಿಗೆಯಲ್ಲಿ ದೊರೆಯುತ್ತದೆ.

**ಡಾನ್‌ಬೊಸ್ಕೊ ಹಾಲ್ :** 50ರ ದಶಕದಲ್ಲಿ ಸ್ಥಾಪನೆಗೊಂಡ ಈ ರಂಗಮಂದಿರ ಖಾಸಗಿ ಒಡೆತನಕ್ಕೆ ಸೇರಿದೆ. ಅಂದಾಜು 700ರಷ್ಟು ಆಸನ ವ್ಯವಸ್ಥೆ ಹೊಂದಿರುವ ಡಾನ್‌ಬೊಸ್ಕೊ ಹಾಲ್ ಕೋರಿಕೆಯ ಮೇರೆಗೆ ನಾಟಕ ಪ್ರದರ್ಶನಗಳಿಗೆ ರಿಯಾಯಿತಿ ದರದ ಬಾಡಿಗೆಯಲ್ಲಿ ದೊರೆಯುತ್ತದೆ.

ಉಳಿದಂತೆ ಮಂಗಳೂರು ಪರಿಸರದಲ್ಲಿ ಹಲವಾರು ರಂಗಮಂದಿರಗಳಿದ್ದು ಎಲ್ಲವೂ ಖಾಸಗಿ ಒಡೆತನ ಅಥವಾ ಶಾಲಾ ಕಾಲೇಜು ಆಡಳಿತಕ್ಕೆ ಒಳಪಟ್ಟಿವೆ. ಜಿಲ್ಲೆಗೊಂದು ಸುಸಜ್ಜಿತ ರಂಗಮಂದಿರ ಎಂಬ ಯೋಜನೆ ಇಲ್ಲಿ ಇನ್ನೂ ಸಾಕಾರಗೊಂಡಿಲ್ಲ.

## ಜಗನ್ ಪವಾರ್

ಪವಾರ್ ಮನೆ, ಕುಂಪಳ, ಕೋಟೆಕಾರು ಅಂಚೆ, ಮಂಗಳೂರು ದ.ಕ

# ನಮ್ಮ ಕಲಾವಿದರು

**ಡಾ. ನಾ.ದಾಮೋದರ ಶೆಟ್ಟಿ**
ವಿಳಾಸ: ಪ್ರಸಾಧನ, ಭಾರತೀನಗರ, ಬಜ್ಪೆ, ಮಂಗಳೂರು.

| | | |
|---|---|---|
| ಶಿಕ್ಷಣ | : | ಎಂ.ಎ., ಪಿ.ಎಚ್.ಡಿ. |
| ರಚನೆ | : | ಅರ್ಪಣ, ಭತ್ತದ ಕಾಳುಗಳು, ರಂಗಸಂಶೋಧನೆ, ಭರತವಾಕ್ಯಂ ಮುಂತಾದ ನಾಟಕಗಳಲ್ಲದೆ ಇತರೆ ಪ್ರಕಾರಗಳಲ್ಲಿ 30ಕ್ಕೂ ಮಿಕ್ಕಿ ಪುಸ್ತಕಗಳ ರಚನೆ ಹಾಗೂ ಪ್ರಕಟಣೆ. |
| ಪ್ರತಿಭೆ | : | ಕವಿ, ಕಾದಂಬರಿಕಾರ ಹಾಗೂ ಕಥೆಗಾರ, ಕನ್ನಡ ರಂಗಭೂಮಿ ಕುರಿತು ಪರಿಣತಿ. |
| ನಿರ್ದೇಶನ | : | ಉತ್ತಮ ಪ್ರಭುತ್ವ, ಲೊಳಲೊಟ್ಟೆ, ಭತ್ತದ ಕಾಳುಗಳು, ಕೊಂಬಿನವರು, ಮಾಡುಸಿಕ್ಕದಲ್ಲ, ಸಾಯೋ ಆಟ ಮುಂತಾದ 50 ಕ್ಕೂ ಮಿಕ್ಕಿದ ನಾಟಕಗಳಿಗೆ ನಿರ್ದೇಶನ. |
| ಆಕಾಶವಾಣಿ | : | ಆಕಾಶವಾಣಿ ನಾಟಕ ವಿಭಾಗದ ಕಲಾವಿದ, 40 ಕ್ಕೂ ಮಿಕ್ಕಿದ ಆಕಾಶವಾಣಿ ನಾಟಕಗಳಲ್ಲಿ ಭಾಗಿ. ಹೂಮನಸು, ಪೂಜೆ, ಮಾತುಕತೆ ಮುಂತಾದ ಹಲವಾರು ನಾಟಕಗಳ ರಚನೆ. 30 ವರ್ಷಗಳಿಂದ ಆಕಾಶವಾಣಿಯೊಂದಿಗೆ ಸಂಪರ್ಕ. |
| ಸಿನಿಮಾ/ಕಿರುತೆರೆ | : | ಸಾಗರದೀಪ, ಮುನ್ನುಡಿ, ಹಸೀನಾ ಸಿನಿಮಾಗಳಲ್ಲಿ ನಟನೆ. ಜೀವನ್ಮುಕ್ತಿ, ಸರಸಮ್ಮನ ಸಮಾಧಿ ಮುಂತಾದ ಧಾರಾವಾಹಿಗಳಲ್ಲಿ ನಟನೆ. |
| ವಿಮರ್ಶೆ | : | ರಂಗಭೂಮಿ ಹಾಗೂ ನಾಟಕ ಪ್ರದರ್ಶನಗಳ ಕುರಿತಾದ 400 ಕ್ಕೂ ಮಿಕ್ಕಿದ ಲೇಖನಗಳು, |

ಸಂಸ್ಥೆ : ಭೂಮಿಕಾ, ಅಭಿವ್ಯಕ್ತ ಹಾಗೂ ದಾಸಜನಸಂಸ್ಥೆಗಳೊಂದಿಗೆ ಸಂಪರ್ಕ.

ಇತರೆ : ಕಾಲೇಜು ರಂಗಭೂಮಿಗೆ ನಿರಂತರ ಚಾಲನೆ, ಕಾಲೇಜು ನಾಟಕ ಸ್ಪರ್ಧೆಗಳ ಸಂಘಟನೆ, ಕನ್ನಡ – ಮಲಯಾಳಂ ರಂಗಭೂಮಿ, ಸಾಹಿತ್ಯದ ಕಾರ್ಯಕ್ರಮಗಳ ಸಂಯೋಜನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇತರೆ ಹಲವಾರು ಸಂಸ್ಥೆ ಸಂಘಟನೆಗಳ ಪುಸ್ತಕ ಬಹುಮಾನ ಯೋಜನೆಯ ಆಯ್ಕೆ ಸಮಿತಿ ಸದಸ್ಯ, ಅಂಕಣಕಾರ.

ಸ್ಥಾನ/ ಸನ್ಮಾನ: ಕರ್ನಾಟಕ ಅಕಾಡೆಮಿ ಸದಸ್ಯ (1887–90), ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್ (1994), ಜೇಸಿಸ್ ವತಿಯಿಂದ ಅತ್ಯುತ್ತಮ ಯುವ ಪ್ರತಿಭೆ ಪುರಸ್ಕಾರ, 'ದೇವರ ವಿಕಾರಗಳು' ಪುಸ್ತಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, 'ಭಾಷಾಭಾರತಿ ಸಮ್ಮಾನ' ರಾಷ್ಟ್ರೀಯ ಪುರಸ್ಕಾರ(2008) ರಾಜ್ಯಮಟ್ಟದ 'ಉಪಾಧ್ಯಾಯ ಪ್ರಶಸ್ತಿ (2008), ದುಬೈನ 'ಧ್ವನಿ ಪ್ರತಿಷ್ಠಾನ'ದ 'ಶ್ರೀರಂಗಪ್ರಶಸ್ತಿ. ರಂಗಚೇತನ, ಬೆಂಗಳೂರು ಇವರಿಂದ 'ನಾದಚೇತನ' ಪ್ರಶಸ್ತಿ.

## ಸಂಪತ್ ಕುಮಾರ್

'ಕೊಡಪು ಕೊಟ್ಯ', ನೀರುಮಾರ್ಗ, ಪೆದುಮಲೆ ಅಂಚೆ
ಮಂಗಳೂರು– 575029
ದೂರವಾಣಿ : 0824–2274133, 2013033,
ಮೊ. 9964278004

ಶಿಕ್ಷಣ : ಪದವಿ.

ನಟನೆ : 'ವೈಶಾಲಿ' 'ಸರ್ಪಯಾಗ' 'ಕರ್ಣಾವಸಾನ' 'ಶಿಕ್ಷಣ ಮೂಲ, 'ಸ್ತ್ರೀ ಶಕ್ತಿ', ಗೊಂಬೆಯಾಟದಲ್ಲಿ ಪರಿಣತಿ.

ಇತರೆ : ಪ್ರಸಾಧನ, ಬೆಳಕು, ರಂಗಸಜ್ಜಿಕೆ, ಸಂಗೀತ.

ರಚನೆ : 'ಆಧ್ಯಾತ್ಮಿಕ ಅಮಲು ಬಿಡಿಸುತ್ತದೆ' 'ಕಾಯಕವೇ ಕೈಲಾಸ, 'ಚಿಲಿಪಿಲಿ', 'ಜನದಾಸ'.

**ಜಯಶೀಲ.ಕೆ**

ಶ್ರೀ ಕೃಷ್ಣಕೃಪ, ಎಂ.ಆರ್.ಭಟ್ಸ್ ಲೇನ್,
ಜೆಪ್ಪು, ಮಂಗಳೂರು – 2

ನಟನ : ಕೃಷ್ಣೇಗೌಡರ ಆನೆ, ಶತಮಾನಗಳ ಬಾಯಾರಿಕೆ, ಒಂದು ಲೋಕ ಕಥೆ, ಗ್ರಾಮ ಚಾವಡಿ, ಪೆದಂಬು, ಜನಶತ್ರು, ಬೇಲಿ, ಜೈಲು, ಒಥೆಲೋ, ಕೋರ್ಟ್ ಮಾರ್ಶಲ್.

ಸಂಸ್ಥೆ : ಅಭಿವ್ಯಕ್ತ , ಆಯನ, ಸಂಕೇತ ತಂಡಗಳೊಂದಿಗೆ ನಿಕಟ ಸಂಪರ್ಕ.

**ಇಸ್ಮಾಯಿಲ್ ವಿಟ್ಲ**

ವೃತ್ತಿ : ದೈಹಿಕ ಶಿಕ್ಷಣ ಶಿಕ್ಷಕ
ವಿಳಾಸ : ದೈಹಿಕ ಶಿಕ್ಷಣ ಶಿಕ್ಷಕ, ಕಣಚೂರು ಪಬ್ಲಿಕ್ ಸ್ಕೂಲ್,
ದೇರಳಕಟ್ಟೆ, ಮಂಗಳೂರು , ಮೊ. 9341618130

ಶಿಕ್ಷಣ : “ನೀನಾಸಂ” ಪದವಿ

ನಟನೆ : ಮೋಹನಸೋನ ಇವರ ನಿರ್ದೇಶನದ ಮಕ್ಕಳ ನಾಟಕದಲ್ಲಿ 3 ವರ್ಷದಲ್ಲಿ 5 ನಾಟಕದಲ್ಲಿ ಅಭಿನಯ, ಚೋರಚರಣದಾಸ ಮತ್ತು ಪ್ರಥಮ ಬಾರಿಗೆ ಸಹಾಯಕ ಬೆಳಕಿನ ನಿರ್ವಹಣೆ.

ಪರಿಣತಿ : ನಾಟಕಗಳಲ್ಲಿ ಬೆಳಕಿನ ನಿರ್ವಹಣೆ.
ನಾಟಕ ಅಕಾಡೆಮಿ ಮತ್ತು ಎನ್.ಜಿ.ಇ.ಎಫ್ ನಡೆಸಿದ ರಂಗ ತಾಂತ್ರಿಕ ಶಿಬಿರದಲ್ಲಿ ಭಾಗವಹಿಸುವಿಕೆ.
ಎನ್.ಎಸ್.ಡಿ ಮತ್ತು ನೀನಾಸಂ ನಡೆಸಿದ ರಂಗ ತಾಂತ್ರಿಕ ಶಿಬಿರದಲ್ಲಿ ಭಾಗವಹಿಸುವಿಕೆ.
ಮಂಗಳೂರಿನ ಆಯನ ಮಕ್ಕಳ ಅಕಾಡೆಮಿಯ ಮಕ್ಕಳ ರಂಗ ತರಬೇತಿ ಶಿಬಿರದ ನಿರ್ದೇಶನ, ಹಲವು ನಾಟಕಗಳ ತಯಾರಿ.

ಪ್ರಶಸ್ತಿ : ರಾಷ್ಟ್ರೀಯ ನಾಟಕ ಸ್ಪರ್ಧೆಯಲ್ಲಿ ಅಚಲ ನಾಟಕದ ಬೆಳಕಿನ ವಿನ್ಯಾಸ, ನಿರ್ವಹಣೆ ದ್ವಿತೀಯ ಪ್ರಶಸ್ತಿ, ರಾಷ್ಟ್ರೀಯ ನಾಟಕ ಸ್ಪರ್ಧೆಯಲ್ಲಿ ಜಗನ್ ಪವಾರ್ ನಿರ್ದೇಶಿಸಿದ ವ್ಯಾನ್ ಗೋ ನಾಟಕದ ಬೆಳಕಿನ ವಿನ್ಯಾಸ, ನಿರ್ವಹಣೆಗೆ ಪ್ರಥಮ ಪ್ರಶಸ್ತಿ, ಉಡುಪಿ ರಂಗಭೂಮಿಯ ನಾಟಕ ಸ್ಪರ್ಧೆಯಲ್ಲಿ ಮಹಾಮಾಯಿ ನಾಟಕಕ್ಕೆ ದ್ವಿತೀಯ ಬೆಳಕಿನ ಪ್ರಶಸ್ತಿ,

ಸದಾನಂದ ಸುವರ್ಣ ನಿರ್ದೇಶನದ 'ಉರುಳು' 'ಕೋರ್ಟ್ ಮಾರ್ಷಲ್' 'ಮಳೆ ನಿಲ್ಲೋ ತನಕ' ನಾಟಕಗಳಿಗೆ ಬೆಳಕಿನ ವಿನ್ಯಾಸ ಮತ್ತು ನಿರ್ವಹಣೆ.
ಹಲವಾರು ಸಾಕ್ಷ್ಯಚಿತ್ರದಲ್ಲಿ ಬೆಳಕಿನ ನಿರ್ವಹಣೆ ಪ್ರಸಾಧನ ಮತ್ತು ನಟನೆ.

ಸಂಸ್ಥೆ : ಮಂಗಳೂರಿನ ಆಯನ, ಅಭಿವ್ಯಕ್ತ, ಸಂಕೇತ್, ಸದಾನಂದ ಸುವರ್ಣ ಪ್ರತಿಷ್ಠಾನ, ವಿಟ್ಲದ ನಿರತನಿರಂತ, ವಿಟ್ಲದ ರಂಗಾಸ್ತಕರು, ಮೂಡಬಿದಿರೆಯ ಆಳ್ವಾಸ್, ಮಂಗಳೂರಿನ ಸೈಂಟ್ ಅಲೋಷಿಯಸ್ ಕಾಲೇಜು ತಂಡಗಳೊಂದಿಗೆ ನಿಕಟಸಂಬಂಧ.

**ಕೆ. ಶ್ರೀಕಲಾ ಉಡುಪ, ಎಂ.ಎ, ಎಲ್.ಎಲ್.ಬಿ** ____________________

ಮೆನೇಜರ್, ಕರ್ಣಾಟಕ ಬ್ಯಾಂಕ್ ಲಿ.,
ಪ್ರಾದೇಶಿಕ ಕಛೇರಿ, ಕೊಡಿಯಾಲ್ ಬೈಲ್ ರಸ್ತೆ
ಮಂಗಳೂರು – 575003. ಮೊ.999616530.

ಶಿಕ್ಷಣ : ಎಂ.ಎ(ಕನ್ನಡ),ಎಲ್.ಎಲ್.ಬಿ.

ನಟನೆ : ಶಾಲಾ – ನಾಟಕಗಳಲ್ಲಿ ಭಾಗವಹಿಸುವಿಕೆ, ಕಾಲೇಜು ದಿನಗಳಲ್ಲಿ ಅಂತರ್ ಕಾಲೇಜು ನಾಟಕ ಸ್ಪರ್ಧೆಗಳಲ್ಲಿ ಭಾಗಿ, 'ಯಯಾತಿ' 'ಸಾಯೋ ಆಟ', 'ಗುಲಾಮನ ಸ್ವಾತಂತ್ರ್ಯ ಯಾತ್ರೆ', 'ಅಪೂರ್ಣರು' 'ಇತಿ ನಿನ್ನ ಅಮೃತಾ' 'ಮಳೆ ನಿಲ್ಲುವವರೆಗೆ', ಹಸೀನಾ, ಚಿರಸ್ಮರಣೆ ಮುಂತಾದ ಕಿರುಚಿತ್ರ, ಧಾರಾವಾಹಿಗಳಲ್ಲಿ ನಟನೆ.

ಇತರ : ಬಿ+ ಆಕಾಶವಾಣಿ ನಾಟಕ ವಿಭಾಗದ ಕಲಾವಿದೆಯಾಗಿ ರೇಡಿಯೋ ನಾಟಕಗಳಲ್ಲಿ ಪಾಲ್ಗೊಳ್ಳುವಿಕೆ.

ಸಂಪರ್ಕ : ಕರಾವಳಿ ಲೇಖಕಿಯರ , ವಾಚಕಿಯರ ಸಂಘ.

ಎಂ.ರಂಗನಾಥ್ ಪವಾರ್

ಮೊ. 9945502972

| | | |
|---|---|---|
| ನಟನೆ | : | ಕುರುಡು ಕುಬೇರ, ಬೇಲಿ ಮತ್ತು ಹೊಲ ಗ್ರಾಮ ಚಾವಡಿ, ಒಥೆಲೋ, ಕೋರ್ಟ್ ಮಾರ್ಷಲ್ |
| ನಿರ್ದೇಶನ | : | ಮೂಕನ ಮಕ್ಕಳು, ಗುರುದಕ್ಷಿಣೆ, ಕೆರೆಗೆ ಹಾರ, ಕತ್ತಲಿನಿಂದ ಬೆಳಕಿನೆಡೆಗೆ. |
| ಇತರೆ | : | ರಂಗ ವ್ಯವಸ್ಥೆ ಮತ್ತು ಬೆಳಕಿನ ಸಂಯೋಜನೆ. |

ಮುರಳೀಧರ್ ಕಾಮತ್

ಮೊ. 9886276930

| | | |
|---|---|---|
| ನಟನೆ | : | ದೃಷ್ಟಿ, ಕೋರ್ಟ್‌ಮಾರ್ಷಲ್, ಗ್ರಾಮಚಾವಡಿ, ಗಾಂಟಿ, ಒಥೆಲೋ. ಅನೇಕ ತುಳು ಮತ್ತು ಕೊಂಕಣಿ ನಾಟಕಗಳಲ್ಲಿ ನಟನೆ |
| ಉದ್ಯೋಗ | : | ಗುರುಲೀಲಾ ಡ್ರೈವಿಂಗ್ ಸ್ಕೂಲ್, ಮಂಗಳೂರು |
| ಹವ್ಯಾಸ | : | ಅಭಿನಯ, ಹಾಡುಗಾರಿಕೆ, ನಿರ್ದೇಶನ ಮತ್ತು ಸಂಘಟನೆ. |
| ನಟನೆ | : | ಪ್ರಾಥಮಿಕ ಶಾಲಾ ಹಂತದಿಂದಲೂ ಹಲವಾರು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯ. |

ಹರಿಪ್ರಸಾದ್ ಕುಂಪಲ

ಮೊ.9945833608

| | | |
|---|---|---|
| ನಟನೆ | : | ಕೊಡಿಮರ, ಗ್ರಾಮಚಾವಡಿ, ದೃಷ್ಟಿ , ಒಥೆಲೋ, ಕೋರ್ಟ್ ಮಾರ್ಷಲ್, ಕಾಲೇಜು ದಿನಗಳಿಂದಲೂ ನಾಟಕ, ಯಕ್ಷಗಾನಗಳಲ್ಲಿ ಅಭಿನಯ |
| ಉದ್ಯೋಗ | : | ಫುಲ್ಲೇರ್ಟನ್ ಇಂಡಿಯಾ ಕ್ರೆಡಿಟ್ ಕಂಪೆನಿ ಪ್ರೈ.ಲಿ ಇಲ್ಲಿ ಸೇಲ್ಸ್ ಆಫೀಸರ್. |

**ಕೆ. ಸುಧಾಕರ್ ಸಾಲಿಯಾನ್**

ಮೊ.9448151323
ಅಪ್ಪಯ್ಯ ತೋಟ ಮನೆ, ಕಲ್ಪನೆ, ಕುಲಶೇಖರ, ಮಂಗಳೂರು

ವೃತ್ತಿ : ಕಂದಾಯ ಇಲಾಖೆಯಲ್ಲಿ ಗ್ರಾಮ ಕರಣಿಕ
ನಟನೆ : ಮಾರನಾಯಕನ ದೃಷ್ಟಾಂತ, ಒಂದು ಲೋಕ ಕಥೆ, ಮಾಲಿ, ದೃಷ್ಟಿ, ಒಥೆಲೋ, ಉರುಳು, ಕೋರ್ಟ್ ಮಾರ್ಷಲ್.
ಸಂಸ್ಥೆ : ಅಭಿವ್ಯಕ್ತ, ಮಂಗಳೂರು, ಸಂಕೇತ ಮಂಗಳೂರು, ಸದಾನಂದ ಸುವರ್ಣ ಪ್ರತಿಷ್ಠಾನ ಮಂಗಳೂರು, ಲಾವಣ್ಯ ಬೈಂದೂರು.
ಕಿರುತೆರೆ : ಸರಸಮ್ಮನ ಸಮಾಧಿ (ನಿ : ಟಿ.ವಿ. ಧಾರಾವಾಹಿ), ಒಂದು ಕೊಲೆಯ ಸುತ್ತ (ಟೆಲಿಚಿತ್ರ).

**ಜಗನ್ನಾಥ್**

ಹೊಸಮನೆ, ಭಂಡಸಾಲೆ ಮನೆ ಬಳಿ, ಪೆರ್ಮನ್ನೂರು ಪೋಸ್ಟ್
ಉಳ್ಳಾಲ, ಮಂಗಳೂರು. ಮೊ.9449331918.

ನಟನೆ : ಪಿಂಡ ಮತ್ತು ಕಾಗೆ ಶಿಕ್ಷೆ, ಪೆದಂಬು, ಒಂದು ಲೋಕದ ಕಥೆ, ಗ್ರಾಮಚಾವಡಿ, ಕೊಡಿಮರ, ಒಥೆಲೋ, ದೃಷ್ಟಿ, ಕೋರ್ಟ್ ಮಾರ್ಷಲ್, ಮಳೆ ನಿಲ್ಲುವರೆಗೆ.
ಸಂಪರ್ಕ : ಅಭಿವ್ಯಕ್ತ, ಆಯನ, ಸಂಕೇತ್, ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ.

**ಲಕ್ಷ್ಮಣ ಕುಮಾರ್ ಮಲ್ಲೂರು**

ಶ್ರೀರಕ್ಷಾ, ನೋಡುಬೈಲು, ಬಿಜೈ, ಮಂಗಳೂರು – 575004

| | | |
|---|---|---|
| ಶಿಕ್ಷಣ | : | ಪದವಿ. |
| ಹವ್ಯಾಸ | : | ಅಭಿನಯ, ಹಾಡುಗಾರಿಕೆ, ನಿರ್ದೇಶನ ಮತ್ತು ಸಂಘಟನೆ. |
| ನಟನೆ | : | ಪ್ರಾಥಮಿಕ ಶಾಲಾ ಹಂತದಿಂದಲೂ ಹಲವಾರು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯ |

**ಸುದಾನಂದ**

ವಿಳಾಸ: ದಿನೇಶ್ ಸಾಲ್ಯಾನ್ ಕಾಂಪೌಂಡ್

ಚಿತ್ರಾಪುರ, ಕುಳಾಯಿ, ಮಂಗಳೂರು

ದೂರವಾಣಿ : 9663087193.

| | | |
|---|---|---|
| ಶಿಕ್ಷಣ | : | 'ನೀನಾಸಂ' ಪದವಿ. |
| ನಟನೆ | : | ನೆಲ–ಜಲ, ಇನ್‌ಸ್ಪೆಕ್ಟರ್ ಜನರಲ್, ಮಾರೀಚನ ಬಂಧುಗಳು, ಅವನು ಇವನು ಮತ್ತು ನಾನು, ಸಂಗ್ಯಾ ಬಾಳ್ಯ, ನೆರಳಿಲ್ಲದ ಮನುಷ್ಯರು. |
| ರಚನೆ | : | ನೆರಳು, ನಾಡು ಉಳಿಸಿ, ನಿಮ್ಮೊಂದಿಗೆ ಸಹಜೀವಿಗಳು, ನೀನ್ಯಾರಿಗಾದಿಯೋ ಎಲೆ ಮಾನವ, ಭೂಮಿಹುಟ್ಟಿದ್ದು ಏಕೆ?, ಪರಶುರಾಮ ಪ್ರದಕ್ಷಿಣೆ, ರಾಜ್ಯ ಸಮುದಾಯ ಜಾಥಾದಲ್ಲಿ ರಸ್ತೆ ಸುರಕ್ಷೆ, ಅಸ್ಪೃಶ್ಯತೆ ಏಕೆ, ಸ್ವಚ್ಛತೆ ಮತ್ತು ಆರೋಗ್ಯ ಮುಂತಾದವುಗಳಲ್ಲಿ ನಟನೆ. |
| ನಿರ್ದೇಶನ | : | ಅಶ್ವಪರ್ವ, ಅವನು ಇವನು ಮತ್ತು ನಾನು, ಆಲಿಬಾಬ ಮತ್ತು ನಲ್ವತ್ತು ಕಳ್ಳರು, ಪಂಜರಶಾಲೆ, ಗಿಳಿರಾಮ, ಗೋವಿನಹಾಲು, ಅಂಗುಲಿಮಾಲ, ಪುಟಾಣಿಗಳು, ಹೆಡ್ಡಾಯಣ, ಕತ್ತೆ ಮತ್ತು ಧರ್ಮ, ನಮಗೂ ಒಂದು ಕಾಲ, ನೀರಿನ ಹಕ್ಕು ಜನರ ಹಕ್ಕು, ಪರಶುರಾಮ ಪ್ರದಕ್ಷಿಣೆ, ಕೋಮುರಸ, ಇಬ್ಬರೂ ಸಾಯುತ್ತೀರಿ, ಮಾಂಸ ಮಾರಾಟಕ್ಕಿದೆ, ಮಕ್ಕಳ ಮಾರಾಟ, ಮಾರಿ ಓಡಿಸು, ರೋಗ ಬರುವ ಮುನ್ನ ಮುಂತಾದವುಗಳು. |
| ಸಂಸ್ಥೆ | : | 'ಸಂಕೇತ' ನಾಟಕ ತಂಡ ಮಂಗಳೂರು 'ಆಯನ, ಸಮುದಾಯ, ಅಭಿವ್ಯಕ್ತ ತಂಡದೊಂದಿಗೆ ಸಂಪರ್ಕ. |

**ಗೋಪಾಡ್ಕರ್**

ವಿಳಾಸ : ಸ್ವರೂಪ ಅಧ್ಯಯನ ಸಂಸ್ಥೆ, ಪಂಜತ್ತಬೈಲು ಮಂಗಳೂರು
ದೂರವಾಣಿ : 9845203472

| | | |
|---|---|---|
| ನಿರ್ದೇಶನ | : | ಹನ್ನೊಂದು ಹಂಸಗಳು, ಮಕ್ಕಳ ರಾಜಕುಮಾರಿ, ಅಲಿಬಾಬ ಮತ್ತು ನಲ್ವತ್ತು ಕಳ್ಳರು, ಅಳಿಲು ರಾಮಾಯಣ, ಪಂಜರ ಶಾಲೆ ಇತ್ಯಾದಿ |
| ಸಂಸ್ಥೆ | : | ಚಿಣ್ಣರಮೇಳ, ಅಭಿನಯ ಸುಳ್ಯ, ನಿರತನಿರಂತ, ಕೋಲಾಜ್ ಮುಂತಾದ ಸಂಸ್ಥೆಗಳೊಂದಿಗೆ ಸಂಪರ್ಕ, ಸ್ವರೂಪ ಅಧ್ಯಯನ ಸಂಸ್ಥೆಯ ಸ್ಥಾಪಕ. 250ಕ್ಕೂ ಮಿಕ್ಕಿ ಮಕ್ಕಳ ನಾಟಕ ಶಿಬಿರ ನಡೆಸಿದ ಅನುಭವ. |
| ಇತರೆ | : | ಚಿತ್ರಕಲೆಯಲ್ಲಿ ತೈಲವರ್ಣ, ಜಲವರ್ಣ, ಚಾರ್ಕೋಲ್, ಕ್ರೇಯಾನ್ಸ್‌ನಲ್ಲಿ ಪರಿಣತಿ. |
| ವಿಶೇಷ ಪರಿಣತಿ | : | ಮಕ್ಕಳ ಸ್ಮರಣಶಕ್ತಿ ವೃದ್ಧಿಗಾಗಿ 'ನೆನಪಿನ ಚಿಕಿತ್ಸೆ'. ರಾಜ್ಯದ ವಿವಿಧ ಭಾಗಗಳಲ್ಲಿ ಶಿಬಿರಗಳನ್ನು ನಡೆಸಿದ ಅನುಭವ. |
| ಪ್ರಶಸ್ತಿ | : | ಜೇಸಿಸ್ ಸಂಸ್ಥೆ ವತಿಯಿಂದ ಯುವ ಪ್ರತಿಭಾ ಪ್ರಶಸ್ತಿ ಹಾಗೂ ಹಲವಾರು ಸಂಘಸಂಸ್ಥೆಗಳಿಂದ ಅಭಿನಂದನೆ. |

**ಸುದರ್ಶನ್ ಕೆ.ವಿ**

ವಿಳಾಸ : 'ಸನ್ಮತಿ', ಕಲ್‌ಬಾವಿ ರಸ್ತೆ, ಕೊಟ್ಟಾರ, ಅಶೋಕ್ ನಗರ
ಮಂಗಳೂರು, ದೂರವಾಣಿ : 949826081

| | | |
|---|---|---|
| ನಟನೆ | : | ಕಲ್ಯಾಣಿ, ಕರ್ನಾಟಕ ರಮಾರಮಣ, ಟಿಪ್ಪುಸುಲ್ತಾನ್, ಮಹಾರಥಿ ಕರ್ಣ, ತುಘಲಕ್, ನಾಗಮಂಡಲ, ಪಂಜರಶಾಲೆ, ಧರಣಿಮಂಡಲ ಮಧ್ಯದೊಳಗೆ, ಬಾಹುಬಲಿ, ಹಯವದನ, ತಾಯಿ, ಜನದಾಸ ಇತ್ಯಾದಿ. |
| ಇತರೆ | : | ಮಿಮಿಕ್ರಿ ಕಲಾವಿದ, ಹಂಪಿ ಉತ್ಸವ, ಕರಾವಳಿ ಉತ್ಸವಗಳಲ್ಲಿ ಧ್ವನಿ ಮತ್ತು ಬೆಳಕು ಕಾರ್ಯಕ್ರಮಗಳಿಗೆ ಕಂಠದಾನ ನೀಡಿಕೆ. 'ಸಂಸಾರನೌಕೆ', 'ರಣರಂಗ' ಕನ್ನಡ ಚಲನಚಿತ್ರಗಳಲ್ಲಿ ಅಭಿನಯ. |
| ಸಂಸ್ಥೆ | : | ಜಾಗೃತಿ, ಮಂಗಳೂರು, ಸಮತಾ, ಸಂಕೇತ ಕಲಾವಿದರು ತಂಡದೊಂದಿಗೆ ಸಂಪರ್ಕ. |

**ಬಿ.ಕೆ. ಹರಿಪ್ರಸಾದ ರೈ**

ವಿಳಾಸ : ಕಾರಮೊಗರು ಗುತ್ತುಮನೆ, ಗುರುಪುರ ಅಂಚೆ,
ಮಂಗಳೂರು ದ.ಕ, ದೂರವಾಣಿ : 9342988574

ನಟನೆ : ಕಲಾನಾಯಕ, ಹಸಿರಹರಿಕಾರ ಮುಂತಾದ ನಾಟಕಗಳಲ್ಲಿ ನಟನೆ.

ನಿರ್ದೇಶನ : ತಾನಿತಂದಾನ, ಅಟ್ಟಾಮುಟ್ಟಾ, ಚಿನ್ನಾಚಿನ್ನಿ, ಬಂಗಾರದ ಬದುಕು, ಮುಂತಾದ ಮಕ್ಕಳ ನಾಟಕಗಳು. ಸ್ವಚ್ಛತಾ ಶಕ್ತಿ, ಏಡ್ಸ್ ಜಾಗೃತಿ ಮುಂತಾದ ಬೀದಿ ನಾಟಕಗಳು.

ಸಂಸ್ಥೆ : ಪ್ರಸಾದ್ ಅಧ್ಯಯನ ಸಂಸ್ಥೆ ಗುರುಪುರ, ಇದರ ಸ್ಥಾಪಕ, ಜೇಸಿಐ ಗುರುಪುರ, ಯುವಕಸಂಘ.
ಗುರುಪುರ, ಕಲಾಸೌರಭ ಗುರುಪುರ, 'ಪಡಿ' ಮಂಗಳೂರು ಸಂಸ್ಥೆಗಳೊಂದಿಗೆ ಸಂಪರ್ಕ.

ಇತರೆ : ಆಕಾಶವಾಣಿ ಕಲಾವಿದ

**ಯು. ಮೋಹನ ಚಂದ್ರ**

ವಿಳಾಸ : ಆದಿಸಾನ, 'ನಡುಮನೆ', ಕುಡುಪು
ಮಂಗಳೂರು, ದ.ಕ

ಶಿಕ್ಷಣ : ನೀನಾಸಂ ಪದವಿ.

ನಿರ್ದೇಶನ : ದಂಗೆಯ ಮುಂಚಿನ ದಿನಗಳು, ತಾಯಿ, ಜೂಲಿಯಸ್ ಸೀಜರ್, ಜಾತ್ರೆ, ಕತ್ತಲೆ ದಾರಿ ದೂರ, ಬಸ್ತಿ, ಒಂದು ಲೋಕದ ಕಥೆ, ಹಯವದನ, ಆದಂಜ್ಜನೂ, ಇವಾಳಜ್ಜಿಯು.

ಚಲನಚಿತ್ರ : 'ಬರ' ಚಲನಚಿತ್ರದಲ್ಲಿ ತಾಂತ್ರಿಕ ಸಹಾಯಕ, ಸಾಕ್ಷ್ಯಚಿತ್ರ: 50ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳ ರಚನೆ, ನಿರ್ವಾಹಕ ಮತ್ತು ನಿರ್ದೇಶನ.

ರಚನೆ : 'ಬಸ್ತಿ', 'ಆದಂಜ್ಜನೂ ಇವಾಳಜ್ಜಿಯು' ಮುಂತಾದವುಗಳು.

ತರಬೇತಿ : ಬಾದಲ್‌ಸರ್ಕಾರ್ ನಡೆಸಿದ ಬೀದಿನಾಟಕ ಶಿಬಿರ, ಖಕಿಖಿಂ, ಕೋಲ್ಕತ್ತಾದಲ್ಲಿ ನಡೆಸಿದ ಬೀದಿ ನಾಟಕ ಅಧ್ಯಯನ ಶಿಬಿರದಲ್ಲಿ ಭಾಗಿ.

ಸಂಸ್ಥೆ : ಆಯನ ನಾಟಕ ತಂಡದ ಸ್ಥಾಪಕ ಮತ್ತು ಅಭಿವ್ಯಕ್ತ, ಸಂಕೇತ ನಾಟಕ ತಂಡ, ಗಡಿನಾಡ ಕಲಾವಿದರು, ಮುಂತಾದವರೊಂದಿಗೆ ಸಂಪರ್ಕ.

**ಮೋಹನ್ ಬೋಳಾರ್**

ವಿಳಾಸ : ಶ್ರೀಕಾಂತ್ ನಿಲಯ, ಕುದ್ರೋಳಿ ಪ್ರಥಮ
ಸೇತುವೆ ಬಳಿ, ಅಳಕೆ, ಅಂಚೆ ಕುದ್ರೋಳಿ,
ಮಂಗಳೂರು, ದ.ಕ. ದೂರವಾಣಿ : 9242747177

| | | |
|---|---|---|
| ನಟನೆ | : | ಗುಲಾಮ ಗಂಡ, ಒಂದು ಲೋಕ ಕಥೆ, ವೈಶಾಲಿ, ರಾಮಾಂಜನೇಯ ಯುದ್ಧ, ಭಕ್ತ ಪ್ರಹ್ಲಾದ, ಶಿವಪಾರ್ವತಿ, ದುರಂತಕರ್ಣ, ಧರಣಿ ಮಂಡಲ ಮಧ್ಯದೊಳಗೆ. |
| ಮಕ್ಕಳ ನಾಟಕ ನಿರ್ದೇಶನ | : | ಬೆಟ್ಟದಾ ಮೇಲೊಂದು ಮನೆಯ ಮಾಡಿ, ಕಾಡಿನ ಮಕ್ಕಳು, ಗೂಢಾಚಾರರು, ಜಾಣನ ಮನೆ. |
| ರಚನೆ | : | ಕೊಕ್ಕೆ ಬುದ್ಧಿ, ನಮ್ಮ ಸಂಸಾರ. |

**ರಿತೇಶ್ ಕುಮಾರ್. ಎಂ**

ವಿಳಾಸ : ಆಶೀರ್ವಾದ್, ಮನೆ 22–104/2,
ಗೇರುಬೀಜ ಸಂಶೋಧನಾ ಕೇಂದ್ರದ ಬಳಿ, ಉಳ್ಳಾಲಬೈಲು,
ಮಂಗಳೂರು, ಅಂಚೆ ಉಳ್ಳಾಲ, ದ.ಕ,
ದೂರವಾಣಿ :9448887655

| | | |
|---|---|---|
| ಶಿಕ್ಷಣ | : | ಸಿವಿಲ್ ಇಂಜಿನಿಯರಿಂಗ್ ಪದವಿ. |
| ನಟನೆ | : | ಹಲವಾರು ಬೀದಿ ನಾಟಕಗಳಲ್ಲಿ ಮತ್ತು ತುಳುನಾಟಕಗಳಲ್ಲಿ ನಟನೆ. |
| ಸಂಸ್ಥೆ | : | ಮಂಗಳೂರು ಬಂದರು ಮಂಡಳಿಯ 'ನಂದಕಲಾ ತಂಡ' ದೊಂದಿಗೆ ಸಂಪರ್ಕ. |

## ಜಗನ್ ಪವಾರ್

ವಿಳಾಸ : ಪವಾರ್ ಮನೆ,ಕುಂಪಳ,
ಕೋಟೆಕಾರು ಅಂಚೆ, ಮಂಗಳೂರು ದ.ಕ
ದೂರವಾಣಿ : 9900710578

| | | |
|---|---|---|
| ನಟನೆ | : | ನಾಗಮಂಡಲ, ವೈಶಾಲಿ, ಒಂದುಲೋಕದ ಕಥೆ, ವಾನ್‌ಗೋ, ಅವನು ಇವನು ಮತ್ತು ನಾನು, ಅಶ್ವಪರ್ವ, ಕಾರ್ಗತ್ತಲ ಬೆಳ್ಚುಕ್ಕಿ. |
| ನಿರ್ದೇಶನ | : | ಕಾರ್ಗತ್ತಲ ಬೆಳ್ಚುಕ್ಕಿ, ಅಚಲ, ವಾನ್‌ಗೋ, ನಿರ್ವಾಣ, ಕಳಕೊಂಡವರು, ನಾಗಮಂಡಲ, ಮಹಾಮಾಯಿ, ಜೋಕುಮಾರಸ್ವಾಮಿ. |
| ಮಕ್ಕಳ ನಾಟಕಗಳು | : | ನಾನು ವಿಜ್ಞಾನಿಯಾಗುವೆ, ಎಲ್ಲಿರಬೇಕೋ ಅಲ್ಲೇ ಇರಬೇಕು, ವಿಧಿ ಹುಡುಕುವ ಮಕ್ಕಳು, ಕುಬುದ್ಧಿ – ಸುಬುದ್ಧಿ, ಮಂಗನ ಕೈಲಿ ಮಾಣಿಕ್ಯ, ನೀಲಿ ಕುದುರೆ, ಹಸಿದ ಹಕ್ಕಿ, ಸೋಮ್ನ ಹಳ್ಳಿ ಕೋಳಿ. |
| ಬೀದಿನಾಟಕಗಳು | : | ಕತ್ತಲಿನಿಂದ ಬೆಳಕಿನೆಡೆಗೆ, ಧೂಂ ಧೂಂ ಧೂಮ್ರಾ, ಕಣ್ಣಾಮುಚ್ಚಾಲೆ, ಬೇಳಿಯಾಕ ಬಿಡಿ, ಚೊಂಬು ಪುರಾಣ, ಹೊಸಬೆಳಕು, ರೈಲು ಬಿಡಿ, ಉಳಿಸಿ ಸ್ವಾಮಿ ವಿದ್ಯುತ್ ಮುಂತಾದ 100ಕ್ಕೂ ಹೆಚ್ಚು ನಾಟಕಗಳು. |
| ರಚನೆ | : | ಕಾರ್ಗತ್ತಲ ಬೆಳ್ಚುಕ್ಕಿ, ಕೊಡುತಾಯೇ ವರನ ಕುಡುಕನಲ್ಲದ ಗಂಡನ, ಕಳಕೊಂಡವರು, ಅವನು ಇವನು ಮತ್ತು ನಾನು, ನಿರ್ವಾಣ, ನಗ್ನ ಭೂಮಿಕೆ, ಆಲದ ಬಿಳಿಲು, ಸಂಕೀರ್ಣ ಮುಂತಾದವುಗಳು. |
| ಬೀದಿನಾಟಕ ರಚನೆ | : | ಧ.ಗ್ರಾ.ಯೋಜನೆಯ ಜನಜಾಗೃತಿ ನಾಟಕಗಳು., ಜಲ ನೈರ್ಮಲ್ಯ ಯೋಜನೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಕುಡ್ಸೆಂಪ್ ಯೋಜನೆ ಮುಂತಾದವುಗಳಿಗಾಗಿ ಅವಲೋಕನ, ಮನೆಯೆಂಬ ಶಾಲೆ, ಕೊರೆಯುವ ಹುಳುಗಳು, ನೀರು ಬೇರು, ಚೊಂಬು ಪುರಾಣ, ನಾವೂ ನಮ್ಮವರು, ನೀನ್ಯಾಕೋ ನಿನ್ನ ಹಂಗ್ಯಾಕೋ, ರಸ್ತೆ ರಕ್ಷಿತಿ ರಕ್ಷಿತಃ, ಸೌಖ್ಯಕ್ಕಾಗಿ ಶೌಚ ಮುಂತಾದ ಹಲವಾರು ನಾಟಕಗಳ ರಚನೆ. |
| ರಂಗ ತರಬೇತಿ | : | ಶಾಲಾ ಕಾಲೇಜುಗಳಿಗೆ ರಂಗತರಬೇತಿ, ಪಂಚಾಯತ್‌ರಾಜ್ |

| | | |
|---|---|---|
| | | ಇಲಾಖೆಗಾಗಿ ಬೀದಿನಾಟಕ ತರಬೇತಿ, ಮಕ್ಕಳ ವಿಕಸನಕ್ಕಾಗಿ 25ಕ್ಕೂ ಹೆಚ್ಚು ತರಬೇತಿ ಶಿಬಿರಗಳು. |
| ಸಂಸ್ಥೆ | : | ಸಂಕೇತ ನಾಟಕ ತಂಡದ ಸ್ಥಾಪನೆ, ವೆಲೊರೆಡ್, ರಾಗತರಂಗ, ಗೋವಿಂದದಾಸ ರಂಗ ಅಧ್ಯಯನ ಸಂಸ್ಥೆಯೊಂದಿಗೆ ಸಂಪರ್ಕ. |
| ಇತರೆ | : | ದೂರದರ್ಶನದಲ್ಲಿ ಪ್ರಸಾರಗೊಂಡ ನಾಟಕದ ನಿರ್ದೇಶನ. |
| ಪ್ರಶಸ್ತಿ | : | ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಹಲವಾರು ಪ್ರಶಸ್ತಿಗಳು. |

## ಪ್ರಕಾಶ್.ಎ.ಎನ್.

ನಡುಮನೆ, ಕುಡುಪು, ಮಂಗಳೂರು.,
ದೂರವಾಣಿ : 94445618606

| | | |
|---|---|---|
| ನಟನೆ | : | ಜೂಲಿಯಸ್‌ಸೀಝರ್, ತಾಯಿ, ಬಸ್ತಿ, ಒಂದು ಲೋಕ ಕಥೆ, ಹಳ್ಳಿ ಹುಡುಗಿ, ದುರಂತ ಕಾರಣ. |
| ರಚನೆ | : | ಧರಣಿ ಮಂಡಲ ಮಧ್ಯದೊಳಗೆ, ಕೆಯ್ಯೂರು. |
| ಬೀದಿ ನಾಟಕ ರಚನೆ | : | ಕಡಲಿನಒಡಲು, ಮತ್ಸ್ಯಕ್ಷಾಮದ ಬಗ್ಗೆ 80ಕ್ಕೂ ಹೆಚ್ಚು ಪ್ರದರ್ಶನ, ಅಪಘಾತವೇಕೆ ಆಗುತ್ತಿದೆ? ರಸ್ತೆ ಸುರಕ್ಷತೆಯ ಬಗ್ಗೆ. |
| ನಿರ್ದೇಶನ | : | ಕತ್ತಲೆ ದಾರಿ ದೂರ, ಧರಣಿ ಮಂಡಲ ಮಧ್ಯದೊಳಗೆ. |
| ಸಂಸ್ಥೆ | : | 'ಸೃಷ್ಟಿ ಕಲಾವಿದರು' ತಂಡದ ಮುಖ್ಯಸ್ಥ ಸ್ಥಾಪಕ 'ಆಯುಶ್' 'ಸಂಕೇತ್' ಮಂಗಳೂರುದೊಂದಿಗೆ ಸಂಪರ್ಕ. |
| ಇತರೆ | : | ಸಾಮಾಜಿಕ ಕಾರ್ಯರಂಗ 'ಜನಶಕ್ತಿ' ಟ್ರಸ್ಟ್ ಕಾರ್ಯದರ್ಶಿ |

## ಭಾಸ್ಕರ ನೆಲ್ಲಿತೀರ್ಥ

| | | |
|---|---|---|
| ಶಿಕ್ಷಣ | : | ಎಸ್.ಎಸ್.ಎಲ್.ಸಿ, ಐ.ಟಿ.ಐ. |
| ನಟನೆ | : | ಕತ್ತಲೆ ರಾಜ್ಯ, ಕೆರೆಗೆ ಹಾರ, ಮಹಿಮಾಪುರ, ಬೀದಿನಾಟಕಗಳು ಇತ್ಯಾದಿ. |
| ರಚನೆ | : | ಪರಿತ್ಯಕ್ತೆ, ನವರಸಭಾರತ. |
| ಸಂಸ್ಥೆ | : | ಸಹ್ಯಾದ್ರಿ ಮಡಿಲತಂಡ ಸ್ಥಾಪನೆ. |
| ನಿರ್ದೇಶನ | : | ಕತ್ತಲೆ ರಾಜ್ಯ, ಮಹಿಮಾಪುರ, ನಾಗಮಂಡಲ, ಸೂರ್ಯ ಶಿಕಾರಿ, ಕೆರೆಗೆ ಹಾರ, ಅಜೇಯ ಬಾಹುಬಲಿ, ಒಂದು |

ಲೋಕ ಕಥೆ, ಹುತ್ತವ ಬಡಿದರೆ, ಪಂಜರ ಶಾಲೆ, ಆಲಿಬಾಬಾ ಮತ್ತು ನಲವತ್ತು ಕಳ್ಳರು, ಮಾರನಾಯಕನ ದೃಷ್ಟಾಂತ, ಭಾರತಾಂಬೆ, ನವರಸ ಭಾರತ, ಪುಷ್ಪರಾಣಿ, ಇಸ್ಪೀಟ್‌ರಾಜ್ಯ, ಅಳಿಲುರಾಮಾಯಣ, ಸೀತಾಪಹಾರ (ನೃತ್ಯ ರೂಪಕ), ನಂದಗೋಕುಲದ ನಂದಾದೀಪ (ನೃತ್ಯ ರೂಪಕ), ನೆಲಮುಟ್ಟಿದ ಹೊಟ್ಟೆಪ್ಪ, ಒಂದು ಪ್ರಶ್ನೆ, ಹೀಗೊಬ್ಬ ರಾಜ, ಕಲಿಕೆ, ಬೆಲೆಏರಿಕೆ, ಅರಗಿನಬೆಟ್ಟ, ಹೂವಿ, ಹುಲಿಕಥೆ, ಕುಮಾರವಿಜಯ, ಪರಿತ್ಯಕ್ತೆ, ಒಡಪಾಯಿ ಮಾದಪ್ಪ ಇತ್ಯಾದಿ

ಹವ್ಯಾಸ : ಪ್ರಸಾಧನ, ವಿವಿಧ ಮಾದರಿಯ ವೇದಿಕೆ ವಿನ್ಯಾಸ, ಯಕ್ಷಗಾನ ಅರ್ಥಧಾರಿ, ವೇಷಧಾರಿ ವಿವಿಧ ಮಾಧ್ಯಮದಲ್ಲಿ ಕಲಾಕೃತಿ ರಚನೆ, ಆಕಾಶವಾಣಿ ಕಲಾವಿದ. ತುಳು ಧಾರಾವಾಹಿಯಲ್ಲಿ ನಟನೆ.

## ಉಮಾಶಂಕರ ಪೆರಿಯೋಡಿ

ಶಿಕ್ಷಣ : ಸಮಾಜ ಕಾರ್ಯ ಸ್ನಾತಕೋತ್ತರ ಪದವಿ.

ನಟನೆ : ತಾಯಿ, ಬಸ್ತಿ, ಹಲವಾರು ಬೀದಿನಾಟಕಗಳು.

ನಿರ್ದೇಶನ : ತರಬೇತಿ ಹೊಂದಿದ ನಿರ್ದೇಶನ, ಹಲವಾರು ನಾಟಕಗಳಿಗೆ ಬೀದಿ ನಾಟಕ, ರೂಪಕಗಳಿಗೆ ನಿರ್ದೇಶನ.

ಸಂಸ್ಥೆ : ಸಮುದಾಯ, ಆಯನ, ತಂಡಗಳೊಂದಿಗೆ ಸಂಪರ್ಕ.

ಇತರೆ : ಯಕ್ಷಗಾನದ ಪಾತ್ರಧಾರಿ, ಕಲಾಗಂಗೋತ್ರಿ, ಕೋಟೆಕಾರು, ಯಕ್ಷಗಾನ ತರಬೇತಿ ಕೇಂದ್ರದಲ್ಲಿ ಯಕ್ಷಗಾನ ಕುರಿತು ಅಧ್ಯಯನ ಪ್ರಾತ್ಯಕ್ಷಿಕೆ.

ವಿಶೇಷ ಪರಿಣತಿ : ಸಾಮಾಜಿಕ ಕಳಕಳಿಯ ಚಿಂತಕ, ಪರಿಸರ, ಪಂಚಾಯತ್ ರಾಜ್, ಸಾಮಾಜಿಕ ಭದ್ರತೆ ಕುರಿತಂತೆ ಹಲವಾರು ಜಾಥಾ ಸಂಘಟನೆ, ಸಾಮಾಜಿಕ ಪಿಡುಗು ವಿರುದ್ಧ ಜನಜಾಗೃತಿ ಗೊಂಬೆಯಾಟ ತಿರುಗಾಟ.

ಪತ್ರಿಕೆ : ವೈಚಾರಿಕ ಹಿನ್ನೆಲೆಯ 'ಸಂಗತಿ' ಕಿರುಪತ್ರಿಕೆಯ ಸಂಪಾದಕ.

**ಸದಾನಂದ ಸುವರ್ಣ**

ಅಬ್ಬಕ್ಕರಾಣಿ ಬಡಾವಣೆ,
ಕೊಟ್ಟಾರ, ಮಂಗಳೂರು

ವರ್ಷ : 67, ದೂರವಾಣಿ : 9848953344

ಶಿಕ್ಷಣ : ನಾಟ್ಯ ಅಕಾಡೆಮಿಯಲ್ಲಿ ನಾಟಕ ಕಲೆ ತರಬೇತಿ, ಖ್ಯಾನ್ಸಾಸ್ ಯುನಿವರ್ಸಿಟಿ (ಯು.ಎಸ್.ಎ)ಯಲ್ಲಿ ನಾಟಕ ರಚನೆ, ಶಿಕ್ಷಣ (ಮಾರ್ಗದರ್ಶನ: ಜೋರ್ಡಾನ್ ಮಿಲ್ಲರ್).

ರಚನೆ : ನಿರ್ದೇಶನವನ್ನೇ ಮುಖ್ಯವಾಗಿಟ್ಟುಕೊಂಡು ಇಂಗ್ಲಿಷ್ ಹಿಂದಿ, ಬೆಂಗಾಲಿ, ಮರಾಠಿ ನಾಟಕವನ್ನು ಭಾಷಾಂತರಿಸಿ ಅವುಗಳ ಪ್ರಯೋಗ.

ನಿರ್ದೇಶನ : 'ಉರುಳು' 'ಕೋರ್ಟ್ ಮಾರ್ಷಲ್' 'ಮಳೆ ನಿಲ್ಲುವವರೆಗೆ'.

ಪ್ರಶಸ್ತಿ : 'ಕೋರ್ಟ್ ಮಾರ್ಷಲ್' ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ, 'ಮಳೆ ನಿಲ್ಲುವವರೆಗೆ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿದೆ.

ಸಾಂಸ್ಕೃತಿಕ ಚಟುವಟಿಕೆ : ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಸ್ಥಾಪನೆ. ಚಲನಚಿತ್ರ, ಕಿರುಚಿತ್ರ ಕ್ಷೇತ್ರದಲ್ಲಿ ವಿಶೇಷ ಸಾಧನೆ, ಪ್ರಶಸ್ತಿ ಲಭ್ಯ.

ಪ್ರಶಸ್ತಿ : ಸಂದೇಶ ಪ್ರಶಸ್ತಿ.

**ಚಂದ್ರಹಾಸ ಉಳ್ಳಾಲ್**

ಸಿ.ಆರ್.ಯಸ್.ಬಳಿ, ಉಳ್ಳಾಲಬೈಲು,
ಉಳ್ಳಾಲ ಅಂಚೆ, ಮಂಗಳೂರು
ಫೋನ್: 0824–2421800, 2468000, 9448254959

ಶಿಕ್ಷಣ : ಪದವೀಧರ

ರಂಗಭೂಮಿ ಅನುಭವ: 1969 ರ ಸುಮಾರಿಗೆ 12 ನೇ ವಯಸ್ಸಿನಲ್ಲಿ 'ಹಗಲಿಗೆ ಹಗಲು' ನಾಟಕದ ಮೂಲಕ ರಂಗಭೂಮಿಗೆ ಪರಿಚಯ. 1976ರಲ್ಲಿ 'ಸಮುದಾಯ' ಮಂಗಳೂರು ಘಟಕದ ಪ್ರಾರಂಭದಲ್ಲಿ ವಿದ್ಯಾರ್ಥಿ.

1977ರಲ್ಲಿ 'ಸಮುದಾಯ'ದ ಪ್ರಥಮ ರಂಗತರಬೇತಿ ಶಿಬಿರದಲ್ಲಿ (ಕುಂಬಳಗೋಡು) ಪ್ರಸನ್ನ ಮತ್ತು ಇತರ ರಂಗತಜ್ಞರಿಂದ ತರಬೇತಿ. ಬೀದಿನಾಟಕದ ತಯಾರಿ.

1978ರಲ್ಲಿ ದೆಹಲಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಹುತ್ತವ ಬಡಿದರೆ' ನಾಟಕದಲ್ಲಿ ಭಾಗಿ. ಪ್ರಸನ್ನರ 'ಮೂರು ರೂಪಕಗಳು' ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಪ್ರದರ್ಶನ, ದೆಹಲಿಯ ವಿವಿಧೆಡೆ ಬೀದಿ ನಾಟಕದ ಪ್ರದರ್ಶನಗಳು, ಸಿ.ಜಿ.ಕೆ ನಿರ್ದೇಶನದ 'ರೂಪಕಗಳು' ಮತ್ತು 'ಪಂಚಮ' ನಾಟಕದಲ್ಲಿ ಅಭಿನಯ.

1979–1982 ಕೊಡಗಿನ ಗೋಣಿಕೊಪ್ಪಲಿಗೆ ಮಿತ್ರರೊಂದಿಗೆ ಒಡಗೂಡಿ 'ಸ್ಪಂದನ' ತಂಡದ ಉದಯ. 'ಕತ್ತಲೆದಾರಿ ದೂರ' ನಾಟಕ ನಿರ್ದೇಶನ. ಕೊಡಗಿನ ಹಲವೆಡೆ ಪ್ರದರ್ಶನಗಳು.

1983ರಲ್ಲಿ ಭೋಪಾಲ್‌ನಲ್ಲಿ ನಡೆದ ತೃತೀಯ ರಂಗಭೂಮಿಯ 'ರಾಷ್ಟ್ರಮಟ್ಟದ ಸಮಾವೇಶದಲ್ಲಿ' ಮಂಗಳೂರು ಸಮುದಾಯ ಘಟಕದ ಬೀದಿ ನಾಟಕ ಪ್ರದರ್ಶನ.

ಭೋಪಾಲದ ಮಣಿಪುರ ರಂಗ ನಿರ್ದೇಶಕ ಕನ್ಹಯ್ಯಲಾಲ್ ಅವರ ರಂಗರೂಪಕ 'ಪೆಬೆತೇತು' ನಲ್ಲಿ ಅಭಿನಯ.

1984 – 1993 – ಮಂಗಳೂರಿನ ರಂಗ ಮಿತ್ರರೊಂದಿಗೊಡಗೂಡಿ 'ಆಯನ' ನಾಟಕದ ಮನೆ ಸಂಘಟನೆಯಲ್ಲಿ ಪಾತ್ರ.

ನಟನೆ : ಕೋರ್ಟ್‌ಮಾರ್ಷಲ್, ಉರುಳು, ಒಥೆಲೋ, ಗ್ರಾಮಚಾವಡಿ(ಕಕೇಷಿಯನ್ ಚಾಕ್ ಸರ್ಕಲ್), ಕೊಡಿಮರ, ಬೇಲಿಬೈಲು, ಒಂದು ಗಂಟಿನ ಕತೆ, ಪಟ್ಲೇರ್‌ನ ಆನೆ, ಸೇತುಮಾಧವ ಸಲ್ಲಾಪ, ಆಪತ್ತಿನ ಕತೆಗಳು, ಹಳ್ಳಿಹುಡುಗಿ, ಜೂಲಿಯಸ್ ಸೀಜರ್, ತಾಯಿ, ಪೆಬೆತೇತು, ಪಂಚಮ, ಕತ್ತಲೆ ದಾರಿ ದೂರ, ದ್ವೀಪ, ಉದ್ಭವ, ಮೂರು ರೂಪಕಗಳು, ಮಾರೀಚನ ಬಂಧುಗಳು, ಬಸ್ತಿ, ಹಳಿಯ ಮೇಲಿನ ಸದ್ದು, ಮಳೆ ನಿಲ್ಲುವವರೆಗೆ.

ನಿರ್ದೇಶನ : ಕತ್ತಲೆದಾರಿ ದೂರ, ದ್ವೀಪ, ಪೆಬೆತೇತು, ಉದ್ಭವ, ಗೋಸುಂಬೆ, ಮೂರು ರೂಪಕಗಳು, ಏದಾಯು, ಭಾಗೀರಥಿ(ಜಾನಪದ ನಾಟಕ).

ಕಿರುತೆರೆ : "ಅಭಿನಯ" ಮತ್ತು "ಸಭಾಂತರಂಗ" ದಲ್ಲಿ ಅಭಿನಯ.

ಧಾರಾವಾಹಿ : ವೈಶಾಲಿ ಕಾಸರವಳ್ಳಿಯವರ ಮೂಕರಾಗ ಮತ್ತು ಗಿರೀಶ್

ಕಾಸರವಳ್ಳಿ ನಿರ್ದೇಶನದ ಟೆಲಿಚಿತ್ರ "ಒಂದು ಕೊಲೆಯ ಸುತ್ತ" ಮತ್ತು ಶೇಷಾದ್ರಿ ನಿರ್ದೇಶನದ "ಒಂದು ತುಂಡು ಗೋಡೆ"ಯಲ್ಲಿ ಅಭಿನಯ ಗಿರೀಶ್ ಕಾಸರವಳ್ಳಿಯವರ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ "ಹಸೀನಾ"ದಲ್ಲಿ ನಾಯಕ ಪಾತ್ರ, ನಾಯಿ ನೆರಳಿನಲ್ಲಿ ಅಭಿನಯ.

ಸಂಸ್ಥೆ : ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ, ಸಂಕೇತ, ಮಂಗಳೂರು, ಆಯನ ಮಂಗಳೂರು.

## ಪಿ.ವಿ. ಪರಮೇಶ್

'ಅನುಗ್ರಹ', 3–3–183, ಕದ್ರಿ ಕಂಬಳ,
ಮಂಗಳೂರು, ವರ್ಷ : 49;

ಉದ್ಯೋಗ : ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆ, ಮಂಗಳೂರು(ಎಂಸಿಎಫ್ ಲಿ. ನಲ್ಲಿ ಅಧಿಕಾರಿ).

ಫೋನ್ : 0824–2213595, 9845113710

ಪರಿಣತಿ : ಹವ್ಯಾಸಿ ನಾಟಕ, ಯಕ್ಷಗಾನ, ಜಾನಪದ, ನಾಟಕ ಕಲಾವಿದನಾಗಿ, ವಸ್ತ್ರವಿನ್ಯಾಸಕಾರನಾಗಿ, ಪ್ರಸಾಧನ ಕಲಾವಿದನಾಗಿ, ಹಿಮ್ಮೇಳ ಕಲಾವಿದನಾಗಿ 36 ವರುಷಗಳಿಂದ ಕಾರ್ಯನಿರತ.

ಇತರೆ : ಚೆಂಡೆ, ಮೃದಂಗ, ತಬ್ಲಾದಲ್ಲಿ ಪರಿಣತಿ. ಹಲವು ಬಗೆಯ ನಾಟಕ ಯಕ್ಷಗಾನ, ಭರತನಾಟ್ಯ, ಕಥಕಳಿ ಸಹಿತ 12 ಪ್ರಕಾರಗಳಿಗೆ ಪ್ರಸಾಧನ. ನಾಟಕದ ರಂಗತರಬೇತಿ, ವಸ್ತ್ರವಿನ್ಯಾಸ, ಪ್ರಸಾಧನ ಕಾರ್ಯಾಗಾರ ಮತ್ತು ಕಮ್ಮಟ ನಡೆಸುವ ಸಂಪನ್ಮೂಲ ವ್ಯಕ್ತಿ.

ಕಿರುತೆರೆ : ದೂರದರ್ಶನ, ಧಾರಾವಾಹಿ, ಚಲನಚಿತ್ರಗಳಲ್ಲಿ ಪಾತ್ರ.

ಪ್ರಶಸ್ತಿ : ಕಲಾಸೇವೆಗಾಗಿ 2000 ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ 'ಪದ್ದಣ್ಣ ಪ್ರಶಸ್ತಿ' ವಿಜೇತ. 'ಲಲಿತ ಕಲಾ ತಜ್ಞ' ಬಿರುದಾಂಕಿತ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ.

ಪ್ರವಾಸ : 'ಅಕ್ಕಾ ಸಮ್ಮೇಳನಕ್ಕಾಗಿ' ಅಮೆರಿಕಾದ ಚಿಕಾಗೋಗೆ ಪ್ರವಾಸ. ಕಾಮನ್‌ವೆಲ್ತ್ ಯೂತ್ ಎಕ್ಸ್‌ಚೇಂಜ್‌ನ ಪರವಾಗಿ ಇಂಗ್ಲೆಂಡ್‌ಗೆ ಪ್ರವಾಸ. ಹಲವಾರು ಕಾರ್ಯಕ್ರಮ ನೀಡಿಕೆ. ಹಂಪಿ ವಿಶ್ವವಿದ್ಯಾಲಯದ ಪ್ರಾಯೋಜಕತ್ವದಲ್ಲಿ ಏಷ್ಯನ್

ನೃತ್ಯೋತ್ಸವಕ್ಕಾಗಿ ಜಪಾನ್‌ಗೆ ಪ್ರವಾಸ. ದುಬ್ಯಾ, ಶಾರ್ಜಾ, ಅಬುದಾಬಿ, ಬಹರಿನ್, ಮಸ್ಕತ್, ಕತ್ತಾರ್‌ಗೆ ಪ್ರವಾಸ ಮಾಡಿ ಕಾರ್ಯಕ್ರಮ ನೀಡಿಕೆ.

**ಡಾ.ಆರ್.ನರಸಿಂಹಮೂರ್ತಿ**

ಮುಖ್ಯಸ್ಥರು – ಕನ್ನಡ ವಿಭಾಗ
ಗೋಕರ್ಣನಾಥೇಶ್ವರ ಕಾಲೇಜು, ಗಾಂಧಿನಗರ, ಮಂಗಳೂರು

| | | |
|---|---|---|
| ಶಿಕ್ಷಣ | : | ನಾಟಕ ಕಲಾಸ್ನಾತಕ ಪದವಿ (ಬಿ.ಎ ಡ್ರಾಮ), ಗ್ರಂಥಾಲಯ ವಿಜ್ಞಾನ ಪದವಿ (ಬಿ.ಲಿಬ್.ಎಸ್ಸಿ). |
| ಸಂಶೋಧನೆ | : | ಕನ್ನಡದಲ್ಲಿ ಬೀದಿ ನಾಟಕಗಳು. |
| ನಟನೆ | : | ಜೈ ಸಿದ್ಧನಾಯಕ, ಕಲ್ಕಿ, ಯಾಸ್ಮಿನ್, ನೀಗಿಕೊಂಡ ಸಂಸ, ಆಷಾಡದ ಒಂದು ದಿನ, ಹಲ್ಲಾಬೋಲ್, ದೃಷ್ಟಿ, ಅಶ್ವಪರ್ವ, ಮಳೆ ನಿಲ್ಲುವವರೆಗೆ. 1954ಕ್ಕೆ ಮೊದಲು (ನೃತ್ಯ, ನಾಟಕ, ಸಂಗೀತ ವಿಭಾಗದಲ್ಲಿ ಪ್ರದರ್ಶನಗೊಂಡ ನಾಟಕಗಳು : ಸಾರ್ವಜನಿಕ ರಸ್ತೆ ಅಲ್ಲ, ಅಪ್ಪ, ಗರ್ಭಗುಡಿ, ಎಲ್ಲಾರು ಮಾಡುವುದು, ಅವರ್ ಟೌನ್. |
| ಸಂಸ್ಥೆ | : | 'ದಾಸಜನ' ಸಾಂಸ್ಕೃತಿಕ ಸಂಘಟನೆಯ ಪದಾಧಿಕಾರಿ. |
| ಇತರೆ | : | ಆಕಾಶವಾಣಿ ನಾಟಕ ವಿಭಾಗದ ಬಿ –ಹೈ ಕಲಾವಿದ. |
| ಪ್ರಶಸ್ತಿ | : | ಏರ್ಯ ಬೀಡು ಪ್ರಶಸ್ತಿ. |

**ಕೆ.ವಿ.ರಮಣ್**

ಧನಲಕ್ಷ್ಮೀ ಕಂಪೌಂಡ್, ಗಾಂಧಿನಗರ, ಮೂಡಬಿದಿರೆ (ದ.ಕ)
ದೂರವಾಣಿ : 9448482456

| | | |
|---|---|---|
| ನಟನೆ | : | ರಣಹದ್ದುಗಳು, ಬಂಕಾಪುರದ ಬಯಲಾಟ, ಮಣ್ಣಿನ ಗೋಡೆ, ನಾಗಮಂಡಲ. |
| ರಚನೆ/ ನಿರ್ದೇಶನ | : | ದಕ್ಷಿಣಾವರೋಹಣ, ಕೆಂಪು ದೀಪದ ಸುತ್ತಮುತ್ತ, ರಣದುಂದುಭಿ, ಮಣ್ಣಿನ ಮಗಳು ಅಬ್ಬಕ್ಕ, ಸಿಂಗನಿಂಗಿ ಸಂಸಾರ, ಪುಷ್ಪರಾಣಿ, ಕಪ್ಪುಕಾಣಿಕೆ. |

| | | |
|---|---|---|
| ಇತರೆ | : | ಹಲವಾರು ನೃತ್ಯ ಗೀತೆಗಳ ರಚನೆ, ಭರತನಾಟ್ಯಕ್ಕೆ ಹಿನ್ನೆಲೆಗಾಯನ. |
| ಸಂಸ್ಥೆ | : | ರಂಗಭಾರತಿ ಮಂಗಳೂರು ಸಂಸ್ಥೆಯ ಸ್ಥಾಪಕ. |

**ಮ್ಯಾಕ್ಸಿಂ ರಾಡ್ರಿಗಸ್**

5 – 115/1, ಬೋಳುಗುಡ್ಡ, ಕಾವೂರು ಅಂಚೆ,
ಮಂಗಳೂರು, ದೂರವಾಣಿ : 9449639319

| | | |
|---|---|---|
| ನಟನೆ | : | ಬೇಲಿ ಮತ್ತು ಹೊಲ, ಬೇಲಿ ಚೈನ್, ರಣಹದ್ದುಗಳು, ಮಾರನಾಯಕನ ದೃಷ್ಟಾಂತ, ಪೊಲೀಸರಿದ್ದಾರೆ ಎಚ್ಚರಿಕೆ. |
| ನಿರ್ದೇಶನ | : | "ಅಮ್ಮ ರಿಟೈರ್ ಆಗ್ತಾಳೆ". |
| ಮಕ್ಕಳ ನಾಟಕ | : | ಸುಮಾರು 15 ಕ್ಕೂ ಹೆಚ್ಚು ನಾಟಕಗಳಲ್ಲಿ ನಿರ್ದೇಶನ. |
| ಇತರೆ | : | ಆಕಾಶವಾಣಿ ಕಲಾವಿದ. |
| ಸಂಸ್ಥೆ | : | ಸಾಮಾಜಿಕ ಚಟುವಟಿಕೆ |

**ಐವನ್ ಡಿಸಿಲ್ವ**

'ಪನಿ' ಮನೆ, ಕೊಪ್ಪಳಕಾಡು, ಕೊಂಚಾಡಿ,
ಯೆಯ್ಯಾಡಿ, ಮಂಗಳೂರು
ದೂರವಾಣಿ : 0824– 2223330, 9448073330.

| | | |
|---|---|---|
| ನಟನೆ | : | ಹಳ್ಳಿ ಹುಡುಗಿ, ಕತ್ತಲ ದಾರಿ ದೂರ, ಆಪತ್ತಿನ ಕಥೆಗಳು. |
| ನಿರ್ದೇಶನ | : | ಅಂಧೇರಿ ನಗರ ಚೌಪಟ್ ರಾಜಾ, ಹಯವದನ, ಆಲಿಬಾಬಾ ನಲವತ್ತು ಕಳ್ಳರು, ಪಂಜರಶಾಲೆ, ಬೆಪ್ಪು ತಕ್ಕಡಿ ಭೋಳೇ ಶಂಕರ. |
| ಬೀದಿ ನಾಟಕಗಳು | : | ಭೂಪಾಲ್ ದುರಂತ, ಪಂಚಾಯತ್ ರಾಜ್, ಸಾಕ್ಷರತಾ ನಾಟಕ, ಸ್ವಚ್ಛತಾ ಆಂದೋಲನ ಬೀದಿನಾಟಕ. |
| ನಾಟಕಗಳು | : | ಮದರ್ ತೆರೇಸಾ. |
| ಸಂಸ್ಥೆ | : | ಆಯನ, ಮಂಗಳೂರು ಮತ್ತು ಇತರೆ ಸಾಮಾಜಿಕ ಸಂಘಟನೆಗಳು. |

**ಸತೀಶ್ ಜೋಗಿ**

ಸ್ವಿಚ್‌ವೆಲ್ ಟ್ರೈಲರ್ ಶಾಪ್ ಬಳಿ, ಕುಂಪಲ, ಕೃಷ್ಣನಗರ,
ಕೋಟೆಕಾರ್ ಅಂಚೆ, ಮಂಗಳೂರು
ದೂರವಾಣಿ: 9986373799

| | | |
|---|---|---|
| ನಟನೆ | : | ಸುಮಾರು 25 ವರ್ಷಗಳು ನಾಟಕರಂಗದಲ್ಲಿದ್ದು 20ಕ್ಕೂ ಹೆಚ್ಚು ಕನ್ನಡ ನಾಟಕಗಳಲ್ಲಿ ಅಭಿನಯ. |
| ಸಂಸ್ಥೆ | : | 'ಪರ್ಯಟನೆ', ಸಂಕೇತ್‌ನಲ್ಲಿ ರಂಗಭೂಮಿ ಚಟುವಟಿಕೆಯಲ್ಲಿ ಭಾಗಿ. |
| ಇತರೆ | : | ಹಲವಾರು ರಂಗಶಿಬಿರಗಳಲ್ಲಿ ತರಬೇತುದಾರನಾಗಿ ಕಾರ್ಯನಿರ್ವಹಣೆ.<br>ರಾಜ್ಯಾದ್ಯಂತ ನೀರು ನೈರ್ಮಲ್ಯ ಬೀದಿನಾಟಕದಲ್ಲಿ ತಂಡದ ನಾಯಕನಾಗಿ ಕಾರ್ಯನಿರ್ವಹಣೆ. |

**ಕೆ.ಮನಮೋಹನ್ ರಾವ್**

ಕುಂಪಲ, ಕೋಟೆಕಾರ್
ಮಂಗಳೂರು

| | | |
|---|---|---|
| ನಾಟಕರಂಗ | : | ದಿ। ಜಿ.ವಿ.ಕಾಮತ್‌ರ ಮೂಲಕ ರಂಗಕ್ಕೆ ಪರಿಚಯ, 15ಕ್ಕೂ ಹೆಚ್ಚು ನಾಟಕಗಳಲ್ಲಿ ಪಾತ್ರ. |
| ಸಂಸ್ಥೆ | : | ದಿ। ದಯಾನಂದ ಗರೋಡಿಯವರ ಸಂಗೀತ ತಂಡದ ಸದಸ್ಯ., ನಾಟ್ಯಾಚಾರ್ಯ ವಿಠಲ ಮಾಸ್ತರಲ್ಲಿ ಸಂಗೀತದಲ್ಲಿ ಸಾಥಿ. |
| ಪರಿಣತಿ | : | ತಬ್ಲಾ, ಜಲತರಂಗ, ಹಾರ್ಮೋನಿಯಂ, ಕೊಳಲು ಪರಿಣಿತ. |
| ಅನುಭವ | : | 100 ಕ್ಕೂ ನಾಟಕಗಳಿಗೆ ಸಂಗೀತದಲ್ಲಿ ಸಹಕಾರ. ಉದಾ: 'ಶಿವಪಾರ್ವತಿ' 'ಅಗ್ನಿ ಶಿಖೆ' 'ವೈಶಾಲಿ' 'ಶಿವನಾತ್ಮಲಿಂಗ' 'ದಿವ್ಯ ದರ್ಶನ' 'ಮಂತ್ರಾಮುಕ್ತ'. |
| ಪ್ರಶಸ್ತಿ/ ಸನ್ಮಾನ | : | ಸಂಕೇತ ಸಂಸ್ಥೆಯ 20 ನೇ ವರ್ಷಾಚರಣೆಯಲ್ಲಿ ಸ್ವಗೃಹದಲ್ಲೇ ಸನ್ಮಾನಕ್ಕೆ ಭಾಜನ. |

**ಭಾಸ್ಕರ್ ಸಿ.ಎಚ್.**

ಬದ್ರಿಯಾ ಜ್ಯೂನಿಯರ್ ಕಾಲೇಜು, ಕಂದಕ,
ಬಂದರ್, ಮಂಗಳೂರು, ಮೊ. 9880374405

| | | |
|---|---|---|
| ನಟನೆ | : | ಅಭಿವ್ಯಕ್ತ, ಆಯನ, ಸಂಕೇತ್ ತಂಡಗಳಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯ. |
| ನಿರ್ದೇಶನ | : | ಸಂಕೇತ್ ತಂಡಕ್ಕೆ "ದುರಂತ ಕರ್ಣ". |
| ಇತರೆ | : | ರಂಗಶಿಬಿರ – ಹಲವಾರು ರಂಗಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗಿ. |
| ತೀರ್ಪುಗಾರ | : | ರಾಗತರಂಗ, ನವಮಂಗಳೂರು ಬಂದರು ಮಂಡಳಿ, ಪಿಲಿಕುಳ ನಿಸರ್ಗಧಾಮದಲ್ಲಿ ನಡೆಯುತ್ತಿರುವ ಪ್ರಹಸನ ಸ್ಪರ್ಧೆ ತೀರ್ಪುಗಾರರಾಗಿ ಭಾಗಿ. |

**ಗುರುರಾಜ್ ಎಂ.ಬಿ**

ಸಾಯಿರಾಂ ರೆಕಾರ್ಡಿಂಗ್ ಸ್ಟೇಷನ್, ಪಾಂಡೇಶ್ವರ,
ಮಂಗಳೂರು, ದ.ಕ. ದೂರವಾಣಿ : 9731955333

| | | |
|---|---|---|
| ನಟನೆ | : | ದೊಡ್ಡವರೆಲ್ಲಾ ಜಾಣರಲ್ಲ, ಸಿಂಗಾರದರಮನೆ, ಸತ್ಯಶಂಕರ, ದಿವ್ಯದರ್ಶನ. |
| ನಾಟಕ ಸಂಗೀತ | : | ಶಿವಪಾರ್ವತಿ, ಅಗ್ನಿಶಿಖೆ, ವೈಶಾಲಿಗೆ (ಸಂಕೇತ್ ಕಲಾವಿದರು, ಮಂಗಳೂರು) |
| ಸಂಗೀತ ನಿರ್ದೇಶನ | : | ದಾಟಿದಳು ಜನಕಜೆ ಲಕ್ಷಣಂ ರೇಖೆಯ, ಡಿಂಡಿಮ, ಜಾಲ, ಛತ್ರಪತಿ ಶಿವಾಜಿ, ನೃತ್ಯ ನಾಟಕಕ್ಕೆ ಸಂಗೀತ ನಿರ್ದೇಶನ, |
| ಪ್ರಶಸ್ತಿ | : | ಆರ್ಯಭಟ ಪ್ರಶಸ್ತಿ |

**ಶ್ರೀಧರ್ ಆಚಾರ್**

ವಿಳಾಸ : ಮನೆ ನಂಬ್ರ 17– 7ನೇ ಅವೆನ್ಯೂ ಎನ್.ಎಮ್.ಪಿ.ಟಿ
ಸ್ಟಾಫ್ ಕ್ವಾಟರ್ಸ್, ಪಣಂಬೂರು, ಮಂಗಳೂರು
ಶಿಕ್ಷಣ: ನೀನಾಸಂ ಪದವೀಧರ

| | | |
|---|---|---|
| ನಟನೆ | : | ಮಿಡ್ ಸಮ್ಮರ್ ನೈಟ್ ಡ್ರೀಮ್ಸ್, ಸಾಹೇಬರು ಬರುತ್ತಾರೆ, ವೇಣು ಮಾವ, ವಾಲಿ ವದಾಂಕಂ, ಜೋ.ಕುಮಾರಸ್ವಾಮಿ, |

| | | |
|---|---|---|
| | | ಮಹಾಬಲ, ಜನದಾಸ, ನಾಗಮಂಡಲ, ರಾವಿ ನದಿಯ ದಂಡೆಯಲ್ಲಿ, ಅದ್ವಾನಪುರ. |
| ರಚನೆ | : | ಸೈತಾನ ಬಂದಿದ್ದಾನೆ, "ಸಾವಿಗೆ ಸಾಸಿವೆ ಕೇಳು" |
| ನಿರ್ದೇಶನ | : | ಪಂಜರ ಶಾಲೆ, ಪುಷ್ಪರಾಣಿ, ಅದ್ವಾನ ಪುರ, ಭಾರತಾಂಬೆ, ಅಭಿಜ್ಞಾನ ಶಾಕುಂತಲೆ |
| ರಂಗ ಪರಿಣತಿ | : | 40 ನಾಟಕಕ್ಕೆ ರಂಗವಿನ್ಯಾಸ ಮಾಡಿದುದಲ್ಲದೆ, ರಂಗಪರಿಕರಗಳನ್ನು ತಯಾರಿಸುವುದರಲ್ಲಿ ಪರಿಣತಿ |
| ಸಂಸ್ಥೆ | : | 'ನೀನಾಸಂ', ನಂದಕಲಾಸಂಸ್ಥೆ, ಪಣಂಬೂರು, ಸಂಕೇತ್ ಕಲಾವಿದರು, ಮಂಗಳೂರು. |
| ಪ್ರಶಸ್ತಿ | : | ಅಂತರ್‌ವಿಭಾಗೀಯ ಬಂದರು ನಾಟಕ ಸ್ಪರ್ಧೆಯಲ್ಲಿ (ಕೊಲ್ಕೊತ್ತಾ) ನಟನಾ ಪ್ರಶಸ್ತಿ. |
| ಇತರೆ | : | 'ನಾದ ಮೃದಂಗ' (ರಾಷ್ಟ್ರಪ್ರಶಸ್ತಿ ವಿಜೇತ ವೀಡಿಯೋ ಚಿತ್ರ)ದಲ್ಲಿ ನಟನೆ. |

## ಸುನೀಲ್ ಕುಮಾರ್

S/o.ಅಣ್ಣಪ್ಪ, " ಸುಧಿಶಾ", ನೀರುಮಾರ್ಗ, ಪೆದುಮಲೆ ಅಂಚೆ
ಮಂಗಳೂರು-575029, ಮೊ. 9743812597

| | | |
|---|---|---|
| ನಟನ | : | ರಂಗನಾಟಕ-ದುರಂತಕರ್ಣ, ಧರಣಿಮಂಡಲ ಮಧ್ಯದೊಳಗೆ, ಕರ್ಣಾವಸಾನ, ಟಿಪ್ಪುಸುಲ್ತಾನ್, ವಜ್ರಪಂಜರ, ಆಗೋದೆಲ್ಲಾ ಒಳ್ಳೇದಕ್ಕೆ, ಪ್ರಜಾಪ್ರಜ್ಞೆ (ಬೀದಿ ನಾಟಕ), ರಸ್ತೆ ಸುರಕ್ಷೆ, ಸ್ವಚ್ಛ ನಗರ, ರಂಗಸಜ್ಜಿಕೆ, ಹಲವಾರು ನಾಟಕಗಳಲ್ಲಿ ಕಾಮಿಡಿ. |

## ವಾಣಿ ಪೆರಿಯೋಡಿ

| | | |
|---|---|---|
| ಶಿಕ್ಷಣ | : | ಸಮಾಜಕಾರ್ಯ ಸ್ನಾತಕೋತ್ತರ ಪದವಿ. |
| ನಟನೆ | : | ಮಹಿಳಾ ಸಶಕ್ತೀಕರಣದ ನಾಟಕ, ಬೀದಿನಾಟಕಗಳಲ್ಲಿ ನಾಟಕ, ಏಕವ್ಯಕ್ತಿ ಪ್ರದರ್ಶನಗಳು. |
| ರಚನೆ | : | ಬಾಕಿ ಇತಿಹಾಸ, ಬೀದಿನಾಟಕಗಳು, ರೂಪಕಗಳು. |
| ಸಂಸ್ಥೆ | : | ತರಿಕಿಟ ಕಲಾ ಕಮ್ಮಟದ ಮೂಲಕ ಕಲಾಪ್ರದರ್ಶನ ತರಬೇತಿ ಹಾಗೂ ಸಂಶೋಧನೆ. |

**ರಾಕೇಶ್ ಹೊಸಬೆಟ್ಟು**

"ರಜತಾದ್ರಿ", ಕುಳಾಯಿ, ಹೊಸಬೆಟ್ಟು, ಸುರತ್ಕಲ್,
ದ.ಕ ಜಿಲ್ಲೆ 575026. ಮೊ.9481271304

ನಟನೆ : ಪಂಜರಶಾಲೆ, ಸೂರ್ಯ ಬಂದ, ಯಕ್ಷಪ್ರಶ್ನೆ, ಕಳಕೊಂಡವರು, ತಂತ್ರದೋಷ
ರಚನೆ : ಕ್ರಾಂತಿಯ ಕಿಡಿ, ರೈತಮಿತ್ರ, ನೊಂದಜೀವ, ಜೀವಹಾನಿ, ನೆಲದ ಮಣ್ಣು
ನಿರ್ದೇಶನ : ಕ್ರಾಂತಿಯ ಕಿಡಿ, ರೈತಮಿತ್ರ, ತಂತ್ರದೋಷ
ಇತರೆ : ನಾಟಕಗಳಿಗೆ ರಂಗಸಜ್ಜಿಕೆ, ತಬ್ಲಾ, ಡೋಲಕ್, ಚೆಂಡೆ, ಮದ್ದಳೆ, ಹಾರ್ಮೋನಿಯಂ, ಮೃದಂಗ, ಕೀಬೋರ್ಡ್ ಇತ್ಯಾದಿ ಸಂಗೀತೋಪಕರಣಗಳಲ್ಲಿ ಪರಿಣತಿ.

**ಕೆ. ಬಾಲಕೃಷ್ಣ**

ಗ್ರಂಥಪಾಲ, ಗೋವಿಂದದಾಸ್ ಕಾಲೇಜು,
ಸುರತ್ಕಲ್, ಮಂಗಳೂರು

ಶಿಕ್ಷಣ : ಎಂ.ಎ, ಎಲ್.ಐ.ಎಸ್.ಸಿ
ನಟನೆ : ಹಲವು ನಾಟಕಗಳಲ್ಲಿ ಅಭಿನಯ.
ರಚನೆ : ಹನುಮ ರಕ್ಷೆ; ಮಾರ್ಜಾಲ ಮಹಾಶಯ, ಸಿದ್ಧಾರ್ಥ ಸತೀ ವಿಜಯ, ತಿರುಪತಿ ಮಹಾತ್ಮೆ
ಇತರೆ : ನಾಟಕಗಳಿಗೆ ಸಂಗೀತ.

**ಯು. ಮೋಹನಚಂದ್ರ**

ವಿಳಾಸ : ಉರ್ವ, ಮಂಗಳೂರು
ಶಿಕ್ಷಣ : ನೀನಾಸಂ ರಂಗಶಿಕ್ಷಣ ಪದವಿ.
ನಟನೆ : 'ನೀನಾಸಂ'ನ ಕೆಲವು ನಾಟಕಗಳಲ್ಲಿ ಅಭಿನಯ ಬೀದಿನಾಟಕಗಳು.
ನಿರ್ದೇಶನ : ಜೂಲಿಯಸ್ ಸೀಜರ್, ಜಾತ್ರೆ, ಕತ್ತಲೆದಾರಿ ದೂರ, ಬಸ್ತಿ, ಒಂದು ಲೋಕದ ಕಥೆ, ಬೀದಿನಾಟಕಗಳು ಹಾಗೂ ಕೆಲವು ತುಳುನಾಟಕಗಳು.

| | | |
|---|---|---|
| ಸಂಸ್ಥೆ | : | ಆಯನ, ಪರ್ಯಟನ ಹಾಗೂ ಖಚಿಖಿಂ ದೊಂದಿಗೆ ಸಂಪರ್ಕ, ಸಂಸ್ಥೆಯ ಮೂಲಕ ಸಮೂಹ ಮಾಧ್ಯಮ ಸಲಹೆಗಾರನಾಗಿ ಕಾರ್ಯನಿರ್ವಹಣೆ. |
| ಚಲನಚಿತ್ರ | : | ಎಂ.ಎಸ್ ಸತ್ಯುರವರ 'ಬರ' ಚಿತ್ರದ ತಾಂತ್ರಿಕ ಸಲಹೆಗಾರ. |

**ಗೋಕುಲ್‌ದಾಸ್ ಶೆಟ್ಟಿ**

ಪಡುಪಳ್ಳಿ ಮನೆ, ಪಡುಅಂಚೆ, ಮಂಗಳೂರು

ದೂರವಾಣಿ : 9945358991, 0824–2274235

| | | |
|---|---|---|
| ನಟನ | : | 'ಬೇಲಿ ಮತ್ತು ಹೊಲ','ಕೋಮಲ ಗಾಂಧಾರ', 'ಸಾಕ್ಷಾತಾರ', 'ರಣಹದ್ದುಗಳು', 'ಕೊಂಬಿನವರು,' 'ಮಾರನಾಯಕನ ದೃಷ್ಟಾಂತ', 'ಸೂರ್ಯ ಶಿಕಾರಿ', 'ಅದ್ವಾನಪುರ,' ಚೋರ ಚರಣದಾಸ', 'ಕಾಡುಕಾಡೆಂದರೆ' 'ನಾನು ಹೆಣ್ಣು' 'ಸಂತೆಗೆ ಹೋದ ಭೀಮಣ್ಣ'. |
| ನಿರ್ದೇಶನ | : | ಸಿಂಗ ಸಿಂಗಿ ಸಂಸಾರ, ನಾಡದೇವಿಯೇ ನಿನ್ನ ಮಡಿಲಲ್ಲಿ, ಕೆರೆಗೆ ಹಾರ. |
| ರಚನೆ | : | 'ಸಾಕ್ಷರರು' 'ಪರಿಸರ ಉಳಿಸಿ'. |
| ಇತರೆ | : | ಮಕ್ಕಳ ಶಿಬಿರಗಳಲ್ಲಿ ರಂಗ ತರಬೇತಿ. 'ಆಶಾ' ಸಂಸ್ಥೆಯ ಕಾರ್ಯಕರ್ತರಿಗೆ ತರಬೇತಿ, ರೇಡಿಯೋ ನಾಟಕ, ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗಿ. |

**ಪ್ರೊ. ದೇವಪ್ಪ ಕುಳ್ಳಾ**

ಮುಖ್ಯಸ್ಥರು, ವಿಜ್ಞಾನ ವಿಭಾಗ

ಗೋವಿಂದ ದಾಸ ಕಾಲೇಜು, ಸುರತ್ಕಲ್

ಮೊ.9844816450

| | | |
|---|---|---|
| ನಟನೆ ಮತ್ತು ನಿರ್ದೇಶನ | : | ತುಳು ಮತ್ತು ಕನ್ನಡ ನಾಟಕಗಳು. |
| ಇತರೆ | : | ಅನ್ಯಭಾಷೆ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಹಾಗೂ ಪ್ರಕಟಣೆ. |
| ಸಂಸ್ಥೆ | : | ಅಧ್ಯಕ್ಷರು, 'ಸಿಂಗಾರ' ಸುರತ್ಕಲ್, ಸಂಯೋಜಕರು, ಯಕ್ಷಗಾನ ಮತ್ತು ಲಲಿತ ಕಲಾ ಅಧ್ಯಯನ ಕೇಂದ್ರ , ಸುರತ್ಕಲ್, ಗೋವಿಂದ ದಾಸ ಕಾಲೇಜು, ಸುರತ್ಕಲ್. |

ಪ್ರಶಸ್ತಿ : ತುಳುನಾಟಕ ಸ್ಪರ್ಧೆಯಲ್ಲಿ 'ಪೊರ್ತಕಂತಂಡ್' ನಾಟಕದಲ್ಲಿ ನಟನೆಯಲ್ಲಿ ದ್ವಿತೀಯ ಸ್ಥಾನ. ಕಾಲೇಜು ಮಟ್ಟದಲ್ಲಿ ಅಭಿವ್ಯಕ್ತ ತಂಡದವರು ನಡೆಸಿದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ. ಮನು ಇಡ್ಯರ 'ತ್ರಿಶಂಕು' ಮತ್ತು 'ಬಲಿ' ನಾಟಕಕ್ಕೆ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ.

ಕೃಷ್ಣಮೂರ್ತಿ ಪಿ.

---

ವಿಳಾಸ : ಉಪನ್ಯಾಸಕರು
ಗೋವಿಂದದಾಸ ಕಾಲೇಜು, ಸುರತ್ಕಲ್

ಶಿಕ್ಷಣ : ಎಂ.ಎ.ಎಂ.ಫಿಲ್.

ಸಂಸ್ಥೆ : ಪಂಚಮುಖಿ, ಕುಳಾಯಿ ಸಂಸ್ಥೆಯ ಮೂಲಕ ರಂಗಭೂಮಿ ತರಬೇತಿ ಶಿಬಿರಗಳು, ಕನ್ನಡ ಮಕ್ಕಳ ನಾಟಕ, ಬೀದಿ ನಾಟಕಗಳ ಸಂಘಟನೆ.

ಇತರೆ : ಯಕ್ಷಗಾನ ಮತ್ತು ಲಲಿತ ಕಲಾ ಅಧ್ಯಯನ ಕೇಂದ್ರ (ರಿ), ಗೋವಿಂದ ದಾಸ ಕಾಲೇಜು ಇದರ ಕಾಲೇಜು ವಿದ್ಯಾರ್ಥಿಗಳಿಗಾಗಿ ರಂಗತರಬೇತಿ, ನಾಟಕೋತ್ಸವ ನಾಟಕಗಳ ಪ್ರದರ್ಶನ ಸಂಯೋಜನೆ, ದಕ್ಷಿಣ ಕನ್ನಡ ರಂಗಭೂಮಿ ಕುರಿತಂತೆ ಸಂಶೋಧನೆ, ಲೇಖನ ಬರವಣಿಗೆ.

ಹರೀಶ್ ಕೆ.

---


'ತೃಪ್ತಿ', ಸುಬ್ರಹ್ಮಣ್ಯ ನಗರ, ನೀರು ಮಾರ್ಗ, ಪೆದಮಲೆ ಅಂಚೆ
ಮಂಗಳೂರು- 575029 , ಮೊ. 9481017645

ನಟನೆ : 'ದುರಂತ ಕರ್ಣ', 'ವಜ್ರಪಂಜರ', 'ವೈಶಾಲಿ', 'ರಾಜಾ ವಿಷ್ಣುವರ್ಧನ', 'ಕರ್ಣಾವಸಾನ', 'ಟಿಪ್ಪುಸುಲ್ತಾನ್,' ಅಚಲ', 'ನೀರು ಕಳೆದಿದೆ' 'ಹೊಸಬೆಳಕು' 'ಧೂಂ ಧೂಂ ಧೂಮ್ರ' 'ಯಕ್ಷಪ್ರಶ್ನೆ', 'ಪ್ರಜಾ ಪ್ರಜ್ಞೆ'


ಪ್ರಶಸ್ತಿ : 'ಅಚಲ' ನಾಟಕಾಭಿನಯಕ್ಕೆ ಪುರಸ್ಕಾರ

## ಮೋಹನ್ ರಾಜ್

| | | |
|---|---|---|
| ನಟನೆ | : | 'ರಾಜಾ ವಿಷ್ಣುವರ್ಧನ' 'ಟಿಪ್ಪುಸುಲ್ತಾನ್' 'ಸರ್ಪಯಾಗ', 'ನಿರ್ವಾಣ' 'ಕರ್ಣಾವಸಾನ', 'ಸ್ವಚ್ಛತೆ, 'ಮಕ್ಕಳ ಹಕ್ಕು' . |
| ನಿರ್ದೇಶನ | : | ಹೆಚ್‌ಐವಿ ನಮ್ಮ ನಿಮ್ಮಲ್ಲಿ (ಬೀದಿ ನಾಟಕ). |
| ಇತರೆ | : | ಮಂಗಳೂರಿನ ಮಂಗಳಾ ಆರ್ಟ್ಸ್ ಎಂಬಲ್ಲಿ ಪ್ರಸಾಧನಕಾರ, ರಂಗಸಜ್ಜಿಕೆ, ಗೊಂಬೆಯಾಟ. |




ಸಂಕೇತ್ ತಂಡದ ಸದಾನಂದ ಸುವರ್ಣ ನಿರ್ದೇಶನದ "ಉರುಳು" ನಾಟಕದ ದೃಶ್ಯ



ಮಂಗಳೂರು ಪುರಭವನದ ಎದುರು ಪ್ರಸ್ತುತಪಡಿಸಲಾದ ಬೀದಿ ನಾಟಕದ ದೃಶ್ಯ





ಮಂಗಳೂರು ನಗರಪಾಲಿಕೆಯ ಪುರಭವನ




ಡಾನ್ ಬೊಸ್ಕೊ ಹಾಲ್ ಮಂಗಳೂರು



ಡಾ. ನಾ.ದಾಮೋದರ ಶೆಟ್ಟಿ


ಸಂಪತ್ ಕುಮಾರ್


ಇಸ್ಮಾಯಿಲ್ ವಿಟ್ಲ


ಮುರಳೀಧರ್ ಕಾಮತ್



ಹರಿಪ್ರಸಾದ್ ಕುಂಪಲ



ಜಗನ್ನಾಥ್



ಲಕ್ಷ್ಮಣ ಕುಮಾರ್ ಮಲ್ಲೂರು


ಸುದರ್ಶನ್ ಕೆ.ವಿ


ಜಗನ್ ಪವಾರ್



ಸದಾನಂದ ಸುವರ್ಣ



ಚಂದ್ರಹಾಸ ಉಳ್ಳಾಲ್


ಪಿ.ವಿ. ಪರಮೇಶ್


ಡಾ.ಆರ್.ನರಸಿಂಹಮೂರ್ತಿ


ಕೆ.ವಿ.ರಮಣ್



ಐವನ್ ಡಿಸಿಲ್ವ



ಸತೀಶ್ ಜೋಗಿ



ಭಾಸ್ಕರ್ ಸಿ.ಎಚ್.



ಕೆ. ಬಾಲಕೃಷ್ಣ



ಹರೀಶ್ ಕೆ.



ಮೋಹನ್ ರಾಜ್

## ಕಾಸರಗೋಡು ಕನ್ನಡ ರಂಗಭೂಮಿ



### ಕಲೆಯ ಕುಲುಮೆಯಲ್ಲಿ ಹೊನ್ನಾಗಿ ಮಿಂಚಿದ ಕಾಸರಗೋಡು ರಂಗಭೂಮಿ

ಕರಾವಳಿಯ ಮಣ್ಣಿನಲ್ಲಿ ಯಕ್ಷಗಾನದ ಸೊಗಡು ಹಾಸುಹೊಕ್ಕಾಗಿ ಬಂದಂತೆ, ರಂಗಭೂಮಿ ಅದರ ಫಲಶ್ರುತಿ ಎಂಬಂತೆ ತನ್ನ ಕಂಪನ್ನು ವಿಸ್ತರಿಸುತ್ತಿದೆ. ಹೆಜ್ಜೆಯ ಗೆಜ್ಜೆಯಲ್ಲಿ ಝಣತ್ಕರಿಸುವ ಕಂಬದಿಂದ ಸುಸಂಸ್ಕೃತ ಮಾತಿನರಮನೆಯನ್ನು ಕಟ್ಟಿದ ಯಕ್ಷಗಾನದ ಗಟ್ಟಿ ಶ್ರುತಿಯನ್ನು ತಮ್ಮದಾಗಿಸಿಕೊಂಡ ಕಾಸರಗೋಡಿನ ಕಲಾವಿದರಿಗೆ ಮುಂದೆ ಅದ್ಭುತ ರಂಗಭೂಮಿಯೊಂದನ್ನು ನಿರ್ಮಾಣ ಮಾಡುವುದು ಏನೂ ಕಷ್ಟವಾಗಲಿಲ್ಲ. ಕಾಸರಗೋಡಿನಲ್ಲಿ ಲೆಕ್ಕವಿಲ್ಲದಷ್ಟು ಯಕ್ಷಗಾನ ಕಲಾವಿದರು ತಮ್ಮ ಪ್ರತಿಭೆಯನ್ನು ಮೆರೆದರು. ಅವರಲ್ಲಿ ಕೆಲವರು ರಂಗಭೂಮಿ ಕಲಾವಿದರಾಗಿ ಪರಿವರ್ತಿತರಾದರು.

ಕಾಸರಗೋಡಿನ ರಂಗಭೂಮಿಗೆ, ಅದರ ಇತಿಹಾಸಕ್ಕೆ ಭವ್ಯ ಮೆರುಗನ್ನು ನೀಡಲು ನೆರವಾದ ಮೂಲಧಾತುಗಳಲ್ಲಿ ಇಲ್ಲಿನ ಶ್ರೀಮಂತ ನಾಟಕ ಸಾಹಿತ್ಯವೂ ಒಂದಾಗಿದೆ. ಇಲ್ಲಿ ಕೆಲವು ವಿದ್ವಾಂಸರು, ಪ್ರಗಲ್ಭ ಸಾಹಿತಿಗಳು ನಾಟಕಕಾರರಾಗಿ ತಮ್ಮದೇ ಆದಂತಹ ಕೊಡುಗೆಯನ್ನು ಕಾಸರಗೋಡಿನ ರಂಗಭೂಮಿಗೆ ನೀಡಿದ್ದಾರೆ. ಇಂತಹ ಸಾಹಿತಿಗಳು ನಾಟಕ ರಚನೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಇಲ್ಲಿನ ಕಲಾವಿದರಿಗೆ ನಾಟಕ ಆಡುವ ಸ್ಫೂರ್ತಿಗೆ ಪ್ರೇರಣೆಯಾಯಿತು.

ಸಕಲ ಕಲಾವಲ್ಲಭ ಎಂದೇ ಪ್ರಸಿದ್ಧರಾದ ಕೂಡ್ಲು ಸುಬ್ರಾಯ ಶ್ಯಾನುಭೋಗರು ಸುಮಾರು ನೂರು ವರ್ಷಗಳಷ್ಟು ಹಿಂದೆ ರಚಿಸಿದ 'ಸೌಭಾಗ್ಯ ಸುಂದರಿ' ಎಂಬ ಕನ್ನಡ ನಾಟಕವೇ ಕಾಸರಗೋಡಿನ ರಂಗಭೂಮಿಗೆ ದೊರೆಯುವ ಆದಿಕೃತಿ ಎನ್ನಬಹುದು.

ನಂತರ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರು ಬರೆದ ನಾಟಕಗಳು ಇಲ್ಲಿನ ರಂಗಭೂಮಿ ಸಾಹಿತ್ಯಕ್ಕೊಂದು ಅಡಿಪಾಯವಾಗಿವೆ. ಅವರು ಮಹಾಭಾರತದ ಏಕಲವ್ಯನ ಕಥೆಯನ್ನಾಧರಿಸಿ ಬರೆದ 'ಹೆಬ್ಬೆರಳು' ನಾಟಕ, ರಾಷ್ಟ್ರೀಯತೆ, ದೇಶಾಭಿಮಾನವನ್ನು ಬಿಂಬಿಸುವ 'ಚಿತ್ರಭಾನು' (ಈ ನಾಟಕಕ್ಕೆ 1942 ಎಂಬ ಹೆಸರೂ ಇದೆ) ಹಾಗೂ 'ತಾಯಿ' ನಾಟಕಗಳು ಕಾಸರಗೋಡಿನ ರಂಗ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಮಕ್ಕಳ ನಾಟಕವಾದ ಜಪಾನಿನ 'ನೋ' ನಾಟಕಗಳನ್ನು ಇವರು

ಕನ್ನಡಕ್ಕೆ ರೂಪಾಂತರಿಸಿ ತಂದಿದ್ದಾರೆ. ಹೀಗೆ ಗೋವಿಂದ ಪೈಯವರು ಕಾಸರಗೊಂಡಿನ ನಾಟಕ ಸಾಹಿತ್ಯಕ್ಕೆ ತಮ್ಮದೇ ಆದ ಮೂಲ ಪರಂಪರೆಯ ಪಂಚಾಂಗವನ್ನು ಹಾಕಿಕೊಟ್ಟರು.

ನಂತರ ಕೈಯ್ಯಾರ ಕಿಞಣ್ಣ ರೈ, ಡಾ. ವೆಂಟರಾಜ ಪುಣಿಂಚಿತ್ತಾಯ ಮುಂತಾದವರು ನಾಟಕ ಸಾಹಿತ್ಯಕ್ಕೆ ತಮ್ಮ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. ಡಾ. ವೆಂಕಟರಾಜ ಪುಣಿಂಚಿತ್ತಾಯ ಅವರು 'ಭಕ್ತ ಕುಚೇಲ' ಮುಂತಾದ ಅನೇಕ ಕನ್ನಡ ನಾಟಕಗಳನ್ನು ಬರೆದಿದ್ದಾರೆ. ಇದಲ್ಲದೆ ಇವರು ಕೆಲವು ತುಳು ನಾಟಕಗಳನ್ನೂ , ಸಂಸ್ಕೃತ ನಾಟಕಗಳನ್ನೂ ಬರೆದಿದ್ದಾರೆ. ಕಯ್ಯಾರರು 'ವಿರಾಗಿಣಿ' ಎಂಬ ನಾಟಕವನ್ನು ಬರೆದಿದ್ದಾರೆ.

ನಂತರ ಕಾಸರಗೋಡಿನ ರಂಗಭೂಮಿಗೆ ಉತ್ತಮ ಕೊಡುಗೆ ನೀಡಿದ ನಾಟಕಕಾರರೆಂದರೆ ಕಲಾರತ್ನ ಶಂನಾಡಿಗ ಎಂದೇ ಪ್ರಸಿದ್ಧರಾದ ಕುಂಬಳೆ ಶಂಕರನಾರಾಯಣ ಅಡಿಗ ಇವರು. ಇವರು ಹಲವಾರು ನಾಟಕಗಳನ್ನು ರಚಿಸಿದ್ದಾರೆ ಮತ್ತು ನಿರ್ದೇಶಿಸಿದ್ದಾರೆ. ರಂಗಸಜ್ಜಿಕೆ, ಮುಖವಾಡ ತಯಾರಿಕೆಯಿಂದ ಹಿಡಿದು ರಂಗದ ಸಕಲ ಮಜಲುಗಳಲ್ಲೂ ಕೈಯ್ಯಾಡಿಸಿದವರು.

1988 ರಷ್ಟು ಹಿಂದೆಯೇ ನಾಟಕರಂಗ ಪ್ರವೇಶಿಸಿದ ಶಂನಾಡಿಗ ಅವರು ಸುಮಾರು ಮೂವತ್ತಕ್ಕೂ ಹೆಚ್ಚು ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. ಈ ನಾಟಕಗಳೆಲ್ಲಾ ಸುಮಾರು ಐನೂರಕ್ಕೂ ಹೆಚ್ಚಿನ ರಂಗಪ್ರದರ್ಶನವನ್ನು ಕಂಡಿವೆ. 1992 ರಲ್ಲಿ ಇವರ 'ವೀರಭದ್ರ' ಪೌರಾಣಿಕ ನಾಟಕಕ್ಕೆ ಏಳು ರಾಜ್ಯ ಪ್ರಶಸ್ತಿಗಳು ಲಭಿಸಿದ್ದವು. ಇವರು ಕುಂಬಳೆಯಲ್ಲಿ 1991 ರಲ್ಲೇ "ಸಂಧ್ಯಾ ಸಂಗಮ" ಎಂಬ ನಾಟಕ ತಂಡವನ್ನೂ ಸ್ಥಾಪಿಸಿದ್ದರು. ಇವರು 'ಹರಿಕಥಾ' ಕ್ಷೇತ್ರದಲ್ಲೂ ಬಹಳಷ್ಟು ಸಾಧನೆ ಮಾಡಿದವರು. ಇನ್ನು ಕೊಲ್ಲಂಗಾನದ ಉದಯಶಂಕರ ಎನ್.ಎ ಅವರು ಸ್ವತಃ ಅನೇಕ ನಾಟಕಗಳನ್ನು ರಚಿಸಿದ್ದಲ್ಲದೆ ತಮ್ಮ ಪರಿಸರದಲ್ಲಿರುವ ಆಸಕ್ತರಿಗೆಲ್ಲಾ ಅದನ್ನು ತಾವೇ ನಿರ್ದೇಶಿಸಿ ,ಹಲವಾರು ನಾಟಕಗಳ ರಂಗಪ್ರದರ್ಶನವನ್ನು ನೀಡಿದ್ದಾರೆ. ಹೀಗೆ ಇವರು ಕಾಸರಗೋಡಿನ ರಂಗಭೂಮಿಗೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಖಂಡಿಗೆ ಶ್ಯಾಮ್ ಭಟ್ ಅವರು ಅನೇಕ ಸಂಸ್ಕೃತ, ಕನ್ನಡ ನಾಟಕಗಳನ್ನೂ ರಚಿಸಿ ನಿರ್ದೇಶಿಸಿದ್ದಾರೆ.

ಇವುಗಳೆಲ್ಲಾ ಪರಂಪರಾಗತ ಸಾಂಪ್ರದಾಯಿಕ ರಂಗಭೂಮಿ ಸಾಹಿತ್ಯವಾದರೆ, ಮುಂದೆ ಬಂದ ನಾಟಕಕಾರರು ಹವ್ಯಾಸಿ ರಂಗಭೂಮಿಗೊಪ್ಪುವಂತಹ ಪ್ರಚಲಿತ ಸಮಸ್ಯೆ, ರಾಜಕೀಯಗಳನ್ನೊಳಗೊಂಡ ಆಧುನಿಕ ನಾಟಕ ಸಾಹಿತ್ಯವನ್ನು ಬೆಳೆಸತೊಡಗಿದರು.

ಇವರಲ್ಲಿ ಮುಖ್ಯವಾದವರು ದಿವಂಗತ ಪ್ರೊ. ವೇಣುಗೋಪಾಲ ಅವರು. ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದ ಹುಟ್ಟಿಕೊಂಡ ಇವರ ನಾಟಕಗಳು, ಪರಂಪರಾಗತ ನಂಬಿಕೆಗಳಿಂದ ಕೂಡಿದ ಕಥೆಗೆ ಹೊಸ ಆಯಾಮವನ್ನು, ದೃಷ್ಟಿಕೋನವನ್ನು ಕೊಟ್ಟು, ಪ್ರಚಲಿತ ವಿದ್ಯಮಾನವನ್ನು ಪರಿಗಣಿಸಿ, ಹೊಸ ರೂಪದಿಂದ ನಾಟಕ ಸಾಹಿತ್ಯವನ್ನು ಸಾದರಪಡಿಸುವಲ್ಲಿ ಯಶಸ್ವಿಯಾಗಿವೆ. ಇವರು ದೃಷ್ಟಿ, ಪ್ರಶ್ನೆ, ಬಂಗಾರಾಂ, ಶಿಲುಬೆ,

ಜಿಯಾ, ಮಣ್ಣಿನ ಗೊಂಬೆ, ನಾಯಿಬಾಲ ಮುಂತಾದ ಅನೇಕ ನಾಟಕಗಳನ್ನು ಬರೆದಿದ್ದಾರೆ. ಈ ನಾಟಕಗಳಲ್ಲೆಲ್ಲಾ ಸ್ವಾರ್ಥದಿಂದ, ಪರಿಸರದ ಪ್ರಭಾವದಿಂದ, ತಮ್ಮೊಳಗೇ ರಕ್ಕಸರನ್ನು ಬೆಳೆಸಿಕೊಳ್ಳುತ್ತಿರುವ ಮನುಷ್ಯನ ಮನಸ್ಸಿನ ಹುಳುಕನ್ನು ಬಯಲು ಮಾಡಲಾಗಿದೆ. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ದೃಶ್ಯಗಳು ಇಲ್ಲಿ ಬಹಳಷ್ಟಿವೆ. ಈ ನಾಟಕಗಳೆಲ್ಲಾ ಕಾಸರಗೋಡಿನ ಪ್ರತಿಭಾವಂತ ರಂಗನಿರ್ದೇಶಕರಿಂದ, ಕಲಾತ್ಮಕವಾದ ರಂಗಪ್ರಯೋಗವನ್ನು ಕಂಡುಕೊಳ್ಳುವುದರಲ್ಲಿ ಯಶಸ್ವಿಯಾಗಿವೆ. ಹಾಗಾಗಿಯೇ ಪ್ರೊ. ವೇಣುಗೋಪಾಲ ಅವರು ಕಾಸರಗೋಡಿನ ರಂಗಭೂಮಿಯ ಅವಿಭಾಜ್ಯ ಅಂಗವಾಗಿದ್ದಾರೆ. ಇವರು ಗೋವಿಂದ ಪೈ ಅವರ 'ಹೆಬ್ಬೆರಳು' ನಾಟಕವನ್ನು ಸರಳೀಕರಿಸಿ,' ಮಣ್ಣಿನಗೊಂಬೆ' ಎಂಬ ಹೆಸರಿನ ನಾಟಕ ರಚಿಸಿದ್ದಾರೆ.

ಶ್ರೀ ದಿವಗಂತ ಕೆ.ಟಿ. ಶ್ರೀಧರ್ ಅವರು ಕಾಸರಗೋಡಿನ ಮಕ್ಕಳ ರಂಗಭೂಮಿಗೆ ಗಣನೀಯ ಕೊಡುಗೆಯನ್ನು ನೀಡಿದ್ದಾರೆ. ವೃತ್ತಿಯಲ್ಲಿ ಅಧ್ಯಾಪಕರಾದ ಅವರು 'ಬಚ್ಚಾಲಿ ಹುಡುಗರು' ಮುಂತಾದ ಕೆಲವು ಮಕ್ಕಳ ನಾಟಕಗಳನ್ನು ರಚಿಸಿ, ಶಾಲೆಯ ಮಕ್ಕಳಿಗೆ ನಿರ್ದೇಶಿಸಿ, ಉತ್ತಮ ರಂಗಪ್ರದರ್ಶನ ನೀಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಅರವತ್ತರ ದಶಕದಲ್ಲಿ ಕಾಸರಗೋಡಿನಲ್ಲಿ ಹಲವು ರಂಗ ತಂಡಗಳು ಹುಟ್ಟಿಕೊಂಡವು. ತಮ್ಮ ವಾರ್ಷಿಕೋತ್ಸವಗಳಿಗೆ ಮಾತ್ರವೇ ಹೆಚ್ಚಿನ ತಂಡಗಳು ಪ್ರಾಮುಖ್ಯತೆ ನೀಡಿ ನಾಟಕಗಳನ್ನಾಡುತ್ತಿದ್ದವು. ಇದರ ಹೊರತಾಗಿ ರಂಗಚಟುವಟಿಕೆಯಲ್ಲಿ ತೊಡಗಿಕೊಂಡಿದ್ದ ಸಂಘಸಂಸ್ಥೆಗಳು, ನಾಟಕ ತಂಡಗಳೆಂದರೆ ವಿವೇಕಾನಂದ ಕಲಾಸಂಘ, ನಿತ್ಯಾನಂದ ಕಲಾವೃಂದ ಮತ್ತು ಕೆ.ಸಿ ಸ್ಟೋರ್ಸ್ ನೌಕರರ ಕಲಾವೃಂದಗಳು ಪ್ರಮುಖವಾದವುಗಳು. ಇವುಗಳಲ್ಲಿ ವಿವೇಕಾನಂದ ಕಲಾಸಂಘವು ಮಡಿಕೇರಿ, ಮೂಡುಬಿದ್ರೆಗಳಲ್ಲಿ ನಾಟಕ ಪ್ರದರ್ಶನವಿತ್ತಿತ್ತು. ಇನ್ನು ನಿತ್ಯಾನಂದ ಕಲಾವೃಂದ ಕಾಸರಗೋಡಿನ ಬೇರೆ ಬೇರೆ ಕಡೆಗಳಲ್ಲಿ ನಾಟಕ ಪ್ರದರ್ಶನ ನೀಡಿ ಜನಪ್ರಿಯತೆ ಗಳಿಸಿಕೊಂಡಿತು. ಈ ತಂಡದಲ್ಲಿ ನಾಟಕ ನಿರ್ದೇಶಕ ಹಾಗೂ ನಟ ದಿವಂಗತ ಭಾಸ್ಕರ ಶೆಟ್ಟಿ ಮಾಸ್ಟರ್ ಅವರು ಉತ್ತಮ ಕಲಾವಿದರೆಂದು ಹೆಸರು ಪಡೆದವರು.

1962 ರಲ್ಲಿ ಸ್ಥಾಪನೆಗೊಂಡ ಲಲಿತ ಕಲಾ ಸದನ, ನಾಟಕ ಸಂಗೀತ ಮತ್ತಿತರ ಸಾಂಸ್ಕೃತಿಕ ಕಲೆಗಳನ್ನು ನಡೆಸುತ್ತಾ ಬರುತ್ತಿದೆ. ಸಹೋದರ ಕಲಾವೃಂದ, ಕೊರಕೋಡಿನ ಆರ್ಯ ಕಾತ್ಯಾಯಿನಿ ಕಲಾಸಂಘಗಳು ಈ ವೇಳೆ ನಾಟಕಗಳನ್ನು ವಾರ್ಷಿಕೋತ್ಸವ ಸಂಧರ್ಭಗಳಲ್ಲಿ ಪ್ರದರ್ಶಿಸುತ್ತಿದ್ದವು. 1966 ರಲ್ಲಿ ಸ್ಥಾಪಿಸಲ್ಪಟ್ಟ ಕೆ.ಸಿ.ಸ್ಟೋರ್ಸ್ ನೌಕರರ ಕಲಾವೃಂದವು ಹಲವು ನಾಟಕಗಳನ್ನು ಪ್ರದರ್ಶಿಸುವ ಮೂಲಕ ರಂಗಚಳವಳಿಯನ್ನು ಜೀವಂತವಾಗಿರಿಸಿವೆ. ಕಾಸರಗೋಡು ನಗರಸಭೆ ಮತ್ತು ಲಲಿತ ಕಲಾ ಸದನದವರು ಜಂಟಿಯಾಗಿ ಹಲವು ವರ್ಷಗಳ ಕಾಲ ನಡೆಸಿದ ನಾಟಕೋತ್ಸವ ಕಾಸರಗೋಡಿನಲ್ಲಿ ನಾಟಕಗಳ ಗುಣಮಟ್ಟವನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ನಿತ್ಯಾನಂದ ಕಲಾ ಸಂಘ, ಕೆ.ಸಿ.ಸ್ಟೋರ್ಸ್ ಕಲಾವೃಂದ, ಕೂಡ್ಲು ಯುವಜನ ಸಂಘ ಮೊದಲಾದ

ತಂಡಗಳು ಅರವತ್ತರ ದಶಕದ ಕಾಲಘಟ್ಟದಲ್ಲಿ ಉತ್ತಮ ನಾಟಕಗಳನ್ನು ಪ್ರದರ್ಶಿಸಿದವು. ಈ ಕಾಲಘಟ್ಟವು ಕಾಸರಗೋಡು ರಂಗಭೂಮಿಯ ಪ್ರಗತಿಪರ ಕಾಲವೆನ್ನಬಹುದು.

ಎಪ್ಪತ್ತರ ದಶಕದ ಪ್ರಾರಂಭದ ಎರಡು ಮೂರು ವರ್ಷಗಳ ತನಕ ರಂಗಚಟುವಟಿಕೆ ಕಾಸರಗೋಡಿನಲ್ಲಿ ಚುರುಕಾಗಿತ್ತು. ಬಳಿಕ ಕೆಲವು ವರ್ಷ ಇದು ಸ್ಥಗಿತಗೊಂಡಿತ್ತು. 1979 ರಲ್ಲಿ ಯವನಿಕಾ ಕಾಸರಗೋಡು ಎಂಬ ಹೆಸರಿನಲ್ಲಿ ಹವ್ಯಾಸಿ ರಂಗಕಲಾವಿದರುಗಳ ತಂಡ ಹುಟ್ಟಿಕೊಂಡಾಗ ಕಾಸರಗೋಡಿನ ರಂಗಭೂಮಿ ಹೊಸ ಆಯಾಮಗಳನ್ನು ಪಡೆಯಿತೆನ್ನಬಹುದು. ಹೊಸ ಅಲೆಯ ನಾಟಕಗಳ ಮೂಲಕ ನಿರಂತರ ರಂಗಚಟುವಟಿಕೆಗಳನ್ನು ಹಮ್ಮಿಕೊಂಡು ಕಾಸರಗೋಡು ಹಾಗೂ ಕರ್ನಾಟಕ ರಾಜ್ಯಾದ್ಯಂದ ಈ ಯವನಿಕಾ ಹೆಸರುವಾಸಿಯಾಯಿತು. ಕಾಸರಗೋಡಿನಲ್ಲಿ ಸಾಂಸ್ಕೃತಿಕ ರಂಗದಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿದ ಯವನಿಕಾ ತಂಡ, ಕರ್ನಾಟಕದ ಅತ್ಯುತ್ತಮ ತಂಡಗಳನ್ನು ಆಹ್ವಾನಿಸಿ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಹೊಸ ಅಲೆಯ ನಾಟಕಗಳ ಪರಿಚಯವನ್ನು ಕಾಸರಗೋಡು ರಂಗಾಸಕ್ತರಿಗೆ ನೀಡಿತು ಮತ್ತು ಹಲವು ಮಂದಿ ಪ್ರತಿಭಾವಂತರನ್ನು ಬೆಳಕಿಗೆ ತರುವ ಮೂಲಕ ಯವನಿಕಾ ಜನಮೆಚ್ಚುಗೆ ಗಳಿಸಿತು.

ಯವನಿಕಾ ತಂಡವನ್ನು ಪ್ರಾರಂಭಿಸಿದಂದಿನಿಂದ ನಿಷ್ಠೆಯಿಂದ ದುಡಿದ ಉತ್ತಮ ಸಂಘಟಕರಾದ ಜಿ.ಕೆ ಶೆಟ್ಟರು ಬಹುಮುಖ ಪ್ರತಿಭೆಯುಳ್ಳವರು ಇವರು. ಯವನಿಕಾದ ಕಾರ್ಯದರ್ಶಿಗಳು. ಮುಂದೆ ಪಬ್ಬಾ ಕೊರಕೋಡು, ಕೆ. ಸುಬ್ಬಣ್ಣ ಶೆಟ್ಟಿ, ಚಂದ್ರಕಾಂತ ಪಟ್ಟತ್ತಾನ, ಕಾಸರಗೋಡು ಚಿನ್ನಾ, ರಘು ಕೆ, ಬೆಳಕು ವಿನ್ಯಾಸದಲ್ಲಿ ಖ್ಯಾತರಾದ ಪ್ರಶಸ್ತಿ ವಿಜೇತ ಎನ್. ಈಶ್ವರ, ಎನ್.ಕೆ ಮೋಹನದಾಸ, ಬಾಬೂಜಿ ಭಟ್, ವಿಠಲ ಶೆಟ್ಟಿ, ವೇಣು ಮಿತ್ರ, ಮಂಜುನಾಥ ಭಕ್ತ, ನಾಮದೇವ ಶೆಟ್ಟಿ, ಜಯಾನಂದ, ಎನ್.ಎ. ಉದಯಶಂಕರ, ಕೆ.ಬಿ. ನಾರಾಯಣ, ಸತ್ಯನಾರಾಯಣ, ಮನೋಹರ ಶೆಟ್ಟಿ, ರಾಮನಾಥ ಆಳ್ವ, ತಾರಾನಾಥ ಭಕ್ತ, ಶ್ರೀನಾಥ ಶೆಣೈ ಮೊದಲಾದ ನಾಟಕ ಕ್ಷೇತ್ರದ ವಿವಿಧ ಮಜಲುಗಳಲ್ಲಿ ಪರಿಣಿತರಾದ ಪ್ರತಿಭಾವಂತರನ್ನು ಯವನಿಕಾ ಪರಿಚಯಿಸಿದೆ.

1987 ರಲ್ಲಿ ಸ್ಥಾಪನೆಗೊಂಡ ಗಡಿನಾಡ ಕಲಾವಿದರ ತಂಡವು ರಂಗ ಚಟುವಟಿಕೆಗಳಲ್ಲಿ ಸಕ್ರಿಯವಾಗಿದೆ. ಈ ತಂಡದ ಬೆನ್ನೆಲುಬು ಆಗಿರುವ ಸುಕುಮಾರನ್ ಕೆ. ಕಣ್ಣನ್, ವಾಸು ಬಾಯಾರ್, ಜಯರಾಮ್ ಭಟ್, ಉಮೇಶ್ ಎಂ. ಸಾಲಿಯಾನ್, ವಾಮನ್‌ರಾವ್, ರಾಧಾಕೃಷ್ಣ, ದಿವಾಕರ, ಜಯಶ್ರೀ ಭಾರತಿ, ವೇಣು ಕಾಸರಗೋಡು ಮುಂತಾದವರು ಕಾಸರಗೋಡು ರಂಗಭೂಮಿಯನ್ನು ಸಂಪನ್ನಗೊಳಿಸಿದರು. ನೀನಾಸಂ ಪದವೀಧರ ಪ್ರದೀಪ ಕಾಸರಗೋಡು, ಮುರಹರಿ ಪಿ. ಪ್ರಮುಖರು ನಟ, ನಿರ್ದೇಶಕರಾಗಿ ರಂಗಭೂಮಿಗೆ ತಮ್ಮ ಸೇವೆಯನ್ನು ಮುಡಿಪ್ಪಾಗಿಟ್ಟಿಸಿದ್ದಾರೆ. ಎಡನೀರಿನ ಭಾರತಿ ಕಲಾಸದನವು ಹಲವು ನಾಟಕಗಳನ್ನು ಪ್ರದರ್ಶಿಸಿ ಯಶಸ್ವಿಯಾಗಿದೆ. ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿಯವರು ಕೆಲವು ನಾಟಕಗಳನ್ನು ಬರೆದು ನಿರ್ದೇಶಿಸಿ ಕಾಸರಗೋಡು ರಂಗಭೂಮಿಯ ಉತ್ಕರ್ಷಕ್ಕೆ ಕಾರಣರಾಗಿದ್ದಾರೆ. 1996ರಲ್ಲಿ

ಕಾಸರಗೋಡು ಚಿನ್ನಾ, ವೇಣುಗೋಪಾಲ ಕಾಸರಗೋಡು ಮತ್ತು ಉಮೇಶ ಎಂ. ಸಾಲಿಯಾನ್ ಕಟ್ಟಿದ ಅಪೂರ್ವ ಕಲಾವಿದರ ತಂಡ ನಾಯಿಬಾಲ ಎಂಬ ಲಾರಿ ನಾಟಕಗಳ ಮೂಲಕ ಕಾಸರಗೋಡು ಮತ್ತು ಕರ್ನಾಟಕದಾದ್ಯಂತ ಪ್ರಚಾರ ಪಡೆದು ಜನಪ್ರಿಯವಾಗಿದೆ. ಎಂ.ಕೆ. ಮಠ, ಬಬ್ಬಿ ಮುಂತಾದ ಹೊಸ ಕಲಾವಿದರು ರಂಗಭೂಮಿಗೆ ಪಾದಾರ್ಪಣೆಗೈದರು. ಈಗ ಉಮೇಶ ಎಂ. ಸಾಲಿಯಾನ ಅವರ ಅಧ್ಯಕ್ಷತೆಯಲ್ಲಿರುವ ಅಪೂರ್ವ ಕಲಾವಿದರ ತಂಡ ನಿರಂಜನರವರ ಚಿರಸ್ಮರಣೆ ಕಾದಂಬರಿ ಆಧಾರಿತ ಕಯ್ಯೂರು ನಾಟಕ, ಸಾಂತ್ವನ ರಂಗ ಯಾತ್ರೆಯ ಮೂಲಕ 'ಮಳೆನಿಂತ ಮೇಲೆ' ನಾಟಕ ಪ್ರದರ್ಶಿಸಿ ಕಾಸರಗೋಡಿನ ಶಾಲಾ, ಕಾಲೇಜು, ಹವ್ಯಾಸಿ ರಂಗಭೂಮಿಯಲ್ಲಿ ನಿರಂತರವಾಗಿ ಹೊಸ ತಲೆಮಾರನ್ನು ಬೆಳೆಸುತ್ತಾ ಕಲಾತಂಡವನ್ನು ಮುನ್ನಡೆಸುತ್ತಿದ್ದಾರೆ. ಇವರು ಈಗ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿದ್ದಾರೆ.

## ಪ್ರಮುಖ ನಾಟಕ ತಂಡಗಳು

ಕಾಸರಗೋಡಿನಲ್ಲಿ ಲಲಿತ ಕಲಾ ಸದನ, ಗಡಿನಾಡ ಕಲಾವಿದರು, ಆರ್ಯ ಕಾತ್ಯಾಯನಿ ಕೊರಕೋಡು, ಮಿತ್ರ ಕಲಾವೃಂದ, ಗೀತಾವಿಹಾರ, ಯವನಿಕಾ, ನಟನಾರಂಗ, ಚಿನ್ನಾರಿ, ಅಪೂರ್ವ ಕಲಾವಿದರು.

ಮಧೂರಿನಲ್ಲಿ ಆದರ್ಶ ಯುವಕ ಸಂಘ ಉಳಿಯತ್ತಡ್ಕ, ಶಿವಾಜಿ ಕಲಾಸಂಘ ಮಿತ್ರ ಕಲಾವೃಂದ, ತರುಣ ಕಲಾವೃಂದ, ಸ್ಪಂದನ.

ಮಂಜೇಶ್ವರದಲ್ಲಿ ಸ್ವಸ್ತಿಕ್ ಕಲಾವಿದರು, ಓಜ ಸಾಹಿತ್ಯ ಕೂಟ, ಗೋವಿಂದ ಪೈ ಕಾಲೇಜಿನ 'ಗಿಳಿವಿಂಡು' ತಂಡ. ಪೆರ್ಲದಲ್ಲಿ ನಿಸರ್ಗ ಕಲಾವಿದರು, ಎಸ್.ಆರ್.ಎಸ್.ಕ್ಲಬ್, ನವಚೇತನ ಬಾಡೂರು, ದುರ್ಗಾ ಯುವಕ ವೃಂದ ಬಾಡೂರು.

ಬದಿಯಡ್ಕದಲ್ಲಿ ಸಂಗಮ ಕಲಾವಿದರು, ಮದ್ವಾರ್ ಕಲಾವಿದರು, ಪೂವಣಿ ಕಿನ್ನಿಮಾಣಿ ಯುವಕ ವೃಂದ, ನಂದಿಕೇಶ್ವರ ನಾಟಕ ಸಂಘ (ವೃತ್ತಿ ನಾಟಕ). ನೀರ್ಚಾಲಿನಲ್ಲಿ ಜ್ಯೋತಿ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ಸಿತಾಂಗೋಳಿಯ ಸಂತೋಷ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್. ಕೊಲ್ಲಂಗಾನದಲ್ಲಿ ನವರಂಗ ಆರ್ಟ್ಸ್, ಕಳತ್ತೂರಿನ ಮಯೂರ ಕ್ಲಬ್ ನಾಟಕ, ಮುಳ್ಳೇರಿಯಾದ ಮಿತ್ರಬೆಳ್ಳೂರು, ಶಿವಶಕ್ತಿ ಆದೂರು, ಪ್ರತಿಭಾ ಕಲಾವಿದರು.


ಅನಂತಪುರದ ಪ್ರಕೃತಿ ಯುವ ತಂಡ, ಕುಂಬಳೆ ಅರಿಕ್ಕಾಡಿಯ ಮಲ್ಲಿಕಾ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ಉಪ್ಪಳದ ರಚನಾ ತಂಡ, ಕೊಲ್ಯದ ಶಿವಾಜಿ ಕಲಾಸಂಘ, ರೂಪ ಕಲಾಕರ್ಷಕ ಸಂಘ ಸಮಿತಿ ಕೋಟೂರಿನ ಕಲಾವರ್ಧಕ ಕಲಾಸಂಘ, ಕಾರ್ತಿಕೇಯ ಕಲಾನಿಲಯ, ಎಸ್.ಕೆ.ಎಸ್.ಕ್ಲಬ್ ಮುತ್ತಿಗೆ, ಎಡನೀರಿನ ಭಾರತಿ ಕಲಾ ಸದನ, ಬೆಳ್ಳೂರಿನ ಉದನೇಶ್ವರ ಕೃಪಾಪೋಷಿತ ನಾಟಕ ಸಂಘ(ವೃತ್ತಿನಾಟಕ). ಇದಲ್ಲದೆ ಇನ್ನೂ ಅನೇಕ ನಾಟಕ ತಂಡಗಳು ಗ್ರಾಮೀಣ ಪ್ರದೇಶದಲ್ಲಿ ಸದ್ದಿಲ್ಲದೆ ಕಾರ್ಯ ನಿರ್ವಹಿಸುತ್ತಿವೆ. ಒಟ್ಟಿನಲ್ಲಿ ಕನ್ನಡ ರಂಗಭೂಮಿಗೆ ಕಾಸರಗೋಡಿನ ಕೊಡುಗೆ ಅನನ್ಯವಾದುದು ಎಂದು

ನಿಸ್ಸಂಕೋಚವಾಗಿ ಹೇಳಬಹುದು.

**ಪ್ರಸಾಧನ ಸಂಸ್ಥೆ :** ಕುಲ್ಸು ಆರ್ಟ್ಸ್ ಮತ್ತು ಬಿಂದು ಆರ್ಟ್ಸ್ ಮುಳ್ಳೇರಿಯಾ ; ಈ ಸಂಸ್ಥೆಗಳು ಕಾಸರಗೋಡು ಹಾಗೂ ಸುತ್ತಮುತ್ತಲಿನ ಕನ್ನಡ ಹಾಗೂ ತುಳು ನಾಟಕಗಳಿಗೆ ಪ್ರಸಾಧನ, ರಂಗಸಜ್ಜಿಕೆ ಪರಿಕರಗಳು, ಬೆಳಕು ಮುಂತಾದವುಗಳನ್ನು ಒದಗಿಸುತ್ತಾ ಬಂದಿದ್ದಾರೆ. ಮುಳ್ಳೇರಿಯಾದ ಕಲಾವಿದರಲ್ಲಿ ಆರ್.ಕೆ.ಮುಳ್ಳೇರಿಯಾ, ಕೆ.ಬಿ.ರೈ. ಮುಳ್ಳೇರಿಯಾ, ಸುಂದರ ಮವ್ವಾರು, ರವೀಂದ್ರ ರೈ ಮಲ್ಲಾವರ, ಸುಂದರ ರಾಜ ರೈ, ಯತೀಶ್ ರೈ, ಸುಧೀರ್ ರೈ, ಚಂದ್ರಶೇಖರ ಆಚಾರ್ಯ, ಸುಧಾಕರ ರೈ ಕಾನಕ್ಕೋಡು, ಕೆ.ಪಿ. ನಾರಾಯಣ, ರಾಜೇಶ ಮಂಜೇಶ್ವರ ಮುಂತಾದವರು.

ವಿಜಯಲಕ್ಷ್ಮಿ ಶ್ಯಾನುಭೋಗ್
ಕಾಸರಗೋಡು

## ನಮ್ಮ ಕಲಾವಿದರು



ಕಾಸರಗೋಡು ಚಿನ್ನಾ
"ಪದ್ಮಗಿರಿ", ಕರಂದಕ್ಕಾಡು, ಕಾಸರಗೋಡು – 671121
ಮೊಬೈಲ್ : 09447323500, 09902063500,

ಶಿಕ್ಷಣ : ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಚಿನ್ನದ ಪದಕದೊಂದಿಗೆ ಡಿಎಫ್‌ಎ ಪದವಿ.

ನಟನೆ : ತಾಳಿ ಕಟ್ಟೋಕೆ ತಯಾರ್, ಹೇಡಿಗಳು, ಮಣ್ಣಿನ ಬೊಂಬೆ, ಕೆಥಾರ್ಸಿಸ್, ಬಂದಾ ಬಂದಾ ಸರದಾರ, ಗಣಗಣರಾಜ್ಯ, ಮತ್ತೆ ಮೊಹೆಂಜೊದಾರೋ, ಗುಲಾಮನ ನಗು, ಸಿದ್ಧತೆ, ಟಿಂಗರ ಬುಡ್ಡಣ್ಣ, ಆನಿಬಂತಾನಿ, ಗುಡ್‌ನೈಟ್, ದೃಷ್ಟಿ, ಈಡಿಪಸ್, ಆಲದಮರ, ಆರಾಧನಾ, ನಾಯಿಬಾಲ, ಕನ್ನಡ, ಕೊಂಕಣಿ, ತುಳು, ಮಲಯಾಳ, ಇಂಗ್ಲಿಷ್ ಭಾಷೆಗಳಲ್ಲಿ 400 ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯ.

ನಿರ್ದೇಶನ : ಪ್ರಶ್ನೆ, ಸಿದ್ಧತೆ, ಕರ್ಮಚಕ್ರ, ದೃಷ್ಟಿ, ಕುರುಡು ಕಾಂಚಾಣ, ಗಣಗಣ ರಾಜ್ಯ, ನಿನ್ನ ಮೋಕೆದಾ(ತುಳು), ನಾಯಿಬಾಲ, ಆಲದ ಮರ, ತದಿಗಿಣ ತೋಂ, ಭತ್ತದ ಕಾಳುಗಳು.

ಭಾಷಾಂತರಿಸಿದ ನಾಟಕಗಳು : ಕನ್ನಡದಿಂದ ಕೊಂಕಣಿಗೆ – ಶಾಂತಿನಿವಾಸ, ಚೋರಗುರು ಚಂಡಾಲ ಶಿಷ್ಯ, ಧರ್ಮಂ ಶರಣಂ ಗಚ್ಛಾಮಿ, ಕರ್ಮಾಧೀನ. ಬಂಗಾಳಿಯಿಂದ ಕೊಂಕಣಿಗೆ – ಗಾಂಟಿ. ರಷ್ಯನ್ ಭಾಷೆಯಿಂದ ಕೊಂಕಣಿಗೆ – ಐಯ್ಲೋರೇ ಐಯ್ಲೋ. ಮಲಯಾಳಂ ಭಾಷೆಯಿಂದ ಕೊಂಕಣಿಗೆ – ಎಕ್ಲೋ ಅನ್ನೆಕ್ಲೋ, ಮಲಯಾಳದಿಂದ ಕನ್ನಡಕ್ಕೆ –ಸಂಹಾರಂ, ಬಂಗಾಳಿಯಿಂದ ತುಳುವಿಗೆ –ಕಾಸ್ ಪಾತೆರುಂಡು.

ಆಕಾಶವಾಣಿ : ಕನ್ನಡ , ಕೊಂಕಣಿ, ತುಳು ಭಾಷೆಗಳಲ್ಲಿ ಬಿ ಹೈಗ್ರೇಡ್

ಕಲಾವಿದನಾಗಿ ಹಲವಾರು ನಾಟಕಗಳಲ್ಲಿ ಅಭಿನಯ.

| | | |
|---|---|---|
| ಇತರೆ | : | ಲಾರಿ ನಾಟಕ – ಲಾರಿ ಮೇಲೆ ನಾಟಕ ಮಾಡುವ ಮುಖಾಂತರ ರಂಗಭೂಮಿಯ ಇತಿಹಾಸದಲ್ಲಿ ಪ್ರಪ್ರಥಮವಾದ ರಂಗ ಅಭಿನಯ ಕರ್ನಾಟಕ ಹಾಗೂ ಕೇರಳಗಳಲ್ಲಿ 108ಕ್ಕೂ ಅಧಿಕ ಪ್ರದರ್ಶನಗಳು ಹಾಗೂ ಯಕ್ಷತೇರು ಕಾರ್ಯಕ್ರಮ ತಿರುಗಾಟ. |
| ಪ್ರಶಸ್ತಿ ಸನ್ಮಾನಗಳು | : | ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ – 'ಬಂದಾ ಬಂದಾ ಸರದಾರ'– ಕನ್ನಡ ನಾಟಕ, ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ 'ದೃಷ್ಟಿ' ಕನ್ನಡ ನಾಟಕಕ್ಕೆ ನಿರ್ದೇಶಕನ ಮಾಡಿದ್ದಕ್ಕಾಗಿ ಪ್ರಥಮ ಬಹುಮಾನ (ಇತರ ಆರು ಪ್ರಶಸ್ತಿಗಳೂ ಇದಕ್ಕೆ ಲಭಿಸಿವೆ), ಅಖಿಲ ಭಾರತ ಕೊಂಕಣಿ ನಾಟಕ ಸ್ಪರ್ಧೆಯಲ್ಲಿ 'ಗಾಂಟಿ' ನಾಟಕದ ಉತ್ತಮ ನಟ, ನಿರ್ದೇಶನ ಪ್ರಶಸ್ತಿ, ಸರಕಾರಿ ಕಾಲೇಜು ಕಾಸರಗೋಡು (1976 –77), ವಿಶ್ವವಿದ್ಯಾಲಯ ಮಟ್ಟದ – ಕಲ್ಲಿಕೋಟೆ ವಿಶ್ವವಿದ್ಯಾಲಯ (1974), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ – 1994, ಕೇರಳ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ – 2009, ರಂಗ ಮಿಲನ ಪ್ರಶಸ್ತಿ. |
| ಸನ್ಮಾನಗಳು | : | ದುಬಾಯಿ ತುಳುನಾಟಕ ಸಂಘ, ಬೆಹ್ರೈನ್ ಕನ್ನಡ ಸಂಘ, ಶಾರ್ಜಾ ಕನ್ನಡ ಸಂಘ, ಅಬುದಾಬಿ ಕನ್ನಡ ಸಂಘ |
| ಸಂಚಾಲಕತ್ವದಲ್ಲಿ ನಡೆದ ಕಾರ್ಯಕ್ರಮಗಳು | : | ಕಂಪೆನಿ ನಾಟಕೋತ್ಸವಗಳು, ಹವ್ಯಾಸಿ ನಾಟಕೋತ್ಸವಗಳು, ತ್ರಿಭಾಷಾ ನಾಟಕೋತ್ಸವಗಳು, ವಠಾರ ನಾಟಕಗಳು, ರಾಷ್ಟ್ರೀಯ ನಾಟಕೋತ್ಸವ, ಮೂಕಾಭಿನಯಗಳು, ಮುಖವಾಡ ಶಿಬಿರ, ಕನ್ನಡ – ಮಲಯಾಳ ರಂಗಭೂಮಿ ಗೋಷ್ಠಿ, ತ್ರಿಭಾಷಾ ರಂಗಕಲಾವಿದರ ಸಮ್ಮೇಳನ, ಲಾರಿ ನಾಟಕ, ಕಾರ್ಮಿಕ ನಾಟಕೋತ್ಸವಗಳು, ಮಕ್ಕಳ ನಾಟಕ ಸ್ಪರ್ಧೆಗಳು, ಪಂಚಭಾಷಾ ನಾಟಕೋತ್ಸವ, ಬೀದಿನಾಟಕಗಳು, ಮಕ್ಕಳ ರಂಗತರಬೇತಿ ಶಿಬಿರ, ಕನ್ನಡ–ಮರಾಠಿ ರಂಗಭೂಮಿ ಗೋಷ್ಠಿ, ಪ್ರಸಾಧನ ಶಿಬಿರ |



**ಉದಯಕುಮಾರ ಮನ್ನಿಪ್ಪಾಡಿ**
ಆನಂದ ನಿಲಯ, ಮನ್ನಿಪ್ಪಾಡಿ, ರಾಮದಾಸ ನಗರ
ಅಂಚೆ – ಕೂಡ್ಲು ಕಾಸರಗೋಡು ಜಿಲ್ಲೆ – 671125
ಮೊಬೈಲ್ : 09847604367

| | | |
|---|---|---|
| ನಟನೆ | : | ಕರ್ಮಚಕ್ರ, ಮಾರಿಕೊಂಡವರು, ತಾಮ್ರಪತ್ರ, ಮಾನಿಷಾದ, ಸರಪಣಿ, ರಾಜಕುಮಾರಿಯ ನಗು, ಬಂಗಾರಾಂ, ಒಬ್ಬ ದೇಶಪ್ರೇಮಿಯ ಹಸಿವು, ಬಂದ ಬಂದ ಸರದಾರ, ನಾಯಿಬಾಲ (ಲಾರಿ ನಾಟಕ), ತದಿಗಿಣ ತೋಂ, ಅಗ್ನಿ ಮತ್ತು ಮಳೆ, ಧೃತ ರಾಷ್ಟ್ರ, ನೀನಲ್ಲಾಂದ್ರೆ ನಿನ್ನಪ್ಪ, ದೃಷ್ಟಿ, ಅನ್ನದ ಬಂಡಿ, ಪ್ರಶ್ನೆ. |
| ಆಕಾಶವಾಣಿ ನಾಟಕಗಳು | : | ರಂಗ ಸಜ್ಜಿಕೆ : ಅನ್ನದ ಬಂಡಿ, ಕರ್ಮಚಕ್ರ, ಪ್ರಶ್ನೆ, ದೃಷ್ಟಿ, ಧೃತರಾಷ್ಟ್ರ, ಒಬ ದೇಶಪ್ರೇಮಿಂಯ ಹಸಿವು, ನಾಯಿಬಾಲ,ತದಿಗಿಣ ತೋಂ, ಕರ್ಮಾಧೀನ, ಸತಿ ಸಾವಿತ್ರಿ, ಪ್ರಗತಿ, ಬಂದ ಬಂದ ಸರದಾರ. |
| ಸಂಸ್ಥೆ | : | ಕಾಸರಗೋಡಿನ ನಟನಾ ಕಾಸರಗೋಡು (ರಿ) ಇದರ ಅಧ್ಯಕ್ಷ ಹಾಗೂ ಸದಸ್ಯ |
| ಇತರೆ | : | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಟನಾ ಕಾಸರಗೋಡು ಸಹಯೋಗದೊಂದಿಗೆ ನಡೆದ ಪಂಚಭಾಷಾ ನಾಟಕೋತ್ಸವದ ಸಂಚಾಲಕತ್ವ, ಮುಖವಾಡ ಪ್ರದರ್ಶನ, ಚಿತ್ರಕಲಾ ಕಮ್ಮಟ, ಪ್ರಸಾಧನ ಶಿಬಿರ ಮುಂತಾದ ಕಾಸರಗೋಡಿನ ರಂಗಚಟುವಟಿಕೆಗಳು. |
| ಸನ್ಮಾನ ಪುರಸ್ಕಾರ | : | ಲಾರಿ ನಾಟಕ, ನಾಯಿಬಾಲದ ನಟನೆಗಾಗಿ ಮೈಸೂರಿನಲ್ಲಿ ಸನ್ಮಾನ, 'ಆಂದೋಲನ' ಪತ್ರಿಕೆ ಮೈಸೂರು ಪರವಾಗಿ ಅಭಿನಂದನೆ, ನಾಯಿಬಾಲ ನಾಟಕದ ಉತ್ತಮ ರಂಗಸಜ್ಜಿಕೆಗಾಗಿ 'ಸ್ನೇಹಬಳಗ' ಬೆಂಗಳೂರು ಇವರಿಂದ ಅಭಿನಂದನೆ, ಲಾರಿ ನಾಟಕ 'ನಾಯಿಬಾಲ'ದ 100 ನೇ ಪ್ರದರ್ಶನದಂದು ಬೆಂಗಳೂರು ವಿಧಾನಸೌಧದ ಎದುರು ಜರುಗಿದ ಸಮಾರಂಭದಲ್ಲಿ ಸನ್ಮಾನ, ಮಕ್ಕಳ ನಾಟಕ 'ತದಿಗಿಣತೋಂ' ಪ್ರದರ್ಶನದಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಸನ್ಮಾನ, ಸುವರ್ಣ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕನ್ನಡ – ಮಲೆಯಾಳ ಜಂಟಿ ನಾಟಕದ |

ಅಭಿನಯಕ್ಕೆ ಸ್ಪರ್ಧೆಯಲ್ಲಿ 'ಒಬ್ಬ ದೇಶಪ್ರೇಮಿಯ ಹಸಿವು' ನಾಟಕ ದ್ವಿತೀಯ ಬಹುಮಾನ, ದಕ್ಷಿಣ ಕನ್ನಡ ಜಿಲ್ಲಾ ಮಡಿವಾಳರ ಸಂಘದ 'ಮಡಿವಾಳ ಸಭಾಭವನದ' ಉದ್ಘಾಟನಾ ಸಮಾರಂಭದಿಂದ ಸನ್ಮಾನ, ರಂಗಮಿಲನ ಮಂಗಳೂರು ಸಾದರಪಡಿಸಿದ ತ್ರಿಭಾಷಾ ನಾಟಕೋತ್ಸವದಲ್ಲಿ ಸನ್ಮಾನ, ನಾಯಿಬಾಲ ನಾಟಕ 50ನೇ ಪ್ರದರ್ಶನದಂದು ಅಭಿನಂದನೆ.



**ವಿಜಯಲಕ್ಷ್ಮಿ ಶ್ಯಾನ್‌ಭೋಗ್**
ವಿಳಾಸ : ' ಭುವನ ವಿಜಯ' ಕೂಡ್ಲು,
ಅಂಚೆ ರಾಮದಾಸ ನಗರ, ಕಾಸರಗೋಡು – 671125.,
ಮೊಬೈಲ್ : 09496182465

**ನಟನೆ** : ಕುರಿಗಳು ಸಾರ್ ಕುರಿಗಳು, ಬೆರಳ್ಗೆ ಕೊರಳ್, ಅಕ್ಕ ಮಹಾದೇವಿ, ಕಾಲ ಬದ್ಲಾಗಿದೆ, ಮಾಂಗಲ್ಯಂ ತಂತು ನಾನೇನ, ಮಂತ್ರದ ಗುಳಿಗೆ.

**ರಚನೆ** : ದಾರಿ ಯಾವುದಯ್ಯ, ಹುಟ್ಟುಹಬ್ಬ, ಹೃದಯರಂಗದ ನೇಪಥ್ಯದಲ್ಲಿ, ಒಲವೇ ನಮ್ಮ ಬದುಕು, ಉದ್ಯೋಗಂ ಸ್ತ್ರೀ ಲಕ್ಷಣಂ., ಮಾರಿಕೊಂಡವರು, ಸತ್ತ ನೆರಳಿನ ಸುತ್ತ, ಕಾಲ ಬದ್ಲಾಗಿದೆ, ಮಾಂಗಲ್ಯಂ ತಂತು ನಾನೇನ.

**ನಿರ್ದೇಶನ** : ಕಾಲ ಬದ್ಲಾಗಿದೆ, ಮಾಂಗಲ್ಯಂ ತಂತು ನಾನೇನ.

**ಆಕಾಶವಾಣಿ** : ಆಕಾಶವಾಣಿಯ ನಾಟಕ ಕಲಾವಿದೆ. ಸುಮಾರು 25ಕ್ಕೂ ಹೆಚ್ಚು ಕಂಠದಾನ.

**ಪ್ರಶಸ್ತಿ ಪುರಸ್ಕಾರಗಳು** : "ಮಣ್ಣು ಕಾಡಿದ ನೆನಪು" ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ ಗಡಿನಾಡ ಘಟಕದಿಂದ ಕಾವ್ಯಗಂಗಾ ಪ್ರಶಸ್ತಿ, 'ಬಿದಿರಕೋಲು' ಕೃತಿಗೆ ಮುಂಬಯಿಯಿಂದ ದಿ. ಸುಶೀಲಾ ಶೆಟ್ಟಿ ಸ್ಮಾರಕ ಕಾವ್ಯ ಪುರಸ್ಕಾರ, 'ಸಂಪಿಗೆ ಚಾವಡಿಯ ಕೂಡ್ಲು ಮನೆ' ಕೃತಿಗಾಗಿ ಧಾರವಾಡದ ವಿದ್ಯಾವರ್ಧಕ ಸಂಘದ ಮಾತೃಶ್ರೀ ರತ್ನಮ್ಮ ಹೆಗ್ಗಡೆ ಗ್ರಂಥ ಪ್ರಶಸ್ತಿ, ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಸನ್ಮಾನ, 'ಶ್ರವ್ಯರಂಗದ ದೃಶ್ಯಗಳು' ಕೃತಿ ಅಖಿಲ ಭಾರತ 66ನೇ ಸಾಹಿತ್ಯ ಸಮ್ಮೇಳನದ ಅನುದಾನಕ್ಕಾಗಿ ಆಯ್ಕೆಯಾದ ಪುಸ್ತಕ.



**ವಾಸು ಬಾಯಾರ್**
ಶ್ರೀದೇವಿ ನಿಲಯ, ಮುಳಿಗದ್ದೆ ಮನೆ,
ಚಿಪ್ಪಾರು ಅಂಚೆ, ವಯಾ ಉಪ್ಪಳ, ಕಾಸರಗೋಡು – 671322,
ಮೊಬೈಲ್: 00974055 – 6153968

ನಟನೆ : ಹಯವದನ, ಗಾಂಧಾರಿ, ಕತ್ತಲು ದಾರಿ ದೂರ, ನೀ ಮಾಯೆಯೋ ನಿನ್ನೊಳು ಮಾಯೆಯೋ, ಕಾಲ್ಗೆಜ್ಜೆ ಕುಣಿತ, ರಾಜ್ಯದಾಹ, ಸಾಂಬಶಿವ ಪ್ರಹಸನ, ರಾಣಿ ಅಬ್ಬಕ್ಕ, ಸಾರ್ವಜನಿಕ ರಸ್ತೆ ಅಲ್ಲ, ಮಾರೀಚನ ಬಂಧುಗಳು, ಟಿ. ಪ್ರಸನ್ನನ ಗ್ರಹಸ್ಥಾಶ್ರಮ, ದೃಷ್ಟಿ, ಅಗ್ನಿ ಮತ್ತು ಮಳೆ, ಬಂದಾ ಬಂದಾ ಸರದಾರ, ಒಬ್ಬ ದೇಶ ಪ್ರೇಮಿಯ ಹಸಿವು, ಕಯ್ಯೂರು.

ರಂಗಚಟುವಟಿಕೆಗಳು : 1994ರಲ್ಲಿ ದೆಹಲಿಯಲ್ಲಿ ಜರುಗಿದ ಕನ್ನಡ ನಾಟಕೋತ್ಸವದಲ್ಲಿ 'ಬಂದ ಬಂದ ಸರದಾರ' ನಾಟಕದಲ್ಲಿ ಅಭಿನಯ. 1998ರಲ್ಲಿ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಹೊರನಾಡ ಕನ್ನಡಿಗರ ನಾಟಕೋತ್ಸವದಲ್ಲಿ 'ಒಬ್ಬ ದೇಶಪ್ರೇಮಿಯ ಹಸಿವು' ನಾಟಕದಲ್ಲಿ ಅಭಿನಯ, ನೂರ ಹತ್ತು ಪ್ರದರ್ಶನ ಕಂಡ ಲಾರಿ ನಾಟಕ 'ನಾಯಿಬಾಲ'ದಲ್ಲಿ ಮುಖ್ಯ ಪಾತ್ರ, ಕಾಸರಗೋಡಿನ ಹವ್ಯಾಸಿ ನಾಟಕ ಸಂಸ್ಥೆಗಳಾದ ಲಲಿತ ಕಲಾ ಸದನ, ಗಡಿನಾಡು ಕಲಾವಿದರು, ನಟನ, ಅಪೂರ್ವ ಕಲಾವಿದರು, ಯವನಿಕಾ, ಅಶೋಕನಗರ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ತರುಣ ಕಲಾವೃಂದ, ಪಂಚಲಿಂಗೇಶ್ವರ ಕಲಾವೃಂದ, ಪಂಚಶ್ರೀ ಗೆಳೆಯರ ಬಳಗ, ಹೆದ್ದಾರಿ ಶಾಲಾ ಮಿತ್ರಮಂಡಳಿ, ಭಾರತೀ ಕಲಾಸದನ, ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನಗಳು ನಡೆಸಿದ ನಾಟಕಗಳಲ್ಲಿ ಅಭಿನಯ, 2002 ರಲ್ಲಿ ಜೂನ್ 4 ರಂದು ಕಲ್ಕತ್ತಾದಲ್ಲಿ ನಡೆದ ಮಕ್ಕಳ ನಾಟಕೋತ್ಸವದಲ್ಲಿ ಭಾಗವಹಿಸುವಿಕೆ.

ಆಕಾಶವಾಣಿ : 'ಬಿ' ಗ್ರೇಡ್ ಕಲಾವಿದ, ನಿಲಯದ ತುಳು ಕನ್ನಡ ನಾಟಕಗಳಲ್ಲಿ ಭಾಗವಹಿಸುವಿಕೆ.

ಇತರೆ : ಯಕ್ಷಗಾನ ಕಲಾವಿದ.

ದೂರದರ್ಶನ ನಾಟಕ : ದೃಷ್ಟಿ ( ಬೆಂಗಳೂರು ದೂರದರ್ಶನ).

ಸನ್ಮಾನ/ಪ್ರಶಸ್ತಿ : ಶ್ರೀ ಮಹಾಲಕ್ಷ್ಮೀ ಕ್ಷೇತ್ರ ಗೊರವನಹಳ್ಳಿ ಬೆಂಗಳೂರು ಸನ್ಮಾನ, ಕಾಸರಗೋಡಿನ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ 'ಸುವರ್ಣ ಕನ್ನಡಿಗ' ಪ್ರಶಸ್ತಿ.



**ರಘು ಕೆ. ಮೀಪುಗುರಿ**
ಪಿತೃಕೃಪಾ, ಮೀಪುಗುರಿ, ಅಂಚೆ ರಾಮದಾಸ ನಗರ,
ಕೂಡ್ಲು, ಕಾಸರಗೋಡು – 671124.,
ದೂರವಾಣಿ: 224215(04994), ಮೊಬೈಲ್ : 9446434215

ನಟನೆ : ಹೆಣ್ಣು ಹೊನ್ನು ಮಣ್ಣು, ಮಾತೃವಾತ್ಸಲ್ಯ, ರಕ್ತದಾನ, ಸತ್ತ ನೆರಳಿನ ಸುತ್ತ, ಎಚ್ಚಮ ನಾಯಕ, ವೀರನಾರಿ, ಅಬ್ಬಕ್ಕ, ಕಿತ್ತೂರ ರಾಣಿ ಚೆನ್ನಮ್ಮ, ದಿವ್ಯ ದರ್ಶನ, ಮಣ್ಣಿನ ಗೊಂಬೆ, ಬಂದಾ ಬಂದಾ ಸರದಾರ, ಗುಲಾಮನ ನಗು, ಗಣಗಣ ರಾಜ್ಯ ಪ್ರಜೆ, ರಾಘವೇಂದ್ರ ಮಹಾತ್ಮೆ, ಶ್ರೀ ರತ್ನ, ದೇವದಾಸಿ, ಸತ್ಯ ಹರಿಶ್ಚಂದ್ರ, ಹಾಗೂ ಹಲವು ತುಳು ನಾಟಕಗಳು.

ನಿರ್ದೇಶನ : ರಕ್ತದಾನ, ವೀರನಾರಿ ಅಬ್ಬಕ್ಕ, ಕಿತ್ತೂರ ರಾಣಿ ಚೆನ್ನಮ್ಮ, ದಿವ್ಯದರ್ಶನ, ಶ್ರೀರತ್ನ, ಕಲ್ಲ್‌ದ್ ದೇವೆರ್, ಬಯ್ಯಮಲ್ಲಿಗೆ, ಗಾಳಿಗ್ ತಿಕ್ಕಿನ ತುಡರ್, ಓ ಅಜ್ಜೆರೆ ಈರೆ'

ರಂಗಸಜ್ಜಿಕೆ : ತಮ್ಮ ನಿರ್ದೇಶನದ ಎಲ್ಲಾ ನಾಟಕಗಳು.

ಸಂಸ್ಥೆ : ಕೂಡ್ಲು ಯುವಜನ ಸಂಘದ ಅಧ್ಯಕ್ಷ, ಯವನಿಕಾ ತಂಡದ ಅಧ್ಯಕ್ಷ, ಅಪೂರ್ವ ಕಲಾವಿದರು, ತರುಣ ಕಲಾವೃಂದ ನಾಟಕ ತಂಡಗಳ ಸದಸ್ಯ.

ಪ್ರಶಸ್ತಿ ಪುರಸ್ಕಾರ : 'ಹೆಣ್ಣು ಹೊನ್ನು ಮಣ್ಣು' ಅಭಿನಯಕ್ಕಾಗಿ 'ಕಲ್ಲ್‌ದ್ ದೇವೆರ್' ನಾಟಕದ ನಿರ್ದೇಶನಕ್ಕಾಗಿ ಕಾಸರಗೋಡು ನಾಟಕೋತ್ಸವದಲ್ಲಿ ಪುರಸ್ಕಾರ, ಗಡಿನಾಡ ಕಲಾವಿದರಿಂದ ಸನ್ಮಾನ, ಕೇರಳ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಸನ್ಮಾನ, ಚುಟುಕು ಸಾಹಿತ್ಯ ಪರಿಷತ್ ಕಾಸರಗೋಡಿನಲ್ಲಿ ನಡೆಸಿದ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ರಂಗಭೂಮಿ ಮತ್ತು ಸಮಾಜಸೇವೆಗಾಗಿ ಪ್ರಶಸ್ತಿ.



ಎ. ವಿಠ್ಠಲ ಶೆಟ್ಟಿ
ಅಣಂಗೂರು " ಸೌರಭ ನಿಲಯ", ರಾಮದಾಸ ನಗರ ಅಂಚೆ
ಕಾಸರಗೋಡು, ಕೇರಳ
ಮೊಬೈಲ್ : 09447469654, 04994 –225215

ನಟನೆ : ಭೂತದ ಎದುರು ಬೇತಾಳ, ಲಚ್ಚಿಮಾವ ಮಾವ ಕಥೆ ಹೇಳು, ಕುದುರೆ ಮೊಟ್ಟೆ, ಕಂಬನಿ, ಕನ್ನಡದ ಕಡುಗಲಿ, ಸತ್ಯಹರಿಶ್ಚಂದ್ರ, ಪ್ರೇತಗಳು, ಬಂದಾ ಬಂದಾ ಸರದಾರ, ಮಣ್ಣಿನ ಬೊಂಬೆ, ಗುಲಾಮನ ನಗು, ದಿವ್ಯದರ್ಶನ, ಗಣಗಣ ರಾಜ್ಯ, ಪ್ರಜೆ (ಬೀದಿ ನಾಟಕ).

ನಿರ್ದೇಶನ : ಪ್ರೇತಗಳು, ಪ್ರೀತಿ , ಮಕ್ಕಳ ನಾಟಕ ನಿರ್ದೇಶನ (ಗಾಳಿ ಮತ್ತು ಮಳೆ)

ದೂರದರ್ಶನದಲ್ಲಿ : ಮಣ್ಣಿನ ಬೊಂಬೆ
ರೇಡಿಯೋ : ಬಂದಾ ಬಂದಾ ಸರದಾರ, ಮಣ್ಣಿನ ಬೊಂಬೆ, ದೃಷ್ಟಿ.
ಸಂಸ್ಥೆ: 'ಯವನಿಕಾ' ಕಾಸರಗೋಡು ತಂಡದ ಸದಸ್ಯ

ವೇಣುಮಿತ್ರ
ವಿಳಾಸ : ವೇಣುಮಿತ್ರ , ಬಿ – 126, ಕುದ್ರೆಮುಖ ಕಾಲನಿ
ಕಾವೂರು – 575015, ಮಂಗಳೂರು,
ಮೊಬೈಲ್ : 8147728600

ನಟನೆ : ಶಿಲೆಯಲ್ಲವೇ ಗುಡಿ, ಹೊಗೆ, ಸ್ವಾರ್ಥಿ, ಆರತಿ, ಮಣ್ಣಿನ ಗೊಂಬೆ, ಬಂದ ಬಂದ ಸರದಾರ, ಕೊಂಬಿನವರು, ಹೆದ್ದಾರಿಯಲ್ಲಿ ಸಾವು, ಇಂಟರ್‌ವ್ಯೂ ಕೆಥಾರ್ಸಿಸ್, ರಣಹದ್ದುಗಳು, ಮಾರೀಚನ ಬಂಧುಗಳು, ಸಾಯೋ ಆಟ, ದೃಷ್ಟಿ.

ರಚನೆ : ಗುತ್ತು, ದಿಗ್ಗ (ಆಕಾಶವಾಣಿ ನಾಟಕ), ಸ್ವಾರ್ಥಿ (ರಂಗನಾಟಕ).

ನಿರ್ದೇಶನ : ಪತನ, ಬಂದ ಬಂದ ಸರದಾರ, ಕೊಂಬಿನವರು, ಅಂಚೆಕಛೇರಿ (ಮೂಲಕೃತಿ ರವೀಂದ್ರನಾಥ ಠಾಗೂರ್), ಮೈಮ್ ನಾಟಕಗಳು, ನಿಂಗ ನಿಂಗಿ ಸಂಸಾರ (ಮಕ್ಕಳ ನಾಟಕ).

ಪ್ರಶಸ್ತಿ ಪುರಸ್ಕಾರ : ಕುದುರೆಮುಖ ಕಂಪೆನಿಯಿಂದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ (ಫೀನಿಕ್ಸ್ ಕನ್ನಡ ನಾಟಕದ ನಿರ್ದೇಶನಕ್ಕಾಗಿ), 'ಗುತ್ತು' ಕೃತಿಗೆ ಉತ್ತಮ ನಾಟಕ ಕೃತಿ ಪುರಸ್ಕಾರ, 2002 ರಲ್ಲಿ ಬೆಹರಿನ್‌ನಲ್ಲಿ ಗುರುಸೇವಾ ಸಮಿತಿಯಿಂದ ಸನ್ಮಾನ.




**ರಾಧಾಕೃಷ್ಣ ಉಳಿಯತ್ತಡ್ಕ**
ವಿಳಾಸ : "ದೃಶ್ಯ" ನೆರಿಬಾಗಿಲು ಅಂಚೆ,
ಕಾಸರಗೋಡು – 671124
ದೂರವಾಣಿ : 240431 (04994)

ರಚನೆ : ಆದಿಕವಿ ವಾಲ್ಮೀಕಿ, ಯುಗಪುರುಷ, ಪರಿವರ್ತನೆ, ದೃಷ್ಟಿ, ಧಿಕ್ಕಾರ, ಕಾಲಚಕ್ರ

ನಿರ್ದೇಶನ : ಮೂವತ್ತು ವರ್ಷಗಳ ಇತಿಹಾಸವಿರುವ ಉಳಿಯತ್ತಡ್ಕದ ಆದರ್ಶ ಯುವಕ ಸಂಘದ ಸ್ಥಾಪಕಾಧ್ಯಕ್ಷರಾಗಿ ಹಲವಾರು ನಾಟಕಗಳ ನಿರ್ದೇಶನ.

ಪುರಸ್ಕಾರ : ರಚಿಸಿ, ನಿರ್ದೇಶಿಸಿದ ಎಲ್ಲಾ ನಾಟಕಗಳೂ ಜಿಲ್ಲಾ ಮಟ್ಟದ ಕೇರಳ ಕಲೋತ್ಸವದಲ್ಲಿ ಉತ್ತಮ ನಿರ್ದೇಶನಕ್ಕಾಗಿ ಪ್ರಥಮ ಬಹುಮಾನ.



**ನಾಗರಾಜ್**
ನಾಯಕ್ಸ್ ರಸ್ತೆ, ಕಾಸರಗೋಡು – 671121
ದೂರವಾಣಿ – 04994– 227337,
ಮೊಬೈಲ್ – 09447491079

ನಟನೆ : ಮಣ್ಣಿನ ಬೊಂಬೆ, ಬಂದ ಬಂದ ಸರದಾರ, ಗುಲಾಮನ ನಗು, ಪ್ರಶ್ನೆ, ಕತ್ತಲು ಬೆಳಕು ಹಾಗೂ ಇನ್ನು ಹಲವಾರು ನಾಟಕಗಳು.

ವಠಾರ ನಾಟಕಗಳು : ಪ್ರಜೆಗಳು ಹಾಗೂ ಗಣ ಗಣ ರಾಜ್ಯ (ಬೀದಿನಾಟಕ).

ಆಕಾಶವಾಣಿ ಮಂಗಳೂರು : ಬಂದ ಬಂದ ಸರದಾರ.

ಬೆಂಗಳೂರು ದೂರದರ್ಶನ : ಮಣ್ಣಿನ ಗೊಂಬೆ.


ಸಂಸ್ಥೆ : ಯವನಿಕಾ ಕಾಸರಗೋಡು(ರಿ) ಸಂಸ್ಥೆಯ ಹಿರಿಯ ರಂಗನಟ.

ಸನ್ಮಾನ : ರಂಗಭೂಮಿಗೆ ನೀಡಿರುವ ಸೇವೆಗೆ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನ.



**ಗುರುಪ್ರಸಾದ್ ಕೋಟೆಕಣಿ**
"ಶಾಸ್ತ್ರ ನಿಲಯ", ಬಿನ್. ಕೆ.ಗಣಪತಿ,
ಕೋಟೆಕಣಿ, ಹೊಸ ಬಸ್‌ಸ್ಟ್ಯಾಂಡ್, ಕಾಸರಗೋಡು

ನಟನೆ : ಕರ್ಮಚಕ್ರ, ಧೃತರಾಷ್ಟ್ರ, ಅನ್ನದಬಂಡಿ, ಡ್ಯೂಟಿ ಅಂದ್ರೆ ಡ್ಯೂಟಿ, ಒಬ್ಬ ದೇಶ ಪ್ರೇಮಿಯ ಹಸಿವು, ನಾಯಿ ಬಂತು ನಾಯಿ, ತಲೆ ತಿನ್ನುವವರು, ತದಿಗಿಣತೋಂ, ತಾಮ್ರಪತ್ರ ಹಾಗೂ ಇನ್ನಿತರ ಹಲವಾರು ನಾಟಕಗಳು.
ಸಂಸ್ಥೆ : ನಟನಾ ಕಾಸರಗೋಡು (ರಿ) ಹವ್ಯಾಸಿ ರಂಗಸಂಸ್ಥೆ, ಧರ್ಮಶಾಸ್ತ್ರ ಕಲಾ ಸಂಘ(ರಿ) ಕಾಸರಗೋಡು.
ಹವ್ಯಾಸ : ಮುಖವಾಡ ತರಬೇತಿ, ಪ್ರಸಾಧನ.
ಪ್ರಶಸ್ತಿಗಳು : ನೆಹರು ಯುವ ಕೇಂದ್ರದ ಜಿಲ್ಲಾ ಮಟ್ಟದ ಯುವಪ್ರಶಸ್ತಿ, ಕಾಸರಗೋಡು ಕನ್ನಡ ಸಮ್ಮೇಳನದ ಯುವ ಪ್ರಶಸ್ತಿ, ಕನ್ನಡ ಭವನ ಪ್ರಶಸ್ತಿ. ಶಾಲಾಮಟ್ಟದ ನಾಟಕ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ.




**ತಾರನಾಥ ಮಧೂರು**
ಕಾವ್ಯನಾಮ : ತಾರಾ ಮಧೂರು
ಉದ್ಯೋಗ : ಪಂಚಾಯತ್ ಕಾರ್ಯದರ್ಶಿ.
ಶಿಕ್ಷಣ : ಪದವಿ

ರಚನೆ : ಗ್ರಹಣ, ಗರಿಮುರಿದ ಹಕ್ಕಿ, ನಾಗಪಂಚಮಿ, ಮೇ 24, ಕಣ್ಣೀರು, ಪ್ರತೀಕಾರ, ಅಭಿಮನ್ಯು, ಧರ್ಮಕ್ಷೇತ್ರ, ಕುರುಕ್ಷೇತ್ರ.
ನಟನೆ : ಶಿಲುಬೆ, ಸಮರ್ಪಣ, ಪಾಪಿ ಕಾಣದ ಕೈ, ಮಣಿಕಂಠ ಮಹಿಮೆ, ಕಡುಗಲಿ ಕುಮಾರರಾಮ, ಮೇ. 24, ಕರುಣಾಮಯಿ ಅಯ್ಯಪ್ಪ ಸ್ವಾಮಿ, ಕಣ್ಣೀರು, ಪತಿವ್ರತೆ, ಮಿತ್ರನ ಹಳ್ಳಿ, ಸತ್ಯಹರಿಶ್ಚಂದ್ರ, ಇತ್ಯಾದಿ.

ಮುಖ್ಯ ಪಾತ್ರ : ಖಳನಾಯಕ, ಹಾಸ್ಯ ನಾಯಕ

ನಿರ್ದೇಶನ : ಹಲವಾರು ಕನ್ನಡ/ ತುಳುನಾಟಕ.

ಪ್ರಶಸ್ತಿ : ಕಾಸರಗೋಡು ಲಲಿತ ಕಲಾಸದನ ನಾಟಕೋತ್ಸವದಲ್ಲಿ ಮೇ. 24 ಮತ್ತು ಕುರುಕ್ಷೇತ್ರ ರಚನೆ, ನಟನೆಗೆ ಪ್ರಶಸ್ತಿ.



ಪ್ರದೀಪ್ ಬೇಕಲ್
ವಿಳಾಸ – ವರದಿಗಾರ, ಉದಯವಾಣಿ, ಗೋಲ್ಡನ್ ಆರ್ಕೇಡ್
ಹೊಸ ಬಸ್ ಸ್ಟ್ಯಾಂಡ್, ಕಾಸರಗೋಡು.,
ಮೊಬೈಲ್ : 09995232032

ರಚನೆ : ನಾವು ಹೀಗೆ.... ಮಕ್ಕಳ ನಾಟಕ.

ಸಂಸ್ಥೆ : ನಟನಾ ಮತ್ತು ಗಡಿನಾಡ ಕಲಾವಿದರು, ಸಂಸ್ಥೆಯ ಸದಸ್ಯ, ಪದಾಧಿಕಾರಿ.

ಪರಿಣತಿ : ನೇಪಥ್ಯ, ರಂಗಪರಿಕರ, ವಸ್ತ್ರವಿನ್ಯಾಸದಲ್ಲಿ ಹೆಚ್ಚಿನ ಆಸಕ್ತಿ.

ಪ್ರಸಾಧನ : ಖ್ಯಾತ ಪ್ರಸಾಧನ ಕಲಾವಿದರಾದ ನನ್ನ ತಂದೆ, ದಿ। ದಿವಾಕರ್ ಮಾಸ್ತರ್ ಅವರಿಂದ ಪ್ರಸಾಧನ ಕಲಿಕೆ 'ಬೆಂಗಳೂರಿನ ನಾಣಿ ಮುರಹರಿ, ವೇಣು ಕಾಸರಗೋಡು ಅವರಿಂದ ಹೆಚ್ಚಿನ ಮಾರ್ಗದರ್ಶನ.

ಪ್ರಸಾಧನ ಮಾಡಿದ ನಾಟಕಗಳು : ಅಂಧಯುಗ, ಅಗ್ನಿ ಮತ್ತು ಮಳೆ, ನಕ್ಕಳಾ ರಾಜಕುಮಾರಿ, ಪುಷ್ಪರಾಣಿ, ಅಶ್ವತ್ಥಾಮ, ಧೃತರಾಷ್ಟ್ರ, ತಾಮ್ರಪತ್ರ, ಮೂರ್ಖಪುರದ ಬಯಲಾಟ, ಭೂತದ ಕಥೆ, ಮಹಾಭಾರತ, ಸುಭಾಷಿತ, ಎಂಚಿನಲಾ ಪನ್ಲೆ, ಮುಕ್ಕಾಲು ಮೂಜಿ ಘಳಿಗೆ, ವತೀತ್ ಇನ್ನೂ ಹಲವು ನಾಟಕಗಳಿಗೆ ರಂಗಪರಿಕರ, ವಸ್ತ್ರವಿನ್ಯಾಸ, ನೀನಾಸಂ ಪದವೀಧರ ಮುರಹರಿ ಅವರ ಮಾರ್ಗದರ್ಶನದಿಂದ ವಸ್ತ್ರವಿನ್ಯಾಸದಲ್ಲಿ ಹೆಚ್ಚಿನ ಮಾಹಿತಿ.

ವಿಮರ್ಶೆ : ಉದಯವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಹೊಸದಿಗಂತ ಮತ್ತು ಜನವಾಹಿನಿ, ಜನಾಂತರಂಗ ಪತ್ರಿಕೆಗಳಲ್ಲಿ ಕರಾವಳಿ ಅಲೆ, ಮಂಗಳೂರು ಮಿತ್ರ ಪತ್ರಿಕೆಗಳಲ್ಲಿ ನಾಟಕಗಳ ಪ್ರದರ್ಶನ ವಿಮರ್ಶೆ ಪ್ರಕಟ.



**ಭಾರತಿ ಬಾಬು**

ವಿಳಾಸ : ಕಲಾ ನಿಲಯಂ, ಅಶೋಕ ನಗರ, ಅಂಚೆ
ಕಾಸರಗೋಡು – 671121,
ದೂರವಾಣಿ : 09495479250

ನಟನೆ : ಕುದುರೆ ಬಂತು ಕುದುರೆ, ಹಯವದನ, ಕತ್ತಲು ದಾರಿ ದೂರ, ಕಾಲ್ಗೆಜ್ಜೆ ಕುಣಿತ, ಅಗ್ನಿ ಮತ್ತು ಮಳೆ, ಒಬ್ಬ ದೇಶ ಪ್ರೇಮಿಯ ಹಸಿವು, ಕಯ್ಯೂರು, ಬಣ್ಣದ ಪ್ರಪಂಚ, ಕೌನ್ಸಲರ್ ಕೊಗ್ಗಣ್ಣ, ದಿವ್ಯದರ್ಶನ, ಹೊಯ್ಸಳೇಶ್ವರ ವಿಷ್ಣುವರ್ಧನ, ದೃಷ್ಟಿ, ಬಸ್ತಿ, ಬಚ್ಚಾಲಿ ಹುಡುಗರು, ಭಗವದ್‌ಅಜ್ಜುಕೀಯ, ಮಾರಿಕೊಂಡವರು, ಸತ್ತ ನೆರಳಿನ ಸುತ್ತ, ಕತ್ತಲು ದಾರಿ ದೂರ, ಸತ್ಯಮೇವ ಜಯತೆ, ಮಾರೀಚನ ಬಂಧುಗಳು.

ಇತರೆ : ಯಕ್ಷಗಾನ, ಸಂಗೀತ, ಹರಿಕಥೆ, ಮೂಕಾಭಿನಯ.

ಸನ್ಮಾನ ಪ್ರಶಸ್ತಿ : 1985 ರಲ್ಲಿ ಕಾಸರಗೋಡಿನ ಲಲಿತಕಲಾ ಅಕಾಡೆಮಿಯಲ್ಲಿ ನಡೆದ ನಾಟಕೋತ್ಸವದಲ್ಲಿ 'ಕುದುರೆ ಬಂತು ಕುದುರೆ' ನಾಟಕದಲ್ಲಿ ಅತ್ಯುತ್ತಮ ಪ್ರಶಸ್ತಿ, ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ನಡೆಸಿದ ನಾಟಕದಲ್ಲಿ ಪ್ರಥಮ ಬಹುಮಾನ.



**ಉದಯಶಂಕರ ನಾರಾಯಣ ರಾವ್. ಎ.**

ನಿವೃತ್ತ ಡೆಪ್ಯೂಟಿ ತಹಶೀಲ್ದಾರ್
ಶ್ರೀನಿಲಯ , ಕೊಲ್ಲಂಗಾನ, ಅಂಚೆ ಕಲ್ಲಕಟ್ಟೆ(ದಾರಿ), ವಿದ್ಯಾನಗರ,
ಕಾಸರಗೋಡು – 671123, ದೂರವಾಣಿ : 04998 – 285206

ನಟನೆ : ಭಕ್ತಧ್ರುವ (1955), ನಾರದ, ಶ್ರೀಕೃಷ್ಣ ಗಾರುಡಿ, ಛಲದಂಕ ಕೌರವ, ತುಳಸಿ ಜಲಂಧರ, ಬಭ್ರುವಾಹನ, ವಿಜಯನಗರದ ವೀರಕೇಸರಿ, ಅಶೋಕ, ಶ್ರೀಕೃಷ್ಣ ದೇವರಾಯ, ರಕ್ತದಾಹ, ಸಾಹಸಸಿಂಹ, ಲಕ್ಷ್ಮಣ ನಾಯಕ, ಕಂಠೀರವ, ಎಚ್ಚಮನಾಯಕ, ಸ್ವಪ್ನ ಸೌಭಾಗ್ಯ, ತ್ಯಾಗದ ಫಲ, ಮದುವೆಗಂಡು, ಕೊಲೆಯ ಹಿನ್ನೆಲೆ, ಮದುವೆ ಬಿಸಿ, ಜ್ಯೋತಿ ಬೆಳಗಿತು, ಮುಕುತಿ – ಮೂಗುತಿ ಮತ್ತು ಹಲವಾರು ತುಳು ನಾಟಕಗಳಲ್ಲಿ ನಟನೆ.

ರಚನೆ, ನಿರ್ದೇಶನ : *ಕನ್ನಡ ಪೌರಾಣಿಕ (ಮಕ್ಕಳಿಗಾಗಿ)* : ಸೀತಾ ವನವಾಸ, ಭಕ್ತಪ್ರಹ್ಲಾದ, ಬಭ್ರುವಾಹನ, ಕರ್ಣನ ಸ್ವಾಮಿ ನಿಷ್ಠೆ, ಭಕ್ತಧ್ರುವ, ಸತ್ಯಹರಿಶ್ಚಂದ್ರ, ಲವಕುಶ, ಬಲರಾಮ, ಗೋಗ್ರಹಣ, ಭಕ್ತ ಸುಧಾಮ, ಭಕ್ತ ಸುಧನ್ವ, ನಾರದ ವಿವಾಹ, ಭಕ್ತ ಪುಂಡಲೀಕ, ಯಾತ್ರೆ, ಪರಶುರಾಮ, ಕಂಸ, ಹಿರಣ್ಯಾಕ್ಷ, ಅಶ್ವತ್ಥಾಮ, ಚಕ್ರವ್ಯೂಹ, ಕೌರವನ ಸೋಲು, ಕೀಚಕ, ಭಸ್ಮಾಸುರ ಮೋಹಿನಿ, ಇಂದ್ರಜಿತ್, ಶಕುಂತಲೆ, ವನವಾಸ, ವಸುದೇವ – ದೇವಕಿ, ಭಾರ್ಗವ, ಶ್ರೀ ಗಣೇಶ ಮಹಿಮೆ, ಚಂದ್ರಹಾಸ, ಶ್ರೀಕೃಷ್ಣ ಲೀಲೆ.

ತುಳು : ಮಾಜಂದಿಬರವು, ಮೋಕೆದ ಮದ್ಮೆ, ಎನ್ನ ಮರ್ಮಲ್, ಮೋಕೆದ ಬಿಲೆ, ಪೂಜೆಗಾವಂದಿಪೂ ದಾರೆದಾಂತಿ ಮದಿಮೆ, ಕಣ್ಣೀರ್ – ಪನ್ನೀರ್, ಬಂಧನಾ, ಅಮ್ಮಾ.... ತುಲಸೀ, ಮಾಜಂದಿ ಪ್ರೀತಿ, ನ್ಯಾಯ ಓಲುಂಡು, ಜ್ಯೋತಿ ಬೆಳಗಂಡ್.., ಕಣ್ಣೀರ್ದ ಕಡಲ್, ಮನಸೇ ಈ ಸಾಕ್ಷಿ, ಸಮಯ ಕರಿಂಡ್.

ಇತರೆ : ನವರಂಗ ಆರ್ಟ್ಸ್ ಗಾಂಧಿನಗರ (ರಿ), ಕೊಲ್ಲಂಗಾನ ಶ್ರೀ ಶಾರದಾ ಭಜನಾ ಮಂದಿರ(ರಿ), ಕೊಲ್ಲಂಗಾನ ಹಳೆ ವಿದ್ಯಾರ್ಥಿ ಸಂಘ, ಕಲ್ಲಕಟ್ಟೆ ಕಾಸರಗೋಡು ಜಿಲ್ಲಾ ತುಳುಕೂಟ(ರಿ) ತುಳು ಕೂಟ(ರಿ), ಕುಡ್ಲ, ಅಖಿಲ ಭಾರತ ತುಳು ಒಕ್ಕೂಟ (ರಿ), ಮಂಗಳೂರು.



**ಕೆ. ಸುಬ್ಬಣ್ಣ ಶೆಟ್ಟಿ** – ನಿವೃತ್ತ ಪತ್ರಕರ್ತ, ರಂಗನಟ
ವಿಳಾಸ : 'ಸ್ನೇಹ ನಿಲಯ' , ಕುಚ್ಚಿಕ್ಕಾಡು, ಕೂಡ್ಲು ಗ್ರಾಮ
ಅಂಚೆ ರಾಮದಾಸ ನಗರ ಕಾಸರಗೋಡು – 671124
ಸ್ಥಳ : ಕಾಸರಗೋಡು ತಾಲ್ಲೂಕಿನ ಕೂಡ್ಲು ಗ್ರಾಮ


ನಟನೆ : ಮನೆಯಿಂದ ಮಸಣಕ್ಕೆ, ಮಂಗಳಾ, ಧರ್ಮಚಕ್ರ, ಮಣ್ಣಿನ ಗೊಂಬೆ, ಗುಲಾಮನ ನಗು, ನಾಯಿಗಳು, ಸಿದ್ಧತೆ, ದೃಷ್ಟಿ, ಕರ್ಮಚಕ್ರ, ಪ್ರಶ್ನೆ, ಪತನ, ಮತ್ತೆ ಮೆಹೆಂಜೋದಾರೋ, ಚೋರಗುರು ಚಾಂಡಾಲ ಶಿಷ್ಯ, ಉಲ್ಲಾಳದ ರಾಣಿ ಅಬ್ಬಕ್ಕ ಮತ್ತು ಹಲವಾರು ತುಳುನಾಟಕಗಳಲ್ಲಿ ಸ್ತ್ರೀ ಪಾತ್ರ ಹಾಗೂ ಪ್ರಮುಖ ಪಾತ್ರಗಳಲ್ಲಿ ನಟನೆ.

ನಿರ್ದೇಶನ : ಅಣ್ಣನ ಮನಸ್ಸು, ನಾನೇನು ಮಾಡಲಿ, ನೀನೇ ನನ್ನ ಹೆಂಡ್ತಿ, ಮಾಯದ ಮನಸ್ಸ್, ರಕ್ತಧಾರೆ.

ಸಂಸ್ಥೆ : ತರುಣ ಕಲಾವೃಂದ ಕೂಡ್ಲು, ಸಹೋದರ ಕಲಾವೃಂದ ಕೂಡ್ಲು, ಕೂಡ್ಲು ಯುವಜನ ಸಂಘ, ಕಾಸರಗೋಡು ಲಲಿತ ಕಲಾ ಸದನ, ಯವನಿಕಾ.

ಆಕಾಶವಾಣಿ : ಆಕಾಶವಾಣಿಯ ಅಂಗೀಕೃತ ಧ್ವನಿ ಕಲಾವಿದ, ಮಂಗಳೂರು ಆಕಾಶವಾಣಿಯಲ್ಲಿ 1982 ರಿಂದ ಹಲವು ನಾಟಕಗಳಿಗೆ ಕಂಠದಾನ.

ಪ್ರಶಸ್ತಿ ಪುರಸ್ಕಾರ : 1971ರಲ್ಲಿ ಪೆರಡಾಲ ನವಜೀವನ ಹೈಸ್ಕೂಲ್‌ನಿಂದ ಪ್ರಶಸ್ತಿ, 1993 ರಲ್ಲಿ ಉಡುಪಿಯಲ್ಲಿ ನಡೆದ ಕರ್ನಾಟಕ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ದೃಷ್ಟಿ ನಾಟಕದಲ್ಲಿ ಶ್ರೇಷ್ಠ ನಟ ಪ್ರಶಸ್ತಿ, 2000 ರಲ್ಲಿ ಕಾಸರಗೋಡು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುರಸ್ಕಾರ, 2000ನೇ ಇಸವಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, 2001 ರಲ್ಲಿ ಕರ್ನಾಟಕ ತುಳು ಅಕಾಡೆಮಿ ಪ್ರಶಸ್ತಿ, ಕೇರಳ ತುಳು ಅಕಾಡೆಮಿ ಪ್ರಶಸ್ತಿ.



ರತ್ನಾಕರ ಮಲ್ಲಮೂಲೆ
ಪ್ರಾಧ್ಯಾಪಕ,
ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಸರಕಾರಿ ಕಾಲೇಜು, ಕಾಸರಗೋಡು – 671123.
ವಿಳಾಸ: ಮಲ್ಲಮೂಲೆ, ಮವ್ವಾರು ಅಂಚೆ,
ಮುಳ್ಳೇರಿಯಾ, ಕಾಸರಗೋಡು.

ರಚನೆ : ಮಳೆ ನಿಂತ ಮೇಲೆ

ಭಾಷಾಂತರ ಮಾಡಿದ ನಾಟಕ : ಮಲಯಾಳ ಸಾಹಿತಿ ಎಂ.ಟಿ ವಾಸುದೇವ ನಾಯರ್ ಅವರ 'ರಂಡಾಮುಳಂ' ಕಾದಂಬರಿ ಆಧಾರಿತ ಏಕವ್ಯಕ್ತಿ ನಾಟಕ ಕೃತಿ 'ಭೀಮನಾಣ್ ಮನುಷ್ಯನ್'ನನ್ನು 'ಭೀಮಾಲಾಪ' ಎಂಬ ಕನ್ನಡ ಕೃತಿಯಾಗಿ ಭಾಷಾಂತರ.

ಹವ್ಯಾಸ : ಯಕ್ಷಗಾನ, ನಾಟಕ, ಸಮಾಜ ಸೇವೆ.

ಇತರ : ಕಿರಣ್‌ರಾಜ್ ಅವರ 'ಕಾವಳ' ಕಿರುಚಿತ್ರಕ್ಕೆ ಸಂಭಾಷಣೆ ಬರಹ.

**ಶಂಕರನಾರಾಯಣ ಅಡಿಗ, ಕುಂಬ್ಳೆ**
ಪ್ರವೃತ್ತಿ ನಾಮ : ಕಲಾರತ್ನ ಶಂನಾಡಿಗ, ಕುಂಬ್ಳೆ
ವಿಳಾಸ : ರತ್ನಗಿರಿ, ಅನಂತಪುರ ದೇವಸ್ಥಾನ ರಸ್ತೆ,
ಎಡನಾಡು ಅಂಚೆ, ನಾಯ್ಕಾಪು, ಕುಂಬಳೆ,
ಕಾಸರಗೋಡು ಜಿಲ್ಲೆ, ಕೇರಳ

| | | |
|---|---|---|
| ಶಿಕ್ಷಣ | : | ಬಿ.ಎ, ಎಲ್.ಎಲ್.ಬಿ.(ಡಿ.ಪಿ.ಎಂ) |
| ರಚನೆ ಮತ್ತು ನಿರ್ದೇಶನ | : | ಶನಿಪ್ರಭಾವ, ಕಣ್ವಪ್ರತಿಷ್ಠ, ಛಲದಂಕಮಲ್ಲ, ಪ್ರಚಂಡಪರಶು, ಮೃತಸಂಜೀವಿನಿ, ಚೌತಿಚಂದಿರ, ಕಲಿಕರ್ಣ, ಮಣಿಮಂಜೀರ, ಚಿರಂಜೀವಿ, ಬಭ್ರುವಾಹನ, ಬೆಟ್ಟದದೀಪ, ಮೃಗೇಂದ್ರವಾಹಿನಿ, ಮೂಕಾಂಬಿಕಾ, ಸತ್ಯಮೇವ ಜಯತೇ, ಭಗ್ನಮನೋರಥಾ, ಗುರುತು ಮುದ್ರಿಕೆ, ಕುಂತಿ, ಶರತಲ್ಪ, ವಿಕ್ರಮನವಿಕ್ರಮ, ಜ್ವಾಲಾಮುಖಿ, ಧರ್ಮಪಾಲನೆ, ಶ್ರೀದೇವಿ, ಸ್ತಂಭಭೇದ, ಸುಧಾಮ ಶ್ಯಾಮ, ಭಕ್ತಪ್ರಹ್ಲಾದ, ವಜ್ರಕಠಾರಿ, ಕಂಕಣಬಲ, ಕೆಟ್ಟಮೇಲೆ ಬುದ್ಧಿಬಂತು, ಹಸಿವು, ಬೆಳಕು, ಸಾಕ್ಷರತಾ. |
| ರಂಗಸಜ್ಜಿಕೆ | : | ಶನಿಪ್ರಭಾವ, ಪ್ರಚಂಡ ಪರಶು, ಮೃತ ಸಂಜೀವಿನಿ, ಚೌತಿ ಚಂದಿರ, ಕಲಿಕರ್ಣ, ಮಣಿ ಮಂಜೀರ, ಚಿರಂಜೀವಿ, ಬಭ್ರುವಾಹನ, ಬೆಟ್ಟದ ದೀಪ, ಮೃಗೇಂದ್ರವಾಹಿನಿ, ಮೂಕಾಂಬಿಕಾ, ಸತ್ಯಮೇವ ಜಯತೇ, ಭಗ್ನ ಮನೋರಥ, ಜ್ವಾಲಾಮುಖಿ, ಧರ್ಮಪಾಲನೆ, ಸ್ತಂಭಭೇದ, ಸುಧಾಮಶ್ಯಾಮ, ವಜ್ರಕಠಾರಿ, ಕಂಕಣಬಲ, ಬೆಳಕು, ಮುಂತಾದ 30ಕ್ಕೂ ಹೆಚ್ಚು ಪೌರಾಣಿಕ ಐತಿಹಾಸಿಕ ನಾಟಕಗಳಿಗೆ ರಂಗಸಜ್ಜಿಕೆ. |
| ಇತರೆ | : | ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ಹೆಚ್ಚಿನ ಪ್ರದೇಶಗಳಲ್ಲಿ ನಾಟಕಗಳ ಪ್ರದರ್ಶನ. ನಮ್ಮ ತಂಡದ ಶನಿಪ್ರಭಾವ, ಬೆಟ್ಟದ ದೀಪ, ಮಣಿಮಂಜೀರ, ಜ್ವಾಲಾಮುಖಿ, ವೀರಭದ್ರ ಹೆಚ್ಚು ಜನಪ್ರಿಯ ನಾಟಕಗಳು. ಶನಿಪ್ರಭಾವ ಹಾಗೂ ವೀರಭದ್ರ ನಾಟಕಗಳ ಸುಮಾರು 75 ಪ್ರದರ್ಶನಗಳು. |
| ಹವ್ಯಾಸ | : | 1992ರಲ್ಲಿ ಹರಿಕಥಾ ಕ್ಷೇತ್ರರಂಗ ಪ್ರವೇಶ. ಇಲ್ಲಿಯ ತನಕ ಕಾಸರಗೋಡು, ಕರ್ನಾಟಕ, ಮುಂಬಯಿ, ಗೋವಾ |

ಮುಂತಾದ ರಾಜ್ಯಗಳಲ್ಲಿ 400ಕ್ಕೂ ಹೆಚ್ಚು ಹರಿಕಥಾ ಕಾರ್ಯಕ್ರಮಗಳು. 2004ರಲ್ಲಿ ಕೀರ್ತನ ಕುಟೀರ ಎಂಬ ಕಲಾಸಂಸ್ಥೆಯ ಸ್ಥಾಪನೆ ಮತ್ತು ಮಕ್ಕಳಿಗೆ ಹರಿಕಥಾ ತರಬೇತಿ ಪ್ರಾರಂಭ. 1991ರಲ್ಲಿ ಸಂಧ್ಯಾ ಸಂಗಮ ಕಲಾಸಂಸ್ಥೆಯ ಸ್ಥಾಪನೆ.

ಪ್ರಶಸ್ತಿಗಳು : 1997ರಲ್ಲಿ ವೀರಭದ್ರ ಪೌರಾಣಿಕ ನಾಟಕಕ್ಕೆ 7 ರಾಜ್ಯಪ್ರಶಸ್ತಿಗಳು. 1997ರಲ್ಲಿ ಕಿನ್ನಿಗೋಳಿಯ ದ.ಕ ಕಲಾಭಿಮಾನಿಗಳ ಒಕ್ಕೂಟ ಕಲಾರತ್ನ ಪ್ರಶಸ್ತಿ, 2008 ರಲ್ಲಿ ಅಖಿಲ ಕರ್ನಾಟಕ ಕೀರ್ತನ ಕಲಾ ಪರಿಷತ್ ಬೆಂಗಳೂರು ಇವರಿಂದ ಕಥಾ ಕೀರ್ತನಾ ಕೋವಿದಾ ಪ್ರಶಸ್ತಿ ಹಾಗೂ ಹಲವಾರು ಸನ್ಮಾನ ಮತ್ತು ಗೌರವ.

ರಮೇಶ್ ಶೆಟ್ಟಿ ಕಾಞಂಗಾಡ್
ಬಿನ್. ಮಹಾಲಿಂಗ ಶೆಟ್ಟಿ
ಮಾತೃ ಕೃಪಾ, ಕಾಳ್ಯಂಗಾಡ್ ಅಂಚೆ, ಆರ್.ಡಿ. ನಗರ್, ಕುಡ್ಲು
ಕಾಸರಗೋಡು, ಕೇರಳ

ನಟನೆ : ತ್ರಿಬ್ಬಲ್ ತಾಳಿ, ಗೋಮುಖ ವ್ಯಾಘ, ತಮ್ಮಲೆ ಅರ್ವತನ ಕೋಲ, ಅಂಚತ್ತ್ ಇಂಚ, ಈ ಪೊನ್ನು ಏರ್, ದಿವ್ಯದರ್ಶನ, ಕಲ್ಕುಡ –ಕಲ್ಲುರ್ಟಿ, ಸೋವು, ಹೊಯ್ಸಳೇಶ್ವರ ವಿಷ್ಣುವರ್ಧನ್, ಮುಕ್ಕಾಲ್ ಮಾಜಿ ಘಳಿಗೆ, ಕಂಬುಳ ಸುಕುಮಾರ, ಮುತ್ತು, ನಾಗನಿಧಿ, ಕಾಸ್ ಉಂಡಾ ನಿಕ್ಲೆಡಾ, ವಾ ಒಂಜಿ ಪೊರ್ಲು, ಕೌನ್ಸಿಲರ್ ಕೊಗ್ಗಣೆ, ಎಂಚಿನ್ಲಾ ಪನ್ಲೆ, ಒಬ್ಬ ದೇಶ ಪ್ರೇಮಿಯ ಹಸಿವು, ಆಫೀಸರ್ ಬರ್ತಾರೆ.



ರವೀಂದ್ರ ಬಿ.ರೈ ಮಲ್ಲಾವರ
ಅಂಚೆ : ಆದೂರು, ಮುಳ್ಳೇರಿಯಾ
ಜಿಲ್ಲೆ : ಕಾಸರಗೋಡು
ದೂರವಾಣಿ : 04994277497, 09447374995
ವಿದ್ಯಾಭ್ಯಾಸ : ಪದವಿ ಪೂರ್ವ ಶಿಕ್ಷಣ

ನಟನೆ/ ನಿರ್ದೇಶನ : ಹೊಯ್ಸಳೇಶ್ವರ ವಿಷ್ಣುವರ್ಧನ, ಕೆಯ್ಯೂರು, ಅಂಧಯುಗ, ಕಾಲಿಗುಲ, ಸತ್ಯಹರಿಶ್ಚಂದ್ರ, ಭಕ್ತ ಮಾರ್ಕಂಡೇಯ, ಇತ್ಯಾದಿ.

30ಕ್ಕೂ ಮಿಕ್ಕಿ ತುಳು ನಾಟಕಗಳಲ್ಲಿ ಮತ್ತು ಕೆಲವು ಮಲೆಯಾಳಂ ನಾಟಕಗಳಲ್ಲಿ ನಟನೆ. ಮಿಮಿಕ್ರಿ ಮತ್ತು ಏಕಪಾತ್ರಾಭಿನಯ ಪಟು.

ಸಂಸ್ಥೆ : ಗಡಿನಾಡ ಕಲಾವಿದರು, ಕಾಸರಗೋಡು , ಅಪೂರ್ವ ಕಲಾವಿದರು ಕಾಸರಗೋಡು, ಫ್ರೆಂಡ್ಸ್ ಕ್ಲಬ್ ಮಲ್ಲಾವರ, ಶಿವಶಕ್ತಿ ಮಲ್ಲಾವರ, ಸಹೋದರ ಕಲಾವೃಂದ ಬೆಳ್ಳೂರು, ಮಿತ್ರ ಬೆಳ್ಳೂರು, ಪ್ರತಿಭಾ ಮುಳ್ಳೇರಿಯ, ಅಂಬಿಕಾ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಅಂಬಿಕಾ ನಗರ, ಕೆಎಫ್‌ಸಿ, ಕಾರಡ್ಕ, ಷಡಾನನ ಮವ್ವಾರು, ಸಂತೋಷ್ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಸೀತಾಂಗೋಳಿ ಪುದ್ವಾರ್ ಕಲಾವಿದೆರ್ ಬದಿಯಡ್ಕ, ಕಲಾಕೋಪೆ ವೀರ್ಚಾಲ್, ಶಾರದಾಂಬಾ ಕಲಾವೃಂದ ಕೈತ್ತೋಡು, ಪ್ರಕೃತ ಮುಡಿಪು ಬಾಳೆಪುಣಿ ಸ್ಫೂರ್ತಿ ನಾಟಕ ತಂಡದಲ್ಲಿ ಅಭಿನಯ.

ಪ್ರಶಸ್ತಿ ಮತ್ತು ಸನ್ಮಾನ : ಕೇರಳೋತ್ಸವ ಕನ್ನಡ ನಾಟಕ ಸ್ಪರ್ಧೆಯಲ್ಲಿ ಮೂರು ಬಾರಿ ಉತ್ತಮ ನಟನಾ ಪ್ರಶಸ್ತಿ. ಆದೂರು ಕೈತ್ತೋಡು ಶಾರದಾಂಬಾ ಯುವ ವೃಂದದಿಂದ ಸನ್ಮಾನ.

ಯತೀಶ್ ರೈ

ವಿಳಾಸ : ಗೌರಿಕೃಪಾ, ಮುಳ್ಳೇರಿಯಾ – ಕಾಸರಗೋಡು

ಶಿಕ್ಷಣ : ಭೌತಶಾಸ್ತ್ರದಲ್ಲಿ ಪದವಿ, ಸಮಾಜಶಾಸ್ತ್ರ, ಶಿಕ್ಷಣ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ನಾತಕೋತ್ತರ ಪದವಿ.

ನಟನೆ/ನಿರ್ದೇಶನ : ಹೊಯ್ಸಳೇಶ್ವರ ವಿಷ್ಣುವರ್ಧನ, ಕೆಯ್ಯೂರು, ಕಲೀಗುಲ, ಅನಂತರ, ಸತ್ಯಹರಿಶ್ಚಂದ್ರ ಇತ್ಯಾದಿ. 12 ಕ್ಕೂ ಮಿಕ್ಕಿ ತುಳುನಾಟಕಗಳಲ್ಲಿ ಮತ್ತು 8 ಕ್ಕೂ ಮಿಕ್ಕಿ ಮಲೆಯಾಳಂ ನಾಟಕಗಳಲ್ಲಿ ನಟನೆ.

ಇತರೆ : ಆಕಾಶವಾಣಿ, ಯಕ್ಷಗಾನ ಕಲಾವಿದ.

ಸಂಸ್ಥೆ : ಗಡಿನಾಡ ಕಲಾವಿದರು, ಕಾಸರಗೋಡು, ಅಪೂರ್ವ ಕಲಾವಿದರು ಕಾಸರಗೋಡು, ದುರ್ಗಾ ಮುಳ್ಳೇರಿಯಾ, ಮಿತ್ರಾ ಬೆಳ್ಳೂರು, ಶಿವಶಕ್ತಿ ಆದೂರು, ಕೆ.ಎಫ್.ಸಿ ಕಾರಡ್ಕ, ಕಾಳಿದಾಸ ಕಾರಡ್ಕ, ಶಿವಶಕ್ತಿ ಮುಳ್ಳೇರಿಯಾ, ಪ್ರತಿಭಾ ಮುಳ್ಳೇರಿಯಾ.

ಪ್ರಶಸ್ತಿ/ ಸನ್ಮಾನ : ಎರಡು ಬಾರಿ ಜಿಲ್ಲಾ ಮಟ್ಟದ ಕನ್ನಡ ನಾಟಕ ಸ್ಪರ್ಧೆಯಲ್ಲಿ ಶ್ರೇಷ್ಠ ನಟ ಪ್ರಶಸ್ತಿ.



ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳು
ಎಡನೀರುಮಠ, ಕಾಸರಗೋಡು

ಶ್ರೀ ಎಡನೀರು ಮಠಾಧೀಶರಾದ ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳವರು ಎಳವೆಯಿಂದಲೇ ಸಂಗೀತ, ಯಕ್ಷಗಾನ, ನಾಟಕ ಇತ್ಯಾದಿ ಕಲೆಗಳಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದವರು. ಹಾಗಾಗಿ ಯತಿಗಳಾದ ಅವರು ಸ್ವತಃ ಕಲಾವಿದರು, ಕಲಾ ಪೋಷಕರು, ಕಲಾರಾಧಕರೂ ಆಗಿ ಜನಪ್ರಿಯರಾಗಿದ್ದಾರೆ. 'ಸತ್ಯದರ್ಶಿ' ಕಾವ್ಯನಾಮದಲ್ಲಿ ನಾಟಕ ರಚನೆ.

ರಚನೆ : ***ಪೌರಾಣಿಕ ನಾಟಕಗಳು*** : ಮದನ ದಹನ (ಪಾರ್ವತಿ ಪರಿಣಯ), ಸತ್ಯಮೇವ ಜಯತೇ, ಛಲದಂಕ ಕೌರವ, ದೈತ್ಯಗುರು ಶುಕ್ರಾಚಾರ್ಯ.

ಸಾಮಾಜಿಕ ನಾಟಕಗಳು : ದೇವರು ದೊಡ್ಡವನು, ನಿಕುಲು ಎನ್ನನ್ ಮರಪಡೆ (ತುಳು).

**ಸುಂದರ ಮವ್ವಾರು**

ಅಂಚೆ : ಮವ್ವಾರು

ವಿದ್ಯಾಭ್ಯಾಸ : ಪಿಯುಸಿ

ನಟನೆ ಮತ್ತು ನಿರ್ದೇಶನ : ಸತ್ಯಹರಿಶ್ಚಂದ್ರ, ಹೊಯ್ಸಳೇಶ್ವರ ಕೆಯ್ಯೂರ್ ಮುಂತಾದವು. ಸುಮಾರು 15ಕ್ಕೂ ಮಿಕ್ಕಿ ಕನ್ನಡ ತುಳುನಾಟಕಗಳಲ್ಲಿ ನಟನೆ. ಮಲೆಯಾಳಂ ಕನ್ನಡ ಯಕ್ಷಗಾನ ಕಲಾವಿದ.

ಸಂಸ್ಥೆ : ಗಡಿನಾಡ ಕಲಾವಿದರು ಕಾಸರಗೋಡು, ಅಪೂರ್ವ ಕಲಾವಿದರು ಕಾಸರಗೋಡು, ಫ್ರೆಂಡ್ಸ್ ಕ್ಲಬ್ ಮಲ್ಲಾವರ, ಶಿವಶಕ್ತಿ ಮಲ್ಲಾವರ, ಪ್ರತಿಭಾ ಮುಳ್ಳೇರಿಯಾ, ಅಂಬಿಕಾ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್, ಷಡಾನನ ಮದ್ವಾರು.

ಇತರೆ : ವಿವಿಧ ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಕಾರ್ಯಕರ್ತನಾಗಿ ದುಡಿದ ಅನುಭವ.



**ಉಮೇಶ ಎಂ. ಸಾಲಿಯಾನ**
ಯು.ಎಸ್. ನಿಕೇತನ, ಪಾರೆಕಟ್ಟ ರಸ್ತೆ,
ರಾಮದಾಸನಗರ ಅಂಚೆ, ಕೂಡ್ಲು, ಕಾಸರಗೋಡು–671124
ದೂರವಾಣಿ: 09447023384, 7012780128

**ನಟನೆ** : ಗಾಂಧಾರಿ, ಮಾರೀಚನ ಬಂಧುಗಳು, ಹಯವದನ ಬಸ್ತಿ, ದೃಷ್ಟಿ, ಸತ್ಯಮೇವ ಜಯತೇ, ಬಂದ ಬಂದ ಸರದಾರ, ಸಾಂಬಶಿವ ಪ್ರಹಸನ, ಕತ್ತಲ ದಾರಿ ದೂರ, ರಾಜ್ಯದಾಹ ಹೀಗೆ ಹಲವಾರು ನಾಟಕಗಳಲ್ಲಿ ನಟನೆ.

**ನಿರ್ದೇಶನ** : ವಾರ್ಡ್ ನಂ. 6, ಬಾಡ್ಯಾದ ಇಲ್, ಕಯ್ಯೂರು (ಚಿರಸ್ಮರಣೆ), ಮಳೆನಿಂತ ಮೇಲೆ, ಪಕ್ಷಿಲೋಕದಲ್ಲೊಂದು ಪ್ರಸಂಗ, ಕುಹೂ ಕುಹೂ ಕೋಗಿಲೆ, ಪಂಚಭೂತ, ಸತ್ಯವಾನ್ ಸಾವಿತ್ರಿ, ನ್ಯಾಯಕ್ಕಾಗಿ ಕಾದಿರುವ ಭಾವ್ರಿ, ಬಂಗಾರಂ ಹೀಗೆ ಹಲವಾರು ನಾಟಕಗಳ ನಿರ್ದೇಶನ.

**ಸಂಘಟನೆ** : ಅಪೂರ್ವ ಕಲಾವಿದರು (ರಿ), ಅಧ್ಯಕ್ಷ, ಗಡಿನಾಡ ಕಲಾವಿದರು, ಕನ್ನಡ ರಂಗ ಸಂಸ್ಥೆಗಳ ಒಕ್ಕೂಟ, ದೆಹಲಿ ಕನ್ನಡ ಸಂಘ ಸದಸ್ಯ, ಕೇರಳ ತುಳು ಅಕಾಡೆಮಿಯ ಮಾಜಿ ಸದಸ್ಯ, ಕನ್ನಡ ಸಮನ್ವಯ ಸಮಿತಿಯ ಮಧೂರು ಘಟಕದ ಅಧ್ಯಕ್ಷ, ರಂಗ ಜಾಗೃತಿ ಪರಿಷತ್ತು ಪ್ರಧಾನ ಕಾರ್ಯದರ್ಶಿ.

**ಸಿನಿಮಾ, ಕಿರುತೆರೆ** : ವಾಸಂತಿ, ಪಜೀತಿ, ಚಿರಸ್ಮರಣೆ, ಓ ನನ್ನ ಬೆಳಕೆ, ಧಾರಾವಾಹಿಗಳಲ್ಲಿ, ಸಾಗರದೀಪ ಚಲನಚಿತ್ರದಲ್ಲಿ ನಟನೆ. ಮಂಗಳೂರು ಆಕಾಶವಾಣಿ ನಾಟಕಗಳಲ್ಲಿ ಪಾತ್ರ ನಿರ್ವಹಣೆ.

**ಪ್ರಶಸ್ತಿ/ಸನ್ಮಾನ** : ದೃಷ್ಟಿ, ಭಸ್ತಿ, ನಾಟಕಗಳಿಗೆ ಪ್ರಶಸ್ತಿ, ಅತ್ಯುತ್ತಮ ನಟನೆಗಾಗಿ ಸನ್ಮಾನ, ಚಿನ್ಮಯ ಮಿಷನ್‌ನಿಂದ ಸನ್ಮಾನ, ಕಾಸರಗೋಡು ಗಡಿನಾಡು ಉತ್ಸವದಲ್ಲಿ ಕನ್ನಡ ರಂಗಭೂಮಿ ಸೇವೆಗಾಗಿ ಪ್ರಶಸ್ತಿ, ಮಾನವ ಸೌಹಾರ್ದ ಪ್ರಶಸ್ತಿ, ಕಣ್ಣೂರು ವಿಶ್ವವಿದ್ಯಾಲಯದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ನ್ಯಾಯಕ್ಕಾಗಿ ಕಾದಿರುವ ಬಾವ್ರಿ, ಮಳೆ ನಿಂತ ಮೇಲೆ ನಾಟಕಗಳಿಗೆ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ.

**ಇತರ** : ಕಂಪೆನಿ ನಾಟಕೋತ್ಸವ, ಬಹುಭಾಷಾ ನಾಟಕೋತ್ಸವ, ರಂಗಗೀತ ಶಿಬಿರ, ಮಕ್ಕಳ ನಾಟಕ ಶಿಬಿರ, ಮೂಕಾಭಿನಯ

ಪ್ರದರ್ಶನ, ಅಂತರ್ ರಾಜ್ಯ ನಾಟಕಗಳಲ್ಲಿ ಪಾಲ್ಗೊಳ್ಳುವಿಕೆ, ಕಲ್ಕತ್ತಾದ ರವೀಂದ್ರನಾಥ ಠಾಗೂರ್‌ರವರ ರವೀಂದ್ರ ಸದನದಲ್ಲಿ ನಿರ್ದೇಶನದಲ್ಲಿ ಮೂರು ಬಾರಿ ನಾಟಕ ಪ್ರದರ್ಶನ. ಶ್ರೇಷ್ಠ ಸಾಹಿತಿ ಬರಹಗಾರ ನಿರಂಜನರವರ ಚಿರಸ್ಮರಣೆ ಕಾದಂಬರಿಯನ್ನು ಕನ್ನಡ ಹಾಗೂ ತುಳು ಭಾಷೆಯಲ್ಲಿ ನಾಟಕ ರೂಪಾಂತರಿಸಿ ನಿರ್ದೇಶನ. ಉತ್ತರ ಕರ್ನಾಟದಲ್ಲಿ ನೆರೆ ಹಾವಳಿಯಾದಾಗ ಸಾಂತ್ವನ ರಂಗ ಯಾತ್ರೆಯ ಮೂಲಕ 'ಮಳೆ ನಿಂತ ಮೇಲೆ' ನಾಟಕ ನಿರ್ದೇಶಿಸಿ ಬೀದಿ ಬೀದಿಗಳಲ್ಲಿ ನಾಟಕ ಮಾಡಿ ಮುಖ್ಯಮಂತ್ರಿಗಳ ನೆರೆ ಪರಿಹಾರ ನಿಧಿಗೆ ಅರ್ಧ ಲಕ್ಷಕ್ಕೂ ಅಧಿಕ ಹಣವನ್ನು ನೀಡಿದ್ದಾರೆ. ರಂಗ ತರಬೇತಿ ಶಿಬಿರ, ಸಾಂಸ್ಕೃತಿಕ ಸಂಘಟನೆ, ನಾಟಕ ನಿರ್ದೇಶನ, ಅಭಿನಯ ಹೀಗೆ ರಂಗಭೂಮಿ ಹಾಗೂ ಸಾಹಿತ್ಯ, ಸಾಂಸ್ಕೃತಿಕವಾಗಿ ಸುಮಾರು ಮೂರು ದಶಕಗಳಿಂದ ಸೇವೆ. ಕೇರಳದಲ್ಲಿ ಸ್ಥಾಪನೆಗೊಂಡ ಕೇರಳ ತುಳು ಅಕಾಡೆಮಿಯ ಸದಸ್ಯರಾಗಿ 'ತೆಂಬೆರೆ' ತ್ರೈಮಾಸಿಕದ ಸಂಪಾದಕರಾಗಿ ದುಡಿದಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ಕೊಡಗು, ಉಡುಪಿ, ದಕ್ಷಿಣ ಕನ್ನಡ, ಕಾಸರಗೋಡು ಈ ಎಲ್ಲಾ ಜಿಲ್ಲೆಗಳ ರಂಗ ಚಟುವಟಿಕೆಗಳಿಗೆ ಸಾರಥ್ಯವನ್ನು ವಹಿಸಿಕೊಳ್ಳುತ್ತಿದ್ದಾರೆ. ಉಡುಪಿ ಜಿಲ್ಲಾ ನಾಟಕೋತ್ಸವ, ಕೇರಳದ ತ್ರಿಶೂರಿನಲ್ಲಿ ಹೊರನಾಡ ನಾಟಕೋತ್ಸವ, ದ.ಕ. ಜಿಲ್ಲಾ ನಾಟಕೋತ್ಸವ, ರಂಗ ನಿರಂತರರು ಕಾರ್ಯಕ್ರಮ, ರಸಗ್ರಹಣ ಶಿಬಿರ, ಕಾಸರಗೋಡು ಬಹುಭಾಷಾ ನಾಟಕೋತ್ಸವ, ಕಾರ್ಕಳ, ಮಂಗಳೂರು, ಸಾಲೆತ್ತೂರು, ಬೈಂದೂರು, ಕುಶಾಲನಗರ, ಬಂದ್ಯೋಡು ಮುಂತಾದ ಕಡೆಗಳಲ್ಲಿ ರಂಗ ತರಬೇತಿ ಶಿಬಿರ, ಪರಿಶಿಷ್ಠ ಜಾತಿ ಮತ್ತು ಪಂಗಡದವರಿಗೆ ರಂಗ ತರಬೇತಿ ಶಿಬಿರದ ಆಯೋಜನೆ ಹಾಗೂ ಕನ್ನಡ ಕನಕ ಸಂಸ್ಕೃತಿ ಉತ್ಸವವನ್ನು ನಡೆಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಕಾರದಲ್ಲಿ ಪ್ರತಿ ತಿಂಗಳ ಎರಡನೇ ಶನಿವಾರ ಕನ್ನಡ ಚಿಂತನೆ ಕಾರ್ಯಕ್ರಮ ನಡೆಸುತ್ತಿದ್ದಾರೆ.

**ಜಯಕರ ರೈ**



ಸುಶೀಲ್ ನಿವಾಸ್, ಪೆರ್ಮನ್ನೂರು, ಪಂಡಿತ್ ಹೌಸ್
ತೊಕ್ಕೋಟು ಮಂಗಳೂರು
**ದೂರವಾಣಿ:** 09945336121
**ನಟನೆ:** ಉಡಲೇ ಮೋಕೆದ ಕಡಲ್, ಪ್ರೀತಿ ಉಪ್ಪಡ್
**ಇತರ:** 1992 ರಂಗ ಕಲಾವಿದರಾಗಿ ಪ್ರಕೃತಿ ಕಲಾವಿದರು, ಮಂಗಳೂರು ಸಂಸ್ಥೆಗಳಲ್ಲಿ ಪೌರಣಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ 24 ವರ್ಷ ನಿರಂತರ ಅಭಿನಯ. ಪ್ರಸ್ತುತ ವೈಷ್ಣವಿ ಕಲಾವಿದರು ಮಂಜೇಶ್ವರ ತಂಡದಲ್ಲಿ 5 ವರ್ಷಗಳಿಂದ ಕಲಾಸೇವೆಯನ್ನು ಮಾಡುತ್ತಿದ್ದಾರೆ.

**ಭರತ್ ರಾಜ್ ಪಿ.**



ಶ್ರೀ ಆದಿಮಾಯೆ ನಿಲಯ, ಕಳಿಯೂರು,
ಕಡಂಬಾರ್ ಪೋಸ್ಟ್, ವಯ ಮಂಜೇಶ್ವರ –671323
ಕಾಸರಗೋಡು
**ದೂರವಾಣಿ :** 09880190861
**ನಟನೆ :** ಕಣ್ಣಾಮುಚ್ಚಾಲೆ, ಪ್ರೀತಿ ಉಪ್ಪಡ್, ನೆನೆಪು ದೀಲೆ, ಬಂಗಾರ್ ಕಂಡನಿ
**ಇತರ:** ಪ್ರಸ್ತುತ ಐದು ವರ್ಷದಿಂದ ವೈಷ್ಣವಿ ಕಲಾವಿದರು ಮಂಜೇಶ್ವರ ಎಂಬ ನಾಟಕ ತಂಡದಲ್ಲಿ ಕಲಾವಿದರಾಗಿದ್ದಾರೆ. ಯಕ್ಷಗಾನದಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸಿದ್ದಾರೆ.


**ಪಿ. ದಯಾನಂದ ಮಾಡ**



ಶ್ರೀ ದೇವಿ ನಿಲಯ, ಆಗ್ರಾಳ, ಮೂಂಡಬೈಲ್ ಪೋಸ್ಟ್,
ವಯ ಮಂಜೇಶ್ವರ – 671323, ಕಾಸರಗೋಡು
**ದೂರವಾಣಿ:** 09495370729
**ನಟನೆ:** ಕೋಟಿ ಚೆನ್ನಯ, ಸತ್ಯ ಹರಿಶ್ಚಂದ್ರ, ಅಮ್ಮ ಶ್ರೀದೇವಿ, ಉಡಲೇಮೋಕೆದ ಕಡಲ್, ನೆನೆಪು ದೀಲೆ, ಕಣ್ಣಾಮುಚ್ಚಾಲೆ, ಪ್ರೀತಿ ಉಪ್ಪಡ್
**ಇತರ:**1990 ರಂಗ ಕಲಾವಿದರಾಗಿ ಉಡಲ್ ಕಲಾವಿದರು ಜೋಡುಕಲ್ಲು, ಶಾರದಾ

ಕಲಾ ಆರ್ಟ್ಸ್ ಮಂಜೇಶ್ವರ, ನಂದೇಕೇಶ್ವರ ನಾಟಕ ಸಂಘ ಮಂಗಳೂರು ಎಂಬೀ ಹಲವಾರು ಸಂಸ್ಥೆಗಳಲ್ಲಿ ಅಭಿನಯಿಸಿದ್ದಾರೆ. ಪ್ರಸ್ತುತ ವೈಷ್ಣವಿ ಕಲಾವಿದರು ಮಂಜೇಶ್ವರ ತಂಡದಲ್ಲಿ ಕಲಾಸೇವೆಯನ್ನು ಮಾಡುತ್ತಿದ್ದಾರೆ.

## ದೇವದಾಸ ಶೆಟ್ಟಿ ಯಂ.



ಮೊನೀಷ್ ನಿಲಯ, ತೂಮಿನಾಡು, ಕುಂಜತ್ತೂರು ಪೋಸ್ಟ್,
ವಯ ಮಂಜೇಶ್ವರ –671323, ಕಾಸರಗೋಡು
**ದೂರವಾಣಿ:** 09633039674

**ನಟನೆ:** ಜೋಕೆದ ಮೋಕೆ, ಮಂಗಳ ಜ್ಯೋತಿ ಪ್ರೀತಿ ಉಪ್ಪಡ್, ನನೆಪು ದೀಲೆ, ಅಮ್ಮ ಶ್ರೀದೇವಿ

**ರಚನೆ:** ಪೊರ್ತು ಆತಿಜಿ

**ಇತರ:** ಬಾಲನಟನಾಗಿ ಅಭಿನಯದ ಮೂಲಕ ರಂಗ ಪ್ರವೇಶಗೈದರು. ನಂದಿಕೇಶ್ವರ, ನವ್ಯ ಕಲಾವಿದರು ಕನ್ನಟಿಪಾರೆ, ಪ್ರಸ್ತುತ ವೈಷ್ಣವಿ ಕಲಾವಿದರು ಮಂಜೇಶ್ವರ ತಂಡದಲ್ಲಿ ಕಲಾಸೇವೆಯನ್ನು ಮಾಡುತಿದ್ದಾರೆ.

## ರಾಧಾಕೃಷ್ಣ ಆಚಾರ್ಯ ಕುಂಬಳೆ



ಗಣೇಶ್ ಕೃಪಾ, ಪಾಂಡ್ಯಡ, ಕಯ್ಯಾರು ಪೋಸ್ಟ್
ವಯ ಉಪ್ಪಳ – 671322, ಕಾಸರಗೋಡು

**ರಂಗ ಚಟುವಟಿಕೆಗಳು:** ರಂಗ ಕಲಾವಿದರಾಗಿ ಸಂಧ್ಯಾ ಸಂಗಮ ಕುಂಬಳೆ ತಂಡದ ಮೂಲಕ ರಂಗಪ್ರವೇಶಿಸಿ ಚೌತಿ ಚಂದಿರ ನಾಟಕದಲ್ಲಿ ಅಭಿನಯಿಸಿ ವಿಕ್ರಮ ಫ್ರೆಂಡ್ಸ್ ಕ್ಲಬ್ ಬಂಬ್ರಾಣ, ದುರ್ಗಾಪರಮೇಶ್ವರಿ ಯುವಕ ಸಂಘ ಬಾಡೂರು, ಶಾರದಾ ಆರ್ಟ್ಸ್ ಮಂಜೇಶ್ವರ, ನಂದಿಕೇಶ್ವರ ನಾಟಕ ಸಂಘ ಮಂಗಳೂರು, ವೈಷ್ಣವಿ ಕಲಾವಿದರು ಮುಂತಾದ ನಾಟಕ ತಂಡಗಳಲ್ಲಿ ಪಾತ್ರಗಳನ್ನು ನಿರ್ವಹಿಸಿದ್ದಾರೆ.

## ರವಿ ಎಂ.ಎಸ್.



ಸಸಿಗೋಳಿ ಮನೆ, ಕೊಡ್ಲಮೊಗರು ಪೋಸ್ಟ್,
ವಯ ಮಂಜೇಶ್ವರ – 671323, ಕಾಸರಗೋಡು
**ದೂರವಾಣಿ:** 09539861472

**ರಂಗ ಚಟುವಟಿಕೆಗಳು :** ರಂಗ ಕಲಾವಿದರಾಗಿ ರಂಗ ಕಲಾನಿಧಿ ಸುಂಕದಕಟ್ಟೆ, ಶಾರದಾ ಕಲಾ ಆರ್ಟ್ಸ್ ಮಂಜೇಶ್ವರ, ನಂದಿಕೇಶ್ವರ ನಾಟಕ ಸಂಘ ಮಂಗಳೂರು, ಪ್ರಸ್ತುತ ವೈಷ್ಣವಿ ಕಲಾವಿದರು ಮಂಜೇಶ್ವರ ಎಂಬೀ ಸಂಸ್ಥೆಗಳಲ್ಲಿ ಅಭಿನಯಿಸಿದ್ದಾರೆ.

## ಶ್ರೀಮತಿ ಶೋಭಾ ರೈ



ನಂದಿಕೇಶ್ವರ, ರೈ ಕಂಪೌಡ್, ತಚ್ಚನಿ ದೇವಿಪುರ ರಸ್ತೇ,
ಅಂಚೆ: ತಲಪಾಡಿ, ಮಂಗಳೂರು ದ.ಕ.
**ದೂರವಾಣಿ :** 8277009805

**ಹವ್ಯಾಸ:** ರಂಗನಟಿ, ಕಿರುತೆರೆ ನಟಿ, ಚಲನಚಿತ್ರ ನಟಿ

**ಇತರ :** ತನ್ನ ತಂದೆಯ ಸಂಸ್ಥೆಯಾದ ಶ್ರೀ ನಂದಿಕೇಶ್ವರ ನಾಟಕ ಸಂಘ, ಮಂಗಳೂರು ಇಲ್ಲಿ ಅಭಿನಯ ಕಲಿತು ಸಂಸ್ಥೆಯ 100ಕ್ಕೂ ಹೆಚ್ಚು ನಾಟಕಗಳಲ್ಲಿ ಹಿನ್ನಲೆ ಗಾಯಕಿಯಾಗಿ ದುಡಿದು 2005ನೇ ಇಸವಿಯಲ್ಲಿ ರಂಗನಟಿಯಾಗಿ ಸುಮಾರು 40ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುದ್ದಾರೆ. ನಂತರ ತುಳು ರಂಗಭೂಮಿ ಪ್ರವೇಶಿಸಿ ನೆನೆಪು ದೀಲೆ, ಕಣ್ಣಾಮುಚ್ಚಲೆ, ಬಯ್ಯಮಲ್ಲಿಗೆ ಮುಂತಾದ ನಾಟಕಗಳಲ್ಲಿ ಶಾರದಾ ಆರ್ಟ್ಸ್ ಮಂಜೇಶ್ವರ ವೈಷ್ಣವಿ ಕಲಾವಿದರು ಮಂಜೇಶ್ವರ ತಂಡದಲ್ಲಿ ಅಭಿನಯಿಸುತ್ತಿದ್ದಾರೆ.

## ಗಂಗಾಧರ ದೇವಾಡಿಗ



ಶ್ರೀರಾಮ ಮೂರ್ತಿ, ಕುತ್ತಾರ್ ಮಜಲ್ ತೋಟ,
ಅಂಚೆ: ಮುನ್ನೂರು, ಮಂಗಳೂರು ದ.ಕ.
**ದೂರವಾಣಿ:** 9945336121

ರಂಗ ಚಟುವಟಿಕೆಗಳು: ರಂಗ ಕಲಾವಿದರಾಗಿ ಬೊಳ್ಳಿ ಕಲಾವಿದರು ಮಂಗಳೂರು ಸಂಸ್ಥೆಗಳಲ್ಲಿ ಲಂಡನ್‌ದ ಮಂಡೆ, ಅಜ್ಜಿಗ್ ಎಲ್ರ್ಾ ಇಜ್ಜಿ, ನಮ ಎನ್ನಿಲೆಕ್ಕ ಇಜ್ಜಿ ಮುಂತಾದ ನಾಟಕಗಳಲ್ಲಿ ಅಭಿನಯಿದ್ದಾರೆ.

**ಕವಿತ ರೈ**



ಕಿಕ್ಕೆರಿ ಹೋಬಳಿ, ಕೃಷ್ಣಪುರ, ಕೆ.ಆರ್.ಪೇಟೆ,

ಅಂಚೆ: ಹಿರಿಕಲಾಯಿ, ಮಂಡ್ಯ ಜಿಲ್ಲೆ –571423

ದೂರವಾಣಿ: 8197750801

**ಹವ್ಯಾಸ:** ರಂಗನಟಿ, ಕಿರುತೆರೆ ನಟಿ, ಚಲನಚಿತ್ರ ನಟಿ

**ಇತರ :** ಶ್ರೀ ನಂದಿಕೇಶ್ವರ ನಾಟಕ ಸಂಘ, ಮಂಗಳೂರು ಇಲ್ಲಿ ಅಭಿನಯ ರಂಗನಟಿಯಾಗಿ ಸುಮಾರು 40ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ತುಳು ರಂಗಭೂಮಿ ಪ್ರವೇಶಿಸಿ ನೆನೆಪು ದೀಲೆ, ಕಣ್ಣಾ ಮುಚ್ಚಲೆ, ಬಯ್ಯಮಲ್ಲಿಗೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**ಲೋಹಿತ್**



ಮುಗುಳಿ ಮನೆ, ಕೊಡ್ಲಮೊಗರು ಅಂಚೆ,

ವಯ ಮಂಜೇಶ್ವರ –671323, ಕಾಸರಗೋಡು

**ದೂರವಾಣಿ :**09656265210

**ಇತರ :** ರಂಗವಿನ್ಯಾಸ ಕಲಾವಿದರಾಗಿ ಶಾರದಾ ಆರ್ಟ್ಸ್ ಮಂಜೇಶ್ವರ, ವೈಷ್ಣವಿ ಕಲಾವಿದರು ಮಂಜೇಶ್ವರ ನಾಟಕ ತಂಡದಲ್ಲಿ ಕಲಾ ಸೇವೆ ಸಲ್ಲಿಸುತ್ತಿದ್ದಾರೆ.

**ಚೈತ್ರ ಪೂಜಾರಿ**




ನೀತಿ ನಗರ, ಶಕ್ತಿನಗರ ಪೋಸ್ಟ್, ನೀರಿನ ಟ್ಯಾಂಕ್ ಹತ್ತಿರ,

ಮಂಗಳೂರು

**ದೂರವಾಣಿ:** 07348847188

**ರಂಗ ಚಟುವಟಿಕೆ:** ಕಣ್ಣಾಮುಚ್ಚಾಲೆ, ಪ್ರೀತಿ ಉಪ್ಪಡ್, ನೆನೆಪು ದೀಲೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.




**ರಾಘವೇಂದ್ರ ರೈ**

ನಂದಿಕೇಶ್ವರ, ರೈ ಕಂಪೌಂಡ್, ತಚ್ಚಾಣಿ, ದೇವಿಪುರ ರಸ್ತೆ,
ತಲಪಾಡಿ ಅಂಚೆ

**ದೂರವಾಣಿ :** 08748029258

**ಹವ್ಯಾಸ :** ರಂಗಕಲಾವಿದ, ಕಿರುತೆರೆ ನಟ, ಚಲನಚಿತ್ರ ನಟ

**ರಂಗ ಚಟುವಟಿಕೆ** : ತನ್ನ ತಂದೆಯ ಸಂಸ್ಥೆಯಾದ ಶ್ರೀ ನಂದಿಕೇಶ್ವರ ನಾಟಕ ಸಂಘ, ಮಂಗಳೂರು ಇಲ್ಲಿ ಅಭಿನಯ ಕಲಿತು ಸಂಸ್ಥೆಯ 100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ತುಳು ರಂಗಭೂಮಿ ಪ್ರವೇಶಿಸಿ ನೆನೆಪು ದೀಲೆ, ಕಣ್ಣಾ ಮುಚ್ಚಲೆ, ಬಯ್ಯಮಲ್ಲಿಗೆ ಮುಂತಾದ ನಾಟಕಗಳಲ್ಲಿ ಪ್ರಸ್ತುತ ವೈಷ್ಣವಿ ಕಲಾವಿದರು ಮಂಜೇಶ್ವರ ತಂಡದಲ್ಲಿ ಅಭಿನಯಿಸುತ್ತಿದ್ದಾರೆ.



**ರಾಜೇಶ್ ಮಂಜೇಶ್ವರ**

ಪೊಕ್ಕಿ ಮನೆ, ರೈಲ್ವೆ ನಿಲ್ದಾಣದ ಬಳಿ, ಉದ್ಯಾವರ,
ವಯ ಮಂಜೇಶ್ವರ, ಕಾಸರಗೋಡು

**ದೂರವಾಣಿ :** 09747062998

**ರಚನೆ:** ಅನುಪಮ, ನೆನಪು ದೀಲೆ, ಕಣ್ಣುಮುಚ್ಚಾಲೆ, ನಿಕ್ಲೆ ಪನ್ಲೆ, ನನ ತೂವೊಡು

**ಅಭಿನಯ:** ಸ್ತ್ರೀ ಪಾತ್ರಧಾರಿ

**ಹವ್ಯಾಸ :** ವರ್ಣಾಲಂಕಾರ

**ರಂಗ ಚಟುವಟಿಕೆ:** ಬಾಲನಟನಾಗಿ ರಂಗ ಪ್ರವೇಶ. 150 ಕ್ಕೂ ಮಿಕ್ಕ ಸಮಾಜಿಕ ಮತ್ತು ಪೌರಾಣಿಕ ನಾಟಕಗಳಲ್ಲಿ ಸ್ತ್ರೀ ಪಾತ್ರಗಳಲ್ಲಿ ಅಭಿನಯ. 13 ವರ್ಷಗಳಿಂದ ಮೇಕಪ್ ಕಲಾವಿದನಾಗಿ ಕಲಾ ಸೇವೆ.

## ಪಿ. ದಿವಾಕರ ಅಶೋಕ ನಗರ

ಕೋಟೆಕಣಿ ರಸ್ತೆ, ಕೋಟೆಕಣಿ, ಕಾಸರಗೋಡು

ದೂರವಾಣಿ : 09495104563

ಹವ್ಯಾಸ : ರಂಗಗೀತೆ, ಬೆಳಕು ತಜ್ಞ, ನಟ

ಸಂಸ್ಥೆ : ಗಡಿನಾಡ ಕಲಾವಿದರು ಕಾಸರಗೋಡು

ನಟನೆ : ಹಯವದನ, ಸಾಂಬಶಿವ ಪ್ರಹಸನ, ಬಾಡೈದ ಇಲ್ಲೆ,

ಬೋಡ್ಹಾಂಡಪ್ಪ ಬುಡೆದಿ

ಇತರ: ರಂಗ ಸಜ್ಜಿಕೆ ಮತ್ತು ಬೆಳಕಿನ ಸಂಯೋಜನೆ ನೀಡಿದ ಅಗ್ನಿ ಮತ್ತು ಮಳೆ ನಾಟಕಕ್ಕೆ ಪ್ರಥಮ ಪ್ರಶಸ್ತಿ. ಸುಗಮ ಸಂಗೀತ ಮತ್ತು ವಿವಿಧ ಸಾಂಸ್ಕೃತಿಕ ರಂಗಗಳಲ್ಲಿ ತೊಡಗಿಸಿಕೊಂಡಿದ್ದಾರೆ.

## ಜಯಶ್ರೀ ದಿವಾಕರ



ಕೋಟೆಕಣಿ ರಸ್ತೆ, ಕೋಟೆಕಣಿ, ಕಾಸರಗೋಡು

ದೂರವಾಣಿ : 09446659905

ಹವ್ಯಾಸ : ನಟನೆ, ನೃತ್ಯ, ಯಕ್ಷಗಾನ

ಸಂಸ್ಥೆ : ಗಡಿನಾಡ ಕಲಾವಿದರು ಕಾಸರಗೋಡು

ನಟನೆ: ಹಯವದನ, ಸಾಂಬಶಿವ ಪ್ರಹಸನ, ಬಾಡೈದ ಇಲ್ಲೆ,

ಬೋಡ್ಹಾಂಡಪ್ಪ ಬುಡೆದಿ, ಕತ್ತಲೆ ದಾರಿ ದೂರ, ಭಗವದಜ್ಜುಕೀಯ, ಬಸ್ತಿ, ಸತ್ಯಮೇವ ಜಯರೇ, ಗಾಂಧಾರಿ, ರಾಜ್ಯದಾಹ, ಅಂಧಯುಗ, ಕಲ್ಕುಡ ಕಲ್ಲುರ್ಟಿ

ಇತರ: ಬಾಲನಟಿಯಾಗಿ ಪ್ರಶಸ್ತಿ ನಾಟಕದಲ್ಲಿ ಅಭಿನಯ. ಗಡಿನಾಡ ಕಲಾವಿದರು ತಂಡದ ಹವ್ಯಾಸಿ ರಂಗ ಸಂಸ್ಥೆಯಲ್ಲಿ ಸದಸ್ಯೆಯಾಗಿ ತಂಡವು ಪ್ರಾಯೋಜಿಸಿದ ಹಲವು ನಾಟಕಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯ. ತಾನು ಅಭಿನಯಿಸಿದ ಹಯವದನ, ಬಸ್ತಿ ನಾಟಕಗಳಿಗೆ ಪ್ರಶಸ್ತಿ.

## ಶಶೀಧರ್ ಎದ್ರುತ್ತೋಡು



ಅಂಚೆ: ಎಡನೀರು, ಕಾಸರಗೋಡು

ದೂರವಾಣಿ : 09847012974

**ರಚನೆ, ನಿರ್ದೇಶನ ಮತ್ತು ನಟನೆ :** 'ಆಕಾಶಪ್ಪರವಗಳ್', 'ಚಿಲಂಗಯುಡೆ ನಾದಂ', 'ಮೂನ್ನಾಮದೊರಾಳ್', ಪಚ್ಚಮರಂ (ಮಲಯಾಳ), 'ಸತ್ಯೊದ ಬೊಳ್ಪು', 'ಗತಿದಾಂತಿನ ಮಗೆ' (ತುಳು), 'ಕಡಲು', 'ಹುಲಿ–ದನ', 'ಅಂತರಾಂತರಂಗ' (ಕನ್ನಡ), ಅನಾಫೆಲಿಸ್ (ಕಿರುಚಿತ್ರ).

**ಇತರ:** ಕಣ್ಣೂರು ಯುನಿವರ್ಸಿಟಿ ಕಲೋತ್ಸವ, ಶಾಲಾ ಕಲೋತ್ಸವಗಳಲ್ಲಿ ತನ್ನ ನಾಟಕಗಳು ಮನ್ನಣೆಯನ್ನು ಪಡೆದಿರುತ್ತದೆ. ಕೇರಳ ಹಾಗೂ ಕರ್ನಾಟಕಗಳಲ್ಲಿ ಸುಮಾರು ಬೀದಿ ನಾಟಕಗಳನ್ನೂ, ನಾಟಕ ತರಬೇತಿ ಶಿಬಿರಗಳನ್ನೂ ನಡೆಸಿದ ಇವರು ಕೇರಳ ಯೂತ್ ವೆಲ್ಫೇರ್ ಬೋರ್ಡ್‌ನ ಸಹಕಾರದೊಂದಿಗೆ ಜಿಲ್ಲೆಯಾದ್ಯಂತ ನೂರಕ್ಕಿಂತ ಹೆಚ್ಚು ವೇದಿಕೆಯಲ್ಲಿ ಸುಮಾರು ಇಪ್ಪತ್ತು ಕಲಾಗಾರರನ್ನೊಳಗೊಂಡ 'ಲಹರಿ ವಿರುದ್ಧ ಕಲಾ ಜಾಥಾ' ನಡೆಸಿದ್ದು, ರಾಜ್ಯಮಟ್ಟದಲ್ಲಿಯೇ ಪ್ರಶಂಸನೆಗೆ ಪಾತ್ರವಾಗಿತ್ತು. ಮಾತ್ರವಲ್ಲದೆ ತಿರುವನಂತಪುರದಲ್ಲಿ ನಡೆದ ರಾಜ್ಯಮಟ್ಟದ ರಂಗ ತರಬೇತಿ ಶಿಬಿರವಾದ **'ನಾಟಿಕ'**ಕ್ಕೆ ಕಾಸರಗೋಡಿನಿಂದ ಆಯ್ಕೆಗೊಂಡ ಏಕ ತಂಡದ ಮುಖ್ಯಸ್ಥ ಶ್ರೀ ಶಶೀಧರ್‌ರವರು. ಇವರ ರಂಗ ತರಬೇತಿಯಲ್ಲಿ ನಿರ್ಮಾಣಗೊಂಡ 'ಕರ್ಬಲ' ಎಂಬ ನಾಟಕವು ಕಾಸರಗೋಡಿನ ಹೆಮ್ಮೆಯನ್ನು ಹಿಡಿದೆತ್ತಿತ್ತು. ಮಾತ್ರವಲ್ಲದೆ ಅಂದಿನ ಜಿಲ್ಲಾಧಿಕಾರಿ ಶ್ರೀ ಪಿ.ಎಸ್. ಮಹಮ್ಮದ್ ಸಗೀರ್‌ರವರಿಂದ ಉತ್ತಮ ಕಲಾಪ್ರತಿಭೆಗಿರುವ ಪ್ರಶಸ್ತಿಯನ್ನೂ, ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿ ನೇತೃತ್ವದಲ್ಲಿ ಕಾಸರಗೋಡಿನಲ್ಲಿ ನಡೆದ ಬಹುಭಾಷಾ ನಾಟಕೋತ್ಸವದಲ್ಲಿ ರಂಗ ಗೌರವಾರ್ಪಣೆಯನ್ನೂ ಪಡೆದಿರುತ್ತಾರೆ. ಈಗಾಗಲೇ ನಾಟಕರಂಗದ ಜೊತೆಯಲ್ಲಿ ಸಿನಿಮಾರಂಗದಲ್ಲಿಯೂ ತನ್ನ ಪ್ರಯತ್ನವನ್ನು ಸಾಧಿಸಲು ಹೊರಟಿದ್ದಾರೆ. ದೇವದಾಸ್ ಕಾಪಿಕಾಡ್‌ರವರ 'ದಂಡ್', 'ಚಂಡಿಕೋರಿ' ಹಾಗೂ 'ಗುಡ್ಡೆದ ಭೂತ' ಮುಂತಾದ ತುಳು ಚಿತ್ರದಲ್ಲಿ ದುಡಿದಿರುತ್ತಾರೆ. ಪ್ರಸ್ತುತ ಮಲಯಾಳ ಚಿತ್ರದಲ್ಲಿಯೂ ದುಡಿಯುತ್ತಿದ್ದಾರೆ.



**ಉದಯ ಎ. ಸಾರಂಗ**
ಸಾಂತಪದವು ಮನೆ, ಅಡ್ಕನಡ್ಕ ಅಂಚೆ
ಎಣ್ಮಕಜೆ ಗ್ರಾಮ, ಮಂಜೇಶ್ವರ ತಾಲೂಕು
ಕಾಸರಗೋಡು ಜಿಲ್ಲೆ – 671552
ದೂರವಾಣಿ: 9048284554

ನಾಟಕ ರಚನೆಗಳು : ಮಾಯಪಿಟ್ಟಿಗೆ, ಶಿಕಾರಿ ಪಕ್ಷಿಗಳು, ಅಜ್ಜನ ಗೂಡು, ಖೈದಿ, ರಹಸ್ಯ ಕೋಟೆ, ದಲಿಯನ ಡೋಲು, ಬೆಟ್ಟದ ಗಿಳಿ, ಭೂತಕನ್ನಡಿ, ಹುಚ್ಚು ನಾಯಿಗಳು, ಮುಖವಾಡ ಆಕಾರ ಮತ್ತು ವಿಕಾರ


ನಿರ್ದೇಶನ : ತೆಲಿಕೆದುಲಯಿ, ನಾಗನಡೆ, ಚಂದ್ರಹಾಸ, ಕಪ್ಪು ಕಾಗೆ, ಮಾಯಾಮೃಗ, ನೆರಳು ಮೊದಲಾದ ಕನ್ನಡ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಇತರ : ಅಪೂರ್ವ ಕಲಾವಿದರು ಕಾಸರಗೋಡು, ಪ್ರೇರಣಾ ರಂಗತಂಡ ಮಂಜೇಶ್ವರ, ಸೃಜನಾ ಪೆರ್ಲ, ರಂಗಸಂಗಮ ಕಾಟುಕುಕ್ಕೆ, ನೇತಾಜಿ ಪೆರ್ಲ, ಸಾಯಿ ಕಲಾವಿದರು ಕಿಳಿಂಗಾರು.


ಪ್ರೋತ್ಸಾಹ ನೀಡಿದ ಹಿರಿಯರು : ಉಮೇಶ್ ಸಾಲಿಯಾನ್ ಕಾಸರಗೋಡು, ಮುರಹರಿ ಪಿ. ನಿನಾಸಂ, ಮೂರ್ತಿ ದೇರಾಜ್, ಶಶಿಧರ್ ಎದುರ್ತೋಡು, ಜಯ ಮಣಿಂಪಾರೆ, ಲೋಕನಾಥ ಶೆಟ್ಟಿ, ಪದ್ಮನಾಭ ಚಕ್ಕಿತ್ತಡ್ಕ, ರಾಂ ಭಟ್ ಗೋಳಿತ್ತಡ್ಕ, ರಾಮಕೃಷ್ಣ ರೈ, ಶ್ರೀಧರ ಮಣಿಯಾಣಿ, ಆನಂದ ಅಡ್ಡಸ್ಥಳ, ಪ್ರಕಾಶ್ ಕುಡುಪು ಮುಂತಾದ ರಂಗಕರ್ಮಿಗಳು ನನ್ನ ಸಾಧನೆಯ ಜೊತೆಗಿದ್ದು ಪ್ರೋತ್ಸಾಹ ನೀಡಿದ್ದಾರೆ.



ಕರ್ನಾಟಕ ನಾಟಕ ಅಕಾಡೆಮಿಯ ಬಹುಭಾಷಾ ನಾಟಕೋತ್ಸವ, ಕಾಸರಗೋಡಿನಲ್ಲಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ (ಮಾಸ್ತರ್) ಉದ್ಘಾಟಿಸಿದರು. ಕಾಸರಗೋಡು ಶಾಸಕರಾದ ಎನ್.ಎ. ನೆಲ್ಲಿಕುನ್ನು, ಜಿಲ್ಲಾಧಿಕಾರಿ ಜೀವನ್ ಬಾಬು ಉಪಸ್ಥಿತರಿದ್ದರು.



ಕೇರಳದ ತ್ರಿಶೂರಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿ ನೇತೃತ್ವದಲ್ಲಿ ನಡೆದ ಹೊರನಾಡು ನಾಟಕೋತ್ಸವವನ್ನು ಹಿರಿಯ ಸಾಹಿತಿಗಳಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರು ಉದ್ಘಾಟಿಸುತ್ತಿರುವುದು.



ಕಾಸರಗೋಡು ಅಪೂರ್ವ ಕಲಾವಿದರ ಸಾಂತ್ವನ ರಂಗಯಾತ್ರೆಯಲ್ಲಿ ಪ್ರದರ್ಶಿಸಿದ ಉಮೇಶ ಎಂ. ಸಾಲಿಯಾನ ನಿರ್ದೇಶನದ 'ಮಳೆ ನಿಂತ ಮೇಲೆ' ನಾಟಕದ ದೃಶ್ಯ.


ಕಾಸರಗೋಡು ಚಿನ್ನಾ ನಿರ್ದೇಶನದ ಅಪೂರ್ವ ಕಲಾವಿದರು ಅಭಿನಯಿಸಿದ ಲಾರಿನಾಟಕದ ದೃಶ್ಯ



ಚಿನ್ನಾ ನಿರ್ದೇಶನದ ಮೂಕಾಭಿನಯ ಪ್ರದರ್ಶನದ ದೃಶ್ಯ



ಅಪೂರ್ವ ಕಲಾವಿದರು ಸಾದರಪಡಿಸಿದ ಉಮೇಶ್ ಸಲ್ಯಾನ್ ನಿರ್ದೇಶನದ ನಿರಂಜನರ "ಚಿರಸ್ಮರಣೆ" ಕಾದಂಬರಿ ಆಧಾರಿತ "ಕಯ್ಯೂರು" ನಾಟಕದ ದೃಶ್ಯ



ಕಾಸರಗೋಡಿನಲ್ಲಿರುವ "ಸಂಧ್ಯಾರಾಗಂ" ಎಂಬ ಈ ಬಯಲು ರಂಗಮಂದಿರ
ಸ್ಥಳೀಯ ಆಡಳಿತಕ್ಕೆ ಒಳಪಟ್ಟಿದೆ. ಮಳೆಗಾಲವನ್ನು ಹೊರತುಪಡಿಸಿ
ಇಲ್ಲಿ ನಿರಂತರವಾಗಿ ನಾಟಕ ಪ್ರದರ್ಶನಗಳು ನಡೆಯುತ್ತಿರುತ್ತವೆ



ಲಲಿತ ಕಲಾ ಸದನ ಕಾಸರಗೋಡು

1962 ರಲ್ಲಿ ಸ್ಥಾಪನೆಗೊಂಡ ಲಲಿತ ಕಲಾ ಸದನ ಕಾಸರಗೋಡು, ಸುದೀರ್ಘವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಇಲ್ಲಿ ನಿರಂತರವಾಗಿ ನಾಟಕ, ಸಂಗೀತ, ಯಕ್ಷಗಾನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಸುಸಜ್ಜಿತ ರಂಗಮಂದಿರ ಹಾಗೂ ಆಸನ ವ್ಯವಸ್ಥೆಯನ್ನು ಲಲಿತ ಕಲಾ ಸದನ ಹೊಂದಿದ್ದು ಕಾಸರಗೋಡು ನಗರಸಭೆಯ ಸಹಭಾಗಿತ್ವದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ. ಕನ್ನಡಪರ ಕಾರ್ಯಕ್ರಮಗಳಿಗೆ ಆದ್ಯತೆ ಇದರ ವಿಶೇಷ.

## ನಾಟಕ ಅಕಾಡೆಮಿಯ ವಿವಿಧ ಪ್ರಶಸ್ತಿಗಳಿಂದ ಪುರಸ್ಕೃತರಾದ ಮಹನೀಯರು:

### ದಕ್ಷಿಣ ಕನ್ನಡ ಜಿಲ್ಲೆ

**ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತರು:**

- ರಮಾನಂದ ಚೂರ್ಯ – 1986
- ಕೆ. ಎನ್. ಟೈಲರ್ – 1989
- ಕೆ. ಶ್ರೀಧರ್, ಅಭಿವ್ಯಕ್ತ – 1993
- ಮಚ್ಚೇಂದ್ರನಾಥ ಪಾಂಡೇಶ್ವರ – 1998
- ಪಿ.ಬಿ.ರೈ – 1999
- ವಿ.ಜಿ. ಪಾಲ್ – 1999
- ಡಾ. ಸಂಜೀವ ದಂಡಿಕೇರಿ – 2000
- ಲೂಸಿ ಪೆರೇರಾ – 2000
- ಯು.ಆರ್. ಚಂದರ್ – 2003
- ಚಂದ್ರಹಾಸ್ ಉಳ್ಳಾಲ್ – 2003
- ಲಕ್ಷ್ಮಣ್ ಕುಮಾರ್ ಮಲ್ಲೂರ್ – 2005
- ಪಿ.ಎಸ್ ರಾವ್ – 2006
- ಮೋಹನ್ ಸೋನಾ – 2008
- ಐ. ಕೆ. ಬೊಳುವಾರು – 2008
- ತುಕಾರಾಂ ಏನೇಕಲ್ – 2010

**ಅಕಾಡೆಮಿ ಸುವರ್ಣರಂಗ ಪ್ರಶಸ್ತಿ**

- ಮೂರ್ತಿದೇರಾಜೆ – 2010

**ನಾಟಕ ಅಕಾಡೆಮಿ ಗೌರವ ಪ್ರಶಸ್ತಿ**

- ಎಚ್. ಡುಂಡಿರಾಜ್ – 2006

**ಸಿ.ಜಿ.ಕೆ. ನೇಪಥ್ಯ ಪುರಸ್ಕಾರ**

- ಜೀವನ್ ರಾಂ – 2008